ಮುನ್ನುಡಿ

ವಿಶ್ವವಿಶಾಲವಾದ ವಿಷಯ, ಜಾನಪದ. ಅದು ಹಲವು ಶಾಸ್ತ್ರಗಳಿಗೆ ತಾಯಿ
ದ ಸಂಕೀರ್ಣ ಜ್ಞಾನಪದ ಕೂಡ. ಸುಪ್ರಸಿದ್ಧ ಜಾನಪದ ವಿದ್ವಾಂಸ ಆಲೆನ್
ಸ್ ಅವರ ಪ್ರಕಾರ, "ಜೀವಂತ ಜಾನಪದದ ಸಮೃದ್ಧ ಉಗ್ರಾಣ, ಭಾರತ".
ವಿದ್ವಾಂಸರು ಮುಂದುವರಿದು ಹೇಳುತ್ತಾರೆ: "ಭಾರತದಲ್ಲಿ ಜಾನಪದ
ೋಧನೆಗಿರುವ ಅವಕಾಶಗಳು ಜಗತ್ತಿನಲ್ಲಿ ಅದ್ವಿತೀಯ". ಈ ಹೇಳಿಕೆ ಕರ್ನಾಟಕಕ್ಕೆ
ಷವಾಗಿ ಅನ್ವಯಿಸಬಲ್ಲುದು. ಇಲ್ಲಿ ಜಾನಪದ ಹೇರಳ ಹಾಗೂ ವೈವಿಧ್ಯಪೂರ್ಣ
ದೆ. ಆದರೆ ಅದರ ಬಗೆಗೆ ಕುತೂಹಲ ಕಣ್ತೆರೆದದ್ದು, ಆಸಕ್ತಿ ಚಿಗುರಿದ್ದು, ಆದರ
ಡಿದ್ದು ಈಚೆಗಷ್ಟೆ. ವೈಜ್ಞಾನಿಕ ದೃಷ್ಟಿಯ ಬೆಳಕಿಗೆ ಜಾನಪದ ಅಳವಟ್ಟದ್ದಂತೂ
ಲ ಒಂದೆರಡು ದಶಮಾನಗಳ ಬೆಳವಣಿಗೆ. ಪಾಶ್ಚಾತ್ಯ ದೇಶಗಳಲ್ಲಾದರೆ ಜಾನಪದದ
ೀಯ ಸಂಗ್ರಹ ಮತ್ತು ವೈಜ್ಞಾನಿಕ ವ್ಯಾಸಂಗಗಳಿಗೆ ಒಂದು ದೀರ್ಘ ಚರಿತ್ರೆಯೆ
ದೆ. ಅಲ್ಲಿ ಬಹಳ ಹಿಂದೆಯೆ ಜಾನಪದ ಅಧ್ಯಯನ ವಿಶ್ವವಿದ್ಯಾನಿಲಯಗಳ
ಗೆಯನ್ನೇರಿತು; ಜಾನಪದ ವಸ್ತುಸಂಗ್ರಹಾಲಯಗಳು ಸ್ಥಾಪಿತವಾದುವು. ಭಾರತ
ಅದರಲ್ಲೂ ಕರ್ನಾಟಕದಲ್ಲಿ ಜಾನಪದವನ್ನು ಕುರಿತ ಅಜ್ಞಾನ, ಅಸಡ್ಡೆಗಳ
ಸಂಗಡ್ಡೆಗಳು ಈಗ ಬಹುಮಟ್ಟಿಗೆ ಕರಗಿಹೋಗಿರುವುದು ಸಮಾಧಾನದ ವಿಷಯ.
ದ ಸಂಬಂಧವಾದ ಚಟುವಟಿಕೆಗಳಲ್ಲಿ ಇಂದು ಕರ್ನಾಟಕ ಒಂದು ಮುಂಚೂಣಿಯ
ಪಡೆದುಕೊಂಡಿದೆ ಎಂದರೆ ತಪ್ಪಾಗಲಿಕ್ಕಿಲ್ಲ.

ಜಾನಪದ ಸಂಗ್ರಹಕಾರ್ಯ ಕರ್ನಾಟಕದಲ್ಲಿ ಕಳೆದ ಶತಮಾನದಲ್ಲೆ ಆರಂಭವಾದರೂ
ಣಿ, ಗೀತೆ, ಗಾದೆಗಳಂಥ ಸಾಹಿತ್ಯರೂಪಗಳಿಗೆ ಅದು ಸೀಮಿತವಾಗಿತ್ತು. ಇದು
ಲ ಹಂತ. ಎರಡನೆಯ ಹಂತದಲ್ಲಿ ಜಾನಪದದ ಎಲ್ಲ ಪ್ರಕಾರಗಳ–ಸಾಹಿತ್ಯಕ
ಸಾಹಿತ್ಯೇತರ ಬಗೆಗಳ–ಸಂಗ್ರಹ, ಸಂಪಾದನೆಗಳಿಗೆ ಕೈಹಚ್ಚಲಾಯಿತು.
ನಿಕ ವಿಶ್ಲೇಷಣೆ, ಸಂಶೋಧನೆಗಳು ಮೂರನೆಯ ಹಂತ. ನಾವೀಗ ಸೀಮೋಲ್ಲು
ಈ ಮಹತ್ವಪೂರಿತ ಘಟ್ಟದಲ್ಲಿದ್ದೇವೆ. ಇಂದು ಜಾನಪದವೆಂದರೆ ಬರಿಯ
ತ್ಯವಲ್ಲ; ಸಂಸ್ಕೃತಿಯ ವಿರಾಡ್ರೂಪ. ಹಲವು ನೆಲೆಗಳಲ್ಲಿ, ನಿಟ್ಟುಗಳಲ್ಲಿ ಜಾನಪದ
ಕುರಿತ ಅಧ್ಯಯನ, ಸಂಶೋಧನೆಗಳು ಇಂದು ವ್ಯಾಪಕವಾಗಿ, ವಿಪುಲವಾಗಿ
ಾದ್ಯಂತ ನಡೆಯುತ್ತಿವೆ. ಪಂಡಿತರೂ ವಿವಿಧಕಳಾಮಂಡಿತರೂ ಜಾನಪದವನ್ನು
ಪುರಸ್ಕರಿಸುತ್ತಿದ್ದಾರೆ; ತಾವೂ ಪುರಸ್ಕಾರಗೊಳ್ಳುತ್ತಿದ್ದಾರೆ. ಇಷ್ಟಾಗಿಯೂ,
ಜಾನಪದ ಜಿಜ್ಞಾಸೆಯಲ್ಲಿ ಬಹುತೇಕ ಪಶ್ಚಿಮಾಭಿಮುಖಿಗಳಾಗಿದ್ದೇವೆ, ನಮ್ಮದೇ
ತತ್ತ್ವ, ವಿಧಾನಗಳನ್ನು ರೂಢಿಸಿಕೊಂಡಿಲ್ಲ ಎನಿಸುತ್ತದೆ. ಪಶ್ಚಿಮದ ಜಾನಪದ,
ತದ ಜಾನಪದ ಎರಡೂ ಅಭಿನ್ನವಲ್ಲ. ಇನ್ನೂ ಆಗಬೇಕಾದ ಕೆಲಸ ಕೂಡ
ವಾಗಿದೆ ಎಂಬುದನ್ನೂ ಮರೆಯುವಂತಿಲ್ಲ.

ಅರುವತ್ತರ ದಶಕದಿಂದೀಚೆಗೆ ಕರ್ನಾಟಕದಲ್ಲುಂಟಾದ ಜಾನಪದ ನವೋದಯಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಕೊಡುಗೆ ಅತಿಶಯವಾದುದು. ಜಾನಪದದ ಸಮರ್ಪಕ, ಶಾಸ್ತ್ರೀಯ ಪರಿಕಲ್ಪನೆಯನ್ನು ಮೂಡಿಸಿದ ಶ್ರೇಯಸ್ಸು ಈ ಸಂಸ್ಥೆಗೆ ಸಲ್ಲಬೇಕು. ಇಲ್ಲಿ ಮೊದಲ ಬಾರಿಗೆ ಕನ್ನಡ ಎಂ.ಎ. ಪಠ್ಯಕ್ರಮದಲ್ಲಿ ಜಾನಪದವನ್ನು ಅಧ್ಯಯನವಿಷಯವನ್ನಾಗಿ ಸೇರಿಸಲಾಯಿತು. ಅನಂತರ ಜಾನಪದ ಡಿಪ್ಲೊಮಾ ಮತ್ತು ಜಾನಪದ ಎಂ.ಎ. ತರಗತಿಗಳನ್ನು ತೆರೆಯಲಾಯಿತು. ಇಲ್ಲಿ ಸ್ಥಾಪನೆಗೊಂಡ ಜಾನಪದ ವಸ್ತುಸಂಗ್ರಹಾಲಯ ದೇಶವಿದೇಶಗಳಲ್ಲಿ ಖ್ಯಾತವಾಗಿದೆ. ಜನಪದ ಗೀತೆಗಳ ಧ್ವನಿಮುದ್ರಣ ವ್ಯವಸ್ಥೆ ಇಲ್ಲಿದೆ. ಎಲ್ಲಕ್ಕಿಂತ ಮಿಗಿಲಾಗಿ, ಜಾನಪದ ಸಂಬಂಧವಾದ ಹಲವಾರು ಅಮೂಲ್ಯ ಪ್ರಕಟಣೆಗಳನ್ನು ಸಂಸ್ಥೆ ಹೊರತಂದಿದೆ. ಅವುಗಳಲ್ಲಿ ಸಂಗ್ರಹ, ಸಂಪಾದನೆ, ಸಂಶೋಧನೆ, ವಿವೇಚನೆ ಮುಂತಾದ ನಾನಾ ವರ್ಗಗಳಿಗೆ ಸೇರಿದ ಕೃತಿಗಳಿವೆ. ಕರ್ನಾಟಕದ ಇತರ ವಿಶ್ವವಿದ್ಯಾನಿಲಯಗಳೂ ಮೈಸೂರು ವಿಶ್ವವಿದ್ಯಾನಿಲಯದ ಹಾದಿಯನ್ನು ತುಳಿದು, ಜಾನಪದದ ರಕ್ಷಣೆ, ಪೋಷಣೆಗಳಲ್ಲಿ ತೊಡಗಿವೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಕೂಡ ಉಪಯುಕ್ತವಾದ ಕೆಲಸ ಮಾಡುತ್ತಿದೆ.

ಪ್ರಕೃತ, 'ಫ್ಲೀಟರು ಸಂಗ್ರಹಿಸಿದ ಲಾವಣಿಗಳು' ಕೃತಿ ಜಾನಪದ ಮಾಲೆಯಲ್ಲಿ ಹೊರಬರುತ್ತಿದೆ. ಇದರ ಸಂಪಾದಕರಾದ ಕ್ಯಾತನಹಳ್ಳಿ ರಾಮಣ್ಣನವರು ಪ್ರಸಿದ್ಧ ಲೇಖಕರು; ಜಾನಪದ ವಲಯದಲ್ಲಿ ಅವರು ಮೆರೆದಿರುವ ಸಾಧನೆ ದೊಡ್ಡದು. ವಾಸ್ತವವಾಗಿ, ೧೯೭೨ರಲ್ಲಿ ಪ್ರಕಟವಾದ 'ಫ್ಲೀಟರು ಸಂಗ್ರಹಿಸಿದ ಐದು ಐತಿಹಾಸಿಕ ಲಾವಣಿಗಳು' ಕೃತಿಯ ವಿಸ್ತೃತ ಪುನರ್ಮುದ್ರಣ, ಈ ಪುಸ್ತಕ. ಒಂದರ್ಥದಲ್ಲಿ ಇದು ಮರುಮುದ್ರಣ; ಇನ್ನೊಂದರ್ಥದಲ್ಲಿ ಹೊಸ ಪುಸ್ತಕ.

ಜಾನ್ ಫೆಯ್ತ್‌ಫುಲ್ ಫ್ಲೀಟ್ ಅವರು ಕನ್ನಡ ಜನಪದ ಸಾಹಿತ್ಯದ ಆದ್ಯ ಸಂಗ್ರಹಕಾರರಲ್ಲಿ ಒಬ್ಬರು; ಗೀತಪ್ರಕಾರವನ್ನು ಮೊತ್ತಮೊದಲು ಸಂಗ್ರಹಿಸಿದ ಕೀರ್ತಿ ಅವರದು. ಈ ಕಾರ್ಯವನ್ನವರು ಕಳೆದ ಶತಮಾನದಲ್ಲೆ ಮಾಡಿದರು. ಭಾರತೀಯ ಶಾಸನಕ್ಷೇತ್ರದಲ್ಲಿ ಫ್ಲೀಟರು ಉಜ್ವಲವಾದ ಹೆಸರು; ಅಂತೆಯೆ ಕನ್ನಡ ಜನಪದ ಪ್ರಾಂತದಲ್ಲಿ ಅವರು ಪ್ರಾತಃಸ್ಮರಣೀಯರು. 'ಇಂಡಿಯನ್ ಆಂಟಿಕ್ವೆರಿ' ಪತ್ರಿಕೆಯಲ್ಲಿ ಅವರು ಪ್ರಕಟಿಸಿದ ಐದು ಲಾವಣಿಗಳನ್ನು ಕ್ಯಾತನಹಳ್ಳಿ ರಾಮಣ್ಣನವರು ಪೂರ್ವೋಕ್ತ ಗ್ರಂಥದಲ್ಲಿ ಸಂಪಾದಿಸಿದ್ದರು; ಇದೀಗ ಲಭ್ಯವಾಗಿರುವ ಮೈಕ್ರೊಫಿಲ್ಮ್ ಪ್ರತಿಯ ಆಧಾರದ ಮೇಲೆ ಫ್ಲೀಟ್ ಅವರ ಇನ್ನೂ ಹನ್ನೆರಡು ಲಾವಣಿಗಳನ್ನು ಇಲ್ಲಿ ಸಂಪಾದಿಸಿ ಕೊಟ್ಟಿದ್ದಾರೆ. ಹೀಗಾಗಿ, ಫ್ಲೀಟರು ಸಂಗ್ರಹಿಸಿದ ಹದಿನೇಳು ಲಾವಣಿಗಳು ಇಲ್ಲಿ ಸಮಗ್ರವಾಗಿ ಸಂಪಾದಿತವಾಗಿವೆ. ಅಷ್ಟೇ ಅಲ್ಲದೆ ಅವರು ಸಂಗ್ರಹಿಸಿದ್ದ ನಾಲ್ಕು 'ದಂಡಕ'ಗಳು, ನಾಲ್ಕು ಜೋಗುಳದ ಪದಗಳು ಇತ್ಯಾದಿಗಳೂ ಇಲ್ಲಿವೆ. ಆದ್ದರಿಂದ,

ಫ್ಲೀಟರ ಜಾನಪದ ವಿಷಯಕವಾದ ದುಡಿಮೆ ತನಿಯಾಗಿ ಒಂದು ಕಡೆ ಸಿಗುವಂತಾಗಿದೆ. ಸಾಹಿತ್ಯ, ಸಂಸ್ಕೃತಿ, ಚರಿತ್ರೆ ಮುಂತಾದ ಅನೇಕ ದೃಷ್ಟಿಗಳಿಂದ ಅತ್ಯಂತ ಮೌಲಿಕ ವಾಗಿರುವ ಈ ಕೃತಿ ರಾಮಣ್ಣನವರ ಪ್ರೀತಿಪೂರ್ವಕ ಶ್ರಮ, ಪರಿಶ್ರಮಗಳಿಂದ ನಮಗೆ ಲಭ್ಯವಾಗಿದೆ ; ಕನ್ನಡ ಜಾನಪದ ಕ್ಷೇತ್ರಕ್ಕೊಂದು ಮಹತ್ತರ ಸೇರ್ಪಡೆಯಾಗಿದೆ. ಈ ಉಪಕಾರಕ್ಕಾಗಿ ಕ್ಯಾತನಹಳ್ಳಿ ರಾಮಣ್ಣನವರು ಅಭಿನಂದನೀಯರು.

ಈ ಗ್ರಂಥವನ್ನು ತ್ವರಿತವಾಗಿ, ಚೆಲುವಾಗಿ ಅಚ್ಚುಮಾಡಿಕೊಟ್ಟಿರುವ ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯದ ನಿರ್ದೇಶಕರಿಗೆ ಮತ್ತು ಸಿಬ್ಬಂದಿವರ್ಗದವರಿಗೆ ನಾವು ಆಭಾರಿಯಾಗಿದ್ದೇವೆ.

ಸಿ. ಪಿ. ಕೃಷ್ಣಕುಮಾರ್
ಪ್ರಧಾನ ಸಂಪಾದಕ

ಅರಿಕೆ

೧

ಬೇರೆ ಬೇರೆ ಉದ್ದೇಶಗಳಿಗಾಗಿ ಭಾರತಕ್ಕೆ ಬಂದ ಬ್ರಿಟಿಷ್ ಅಧಿಕಾರಿಗಳಲ್ಲಿ ಅನೇಕರು ಅನಿವಾರ್ಯವಾಗಿ ಕರ್ನಾಟಕದ ನೆಲದಲ್ಲೂ ತಮ್ಮ ತಮ್ಮ ಕರ್ತವ್ಯಗಳನ್ನು ನಿರ್ವಹಿಸಬೇಕಾಗಿ ಬಂದದ್ದು ಅಂದಿನ ಒಂದು ಸಹಜ ಸಂಗತಿ. ಹಾಗೆ ಕರ್ನಾಟಕಕ್ಕೆ ಬಂದ ಅನೇಕರು ಕರ್ತವ್ಯಕ್ಕಷ್ಟೆ ತಮ್ಮ ಕೆಲಸಗಳನ್ನು ಸೀಮಿತಗೊಳಿಸಿಕೊಳ್ಳದೆ, ಬಿಡುವಿನ ವೇಳೆಗಳಲ್ಲಿ ಇಲ್ಲಿನ ಸಾಂಸ್ಕೃತಿಕ ಜಗತ್ತಿಗೆ ಪ್ರವೇಶಿಸತೊಡಗಿದ್ದರಿಂದ ಅನೇಕ ಅಮೂಲ್ಯ ಸಂಪತ್ತು ನಮಗೆ ದೊರೆಯಿತು. ರೈಸ್ ಅವರಾಗಲಿ, ಕಿಟ್ಟೆಲ್ ಅವರಾಗಲಿ, ಗೋವರ್ ಮುಂತಾದವರಾಗಲಿ, ಕನ್ನಡಕ್ಕೆ ಮಾಡಿದ ಉಪಕಾರ ಅಷ್ಟಿಷ್ಟಲ್ಲ. ಅವರ ಹಾದಿಯಲ್ಲೆ ಪ್ರಸ್ತುತ ವಿದ್ವಾಂಸರಾದ ಡಾ. ಜಾನ್ ಫೆಯ್ತ್‌ಫುಲ್ ಫ್ಲೀಟ್ ಅವರು ಕೂಡ ನಡೆದು ಕನ್ನಡ ಶಾಸನ ಕ್ಷೇತ್ರಕ್ಕೆ, ಕನ್ನಡ ಜಾನಪದ ಕ್ಷೇತ್ರಕ್ಕೆ, ಅಮೂಲ್ಯ ಕೊಡುಗೆಯನ್ನು ನೀಡಿದ್ದಾರೆ.

ನೂರು ವರ್ಷಗಳ ಹಿಂದೆ ಫ್ಲೀಟ್ ಅವರು ಕೆಲಕಾಲ ಇಂಡಿಯನ್ ಆಂಟಿಕ್ವರಿ ಪತ್ರಿಕೆಯ ಸಂಪಾದಕರಾಗಿದ್ದರು. ಆ ಅವಧಿಯಲ್ಲಿ, ಹಿಂದೆಯೇ ಸಂಗ್ರಹಿಸಿಟ್ಟುಕೊಂಡಿದ್ದ ಹಾಡುಗಳಲ್ಲಿ ಒಂದೊಂದೇ ಲಾವಣಿಯನ್ನು ಆಗಾಗ ಪ್ರಕಟಿಸತೊಡಗಿದರು. ಹೀಗೆ ೧೮೮೫-೧೮೯೦ರ ನಡುವೆ ಐದು ಲಾವಣಿಗಳನ್ನು ಪ್ರಕಟಿಸಿದರು.

೧೮೮೫ರಲ್ಲಿ ಮೊದಲನೆಯ ಲಾವಣಿಯನ್ನು ಪ್ರಕಟಿಸುವ ಮುಂಚೆ ಅದೇ ಸಂಚಿಕೆಯಲ್ಲಿ ಕನ್ನಡ ಲಾವಣಿಗಳನ್ನು ಕುರಿತಂತೆ ಪ್ರಾಸ್ತಾವಿಕವಾಗಿ A Selection of Kanarese Ballads ಎಂಬ ಲೇಖನವೊಂದನ್ನು ಪ್ರಕಟಿಸಿದರು. ಇದಲ್ಲದೆ, ಪ್ರಕಟಿಸಿದ ಲಾವಣಿಗಳ ಐತಿಹಾಸಿಕ ಹಿನ್ನೆಲೆಯನ್ನು ಕುರಿತಂತೆ ಆ ಆ ಲಾವಣಿಗಳ ಪ್ರಾರಂಭದಲ್ಲಿ ವಿವರಣಾರೂಪದ ಪುಟ್ಟ ಲೇಖನಗಳನ್ನೂ ನೀಡಿದರು. ಭಾಷಾಂತರ ಹಾಗೂ ಲಿಪ್ಯಂತರ ಹೀಗೆ ಎರಡೆರಡು ರೂಪಗಳಲ್ಲಿ ಲಾವಣಿಗಳನ್ನು ಪ್ರಕಟಿಸಿದ್ದು ಒಂದು ವಿಶೇಷವಾದರೆ, ಲಿಪ್ಯಂತರದಲ್ಲಿ ಕನ್ನಡದ ಉಚ್ಚಾರಗಳಿಗೆ ಲೋಪ ಬಾರದಂತೆ ಇಂಗ್ಲಿಷ್ ಅಕ್ಷರಗಳನ್ನು ಸಂಜ್ಞೆಗಳ ಸಹಿತ ಕೊಟ್ಟದ್ದು ಇನ್ನೊಂದು ವಿಶೇಷ. ಈ ಎಲ್ಲವನ್ನೂ ಸಂಗ್ರಹಿಸಿ ಸಂಪಾದಿಸಿ 'ಫ್ಲೀಟರು ಸಂಗ್ರಹಿಸಿದ ಐದು ಐತಿಹಾಸಿಕ ಲಾವಣಿಗಳು' ಎಂಬ ಹೆಸರಿನಲ್ಲಿ ಸಿದ್ಧವಾದ ಹಸ್ತಪ್ರತಿಯನ್ನು ಕನ್ನಡ ಅಧ್ಯಯನ ಸಂಸ್ಥೆ ೧೯೭೨ರಲ್ಲಿ ಪ್ರಕಟಿಸಿತು.

* * *

ತಮ್ಮ ಸಂಗ್ರಹದಲ್ಲಿದ್ದ ಹದಿನೇಳಕ್ಕೂ ಹೆಚ್ಚಿನ ಲಾವಣಿಗಳಲ್ಲಿ ಫ್ಲೀಟರು ಕೇವಲ ಐದನ್ನು ಯಾಕೆ ಪ್ರಕಟಿಸಿದರು ಎಂಬ ನಿಟ್ಟಿನಿಂದ ಅವರ ಸಂಗ್ರಹವನ್ನು ಅಭ್ಯಸಿಸುವಾಗ ಅವರ ಶಿಸ್ತಿನ ದರ್ಶನ ನಮಗಾಗುತ್ತದೆ. ಸಂಗ್ರಹಿಸಿದ ಸಾಹಿತ್ಯವನ್ನೂ ಅದರ ಹಿನ್ನೆಲೆ

ಮುನ್ನೆಲೆಗಳನ್ನೂ ಆಮೂಲಾಗ್ರವಾಗಿ ಅರ್ಥಮಾಡಿಕೊಂಡು ತಕ್ಕ ರೀತಿಯಲ್ಲಿ ಅವು ಸಿದ್ಧಗೊಂಡ ಮೇಲೆಯೇ ಅವರು ಲಾವಣಿಗಳನ್ನು ಪ್ರಕಟಿಸಲು ಮನಸ್ಸು ಮಾಡಿದ್ದಾರೆ. ಉಳಿದ ಲಾವಣಿಗಳು ಅವರ ಆಲೋಚನಾ ಪರಿಧಿಯಲ್ಲಿ ಇನ್ನೂ ಪಕ್ವಗೊಳ್ಳದಿದ್ದರಿಂದ ಪ್ರಕಟವಾಗದೆ ಉಳಿದುಕೊಂಡವು. ಅನಂತರವಾದರೂ ಅವರು ಪ್ರಕಟಿಸುವ ಮನಸ್ಸು ಮಾಡಬಹುದಿತ್ತಲ್ಲವೆ ಎಂದು ಯೋಚಿಸುವಾಗ ಅಂದಿನ ಅವರ ಹುದ್ದೆಯಾಗಲಿ ಪರಿಸರವಾಗಲಿ ಕರ್ತವ್ಯಗಳಾಗಲಿ ಅವರನ್ನು ಲಾವಣಿಗಳ ಅಭ್ಯಾಸದಿಂದ ವಿಮುಖಗೊಳಿಸಿರಬಹುದಾದ ಸಾಧ್ಯತೆಗಳು ಕಂಡುಬರುತ್ತವೆ.

ಭಾರತದಲ್ಲಿ ತಮ್ಮ ಕರ್ತವ್ಯ ಮುಗಿದಮೇಲೆ ಸ್ವದೇಶಕ್ಕೆ ಮರಳಿಹೋದ ಫ್ಲೀಟ್ ಅವರು ತಮ್ಮಲ್ಲಿದ್ದ ಹಸ್ತಪ್ರತಿಗಳನ್ನು ಇಡಿಯಾಗಿ ಲಂಡನ್ನಿನ ಬ್ರಿಟಿಷ್ ಮ್ಯೂಸಿಯಂಗೆ ತಮ್ಮ ಸ್ವಇಚ್ಛೆಯಿಂದ ೧೯೧೭ ಅಕ್ಟೋಬರ್ ೧೩ರಂದು ನೀಡಿದರು. ಅವು ಈಗಲೂ ಅಲ್ಲಿ ಇವೆ. ಅವರ ಈ ಹಸ್ತಪ್ರತಿಸಂಗ್ರಹದಲ್ಲಿ ಒಂದು ಪತ್ರ ಇದೆ. ಅದು ಶಾಲಾ ಮುಖ್ಯೋಪಾಧ್ಯಾಯರೊಬ್ಬರು ಬರೆದ ಪತ್ರ. ಆ ಪತ್ರದೊಂದಿಗಿದ್ದ ಆರು ಲಾವಣಿ ಯಾವುವೆಂಬುದಕ್ಕಿಂತ ಫ್ಲೀಟರು ಸಮಯಾಭಾವದಿಂದಾಗಿ ಇತರರಿಂದಲೂ ಲಾವಣಿಗಳನ್ನು ಸಂಗ್ರಹಿಸಿ ತರಿಸಿ, ಅನಂತರ ತಮ್ಮ ಬಿಡುವಿನ ವೇಳೆಯಲ್ಲಿ ಅಭ್ಯಾಸ ಮಾಡುತ್ತಿದ್ದರು ಎಂಬ ಅಂಶ ಇಲ್ಲಿ ಮುಖ್ಯವಾಗುತ್ತದೆ. ಇದೇ ಸಂಗತಿಯನ್ನು, ಅಂದರೆ, ಶಾಲಾ ಮಾಸ್ತರರಿಂದ ಹಾಡುಗಳನ್ನು ಸಂಗ್ರಹಿಸಿ ತರಿಸಿಕೊಳ್ಳುತ್ತಿದ್ದ ಸಂಗತಿಯನ್ನು ಡಾ. ಶ್ರೀನಿವಾಸ ಹಾವನೂರ ಅವರು ಕೂಡ ಪ್ರಸ್ತಾಪಿಸಿದ್ದಾರೆ.[1] ಫ್ಲೀಟರ ಹಸ್ತಪ್ರತಿ ಸಂಗ್ರಹದಲ್ಲಿರುವ ಆ ಪತ್ರವನ್ನು ಇಲ್ಲಿ ಉಲ್ಲೇಖಿಸಬಹುದು—

"ಮೆಹರಬಾನ್ ಎ–ಇ–ಸಾ....–ಬಹದ್ದುರ ದಫಣಭಾಗ ಇವರ ಹುಜೂರಿಗೆ—

"ನಾರಾಯಣ ಅಯ್ಯಾಜಿ ಹೆಡಮಾಸ್ತರ ತಾಲ್ಕು ಬಾದಾಮಿ ಈತನು ಬರಕೊಳ್ಳುವ ರಪೊರಟು — ಮೆಹರ್ಬಾನರವರ ಹುಕುಮಿನ ಮೇರಿ ಆರು ಲಾವಣಿ ಪದಗಳುನು [2]ಬರದು[2] ಇದರ ಲಗತುಇಟ್ಟು ರವಾನೆ ಮಾಡಿಯಿದ್ದೇನೆ ಸುನಿಧಿಗೆ ಬಂದು ಮುಟ್ಟಿದ್ದಕ್ಕೆಹುಕುಂ ದೊರಿಯುವ-ಮೆಹರ್ಬಾನಗಿ ಆದೀತೆಂದು ಆಸಿಸುತ್ತೆನೆ ಮೆಹರ್ಬಾನರವರ ಚಿತ್ರಕ್ಕೆ ಅರಿಕೆಯಿರಬೇಕು ತಾ॥ ೬ನೇ ಫೇಬ್ರುಆರಿ ಸನ್ ೧೮೭೪ ಇಸವಿ.

(ಹಿಂದೀ ಲಿಪಿಯಲ್ಲಿ ಸಹಿ ಇದೆ)"

---

1 ನೋಡಿ : ಬೆಳುವಲ ; ಡಾ. ಬೆಟಗೇರಿ ಕೃಷ್ಣಶರ್ಮ ಅಭಿನಂದನ ಗ್ರಂಥ; ಲೇಖನ : ಫ್ಲೀಟ್ ಸಂಗ್ರಹಿಸಿದ್ದ ಕೆಲವು ಅಪೂರ್ವ ಹಾಡುಗಳು. ಆದರೆ, ಡಾ. ಶ್ರೀನಿವಾಸ ಹಾವನೂರರ '...ಶಾಲಾ ಮಾಸ್ತರರಿಂದ ಹಾಡುಗಳನ್ನು ಬರೆಯಿಸಿ ತರಿಸಿಕೊಂಡರು' ಎಂಬ ಮಾತಿನಲ್ಲಿರುವ 'ಬರೆಯಿಸಿ' ಎಂಬ ಶಬ್ದ 'ಸಂಗ್ರಹಿಸಿ' ಎಂಬ ಅಭಿಪ್ರಾಯದಿಂದ ಕೂಡಿದೆಯೆಂದು ಭಾವಿಸಲಾಗಿದೆ.

2 ಇದು ಕೂಡ 'ಸಂಗ್ರಹಿಸಿ' ಎಂಬ ಅರ್ಥದಲ್ಲಿ ಪ್ರಯೋಗವಾಗಿರಬಹುದು. ಈ ಊಹೆ ಸರಿ ಎಂಬುದಕ್ಕೆ ಉದಾಹರಣೆಯಾಗಿ ೩೧೨ನೆಯ ಪುಟದಲ್ಲಿರುವ ಇನ್ನೊಂದು ಪತ್ರವನ್ನು ನೋಡಬಹುದು.

ತಾವು ಸಂಗ್ರಹಿಸಿದ ಹಾಡುಗಳನ್ನು ಫ್ಲೀಟರು ರಾಗತಾಳಸಹಿತ ವಿಂಗಡಿಸಿಕೊಳ್ಳು ತ್ತಿದ್ದಂತೆ ತೋರುತ್ತದೆ. ಅವರೇ ವಿಂಗಡಿಸಿಕೊಳ್ಳುತ್ತಿದ್ದರೋ, ಸಂಗ್ರಹಿಸಿಕೊಡುತ್ತಿದ್ದ ಅಥವಾ ಬರೆದುಕೊಳ್ಳುತ್ತಿದ್ದ ಶಾಲಾಮಾಸ್ತರರೋ ಕಾರಕೂನರೋ ವಿಂಗಡಿಸಿಕೊಡು ತ್ತಿದ್ದರೋ, ಎಂಬುದು ಖಚಿತವಾಗುವುದಿಲ್ಲ. ವಿಂಗಡಣೆ ಆಗುತ್ತಿದ್ದುದಕ್ಕೆ ಹಸ್ತಪ್ರತಿ ಸಂಗ್ರಹದಲ್ಲಿ ಒಂದು ಉದಾಹರಣೆಯಿದೆ. ಪಟ್ಟಿಯ ರೂಪದ ಆ ಉದಾಹರಣೆ ಹೀಗಿದೆ:

ಪದದ ನಂಬರು	(ಪದದ ಹೆಸರು) ಜಾತಿ	ಪದದ ರಾಗ ಹಾಗು ತಾಳ
೧	ಲಾವಣಿ	ರಾಗ ಎರಕಲಕಾಂಬೋದಿ ಆದಿತಾಳ
೨	ಲಾವಣಿ	ರಾಗ ರೇಗುಂಪ್ತಿ ಆದಿತಾಳ
೩	ಲಾವಣಿ	ರಾಗ ರೇಗುಂಪ್ತಿ ಆದಿತಾಳ
೪	ಲಾವಣಿ	ರಾಗ ಭೈರವಿ
೫	ದಂಡಕ	ರಾಗ ಸಾರಂಗ
೬	ದಂಡಕ	ಶ್ರೀರಾಗ

ಇದಲ್ಲದೆ, ಲಾವಣಿಯನ್ನು ಹೇಗೆ ಹಾಡುತ್ತಿದ್ದರೆಂಬುದಕ್ಕೆ ಉದಾಹರಣೆಯಾಗಿ ಫ್ಲೀಟರು ಒಂದು ಸಂಗೀತ ನಕ್ಷೆಯನ್ನೂ (Musical Notation) ಇಂಡಿಯನ್ ಆಂಟಿಕ್ವರಿ ಸಂಪುಟವೊಂದರಲ್ಲಿ ಒದಗಿಸಿದ್ದಾರೆ. ಅದರ ಪಡಿಯಚ್ಚನ್ನು ಈ ಅರಿಕೆಯ ಅನಂತರದ ಪುಟದಲ್ಲಿ ಕಾಣಬಹುದು.

* * *

ಫ್ಲೀಟರ ಅಪ್ರಕಟಿತ ಸಂಗ್ರಹದಲ್ಲಿ ಇರುವಂಥವು ಕೇವಲ ಲಾವಣಿಗಳಲ್ಲ. ಜೋಗುಳದ ಪದಗಳೂ ದಂಡಕಗಳೂ ಕಲ್ಗಿತುರಾ ಹಾಡುಗಳೂ ಇವೆ. ಕೆಲವನ್ನು ಇಂಗ್ಲಿಷಿಗೆ ಭಾಷಾಂತರಿಸಲಾಗಿದೆ. ಈ ಭಾಷಾಂತರಗಳು ಪ್ರಕಟಣೆಗೆ ಪೂರ್ವಭಾವಿ ಯಾಗಿ ಇಟ್ಟ ಹೆಜ್ಜೆಗಳಾಗಿವೆ. ಅವರ ಟಿಪ್ಪಣಿಗಳನ್ನು ಗಮನಿಸಿದಾಗ ಫ್ಲೀಟರು ಒಳ್ಳೆಯ ರೂಪದಲ್ಲಿ ಒಳ್ಳೆಯ ಸ್ಥಿತಿಯಲ್ಲಿ ಇರುವಂಥ ಲಾವಣಿಗಳನ್ನು ಮಾತ್ರ ಪ್ರಕಟಣೆಗೆ ಆಯ್ಕೆ ಮಾಡಿಕೊಳ್ಳುತ್ತಿದ್ದರು ಎಂದೆನ್ನಿಸುತ್ತದೆ.

ಈ ಸಂಗ್ರಹದಲ್ಲಿ ಅನೇಕ ಹಾಡುಗಳು ಪುನರಾವರ್ತನೆಯಾಗಿವೆ. ಭಾಷಾಂತ ರಕ್ಕೂ ಈ ಮಾತು ಅನ್ವಯಿಸುತ್ತದೆ. ಸ್ವಲ್ಪವೂ ವ್ಯತ್ಯಾಸವಿಲ್ಲದೆ ಪಾಠಾಂತರ ಎಂದು ಪರಿಗಣಿಸಲು ಸಾಧ್ಯವಾಗದ ಜೋಗುಳದ ಪದವೊಂದರ ನಾಲ್ಕು ಪ್ರತಿಗಳಲ್ಲಿ ಒಂದನ್ನು ಮಾತ್ರ ಇಟ್ಟುಕೊಂಡು ಉಳಿದ ಮೂರು ಪ್ರತಿಗಳನ್ನು ಕೈಬಿಡಲಾಗಿದೆ. ಉಳಿದು ಕೊಂಡಿರುವ ಪಾಠಾಂತರಗಳನ್ನು ಗ್ರಂಥಸಂಪಾದನ ಕ್ರಮಕ್ಕೆ ಒಳಪಡಿಸದೆ, ಅಂಥವನ್ನೆಲ್ಲ ಅನುಬಂಧಗಳನ್ನಾಗಿ ವಿಂಗಡಿಸಲಾಗಿದೆ. ಫ್ಲೀಟರ ಸಂಗ್ರಹವನ್ನೂ ಪ್ರಾಮಾಣಿಕ ವಾಗಿ ಹೀಗೆ ನಮೂದಿಸುವುದರಿಂದ ಅಭ್ಯಾಸಿಗಳಿಗೆ ಹೆಚ್ಚಿನ ಅನುಕೂಲವಾಗಬಹು ದೆಂದು ಭಾವಿಸಲಾಗಿದೆ.

ಇಲ್ಲಿ ಮೊದಲಸಲ ಅಚ್ಚಾಗುತ್ತಿರುವ ಹಾಡುಗಳ ಬಗ್ಗೆ ಏನೊಂದು ಅಭಿಪ್ರಾಯವನ್ನೂ ವ್ಯಕ್ತಪಡಿಸುತ್ತಿಲ್ಲ. ಇದು ಉದ್ದೇಶಪೂರ್ವಕ.

ಫ್ಲೀಟರ ಹಸ್ತಪ್ರತಿಯಲ್ಲಿ ಅಲ್ಲಲ್ಲಿ ಕಂಡುಬರುವ ಟಿಪ್ಪಣಿಗಳನ್ನು ಅನುಬಂಧಗಳ ವಿಭಾಗದಲ್ಲಿ ಪಟ್ಟಿಮಾಡಿದ್ದೇನೆ. ಹಸ್ತಪ್ರತಿಗೆ ಮೈಕ್ರೋಫಿಲ್ಮ್ ರೂಪ ಕೊಡುವಾಗ ಆಗಿರುವ ಅಡಚಣೆಗಳಿಗೆ ಉದಾಹರಣೆಯಾಗಿ ಬ್ರಿಟಿಷ್ ಮ್ಯೂಸಿಯುಮಿನವರು ಫಿಲ್ಮ್‌ನ ನಡುವೆ ಕೊಟ್ಟಿರುವ ಒಂದು ಟಿಪ್ಪಣಿಯನ್ನು ಇಲ್ಲಿ ಉಲ್ಲೇಖಿಸಬಹುದು—

Note : This volume has a very tight binding and while every effort has been made to reproduce the centres, force would result in damage.

ಆದ್ದರಿಂದ, ಮೂಲ ಹಸ್ತಪ್ರತಿ ದರ್ಶನಕ್ಕಿಂತ ಮೈಕ್ರೋಫಿಲ್ಮ್ ದರ್ಶನವು ಇಷ್ಟರ ಮಟ್ಟಿಗೆ ಮಿತಿಗೊಳಗಾಗಬೇಕಾಗುತ್ತದೆ.

ಒಂದು ಸೂಚನೆ : 'ಪುಸ್ತಕ ಎರಡು : ಭಾಗ ಒಂದು' ಎಂಬ ಲಾವಣಿಗಳ ವಿಭಾಗದಲ್ಲಿ ಕಂಡುಬರುವ ಅಡಿಟಿಪ್ಪಣಿಗಳು ಮೂಲ ಹಸ್ತಪ್ರತಿಯಲ್ಲಿರುವ ರೂಪಗಳು; ಕಣ್ತಪ್ಪಿನಿಂದಲೋ ಕೈತಪ್ಪಿನಿಂದಲೋ ಆಗಿರುವ ತಪ್ಪುಗಳು. ತಿದ್ದಿದ ರೂಪವನ್ನು ಪಠ್ಯದೊಳಗೆ ಸೇರಿಸಲಾಗಿದೆ. 'ಪುಸ್ತಕ ಎರಡು : ಭಾಗ ಎರಡು' ಎಂಬ ಜೋಗುಳದ ಪದಗಳ ವಿಭಾಗದಲ್ಲಿ ಕಂಡುಬರುವ ಅಡಿಟಿಪ್ಪಣಿಗಳು ಬಹುಪಾಲು ಸಂಬಂಧಪಟ್ಟ ಶಬ್ದಗಳಿಗೆ ಫ್ಲೀಟರೇ ಮಾಡಿಕೊಂಡ ಟಿಪ್ಪಣಿಗಳು.

೨

ಜಾನಪದಕ್ಕೆ ಸಂಬಂಧಿಸಿದ ಜಾನ್ ಫೆಯ್ತ್‌ಫುಲ್ ಫ್ಲೀಟ್ ಅವರ ಸಂಪೂರ್ಣ ಹಸ್ತಪ್ರತಿ ಲಂಡನ್ನಿನ ಬ್ರಿಟಿಷ್ ಮ್ಯೂಸಿಯುಮಿನಲ್ಲಿದೆ ಎಂಬ ಸಂಗತಿ ಆಕಸ್ಮಿಕವಾಗಿ ನನಗೆ ತಿಳಿದದ್ದು ೧೯೭೪ರಲ್ಲಿ. ಅಷ್ಟು ಹೊತ್ತಿಗಾಗಲೆ (೧೯೭೧–೭೨) ಫ್ಲೀಟರ ಐದು ಲಾವಣಿಗಳನ್ನು ಇಂಡಿಯನ್ ಆಂಟಿಕ್ವರಿ ಸಂಪುಟಗಳಿಂದ ಹೆಕ್ಕಿದ್ದ ನನಗೆ ಅವರ ಸಂಪೂರ್ಣ ಸಂಗ್ರಹದ ಬಗ್ಗೆ ಸಹಜವಾಗಿಯೆ ಆಸಕ್ತಿ ಮೂಡಿತ್ತು. ಆ ಸಂಗ್ರಹದ ಮೈಕ್ರೊಫಿಲ್ಮ್ ಪ್ರತಿಯು ನಮ್ಮ ಸಂಸ್ಥೆಯಲ್ಲೆ ಇದೆಯೆಂದು ನನಗೆ ತಿಳಿದದ್ದು ಡಾ. ಬೆಟಗೇರಿ ಕೃಷ್ಣಶರ್ಮರ ಅಭಿನಂದನ ಗ್ರಂಥ 'ಬೆಳುವಲ'ದಲ್ಲಿದ್ದ ಡಾ. ಶ್ರೀನಿವಾಸ ಹಾವನೂರರ ಲೇಖನವನ್ನು ಓದಿದಾಗಲೆ (೧೯೮೨).*

ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರೂ, ಡಾ. ಸಿ.ಪಿ. ಕೃಷ್ಣಕುಮಾರ್ ಅವರೂ, ನನ್ನ ವಿದ್ಯಾಗುರುಗಳು. ೧೯೬೫ರಿಂದಲೂ ನನ್ನನ್ನು ವಾತ್ಸಲ್ಯದಿಂದ ಕಾಣುತ್ತ ಬಂದವರು. ಫ್ಲೀಟರ ಅಪ್ರಕಟಿತ ಲಾವಣಿಗಳನ್ನು ಸಂಪಾದಿಸಲು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದ ಡಾ. ತಿಪ್ಪೇರುದ್ರಸ್ವಾಮಿಯವರಲ್ಲಿ ಅನುಮತಿಗಾಗಿ

* ಈ ಮೈಕ್ರೋಫಿಲ್ಮ್ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರ ಸೇರಿದ್ದು ೧೯೭೩ರಲ್ಲಿ.

ಕೋರಿಕೆ ಸಲ್ಲಿಸಿದಾಗ ಅವರು ಪ್ರೋತ್ಸಾಹಕ ಮಾತುಗಳನ್ನಾಡಿ ಕೂಡಲೆ ಅನುಮತಿ ನೀಡಿದರು. ಪರಿಷ್ಕೃತ ಆವೃತ್ತಿ ಸಿದ್ಧವಾದ ಬಳಿಕ, ನಿರ್ದೇಶಕರಾಗಿದ್ದ ಡಾ. ಸಿ.ಪಿ. ಕೃಷ್ಣಕುಮಾರ್ ಅವರು ಇದರ ಪ್ರಕಟಣೆಗೆ ವ್ಯವಸ್ಥೆ ಮಾಡಿದರು. ಫ್ಲೀಟರ ವಿಷಯದಲ್ಲಿ ಗೌರವಾದರಗಳನ್ನು ಹೊಂದಿದ್ದು, ಶಾಸನ ಶಾಸ್ತ್ರಕ್ಕೆ ಸಂಬಂಧಿಸಿದ ಅವರ ಗ್ರಂಥವನ್ನು ಹಲವು ವರ್ಷಗಳ ಹಿಂದೆಯೇ ಕನ್ನಡಿಸಿದ್ದ ಡಾ. ಸಿ.ಪಿ.ಕೆ. ಅವರು ಈ ವಿಷಯದಲ್ಲಿ ಆಸಕ್ತಿ ತೋರಿದ್ದು ಸಹಜವೇ ಆಗಿತ್ತು.

ಕನ್ನಡ ಅಧ್ಯಯನ ಸಂಸ್ಥೆಯ ಹಿಂದಿನ ನಿರ್ದೇಶಕರಾಗಿದ್ದ ಡಾ. ಹಾ.ಮಾ. ನಾಯಕ ಅವರನ್ನೂ, ಡಾ. ಜೀ. ಶಂ. ಪರಮಶಿವಯ್ಯ ಅವರನ್ನೂ ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳುವುದು ನನ್ನ ಕರ್ತವ್ಯವಾಗಿದೆ.

ಪ್ರಕಟಣೆಯ ಹಾಗೂ ಮುದ್ರಣದ ಹಂತಗಳಲ್ಲಿ, ಪ್ರಸಾರಾಂಗದ ನಿರ್ದೇಶಕರಾದ ಶ್ರೀ ಕೆ.ಟಿ. ವೀರಪ್ಪ ಅವರು, ಡಾ. ಪ್ರಧಾನ್ ಗುರುದತ್ತ ಅವರು, ಪ್ರಿಯ ಗುರುಗಳಾದ ಡಾ. ರಾಮೇಗೌಡ (ರಾಗೌ) ಅವರು, ವಿಶ್ವವಿದ್ಯಾನಿಲಯ ಮುದ್ರಣಾಲಯದ (ಕಾರ್ಯಭಾರಿ) ನಿರ್ದೇಶಕರಾದ ಶ್ರೀ ಬಿ.ಎಸ್. ಸಿದ್ದೇಗೌಡರು ಹಾಗೂ ಅವರ ಸಿಬ್ಬಂದಿ ವರ್ಗದ ಮಿತ್ರರು, ಅರ್ಥಕೋಶದ ಸಿದ್ಧತೆಯಲ್ಲಿ ನೆರವಾದ ಆತ್ಮೀಯರಾದ ಶ್ರೀ ಸೀತಾರಾಮ ಜಾಗೀರ್‌ದಾರ್ ಅವರು, ಮುಖಪುಟಕ್ಕೆ ಅಂದವಾದ ಅಕ್ಷರಗಳನ್ನು ರಚಿಸಿಕೊಟ್ಟ ಆತ್ಮೀಯರಾದ ಶ್ರೀ ಎಂ. ಕೃಷ್ಣೇಗೌಡರು–ಇವರೆಲ್ಲ ಪ್ರೀತಿಯಿಂದ ಸಹಕರಿಸಿದ್ದಾರೆ.

ಮುದ್ರಣಕ್ಕೆ ಹೋಗುವ ಮೊದಲು ಆಕಸ್ಮಿಕವಾಗಿ ಹಸ್ತಪ್ರತಿಯನ್ನು ಪರಿಶೀಲಿಸಿ ಅಮೂಲ್ಯ ಸಲಹೆ ಸೂಚನೆಗಳನ್ನು ಕೊಟ್ಟದ್ದಲ್ಲದೆ, ತಮ್ಮಲ್ಲಿದ್ದ ಒಂದು ಲಾವಣಿಯನ್ನು ಕೊಟ್ಟು ಉಪಕರಿಸಿದ ಹಿರಿಯ ವಿದ್ವಾಂಸರಾದ ಡಾ. ಎಂ.ಎಂ. ಕಲಬುರ್ಗಿ ಅವರನ್ನು ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ.

ಛಾಯಾಚಿತ್ರಗಳನ್ನು ಒದಗಿಸಿಕೊಟ್ಟವರು ಆತ್ಮೀಯರಾದ ಶ್ರೀ ಅರ್ಕೇಶ್ ಅವರು.


—ಈ ಎಲ್ಲ ಮಹನೀಯರಿಗೂ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಕ್ಯಾತನಹಳ್ಳಿ ರಾಮಣ್ಣ

EXTRACT FROM THE INDIAN ANTIQUARY: VOL. 16; 1887
THE LEAF INBETWEEN THE PAGES 356-357

KANARESE BALLADS.

THE BEDAS OF HALAGALI



J. F. FLEET, BO. C.S.

ಪರಿವಿಡಿ

ಭಾಗ ಮೂರು : ದಂಡಕಗಳು

ಭಾಗ ನಾಲ್ಕು : ಇಂಗ್ಲಿಷ್ ಬರಹಗಳು

ಭಾಗ ಐದು : ಅನುಬಂಧಗಳು

ಪುಸ್ತಕ ಒಂದು

ಇಂಡಿಯನ್ ಆಂಟಿಕ್ವರಿ ಸಂಪುಟಗಳಿಂದ

ಪ್ರಸ್ತಾವನೆ : ಪೂರ್ವ*

೧

ಕನ್ನಡದಲ್ಲಿ ಜಾನಪದ ಅಧ್ಯಯನ ಸಮಗ್ರ ರೂಪುತಳೆದು ರೆಂಬೆಕೊಂಬೆಗಳೊಂದಿಗೆ ಮೈಗೂಡಿಕೊಂಡು ಬೃಹದಾಕಾರವಾಗಿ ಬೆಳೆಯುತ್ತಿರುವ ಈ ದಿನಗಳಲ್ಲೂ ಅದನ್ನು ಕುಡರೆ ಮೂಗುಮುರಿಯುವವರು ಇಲ್ಲದಿಲ್ಲ. ಜಾನಪದ ಅಧ್ಯಯನಕ್ಕಾಗಿ ವಿದ್ಯಾರ್ಥಿವೇತನಗಳನ್ನು ಕೊಡಲು ಸರ್ಕಾರ ನಿರ್ಧರಿಸಿದಾಗ ಅಮೆರಿಕದಲ್ಲೆದ್ದ ಕೋಲಾಹಲವನ್ನು ಗಮನಿಸಿದರೆ ನಮ್ಮಲ್ಲಿ ಕಂಡುಬರುವ ಬರಿಯ ಈ ಮೂಗುಮುರಿತ ಸಮಾಧಾನವನ್ನೇ ನೀಡಬಲ್ಲುದು. ಕಳೆದ ಶತಮಾನದಲ್ಲಿ ವಿದೇಶಗಳಲ್ಲಿ ಜಾನಪದ ಮನ್ನಣೆ ಪಡೆಯುತ್ತಿದ್ದಾಗ ನಮ್ಮಲ್ಲಿ ಇನ್ನೂ ಅಜ್ಞಾತವಾಗಿಯೇ ಇತ್ತು. ಇಂಥದೊಂದು ಅಪಾರ ಸಂಪತ್ತು ನಮ್ಮಲ್ಲಿದೆ ಎಂದು ಪಾಶ್ಚಾತ್ಯರೇ ತೋರಿಸಬೇಕಾಯಿತು. ಅಂಥವರಲ್ಲಿ ಬಹುಮುಖ್ಯರಾದವರು ಜಾನ್ ಫೆಯ್ತ್‌ಫುಲ್ ಫ್ಲೀಟ್ ಅವರು.

ಫ್ಲೀಟರು ಇಂಗ್ಲೆಂಡಿನ ಚಿಸ್ವಿಕ್ ಜಿಲ್ಲೆಯಲ್ಲಿ ೧೮೪೭ರಲ್ಲಿ ಹುಟ್ಟಿದರು. ಜಾನ್ ಜಾರ್ಜ್ ಫ್ಲೀಟ್ ಮತ್ತು ಎಸ್ತರ್ ಫೆಯ್ತ್‌ಫುಲ್ ತಂದೆತಾಯಿಗಳು. ಲಂಡನ್ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ. ಐಚ್ಛಿಕ ಭಾಷೆಯಾಗಿ ಸಂಸ್ಕೃತದ ಅಭ್ಯಾಸ. ಸಂಸ್ಕೃತ ಕಲಿಸಿದವರು ಥಿಯೋಡರ್ ಗೋಲ್ಡ್‌ಸ್ಟಕರ್. ಫ್ಲೀಟ್ ೧೮೬೭ರಲ್ಲಿ ಭಾರತಕ್ಕೆ ಬಂದರು. ಮೊಟ್ಟಮೊದಲು ಬೊಂಬಾಯಿಯ 'ರೆವಿನ್ಯೂ' ಇಲಾಖೆಯಲ್ಲಿ ಅಸಿಸ್ಟೆಂಟ್ ಕಲೆಕ್ಟರ್ ಹುದ್ದೆಗೆ ಸೇರಿದರು. ಅಲ್ಲಿಂದೀಚೆಗೆ ಕೊಲ್ಹಾಪುರ, ದಕ್ಷಿಣ ಮರಾಠ, ಸೊಲ್ಲಾಪುರ ಮುಂತಾದ ಸ್ಥಳಗಳಲ್ಲಿ ವಿವಿಧ ಹುದ್ದೆಗಳನ್ನು ವಹಿಸಿಕೊಂಡು ಕೆಲಸ ಮಾಡಿದರು. ಅಸಿಸ್ಟೆಂಟ್ ಕಲೆಕ್ಟರ್, ವಿದ್ಯಾಧಿಕಾರಿ, ಅಸಿಸ್ಟೆಂಟ್ ಪೊಲಿಟಿಕಲ್ ಏಜೆಂಟ್, ಶಾಸನಶಾಸ್ತ್ರಜ್ಞ, ಜೂನಿಯರ್ ಕಲೆಕ್ಟರ್, ಸೀನಿಯರ್ ಕಲೆಕ್ಟರ್, ಕಸ್ಟಮ್ಸ್ ಕಮೀಷನರ್—ಇವು ಅವರು ನಿರ್ವಹಿಸಿದ ಕೆಲವು ಹುದ್ದೆಗಳು. ಇಷ್ಟೆಲ್ಲ ಬಗೆಯ ಹುದ್ದೆಗಳಲ್ಲಿ ಇದ್ದುಕೊಂಡೂ ಅವರು ಕನ್ನಡ ಭಾಷೆ ಸಾಹಿತ್ಯಗಳ ಬಗ್ಗೆ ಲಾವಣಿಗಳ ಬಗ್ಗೆ ಅಧ್ಯಯನ ನಡೆಸಿರುವುದನ್ನು ಕಂಡ ಯಾರೂ ಅವರ ಕಾಲಪ್ರಜ್ಞೆಯನ್ನು ಮೆಚ್ಚಬಹುದು. ಶಾಸನಶಾಸ್ತ್ರದಲ್ಲೂ ಫ್ಲೀಟರದು ದೊಡ್ಡ ಹೆಸರು. 'ಕನ್ನಡ ಲಾವಣಿಗಳ ಸಂಗ್ರಹ' ಎಂಬ ಲೇಖನ ಮತ್ತು ಆಯಾ ಲಾವಣಿಗಳ ಮೊದಲಲ್ಲಿ ಅವರು ಬರೆದಿರುವ ಲೇಖನಗಳಲ್ಲಿ, ಕನ್ನಡದ ಐತಿಹಾಸಿಕ ಘಟನೆಗಳು ಜನಜೀವನದಲ್ಲಿ ಹೇಗೆ ಹಾಸು ಹೊಕ್ಕಾಗುತ್ತವೆ ಎಂಬ ಬಗ್ಗೆ ಒಳ್ಳೆಯ ವಿವೇಚನೆಯನ್ನೂ ಅವರ ಸತ್ತ್ವಪೂರ್ಣ

---

*ಈ ಪ್ರಸ್ತಾವನೆಯು 'ಫ್ಲೀಟರು ಸಂಗ್ರಹಿಸಿದ ಐದು ಐತಿಹಾಸಿಕ ಲಾವಣಿಗಳು' ಸಂಕಲನಕ್ಕಾಗಿ ಬರೆದದ್ದು. ಆದ್ದರಿಂದ ಇದು 'ಪೂರ್ವ'. 'ಪುಸ್ತಕ ಒಂದು' ಎಂಬ ಈ ಭಾಗ 'ಫ್ಲೀಟರು ಸಂಗ್ರಹಿಸಿದ ಲಾವಣಿಗಳ'ನ್ನು ಸಮಗ್ರಗೊಳಿಸಲು ಇಲ್ಲಿ ಪುನರ್ಮುದ್ರಣವಾಗುತ್ತಿದೆ.

ಅನುಭವಗಳನ್ನೂ ನೋಡಿದ ಯಾವ ಕನ್ನಡಿಗನಿಗೂ ತನ್ನ ಜನಪದ ಜೀವನದತ್ತ ಜನಪದ ಸಾಹಿತ್ಯದತ್ತ ಕುತೂಹಲ ಕೆರಳದಿರಲಾರದು.

೨[1]

Ballad ಎಂಬ ಪದಕ್ಕೆ ಇಟಾಲಿಯನ್ ಮೂಲದಲ್ಲಿ 'ಬ್ಯಾಲೆಟಾ' ಎಂದಿದೆ. ಸ್ಕ್ಯಾಂಡಿನೇವಿಯನ್ ಭಾಷೆಯಲ್ಲಿ Folk Evisor ಎನ್ನುತ್ತಾರೆ. ಜರ್ಮನಿಯ Ballade ಎಂಬ ಮಾತಿಗೂ ಇಂಗ್ಲಿಷ್ ಪದವೇ ಮೂಲ. ಒಟ್ಟಿನಲ್ಲಿ, ಹಾಡಿಗೆ ಅಳವಡಿಸಲ್ಪಟ್ಟ ಸಂಕ್ಷೇಪ ಕಥನ ಸಾಹಿತ್ಯವನ್ನು ಪಾಶ್ಚಾತ್ಯ ಸಾಹಿತ್ಯಗಳಲ್ಲಿ 'ಬ್ಯಾಲೆಡ್' ಎಂದು ಗುರುತಿಸಲಾಗಿದೆ. ನಮ್ಮಲ್ಲಿ 'ಜನಪದ ಕಥನಗೀತೆ' 'ಲಾವಣಿ' ಎರಡೂ ಇದೇ ಲಕ್ಷಣವನ್ನು ಹೊಂದಿರುವುದರಿಂದ 'Ballad' ಎಂಬ ಪದಕ್ಕೆ ಸಂವಾದಿಯಾಗಿ 'ಲಾವಣಿ' ಎಂಬ ಪದವನ್ನು ಬಳಸಿಕೊಳ್ಳುವುದು ಉಚಿತವೆಂದೆನ್ನಿಸುತ್ತದೆ.[2]

ಲಯಗಳ ಏಕಮುಖತೆ, ನಾಟಕೀಯ ಸನ್ನಿವೇಶಗಳು, ಉದ್ಗಕ್ರೂ ಪಲ್ಲವಿಯ ಪುನರಾವರ್ತನೆ—ಇವು ಸಾಮಾನ್ಯವಾಗಿ ಲಾವಣಿಯ ಲಕ್ಷಣ. ಎಲ್ಲ ಕಥೆಗಳಂತೆ ಲಾವಣಿಗಳಲ್ಲೂ ಕ್ರಿಯೆ, ಪಾತ್ರ, ವಸ್ತು ಮತ್ತು ಸಂವಿಧಾನದಲ್ಲಿ ಒಂದು ರೀತಿಯ ಸುಸಂಬದ್ಧತೆ ಇರುತ್ತದೆ. ಪಾತ್ರಗಳ ಬೆಳವಣಿಗೆಗಿಂತ ವಸ್ತುಪ್ರಾಮುಖ್ಯಕ್ಕಿಂತ ಇಲ್ಲಿ ಕ್ರಿಯೆ ಪ್ರಧಾನ. ಎಲ್ಲ ಲಾವಣಿಗಳೂ ಹಾಡುವವೇ. ಅನೇಕ ಸಂದರ್ಭಗಳಲ್ಲಿ ವಾದ್ಯದ ಹಿನ್ನೆಲೆಯೂ ಇರುತ್ತದೆ. ಸಾಂಪ್ರದಾಯಿಕ ಮಟ್ಟುಗಳಲ್ಲಿ ಇವುಗಳ ರಚನೆಯಾಗಿರುತ್ತದೆ. ಆ ಮಟ್ಟುಗಳೂ ಲಾವಣಿಯಷ್ಟೇ ಹಳೆಯವಾಗಿರುತ್ತವೆ.

ಲಾವಣಿ ಜನಪದಕ್ಕೆ ಸೇರಿದ್ದರೂ ಪುರಾತನ ಅಲ್ಲ. ಆದಿವಾಸಿಗಳಿಗೆ ಸಂಬಂಧಪಡುವುದಿಲ್ಲ. ಪ್ರಾಚೀನ ಕಾಲದಿಂದ ಬಂದದ್ದಲ್ಲ; ಸುಸಂಸ್ಕೃತ ಕವಿಗಳಿಂದಲೂ ರಚಿತವಾದದ್ದಲ್ಲ. ಜಾನಪದದಲ್ಲಿ ಸಾಂಪ್ರದಾಯಿಕ ಕಥೆಗಳ ದೊಡ್ಡ ಭಂಡಾರವೇ ಇರುತ್ತದೆ. ಸ್ಥಳೀಯ ಐತಿಹ್ಯ, ಚರಿತ್ರೆ ಹಾಗೂ ಇತರ ಜನಪದ ಸಾಮಗ್ರಿಯನ್ನು ಬಳಸಿಕೊಂಡು ಲಾವಣಿ ಸೃಷ್ಟಿಯಾಗುತ್ತದೆ. ಕಾಲದ ಬಗೆಬಗೆಯ ಯಾತ್ರೆಗಳಲ್ಲಿ ಇದು ಜನತೆಯ ಬಾಯಲ್ಲಿ ಬಗೆಬಗೆಯ ರೂಪಗಳನ್ನು ಪಡೆಯುತ್ತ ಸಾಗುತ್ತದೆ. ವಸ್ತು ಘಟನೆ ಶೈಲಿಗಳಲ್ಲಿ ಅಷ್ಟೇನೂ ಅನುಚಿತ ಎನ್ನಲಾಗದಂಥ ಬದಲಾವಣೆಗಳನ್ನು ಸಾಧಿಸಿಕೊಂಡು ಸಾಗುತ್ತದೆ.

ಲಾವಣಿಗಳಲ್ಲಿ ನಾಗರಿಕ ಮತ್ತು ಗ್ರಾಮಾಂತರ ಎಂಬ ಭೇದ ಹೆಚ್ಚಾಗಿರಲಿಲ್ಲ. ಸಮಾಜದಲ್ಲಿ ಸುಶಿಕ್ಷಿತ ಮತ್ತು ಅಶಿಕ್ಷಿತ ವಿಭಜನೆಗಳು ಆಗುವ ಮೊದಲು ಇವು ಎಲ್ಲರಿಗೂ ಸೇರಿದುವಾಗಿದ್ದುವು. ನಾಗರಿಕತೆ ಬೆಳೆದಂತೆ ಅವು ಹಿಂದೆ ಸರಿದು ಗ್ರಾಮಾಂತರ ಪ್ರದೇಶಗಳಲ್ಲಿ ನೆಲೆನಿಂತುವು.

---

1 ಈ ಅಧ್ಯಾಯದ ಎಲ್ಲ ಸಂಶೋಧನಾಂಶಗಳಿಗೂ ಶ್ರೀ ಜೀಶಂಪ ಅವರಿಗೆ ಈ ಲೇಖಕ ಋಣಿ

2 ಡಾ| ಹಾ.ಮಾ. ನಾಯಕ ; ಜಾನಪದ ಸ್ವರೂಪ ; ೧೯೭೧; ಪು. ೨೮

ಲಾವಣಿಯ ಮೂಲದ ಬಗ್ಗೆ ಅನೇಕ ಚರ್ಚೆಗಳು ನಡೆದು ಮೊದಲನೆಯ ಗುಂಪಿನ ವಿದ್ವಾಂಸರಾದ ಹರ್ಡರ್, ಗ್ರಿಮ್, ಗುಮ್ಮರೆ ಮುಂತಾದವರು ಅದರ ಬಗ್ಗೆ ಸ್ಪಷ್ಟವಾದ ತೀರ್ಮಾನಕ್ಕೆ ಬರುವಲ್ಲಿ ವಿಫಲರಾದರು. ಹಾಡಿನಂತೆ ಲಾವಣಿಗಳು ಆದಿಮಾನವ ಸೃಷ್ಟಿ; ಲಾವಣಿಯು ಸಂಪ್ರದಾಯ ಅಲ್ಲಿಂದ ಹರಿದುಬಂದುದು; ಅದೊಂದು ಸಾಮೂಹಿಕ ಸಹಕಾರೀಸೃಷ್ಟಿ—ಎಂದೆಲ್ಲ ವಾದಿಸಿದರು. ಕಿಟ್ರೆಡ್ಜ್ ಮುಂತಾದ ಮುಂದಿನ ವಿದ್ವಾಂಸರು ಇದನ್ನು ಸ್ವಲ್ಪ ತಿದ್ದುಪಡಿಯೊಂದಿಗೆ ಒಪ್ಪಿದರು. ಆಧುನಿಕ ವಿದ್ವಾಂಸರು ಲಾವಣಿಗಳಲ್ಲಿ ಏಕಕರ್ತೃತ್ವವನ್ನು ಒಪ್ಪಿಕೊಳ್ಳುತ್ತಾರೆ. ಲಾವಣಿ ಮಧ್ಯಯುಗದ ಕಾಣಿಕೆ; ಖಂಡಿತ ಆದಿಮಾನವ ಸಮಾಜದಿಂದ ಬಂದದ್ದಲ್ಲ; ಅತ್ಯಂತ ಕಲಾತ್ಮಕವಾದ ಕಷ್ಟಸಾಧ್ಯವಾದ ರೂಪ. ಸಂಗೀತ ಅದರಲ್ಲಿ ಬೇರ್ಪಡಿಸಲಾಗದ ಒಂದು ಭಾಗವಾಗಿ ಬೆರೆತುಬಂದಿದೆ. ವೃತ್ತಿಗಾಯಕರು, ಅಲೆಮಾರೀ ವಿದ್ಯಾವಂತರು, ಈ ಲಾವಣಿ ಸಾಹಿತ್ಯವನ್ನು ವ್ಯವಸ್ಥೆಗೊಳಿಸಿ ಸಂಸ್ಕರಿಸಿದರು. ಒಂದು ಲಾವಣಿ ರಚನೆಯಾದ ಮೇಲೆ ಜನಪದವನ್ನು ಪ್ರವೇಶಿಸುತ್ತದೆ. ವರ್ಷಗಳ ಹಾಡುವಿಕೆಯಲ್ಲಿ ಜನಪದ ಅದನ್ನು ಬದಲಿಸಿ ತಿದ್ದಿ ಪರಿಷ್ಕರಿಸಿ ತನ್ನ ಸ್ಥಿರವಾದ ಮುದ್ರೆಯನ್ನು ಒತ್ತುತ್ತದೆ. ಮಧ್ಯಯುಗದಲ್ಲಿ ಈ ಬಗೆಯ ಸಾಹಿತ್ಯ ಯೂರೋಪಿನಲ್ಲಿ ಸೃಷ್ಟಿಯಾಯಿತು ಎಂದು ಭಾವಿಸಲಾಗಿದೆ.

ಸರ್ ವಾಲ್ಟರ್ ಸ್ಕಾಟ್ ಅವರ Minstrelsy of the Scottish Border ಮತ್ತು ಪ್ರೊ. ಚೈಲ್ಡ್ ಅವರ English and Scottish Popular Ballads ಎಂಬ ಗ್ರಂಥಗಳು ಪ್ರಕಟವಾದ ಮೇಲೆ ಲಾವಣಿ ಸಾಹಿತ್ಯದ ಬಗ್ಗೆ ವಿಶೇಷವಾದ ಆಸಕ್ತಿ ಮೂಡಿತು. ಲಾವಣಿಯನ್ನು ಕುರಿತು ಅನೇಕ ವಿವರಣೆಗಳು ಹುಟ್ಟಿಕೊಂಡುವು. ಫ್ರಾನ್ಸಿಸ್ ಬಿ. ಗುಮ್ಮರೆ ಅವರು "ಈ ಹಾಡುಗಳು ಅಶಿಕ್ಷಿತ ಸಮಾಜದಿಂದ ಬಂದವು, ಅವರಿಂದಲೇ ರಚಿತವಾಗಿ ತಲೆಮಾರಿನಿಂದ ತಲೆಮಾರಿಗೆ ಇವು ಸಾಗಿಬಂದಿವೆ" ಎಂದು ಹೇಳುತ್ತ "ಗೀತೆ ಸಂಗೀತಕ್ಕೆ ಅಧೀನ, ಲಾವಣಿ ಕಥೆಗೆ ಅಧೀನ" ಎನ್ನುತ್ತಾರೆ. "ಅದು ಕೇವಲ ಒಂದು ಕಥನಗೀತೆಯಲ್ಲ. ಭಾವಗೀತಾತ್ಮಕವಾದಂಥ ಒಂದು ಕಥನಗೀತೆ. ಕಥಾ ಶರೀರವನ್ನು ಪಡೆದ ಒಂದು ಭಾವಗೀತೆ" ಎಂದು ಪ್ರೊ. ಕೇರ್ ಹೇಳುತ್ತಾರೆ. ಪ್ರೊ. ಗೆರೋಲ್ಡ್ ಅವರು "ಲಾವಣಿ ಎಂದು ಕರೆಯುವುದು ಒಂದು ಕಥನಗೀತೆ, ಒಂದು ನಾದದ ಹಿನ್ನೆಲೆಯಲ್ಲಿಯೇ ಅದನ್ನು ಹಾಡಬೇಕು. ಅದು ಗ್ರಂಥಸ್ಥ ಮೂಲದಿಂದ ಬಂದದ್ದಲ್ಲ. ಕಂಠಸ್ಥ ಸಂಪ್ರದಾಯದಲ್ಲಿ ಕಲಿತದ್ದು" ಎನ್ನುತ್ತಾರೆ. "ನಿರ್ದಿಷ್ಟವಾಗಿ ಕರ್ತೃವನ್ನು ಗುರುತಿಸಲು ಸಾಧ್ಯವಾಗದಂಥ ಕಥನಗೀತೆ, ಲಾವಣಿ.[3] ಶೈಲಿಯಲ್ಲಿ ಪ್ರಾಮಾಣಿಕತೆಯಲ್ಲಿ ತ್ವರಿತ ನಿರೂಪಣೆಯಲ್ಲಿ ಲಾವಣಿ ತನ್ನತನವನ್ನು ಕಾಪಾಡಿಕೊಳ್ಳುತ್ತದೆ. ಶಿಥಿಲಗ್ರಂಥಿತೆ ಅದರ ಮತ್ತೊಂದು ಲಕ್ಷಣ. ಅದು ಕೆಲವೊಮ್ಮೆ ಒರಟು, ಕೆಲವೊಮ್ಮೆ ಶಕ್ತಿಯುತ" ಎಂದು ಪ್ರೊ. ಗೋಸ್ವಾಮಿಯವರು ಹೇಳುತ್ತಾರೆ.

---

[3] ಫ್ಲೀಟರು ಸಂಗ್ರಹಿಸಿರುವ ಕೆಲವು ಲಾವಣಿಗಳಲ್ಲಿ ಕರ್ತೃಗಳ ಹೆಸರುಗಳು ಉಳಿದುಕೊಂಡಿವೆ.

ಒಟ್ಟಿನಲ್ಲಿ ಲಾವಣಿ ಎನ್ನುವುದು ಹಾಡಿನ ರೂಪದ ಕಥೆ; ಹಾಡಲೇಬೇಕಾದುದು; ವಸ್ತು ಶೈಲಿ ಮತ್ತು ಸ್ವರೂಪದ ದೃಷ್ಟಿಯಿಂದ ಅದು ಜನಪದಕ್ಕೆ ಸೇರಿದ್ದು; ಕಳೆದ ಶತಮಾನದಲ್ಲಿ ಫ್ಲೀಟರು ಸಂಗ್ರಹಿಸಿದ ಲಾವಣಿಗಳಲ್ಲಿ ಐದು ಇಂಡಿಯನ್ ಆಂಟಿಕ್ವರಿ ಪತ್ರಿಕೆಯಲ್ಲಿ ವ್ಯಾಖ್ಯಾನಸಹಿತ ಪ್ರಕಟವಾದುವು. ಅವನ್ನೀಗ ಪರಿಚಯ ಮಾಡಿ ಕೊಳ್ಳಬಹುದು.

೧

ಸಂಗೋಳ್ಳಿ ರಾಯಣ್ಣ

ರಾಯನಾಯಕ ಚಂದದಿಂದ ಹೊಂದಿಕೊಂಡು ಇರುವಷ್ಟು ಮಟ್ಟಿನ ಮೃದು ಸ್ವಭಾವದ ಸಂಗೋಳ್ಳಿಯ ಕುಲಕರ್ಣಿ ಬಾಳಪ್ಪನಿಗೆ ಗರ್ವ ಬಂತು. ಆದ್ದರಿಂದ ಅವರಿಬ್ಬರಲ್ಲೂ ಬಹುಬೇಗ ವೈಮನಸ್ಯ ಉಂಟಾಯಿತು. ಇಬ್ಬರೂ ಸ್ನಾನ ಮಾಡುವ ಹೊತ್ತಿನಲ್ಲಿ ವಸ್ತ್ರವನ್ನು 'ಶಳೆ'ದು ತಾ ಎಂದು ರಾಯಣ್ಣನ ಕೈಗೆ ಕೊಡಲು ಹೋದಾಗ ಅಪ್ಪಟಕ್ಕೆ ಕೋಪಗೊಂಡ ರಾಯಣ್ಣ ದಿಟ್ಟತನದಿಂದ, 'ಅದನ್ನು ಮುಟ್ಟುವುದಿಲ್ಲ' ಎಂದ. 'ಸೊಕ್ಕು ಬಂತೇನೊ ನಿನಗೆ?' ಎಂಬ ಮಾತನ್ನು ಕೇಳಿ ಕೋಪ ಇಮ್ಮಡಿಸಿ 'ನಿನ್ನನ್ನು ಹೋಳಿ ಆಡಿಬಿಡುವೆನು' ಎಂದು ಹೇಳಿ ಹಿಂದಕ್ಕೆ ತಿರುಗಿ ಹೊರಟುಹೋದ ರಾಯಣ್ಣ.

ಲಗುಬಗೆಯಿಂದ ತಾಯಿಯ ಪಾದಕ್ಕೆ ಬಿದ್ದು ಕತ್ತಿಹಿಡಿದು ಹೊರಟ ಧೀರ ರಾಯನಾಯಕ, 'ಮಂಗಲಾಯರ' ಸೀಮೆಗೆ ಹೋಗಿ ಸುರಪುರದ ಅರಸರ ಎದುರಿಗೆ ನಿಂತು ಕೈಜೋಡಿಸಿ ನಮಸ್ಕಾರ ಮಾಡಿದ. ಇವನ ಶೌರ್ಯವನ್ನು ಕೇಳಿತಿಳಿದಿದ್ದ ಆ ಅರಸ ಕಣ್ಣಾರೆ ನೋಡಿದಾಗ ಹರುಷ ಹೆಚ್ಚಿ 'ಸರ್ಜ್ಯಾ, ನಿನಗೆ ಸರಿಯಿಲ್ಲ' ಎಂದು ಮೆಚ್ಚುಗೆ ಸೂಸಿ, 'ಏನುಬೇಕು ಬೇಡಿಕೊ' ಎಂದ. 'ಬಂಡಾಯಮೇಳಲು ದಂಡು ಬೇಕು' ಎಂದ ಇವನು. ದಕ್ಕಿದ ದಂಡನ್ನು ಒಯ್ದು ಅಡವಿಯಲ್ಲಿಟ್ಟ.

ಹೊಂದಿಕೊಂಡು, ಶಿಸ್ತಿನಿಂದ, ಎಚ್ಚರದಿಂದ, ಹುಷಾರಾಗಿ ಇರಬೇಕು–ಎಂದು ತಂದ ದಂಡಿಗೆ ಹೇಳಿದ. ನಂಬಿಕೆಯ ಆಳುಗಳನ್ನು ಸುತ್ತ ನಿಲ್ಲಿಸಿ ದಂಡಿಗೆ ತಕ್ಕ ಬಂದೋಬಸ್ತು ಮಾಡಿದ. ಶಿಸ್ತಿನಿಂದ ತಯಾರಾಗಿ 'ವತ್ತರ'ದಿಂದ ನಡೆಯಿರಿ ಎಂದು ಸೂಚನೆ ಕೊಟ್ಟ. ಯುದ್ಧದ ತೊಡುಗೆಗಳನ್ನು ತೊಟ್ಟು ಕಟಾರಿ ಬಿಲ್ಲು ಈಟಿ ಬಾಣ ಕಡವು ಕತ್ತಿ ಕೈಚೂರಿಗಳು ಇರವು ಕಂಜಿರ ಬಾಕು ಪಿಸ್ತೂಲಗಳನ್ನು ಹಿಡಿದ ಸಿಟ್ಟಿನ ಬಂಟರಾದರು. ಒಬ್ಬರೂ ಉಳಿಯದಂತೆ ಪ್ರಜ್ಞೆಯಿಲ್ಲದವರಂತೆ ರಣಸೂರೆಯನ್ನು ಯಾವಾಗ ಮಾಡೇವು ಎಂಬ ಆತುರದಿಂದ ಅಬ್ಬರದಿಂದ ಹೊರಟರು.

ಹಲ್ಲುಹಲ್ಲು ಕಡಿದು ಕಾಲು ಕೆದರಿ ಕತ್ತಿ ಹಿಡಿದು ಉನ್ಮತ್ತರಂತೆ ಜಿಗಿದಾಡಿದರು ಬಂಟರು. ಮೊದಲು ಶಮಸರಗಡಕ್ಕೆ ಹೋಗೋಣ ನಡೆಯಿರಿ ಎಂದು ಬಿಚ್ಚುಗತ್ತಿ ಚನ್ನಬಸವಣ್ಣ ಹೇಳಿದರೆ, ಇವತ್ತು ಬಹಳ ಗದ್ದಲ ಮಾಡಬೇಕು ಎಂದು ಗಜವೀರ ಹೇಳುತ್ತಾನೆ. ಸತ್ಯವುಳ್ಳ ಶಿರಸಂಗಿ ಕಾಳವ್ವನನ್ನೂ ಕಕ್ಕೆರಿ ಕರಿಯವ್ವನನ್ನೂ, ಪ್ರಾರ್ಥಿಸಿ ಶಮಸರಗಡವನ್ನು ಮುತ್ತಿದರು.

ಹಠಾತ್ತನೆ ನಡೆದ ದಾಳಿಯಲ್ಲಿ ಬಹಳ ಗದ್ದಲ ಮಾಡಿ ಸಿಕ್ಕಸಿಕ್ಕವರ ತಲೆತರಿದರು. ಹಿಡಿದು ಹೊಡೆದು ಕಡಿದು ಬಡಿದು ದಾಂಧಲೆಯೆಬ್ಬಿಸಿದರು. ಕ್ಷಣಮಾತ್ರದಲ್ಲಿ ಮಂದಿ ಯಾರೂ ಉಳಿಯಲಿಲ್ಲ. ನಡೆದ ಗದ್ದಲವನ್ನು ಕೇಳಿ ಗಾಬರಿಯಾದ ಸುಭೆಯದಾರ ಎದ್ದು ಬಂದ. ಸುತ್ತೇಳು ಸಮುದ್ರದಲ್ಲೂ ನಮ್ಮ ನಾಡಿನ ಒಳಗೂ ಇಂಥವರು ಯಾರೂ ಇದುವರೆಗೆ ಬಂದದ್ದಿಲ್ಲ, ಲೂಟಿ ಮಾಡಿದ್ದೆಲ್ಲವನ್ನೂ ಇಷ್ಟು ಬೇಗ ಒಯ್ದುಬಿಟ್ಟಿದ್ದಾರಲ್ಲ, ಎಂದುಕೊಂಡ. ಮಂದಿ ಯಾರನ್ನೂ ಕಾಣದೆ ಗವ್ವೆನ್ನುವ ಕತ್ತಲೆಯನ್ನು ಮಾತ್ರ ಕಂಡ. ನಡೆದದ್ದೆಲ್ಲವನ್ನೂ ಧಾರವಾಡಕ್ಕೆ ಬರೆದ.

ಬರೆದ ಪತ್ರವನ್ನು ಹೊತ್ತು ಲಗುಬಗೆಯಿಂದ ಧಾರವಾಡದ ಹಾದಿ ಕೂಡಿಕೊಂಡರು ಓಲೆಕಾರರು. ಗಚ್ಚಿನ ಬಂಗಲೆಯೊಳಗಿದ್ದ ಕಚೇರಿಯಲ್ಲಿನ ಸಾಹೇಬನ ಬಳಿಗೆ ಒಯ್ದರು. ಪತ್ರವನ್ನು ಓದಿಕೊಂಡ ಸಾಹೇಬ ಹೋದದ್ದು ಹೋಯಿತು ಎಂದುಕೊಂಡು ಆ ಕ್ಷಣದಲ್ಲೆ ಗಾದಿ ಬಿಟ್ಟು ಎದ್ದವನೇ "ಟೊಪ್ಪಿಗಿ ವೊಗಿದು, ಮುಂಗೈ ಕಡಿದು ಶಿಟ್ಟಿಲಿಂದ ಹಲ್ಲ ತಿಂದು" ಕುಳಿತು ಪತ್ರ ಬರೆದ. ವಿಕ್ಟೋರಿಯ ರಾಣಿ ಖುದ್ದಾಗಿಬಂದು ನಡೆದದ್ದನ್ನು ತಿಳಿದುಕೊಂಡರು. ಕಾಳಗಕಸ್ತು [redacted] ಬೆಳಗಾಂವಿ ಧಾರವಾಡ ಜಿಲ್ಲೆಗಳಿಗೆ ಐದುನೂರು ಸೋದರಮಂದಿಯನ್ನೂ ಎರಡುನೂರು ಕರಿಯ ಮಂದಿಯನ್ನೂ ಟಾಕೋಟಾಕಾಗಿ ಕಳಿಸಿಕೊಟ್ಟರು. ರಾಯನನ್ನು ಕೊಲ್ಲುವುದಕ್ಕೆ ಈ ದಂಡನ್ನು ತೆಗೆದುಕೊಂಡು ಹೊರಡಬೇಕೆಂದು ಸುಭೆಯದಾರ ಮನಸ್ಸುಮಾಡಿದ.

ಅಷ್ಟು ಮಂದಿಯನ್ನೂ ಸಿಟ್ಟಿನಿಂದ ಹೊರಡಿಸಿಕೊಂಡು ಹೊರಟ ಸುಭೆಯದಾರ ರಾಯನ ಮಂದಿ ಎಲ್ಲಿದೆ ಎಂದು ಹುಡುಕಾಡಿದ. ಹಳ್ಳಕೊಳ್ಳ ಗುಡ್ಡಗಲಿ ಗಿಡ ಕಾಂತಾರಗಳಲ್ಲಿ ಹುಡುಕುತ್ತ ಬಂದು ಹಳ್ಯಾಲ ಗುಡ್ಡವನ್ನು ಸೇರಿದರು. ಈ ದಂಡಿನ ಸುಳಿವನ್ನು ಕಂಡ ರಾಯನಾಯಕ. ಕುಳಿತು ಫಳಾರ ಮಾಡುತ್ತಿದ್ದ ಅವನ ಮಂದಿ ತವಕದಿಂದ ತಯಾರಾಗಿ 'ಗಿಡಕ ಜ್ಯಾಂವಿಗಿ* ಕಟ್ಟಿ' ದೂರ ಹೋಗಿ ನಿಂತರು. ಇಲ್ಲೇ ಇದ್ದಾನೆ ರಾಯನಾಯಕ, ಎಂದುಕೊಂಡ ಅವರು ಆ ಆವರಣವನ್ನು ಸುತ್ತುಗಟ್ಟಿ ಹರಳು ಹುರಿದಂತೆ ಮೂರು ತಾಸು ಗರನಾಲು ಟುಂಬಾಕಿ ಕರುಲಿ ಹಾರಿಸಿದರು. ಮದ್ದುಗುಂಡು ತೀರಿಹೋಯಿತು. 'ಮುನದಾನು ಅವರಿಗೆ ಬಗವಂತಾ!'

ಗುಂಡು ಹಾಕುವ ಸಪ್ಪಳ ನಿಂತದ್ದು ಕಂಡ ರಾಯಣ್ಣ ಬೆನ್ನಮೇಲೆ ಬಂದ. ಕುರಿಮಂದೆಯಲ್ಲಿ ತೋಳ ಹೊಕ್ಕಂತೆ "ಮುರಮುರದ ವೊಗವೊಗದ ಹಿರಿಹಿರಿದ ಕಡದಾರ ಕತ್ತೀಲಿ". ಸುತ್ತುಗಟ್ಟಿ ಕತ್ತಿಯ ಮಂದಿ ಎತ್ತಲೂ ಹೋಗದಂತೆ ಕಡಿದರು. ಕಂಡ ಮಂದಿಯ ತಲೆ ತರಿದ ಅಲ್ಲಿ ರುಂಡಗಳು ಚೆಲ್ಲಾಪಿಲ್ಲಿ ಉರುಳಿಬಿದ್ದುವು. ಕೊಳ್ಳದಲ್ಲಿ ನೆತ್ತರ ಕಾಲುವೆ ಹರಿಯಿತು. ಉಳಿದ ಮಂದಿ ಕೆಳಗೆ ಬಿದ್ದು 'ಕತ್ತಿಚಲ್ಲಿ ಹುಲ್ಲಕಚ್ಚಿ' ತಲೆಯ ಮೇಲೆ ಕಲ್ಲ ಹೊತ್ತರು! ಕೂಡಲೆ ಕಿತ್ತೂರ ಕಡೆಗೆ ಹೊರಟಿತು

* ಜ್ಯಾಳಿಗಿ

ರಾಯಣ್ಣನ ದಂಡು. ಅಲ್ಲಿ "ತೇತ ಪಿರಂಗೇರ" ದಂಡಿತ್ತು. ಯಾರೂ ರಾಜ್ಯ ಆಳದ ಹಾಗೆ ಎಲ್ಲವನ್ನೂ ಸೂರೆ ಮಾಡಿ ಲೋಕದಲ್ಲಿ ನಾವೇ ಮೀರಿ ಇರಬೇಕು ಎಂದು ಕೊಂಡರು ರಾಯಣ್ಣನ ಬಂಟರು.

ದುಂಡು ಟೊಪ್ಪಿಗೆಯ ಪಿರಂಗಿಯವರನ್ನು ಲೆಕ್ಕವಿಲ್ಲದಂತೆ ಕತ್ತರಿಸಿ ದಿಕ್ಕು ತಪ್ಪಿಸಿದರು. ಎಷ್ಟೋ ಊರುಗಳನ್ನು ಕೊಳ್ಳೆಹೊಡೆದ ರಾಯಣ್ಣ ಚಮತ್ಕಾರದಿಂದ ಸಂಪಗಾಂವಿಯ ಕಚೇರಿಯನ್ನು ಹೊಕ್ಕು ಬೆಂಕಿ ಇಟ್ಟ.

ರಾಯನಾಯಕನ ದಾಂಧಲೆಯನ್ನು ತಡೆಯಲಾರದೆ ಕೋಪಗೊಂಡ ಸಾಹೇಬ ನಿರ್ವಾಹವಿಲ್ಲದೆ ಅವನನ್ನು ಹಿಡಿದುಕೊಟ್ಟವರಿಗೆ ಇನಾಮು ಕೊಡುತ್ತೇನೆ ಎಂದು ಡಂಗುರ ಹಾಕಿಸಿದ. ಸುದ್ದಿ ಕೇಳಿದ ರಾಯಣ್ಣ ಸರೋವರದಂಥ ಹಳ್ಳದ ಪ್ರದೇಶದಲ್ಲಿ ಅಡಗಿ ಕುಳಿತ. ಸಾಹೇಬನ ಬಳಿಗೆ ಬಂದು ರಾಯನಾಯಕನನ್ನು ನಿಮಗೆ ಹಿಡಿದು ಕೊಡುತ್ತೇವೆ ಎಂದು ಕೂಡಿ ಬರೆದುಕೊಟ್ಟ ಮೂವರು, ಜೀವದ ಆಸೆ ಬಿಟ್ಟು ಭಾವ ಶುದ್ಧಿ ಇರುವವರಂತೆ ಮಾತಾಡುತ್ತ ರಾಯನಾಯಕನನ್ನು ಸೇರಿಕೊಂಡರು. ಅವರ ಮನಸ್ಸಿನ ರೂಪು ರಾಯಣ್ಣನಿಗೆ ತಿಳಿಯಲೇ ಇಲ್ಲ.

ನಾಡನ್ನೆಲ್ಲ ಬಡಿದು ತರೋಣ ಎಂದು ಆ ಮೂವರೂ ರಾಯಣ್ಣನನ್ನು ಪ್ರಚೋದಿಸಿದರು. ಹಂಬ್ಬಳ್ಳಿಗೆ ಬಂದು ಕೇಡುಮಾಡಿದರು. ಮಂದಿಯೆಲ್ಲವನ್ನೂ ಮುಂದೆ ಕಳಿಸಿ ನಾವು ನಾಲ್ವರೇ ಹಿಂದೆ ಹೋಗೋಣ ಎಂದರು. ಅವರ ಮಾತನ್ನು ಕೇಳಿ ಮನಸೋತು ಅವರ ಬೆನ್ನು ಹತ್ತಿದ ರಾಯಣ್ಣ ವಿಶ್ವಾಸಕ್ಕೆ ಬಿದ್ದು ಹುಚ್ಚನಾದ. ಹಳ್ಳಕ್ಕೆ ಹೋಗಿ ಸ್ನಾನಮಾಡಿ ಊಟದ ಹೊತ್ತಿಗೆ ಹೋಗೋಣ ಎಂದರು. ಆ ಮಾತನ್ನು ಕೇಳಿ ರಾಯಣ್ಣ ಕತ್ತಿ ಇಟ್ಟು ಸಿದ್ಧನಾದ. ತೊಟ್ಟ ಚಡ್ಡಿಯನ್ನು ತೆಗೆಯಲು ಕುಳಿತಾಗ ಮೇಲೆ ಬಿದ್ದು ಒತ್ತಿ ಹಿಡಿದುಕೊಂಡರು. ಅವರ ಮಂದಿ ಕೂಡಿಕೊಂಡು ಹೊರಸಿನ ಮೇಲೆ ಬಿಗಿದುಕಟ್ಟಿ ಹೊತ್ತು ನಡೆದರು. ಕಚೇರಿಯೊಳಗೆ ಇಳಿಸಿದರು. ಸರದಾರ ರಾಯಣ್ಣನನ್ನು ನೋಡಿದ. ಅವನ ಧೈರ್ಯಶೌರ್ಯಗಳನ್ನು ತಿಳಿದಿದ್ದ ಸರದಾರ ಕೊಲ್ಲಲು ಮನಸ್ಸಿಲ್ಲದೆ ಮರುಗಿದ. ನಮಗೆ ಬಹಳ ಕಷ್ಟ ತಂದಿಟ್ಟ ಎಂಬ ಅವರ ಮಾತು ಕೇಳಿದ ಸರದಾರನ ಕಣ್ಣುಗಳಲ್ಲಿ ಅನುಕಂಪ ಇತ್ತು.

ಸರದಾರನ ಅನುಕಂಪದ ದೃಷ್ಟಿಯನ್ನು ಗಮನಿಸಿದ ಇವರು ಕೈಮುಗಿದು ಹೇಳುತ್ತಾರೆ: "ನಮ್ಮ ಜೀವಕ್ಕೇ ಹಾನಿ ತರುತ್ತಿದ್ದೀರಿ. ರಾಯನಾಯಕನನ್ನು ನೀವು ಬಿಟ್ಟುಬಿಟ್ಟರೆ ನಾವು ಮಾತ್ರ ನಾಡಿನಲ್ಲಿರುವುದಿಲ್ಲ. ನಮ್ಮನ್ನು ಕಡಿದುಹಾಕಿಬಿಡುತ್ತಾನೆ. ಆದ್ದರಿಂದ ಮೊದಲು ನಮ್ಮನ್ನು ಗಲ್ಲಿಗೆ ಹಾಕಿ. ಆಮೇಲೆ ಬೇಕಾದರೆ ಇವನನ್ನು ಸುಮ್ಮನೆ ಬಿಟ್ಟುಬಿಡಿರಿ". ಚಮತ್ಕಾರದಿಂದ ಸರದಾರ ಮೇಲಧಿಕಾರಕ್ಕೆ ಬರೆದು ಕೊಂಡ. ರಾಯನಾಯಕನ ಬಗ್ಗೆ ತಿಳಿದು ವಿಚಾರ ಮಾಡಿದ ಅವರು ಕೊಲ್ಲಬಾರದೆಂದು ಉತ್ತರ ಬರೆದರು. ಅಲ್ಲಿಂದ ಉತ್ತರ ಬಂದು ಸೇರುವಷ್ಟರಲ್ಲಿ ಇವರು ಒತ್ತಾಯಮಾಡಿ

ರಾಯನಾಯಕನನ್ನು ಗಲ್ಲಿಗೆ ಹಾಕಿಸಿಬಿಟ್ಟರು. ಧೀರ ರಾಯನಾಯಕನ ಕೊರಳಿಗೆ "ಸವಕ" ಹಾಕಿ ತೂಗಬಿಟ್ಟರು.

ಗಲ್ಲಿಗೆ ಹಾಕಲು ಅಪ್ಪಣೆಕೊಟ್ಟ ಸರದಾರನೇ ಇಂಥ ಬಂಟನನ್ನು ಕೊಲ್ಲಬಾರದಿತ್ತು ಎಂದು ಮರುಗುತ್ತ ನಿಲ್ಲುತ್ತಾನೆ. ಇವನಿಗೆ ಅಂತ್ಯಕ್ರಿಯೆ ನಡೆಸಿ ಎಂದು ಖರ್ಚಿಗಾಗಿ ತಾನೇ ಹತ್ತುರೂಪಾಯಿ ಕೊಡುತ್ತಾನೆ. ಮಂದಿಯೆಲ್ಲ ಕೂಡಿ "ಚಂದದಿಂದ" ರಾಯ ನಾಯಕನಿಗೆ ಮಣ್ಣುಕೊಟ್ಟರು. ಸಮಾಧಿಯ ಮೇಲೆ ಗಿಡ ನೆಟ್ಟರು. ಬೆಳೆದ ಗಿಡದ ಕೋಬೆಗಳ ಮೇಲೆ ಸುತ್ತಮುತ್ತ ತೊಟ್ಟಿಲುಗಳು ತೂಗಾಡಿದುವು. ಸತ್ಯವಂತನಾದ ರಾಯನಾಯಕನಿಗೆ ನಡೆದುಕೊಂಡವರಿಗೆ ಬೇಕಾದಷ್ಟು ಪುತ್ರಸಂತಾನ ಪ್ರಾಪ್ತವಾಯಿತು. ಮೆಕನಗೌಡ ನಿಂಗನಗೌಡ ಬಾಳನಾಯಕ ಮೂವರೂ ಕೂಡಿ ಹರ್ಷದಿಂದ ನಗುತ್ತ ಬಂದರು. ಬಿಚ್ಚುಗತ್ತಿ ಚನ್ನಬಸವಣ್ಣ, ಹೆಚ್ಚಿನ ಬಂಟ ಗಜವೀರ, ಇಬ್ಬರು ಮಸಲತ್ತು ಮಾಡಿದರು. ಕಡ್ಡಿಗುದ್ದಿ ಬಾಲಣ್ಣ, ಕಿಲ್ಲೆದ ಭೀಮಣ್ಣ, ಬೆಳವಡಿ ದೊಡ್ಡರ ಯೆಲ್ಲಣ್ಣ–ಎಲ್ಲ ಮಂದಿಯನ್ನೂ ಕೂಡಿಕೊಂಡು ಸರದಾರನ ಬಳಿಗೆ ಹೋಗಿ ಹೇಳುತ್ತಾರೆ : 'ನಮ್ಮ ಜೀವದ ಕಡ್ಡಿ ಸತ್ತುಹೋಯಿತು'. ಆದರೆ, ಮರುಕ್ಷಣದಲ್ಲೆ ಹಿರಿದ ಕತ್ತಿಯನ್ನು ಕೈಗೆ ತೆಗೆದುಕೊಂಡು ತಿರುಗಿಗುಡ್ಡ ಬಿದ್ದು ಓಡಿದರು. ಎಲ್ಲ ಮಾತೂ ಮರೆತುಹೋಯಿತು.

* * *

ಬ್ರಿಟಿಷರ ಆಳ್ವಿಕೆಯ ಹದ್ದುಮೀರಿದ ವರ್ತನೆಯಿಂದ ರೇಗಿ, ನೆಪ ಯಾವುದಾದರೂ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಮಡಿದ ವೀರ ಕನ್ನಡಿಗನೊಬ್ಬನ ಕಥೆ ಸಂಗೊಳ್ಳಿ ರಾಯಣ್ಣನನ್ನು ಕುರಿತ ಲಾವಣಿ. ತನ್ನ ಸಂಸ್ಥಾನವನ್ನು ಪೂರ್ವಸ್ಥಿತಿಗೆ ತರಲು ಹೊರಟ ರಾಯಣ್ಣನಿಗೆ ದಂಡನ್ನು ಕೊಟ್ಟು ತಕ್ಕ ಬೆಂಬಲವನ್ನು ನೀಡಿದ ಸುರಪುರದ ಅರಸರನ್ನು ಲಾವಣಿಕಾರ ಮರೆತಿಲ್ಲ. ದಕ್ಕಿದ ದಂಡಿಗೆ ತಕ್ಕ ನಾಯಕನಾಗುತ್ತಾನೆ ರಾಯಣ್ಣ. ಶಿಸ್ತಿಗೆ ಪ್ರಾಧಾನ್ಯ ನೀಡುವ ರಾಯಣ್ಣನ ಮುಂಜಾಗ್ರತೆ ಯಾರೂ ತಲೆದೂಗುವಂಥದು. ಶಿಸ್ತಿಗೊಳಪಟ್ಟ ಸೈನಿಕರೂ ಖುಷಿ ಬಂದಾಗ "ಜಿಗತಾ ಮಾಡತಾರ" ಎಂಬಲ್ಲಿ ಅವರ ಶಿಸ್ತನ್ನು ಕಾಯುವ ಆತ್ಮೀಯ ನಾಯಕತ್ವ ವ್ಯಕ್ತ ವಾಗುತ್ತದೆ. ಬೆನ್ನಾಡಲು ಹುಡುಕುತ್ತ ಬಂದ ತಮಗಿಂತ ಅಧಿಕ ಸಂಖ್ಯೆ ಯಲ್ಲಿದ್ದ ಎದುರಾಳೀ ಸೈನ್ಯವನ್ನು "ಗಿಡಕ ಜ್ಯಾಂವಿಗಿ ಕಟ್ಟು"ವುದರ ಮೂಲಕ ಮೋಸಗೊಳಿಸಿ ತರಿದು ಕೊಲ್ಲುವ ದೃಶ್ಯ, ಇಷ್ಟನ್ನೆಲ್ಲ ಕ್ಷಣಾರ್ಧದಲ್ಲಿ ಯೋಚಿಸಿ ನಿರ್ಧರಿಸಿ ಕಾರ್ಯರೂಪಕ್ಕಿಳಿಸುವ ರಾಯಣ್ಣನ ಮೇಧಾವಿತನ, ರೋಮಾಂಚಕಾರಿ. ಸುಭೇದಾರನ ದಂಡಿನಲ್ಲಿ ಮದ್ದು ತೀರಿಹೋದ ಸುಳಿವು ಕಂಡೊಡನೆ "ಕುರಿಮಂದೆಯಲ್ಲಿ ತೋಳ ಹೊಕ್ಕಂತೆ" ರಾಯಣ್ಣ ಆ ದಂಡಿನಲ್ಲಿ ನುಗ್ಗುವ ಚಿತ್ರವೂ, "ಮುರಮುರದ ವೊಗವೊಗದ ಹಿರಿಹಿರಿದ ಕಡದಾರ ಕತ್ತೀಲಿ" ಎಂಬ ವರ್ಣನೆಯೂ, ರಾಯಣ್ಣನ ಪಡೆಯ ಧೈರ್ಯಸಾಹಸಗಳ ಶಿಸ್ತಿನ ಸ್ಪಷ್ಟ ಚಿತ್ರವನ್ನು ಮೂಡಿಸುತ್ತವೆ. "ಸುತ್ತುಗಟ್ಟಿ ಕತ್ತಿಮಂದಿ ಯತ್ತ್ಯೈತ್ ಹೋಗಗೊಡದ ಕಡದಾರ" ಎಂಬಲ್ಲಿ ಅವರ ಚುರುಕುತನದ ಶಿಸ್ತಿನ ಪರಾಕಾಷ್ಠೆ ವ್ಯಕ್ತವಾಗುತ್ತದೆ. ರಾಯಣ್ಣ ಚಮತ್ಕಾರದಿಂದ

ಕಚೇರಿಯೊಳಕ್ಕೆ ನುಗ್ಗಿ ಬೆಂಕಿಹಚ್ಚುವ ಪ್ರಕರಣ ಭಗತ್‌ಸಿಂಗನ ಸಾಹಸವೊಂದನ್ನು ನೆನಪಿಗೆ ತರುತ್ತದೆ.

ಬ್ರಿಟಿಷರ ದಬ್ಬಾಳಿಕೆಯು ಆಡಳಿತದ ಬಗ್ಗೆ ರಾಯಣ್ಣ ಎಂಥ ಉಗ್ರ ಅಭಿಪ್ರಾಯಗಳನ್ನು ಹೊಂದಿದ್ದ ಎಂಬುದರ ವಾಚ್ಯವರ್ಣನೆಗಳಿಲ್ಲ. ಅವನ ದಂಗೆಯು, ಲೂಟಿ ಪ್ರಕರಣಗಳ, ಭಯಂಕರ ರೂಪವನ್ನು ವರ್ಣಿಸುವುದರ ಮೂಲಕವೇ ಲಾವಣಿಕಾರ ರಾಯಣ್ಣನ ಅಭಿಪ್ರಾಯಗಳನ್ನು ಮನಮುಟ್ಟುವಂತೆ ವರ್ಣಿಸಿದ್ದಾನೆ. ಶಮುಸರಗಡಕ್ಕೆ ಹಾಕಿದ ಮೊದಲ ಮುತ್ತಿಗೆಯೇ ಎಷ್ಟು ಉಗ್ರಸ್ವರೂಪದ್ದಾಗಿತ್ತು ಎಂಬುದು ಅಲ್ಲಿನ ಸುಭೇದಾರ ಅಂದುಕೊಳ್ಳುವ "....ನಮ್ಮ ನಾಡವಳಗ ಹಿಂತಾವರು ಯಾರ್ಯಾರು ಬಂದಿದ್ದಿಲ್ಲ...." ಎಂಬ ಮಾತುಗಳಲ್ಲಿ ಕಂಡುಬರುತ್ತದೆ. ಈ ವರದಿಯನ್ನು ಸುಭೇದಾರ ತನ್ನ ಮೇಲಿನ ಸಾಹೇಬನಿಗೆ ಬರೆದುಕೊಂಡಾಗ ಆ ಸಾಹೇಬ ಮೇಲಿನವರಿಗೆ ಪತ್ರ ಬರೆಯುತ್ತಾನೆ. ಇಂಥ ಪ್ರತಿಕ್ರಿಯೆಗಳು ತಮ್ಮ ಅಧಿಕಾರದ ಬಗ್ಗೆ ಕಂಡುಬರುವ ಪ್ರತಿಭಟನೆಗಳನ್ನು ಹಿಂದು ಮುಂದು ನೋಡದೆ ಕಾರಣಗಳನ್ನು ವಿಚಾರಿಸದೆ ಉರಿದೇಳುತ್ತಿದ್ದ ಬ್ರಿಟಿಷರ ದುರಭಿಮಾನವನ್ನು ಎತ್ತಿಹಿಡಿಯುತ್ತವೆ.

ಆಣೆಪ್ರಮಾಣಗಳು, ಅವುಗಳ ಬಗೆಗಿದ್ದ ಅಚಲ ನಂಬಿಕೆ, ಮುಂತಾದುವು ಜನಪದ ಬದುಕಿನಲ್ಲಿ ನೂರಾರು ವರ್ಷಗಳಿಂದಲೂ ಸ್ಥಾನಗಳಿಸಿಕೊಂಡು ಉಳಿದುಕೊಂಡು ಬಂದಿರುವುದನ್ನು "ಉಪ್ಪು ಗೊಬ್ಬರ ಮುಟ್ಟಿ, ಉರವು ದೀವಿಗಿ ಮುಂದ ಕುಂತು ಹೇಳತಾರೊ..." ಎಂಬ ವರ್ಣನೆಯಲ್ಲಿ ಕಾಣಬಹುದು. ಉಪ್ಪು ಗೊಬ್ಬರ, ಉರಿಯುವ ದೀವಿಗೆ, ಶುದ್ಧ ಜನಪದ ಬದುಕಿನಲ್ಲಿ ಪಡೆದಿದ್ದ ಸ್ಥಾನವನ್ನೂ ಅವು ಇಂದಿಗೂ ಜೀವಂತವಾಗಿ ಉಳಿದಿರುವುದನ್ನೂ ಕಂಡಾಗ ಅಂಥ ಬದುಕಿನ ಅಚಲ ಸಾಮರ್ಥ್ಯವನ್ನೂ ಶುಚಿತ್ವವನ್ನೂ ಎಂಥವರೂ ಮೆಚ್ಚಲೇಬೇಕಾಗುತ್ತದೆ.

ನಮ್ಮ ಜನ ತಮ್ಮ ಪ್ರೀತಿಗೆ ಅಭಿಮಾನಕ್ಕೆ ಪಾತ್ರವಾದ ಎಲ್ಲಕ್ಕೂ ದೈವತ್ವವನ್ನು ಆರೋಪಿಸುವ ಪದ್ಧತಿ ಇಂದುನೆನ್ನೆಯದಲ್ಲ. ವ್ಯವಸಾಯದ ಉಪಕರಣಗಳು ನೀರು ಭೂಮಿ ಇತ್ಯಾದಿಗಳೂ ಗಾಂಧಿ ಪರಮಹಂಸ ವಿವೇಕಾನಂದ ಮುಂತಾದವರೂ ಒಳಗಾದಂತೆ ರಾಯಣ್ಣನೂ ದೈವತ್ವದ ಆರೋಪಕ್ಕೊಳಗಾಗುತ್ತಾನೆ. ಇಲ್ಲಿ ಬರುವ ದೈವೀಕಲ್ಪನೆ ಅದ್ಭುತವಾದುದು. ಪುತ್ರಸಂತಾನ ಇತ್ಯಾದಿಗಳನ್ನು ಕುರಿತ ನಂಬಿಕೆಗಳನ್ನು ಗಮನಿಸಿದಾಗ ಅತಿರೇಕ ಎನ್ನಿಸಲೂಬಹುದು. ಆದರೆ ಜನಪದ ಬದುಕಿನಲ್ಲಿ ನಂಬಿಕೆ ಪಡೆದಿರುವ ಸ್ಥಾನ ಉಚ್ಚಮಟ್ಟದ್ದು. ಆಧುನಿಕ ಜೀವನದಲ್ಲೂ ತನ್ನ ವೈವಿಧ್ಯವನ್ನು ಮೆರೆಯುತ್ತಿರುವುದು ಕಂಡುಬಂದಾಗ ಅದರ ಉಚ್ಚತನ ವಿಶಾಲವ್ಯಾಪ್ತಿ ಯಾರನ್ನಾದರೂ ದಂಗುಬಡಿದು ನಿಲ್ಲಿಸುವಂಥದು ಎನ್ನಿಸದಿರದು.

ರಾಯಣ್ಣನ ಒಳ್ಳೆಯತನವೇ ಅವನಿಗೆ ಮುಳುವಾಯಿತು ಎಂಬ ಅಂಶವನ್ನು ಲಾವಣಿಕಾರ ಬಹಳ ಜಾಣ್ಮೆಯಿಂದ ವರ್ಣಿಸುತ್ತಾನೆ. "ಇಸವಾಸಕ ಬಿದ್ದ ಆದ ಮಳ್ಳಾ" ಎನ್ನುವಲ್ಲಿ, "ಕತ್ತಿ ಇಟ್ಟ ಕಬರ ಬಿಟ್ಟ" ಎನ್ನುವಲ್ಲಿ, ಆ ಜಾಣ್ಮೆ ವ್ಯಕ್ತವಾಗುತ್ತದೆ.

ರಾಯಣ್ಣನಂತೂ ಈ ಲೋಕ ಬಿಟ್ಟ. ಅವನ ಬಂಟರು ದುಃಖ ತಡೆಯಲಾರದೆ ತಮ್ಮನ್ನು ಸೆರೆಹಿಡಿಯಬಲ್ಲ ಸರದಾರನ ಬಳಿಗೇ ಹೋಗಿ "ಹೋತೆ ನಮ್ಮ ಜೀವದ ಕಡ್ಡಿ ಸತ್ತಾ" ಎಂದು ಹೇಳಿಕೊಂಡರೂ "ಹಿರದ ಕತ್ತಿ ಕೈಗ ಹಿಡಕೊಂಡು, ತಿರಿಗಿ ಗುಂಡ್ಡ ಬಿದ್ದ ವೋಡ್ಯಾರ" ಎಂಬ ವರ್ಣನೆಯಲ್ಲಿ ಅವರ ಸ್ವಾಭಿಮಾನ ಸ್ವಾತಂತ್ರ್ಯಪ್ರಿಯತೆಗಳನ್ನು ನಿರೂಪಿಸಿರುವ ರೀತಿ ಕಲಾತ್ಮಕವಾಗಿದೆ.

ಆದಾಯ ತೆರಿಗೆ

ಗಾಡಿನ್ ಸಾಹೇಬ ಬಂದವನೇ ಜನರಿಂದ ದುಡ್ಡನ್ನು ಎಳೆಯುವುದರಲ್ಲಿ ನಿರತನಾಗುತ್ತಾನೆ. ನಿಮಗಾಗಿಯೇ ಇರುವ ರಸ್ತೆಯನ್ನು ಹಸನು ಮಾಡಿಸುತ್ತೇನೆ ಎನ್ನುತ್ತಾನೆ. ಏನಂತೀರಿ ಎಂದು ಪ್ರಶ್ನೆ ಎಸೆಯುತ್ತಾನೆ. ಪಂಚರು ಕೂಡಿ ಮುಂದೆ ಹೇಗಾಗುವುದೆಂಬುದನ್ನು ಯೋಚಿಸದೆ ಕೆಲಸ ಪ್ರಾರಂಭಿಸಿದ್ದು ದೊಡ್ಡ ಹಳ್ಳವನ್ನೇ ತೋಡಿಕೊಂಡಂತಾಯಿತು. ಹೊಟ್ಟೆ ತುಂಬುವುದೇ ಕಷ್ಟಕರವಾಗಿದ್ದಾಗ ಆ ಬಡ ಜನರು ತಮ್ಮ ಪಾಲಿನ ಹಣವನ್ನು, ನೂಲುವ ರಾಟೆಯನ್ನಾದರೂ ಮಾರಿ ಕೊಡಬೇಕಾಯಿತು. ಸರಕಾರಕ್ಕೆ ದುಡ್ಡಿನ ಆಸೆ ಅಂಟಿಕೊಂಡಿತು. ದಿನದಿನಕ್ಕೆ ಚೌಕಾಶಿ ಹೆಚ್ಚಿತು. ಬೆರಣಿ ತಟ್ಟಿ ಕಟ್ಟಿಗೆ ತೂಕಮಾಡಬೇಕಾಯಿತು. ಅತಿ ಹಿಂದುಳಿದ ವರ್ಗಗಳಾದ ಪ್ಯಾಂಡಾರೆರು ಮತ್ತು ಲಮಾಣೆರು ಕಟ್ಟಿಗೆ ಮಾರಿ ತಮ್ಮ ತಮ್ಮ ಮಕ್ಕಳನ್ನು ಜೋಕೆ ಮಾಡಬೇಕಾಗಿ ಬಂತು. ಭಿಕ್ಷೆ ಬೇಡುವ ದಿನಗಳೂ ದೂರ ಉಳಿಯಲಿಲ್ಲ.

ಹೀಗೆ ರೈತರ ದುಡ್ಡನ್ನು ಎಳೆಯುವ ಹಿಕಮತ್ತು ಸಾಗಿತು. ಸರಕಾರದ ಕಾಟ ಹೆಚ್ಚಾಯಿತು. ವಾಯಿದೆ ಕೊಟ್ಟರು; ಜಗ್ಗದವರಿಗೆ ನೋಟೀಸು ಕೊಟ್ಟರು. ಹಾಗೂ ಕೊಡದವರ ಮೇಲೆ ದಬ್ಬಾಳಿಕೆ ನಡೆಸಿದರು. ಶಿವ ಇಳಿದ ಹಾಗೆ ಇಳಿದುಬಂದು ಬಂಗಲೆಯಲ್ಲಿ ತಂಗಿದ ಕಲೆಕ್ಟರ ಸಾಹೇಬರನ್ನು ಮುತ್ತಿದರು ಜನ. ಇವರಿಂದಲೂ ಏನೂ ಒಳ್ಳೆಯದು ಆಗಲಿಲ್ಲ. ಮುಂದಿಯ ತಳಮಳ ಹೆಚ್ಚಾಯಿತು; ತಮ್ಮ ಗೋಳಾಟವನ್ನು ಮನಸ್ಸಿನಲ್ಲೇ ಹುದುಗಿಸಿಕೊಂಡರು. ವಾಯಿದೆ ಮೀರಿದರೆ ಬಡ್ಡಿ ಹಚ್ಚುವುದೂ ಲಿಲಾವುಮಾಡಿ ಮನೆಮಾರುಗಳನ್ನು ವಶಪಡಿಸಿಕೊಳ್ಳುವುದೂ ಮುಂತಾದ ಕಲೆಕ್ಟರ ಸಾಹೇಬರ ಆಜ್ಞೆಗಳು ಈ ತಳಮಳಕ್ಕೆ ಕಾರಣಗಳಾಗಿದ್ದುವು. ಅವರು ಹೇಳಿದ್ದನ್ನು ಕೊಡುವ ತಾಕತ್ತು ಇಲ್ಲದ ಜನ ಕೂಡಿ ಅರ್ಜಿಕೊಟ್ಟರು, ಚೌಕಾಶಿ ಮಾಡಿದರು. ಆದರೂ ಸಾಹೇಬ ಮನಸ್ಸಿಗೆ ತೆಗೆದುಕೊಳ್ಳಲಿಲ್ಲ. ಸಾಹುಕಾರ ಎನ್ನಿಸಿಕೊಂಡವರು ತಮ್ಮ ಒಡವೆವಸ್ತುಗಳನ್ನು ತೆಗೆದಿಟ್ಟು ಹರಕುಧೋತರ ಉಟ್ಟು ಹರಕು ಅಂಗಿಯನ್ನು ತೊಟ್ಟು ನಾಚಿಕೆಬಿಟ್ಟು ಬಂಗಲೆಗೆ ಹೋಗುವ ಸಾಹಸ ಮಾಡಿದರು.

ಸಾಹುಕಾರರು ಎದೆ ಗಟ್ಟಿಮಾಡಿಕೊಂಡು ನಮಗಾದರೂ ಕರಪಟ್ಟಿಯ ಕಾಟ ತಪ್ಪೀತೆಂದು ಬಂಗಲೆಗೆ ಓಡಾಡಿದರು, ಸಪ್ಪೆ ಮೋರೆ ಮಾಡಿಕೊಂಡು ತಮ್ಮ ತಮ್ಮೊಳಗೇ ಗುಸಗುಸ ಮಾತಾಡಿಕೊಂಡು ಕೂಲಿಗಳು ತಳವಾರರು ಕಂಳಿತಂತೆಯೇ

ಕುಳಿತುಬಿಟ್ಟರು. ಊರಿನಲ್ಲೆಲ್ಲ ಪಟ್ಟಿ ಎತ್ತುವ ಸರಕಾರದವರು ಜಪ್ತಿಮಾಡಿ ಬದುಕುಗಳನ್ನೆಲ್ಲ ವಶಪಡಿಸಿಕೊಂಡರು. "ನೀನು ನಮ್ಮ ತಂದೆಯ ಸಮಾನನಾದವನು, ದಯೆ ತೋರು. ನಮ್ಮ ಪಟ್ಟಿಯನ್ನು ಬಿಟ್ಟುಬಿಡು"—ಎಂದು ಸುಭೇದಾರನಲ್ಲಿ ಹೇಳಿಕೊಂಡರು ಜನ. ಆದರೂ ನಡೆಯಲಿಲ್ಲ. ಅವರು ಮಾಡುವುದನ್ನು ಮಾಡಿಯೇ ಮಾಡಿದರು: ಎಲ್ಲವನ್ನೂ ಹರಾಜು ಹಾಕಿಸಿದರು. ಸರಕಾರದವರು ಬಹಳ ಕೆಟ್ಟವರೆಂದು ಕಣ್ಣೀರು ತಂದುಕೊಂಡ ಜನ ತಮಗೆ ಯಾರೂ ದಿಕ್ಕಾಗದ್ದನ್ನು ಕಂಡು, ಎಂಥ ಸ್ಥಿತಿ ತಂದುಬಿಟ್ಟೆ ಈಶ್ವರಾ–ಎಂದು ಈಶ್ವರನನ್ನು ಕರೆದರು.

'ಹರಪನಳ್ಳಿ ರಾಯಪ್ಪ' ಬರಕೊಟ್ಟದ್ದು ಬಡವರಿಗೆ ಬರಸಿಡಿಲೇ ಆಯಿತು. ಧರ್ಮ ಉಳಿಯಲಿಲ್ಲ. ಆದರೆ ಕಮರಿಪೇಟೆಯ ಮುಸಲ್ಮಾನರು ಜಗ್ಗಲಿಲ್ಲ; ನಿಮ್ಮ ಹುಕುಮಿದ್ದರೆ ದಂಡ ಕಟ್ಟಿ ತೆಗೆದುಕೊಳ್ಳಿರಿ ಎಂದರು. ಸುಭೇದಾರ ಸಿಟ್ಟಿನಲ್ಲಿ ಬೆಂಕಿಯಾದ. ಮನೆಮನೆಯನ್ನೂ ಹುಡುಕಿಸಿ ನೋಡಿದ. ಮಸೀದಿಯೊಳಗೆ ಕೂಡಿ ಕುಳಿತು ಮಸಲತ್ತು ಮಾಡಿದರು ಮುಸಲ್ಮಾನರು. ದಬ್ಬಾಳಿಕೆಯನ್ನು ಎದುರಿಸಲು ಸಿದ್ಧರಾದರು. ಬಂದವನಿಗೆ ಸರಿಯಾಗಿ ಬುದ್ಧಿ ಕಲಿಸಬೇಕು, ಹೆಚ್ಚೆಂದರೆ ಬೇಡಿ ಹಾಕಿಯಾರು, ಇನ್ನೇನು ಮಾಡಲು ಸಾಧ್ಯ?—ಎಂದು ಅವರು ನಿರ್ಧರಿಸಿದರು.

ಆಗ ಎಲಪಾಟ್ ಸಾಹೇಬ ಬರುತ್ತಾನೆ. ಕುಳಿತು ವಿಚಾರ ಮಾಡುತ್ತಾನೆ. ಮುಸಲ್ಮಾನರೆಲ್ಲ ಕೂಡಿ ಬಂಗಲೆಗೇ ಬಂದು ಅರ್ಜಿ ಕೊಡುತ್ತಾರೆ. ನಮ್ಮ ಪಟ್ಟಿಯನ್ನು ಕ್ಷಮಿಸಬೇಕು ಎಂದು ದೀನರಾಗಿ ಕೇಳಿಕೊಳ್ಳುತ್ತಿರುವ ಬಡವರನ್ನು ನೋಡಿ ಅವನಲ್ಲಿ ಕರುಣೆ ಹುಟ್ಟುತ್ತದೆ; ಹೊಟ್ಟೆಯಲ್ಲಿ ಬೆಂಕಿ ಬಿದ್ದಂತಾಗುತ್ತದೆ. ಅವರ ಕಷ್ಟಗಳನ್ನೆಲ್ಲ ಶೋಧಿಸಿ ನೋಡಿದ ಅವನು ಹೆಂಗಸರುಟ್ಟ ಹರಕುಪರಕು ಸೀರೆಗಳನ್ನು ಕಂಡು ಬೇಗ ಬೇಗ ಅರ್ಜಿ ಬರೆಸಿಕೊಡಲು ಸಲಹೆ ನೀಡುತ್ತಾನೆ.

ಎಲ್ಲರೂ ಕೂಡಿ ಲೆಕ್ಕಮಾಡಿ ತಮ್ಮತಮ್ಮೊಳಗೆ ತೂಕ ಹಾಕುತ್ತಾರೆ. "ಪ್ರತಮ್‌ಶೆಟ್ಟಿ ಮಾಕಪ್ಪ" ಎಲ್ಲರ ಮನಸ್ಸಿಗೂ ಹಿಡಿಸುವಂತೆ ಲೆಕ್ಕಮಾಡಿಹೇಳಿ ಕುಳಿತುಕೊಳ್ಳುತ್ತಾನೆ. ಪುಣ್ಯವಂತ ಸಾಹೇಬ ಪಟ್ಟಿಗಳನ್ನು ಹಿಂದಕ್ಕೆ ಕೊಡಿಸುತ್ತಾನೆ. "ಗೋದಿ ಅಕ್ಕಿ ಉಂಡು ವರ್ಷವಾಯಿತು. ನಮ್ಮ ಪಡಿಪಾಟಲನ್ನು ಶಿವನೇ ಬಲ್ಲ. ನಾವೇನ ಕೊಡಲಿ?"—ಎಂದು ಮುಸಲ್ಮಾನರು ಅನ್ನುತ್ತಾರೆ. ಆದರೆ ಸರಕಾರ ಬಿಟ್ಟೀತೇ? ಕರಪಟ್ಟಿಯನ್ನು ಹಾಕಿಯೇ ಹಾಕಿತು. ಬಡವರು ಮರಮರ ಮರುಗಿದರು. ಸರಕಾರಕ್ಕೇ ಬಡತನ ಬಂತು ಎಂದುಕೊಳ್ಳುವಷ್ಟು ರೋಸಿಹೋದ ಜನ ಮತ್ತೊಂದು ರಾಜ್ಯಕ್ಕೆ ಹೋಗೋಣವೆಂದು ಮಾತಾಡಿಕೊಳ್ಳುತ್ತಾರೆ.

* * *

ಬ್ರಿಟಿಷರ ದಬ್ಬಾಳಿಕೆಯ ಮತ್ತೊಂದು ಕ್ರೂರ ನೋಟ ಇಲ್ಲಿದೆ. ಗೌಡ ಊರ ಮುಂದೆ ಕುಣಿದರೆ ಕುಳುವಾಡಿ ಕೋಣೆ ಮುಂದೆ ಕುಣಿದ ಎಂಬಂತೆ ಬ್ರಿಟಿಷರು ಭೂಮಿಯನ್ನು ದೋಚಿದುದಲ್ಲದೆ ಆ ಭೂಮಿಯಿಂದ ನಮ್ಮ ಜನ ಕಷ್ಟಪಟ್ಟು ತೆಗೆಯು

ತ್ತಿದ್ದ ಸಂಪತ್ತನ್ನು ಅಧಿಕೃತವಾಗಿ ಪಡೆಯಲು ಅಧಿಕಾರಿಗಳನ್ನು ನೇಮಿಸಿದರೆ, ಆ ಅಧಿಕಾರಿಗಳು ಅನ್ನ ಇಕ್ಕಿದ ಮನೆಗೆ ಕನ್ನ ಇಕ್ಕುವ ಕೆಲಸವನ್ನು ಪರೋಕ್ಷವಾಗಿ ಕೈಗೊಳ್ಳುತ್ತಾರೆ. ರಸ್ತೆ ಕಾಲುವೆಗಳನ್ನು ರಿಪೇರಿಮಾಡಿಸಿ ನಮಗೆ ಮಹೋಪಕಾರ ಮಾಡುವವರಂತೆ ಸೋಗು ಹಾಕಿದ ಆ ಅಧಿಕಾರಿಗಳು ತೆರಿಗೆ ವಸೂಲಿಯ ಕೆಲಸಕ್ಕಿಂತ ತಮ್ಮ ಗೋಣಿಯನ್ನು ತುಂಬಿಕೊಳ್ಳುವ ಯತ್ನದಲ್ಲಿ ತೊಡಗುತ್ತಾರೆ. ಕಾನೂನಿನಂತೆ ತೆರಿಗೆಯ ವಸೂಲಿಯನ್ನು ಅವರು ತೋರಿಸಬೇಕಾಗಿದ್ದುದರಿಂದ ಒಂದರಮೇಲೊಂದು ಹೊಡೆತ ತಿನ್ನುವ ಬಡವರ ಜೀವನ ದುರ್ಭರವಾಗುತ್ತದೆ. ಎಷ್ಟೋ ಜನ ತಮ್ಮ ಜೀವನಾಧಾರವಾಗಿದ್ದ ನೂಲುವ ರಾಟೆಯನ್ನು ಮಾರಿಕೊಳ್ಳಬೇಕಾಗುತ್ತದೆ. ಏನೂ ಇಲ್ಲದವರು ಸೌದೆ ಸೀಳಿ ಮಾರಿ ತಮ್ಮ ಪಾಲಿನ ಹೊರೆಯನ್ನು ಇಳಿಸಿಕೊಳ್ಳಬೇಕಾಗುತ್ತದೆ. ಇಷ್ಟೆಲ್ಲ ಆಗುವುದಕ್ಕೆ ಸಹಜವಾಗಿಯೇ ವಿಳಂಬವಾದಾಗ ಸರಕಾರದ ದಾಹ ಮತ್ತಷ್ಟು ಹೆಚ್ಚಿ ಒತ್ತಾಯ ಅತಿಯಾಗುತ್ತದೆ.

ಪ್ರಪಂಚದ ಬಹುಭಾಗದಲ್ಲೆಲ್ಲ ಜಯಭೇರಿ ಹೊಡೆದ ಆ ಬ್ರಿಟಿಷ್ ಆಡಳಿತದಲ್ಲೂ ಲಂಚಕೋರ ಅಧಿಕಾರಿಗಳಿದ್ದರು ಎಂಬ ಸಂಗತಿ, ದೊರಕಲಿರುವ ಶಿಕ್ಷೆಯನ್ನು ತುಚ್ಛವಾಗಿ ಕಂಡು ಸೆಟೆದುನಿಂತ ಮುಸಲ್ಮಾನರು ಮತ್ತು ಅವರ ಒಗ್ಗಟ್ಟು, ಈ ಲಾವಣಿಯಲ್ಲಿ ಕಂಡುಬರುವ ಎರಡು ಮುಖ್ಯ ಅಂಶಗಳು. ಮುಸಲ್ಮಾನರ "ಧೈರ್ಯಸಾಹಸ"ಗಳು ಮತ್ತು ಅವರ ಒಗ್ಗಟ್ಟು ಇಂದಿಗೂ ಜೀವಂತವಾಗಿ ಉಳಿದುಬಂದಿರುವುದರಿಂದ, ಲಂಚಕೋರತನ ಅಷ್ಟೇ ಜೀವಂತವಾಗಿ ಉಳಿದು ಬೆಳೆದುಬರುತ್ತಿರುವುದರಿಂದ–ಈ ಎರಡನ್ನೂ ಮುಖ್ಯ ಅಂಶಗಳು ಎಂದು ಹೇಳಬೇಕಾಗಿದೆ. ಉಳಿದ ಅಂಶಗಳು ಈಗ ಉಳಿದಿಲ್ಲ ಎಂದಲ್ಲ ಅಥವಾ ಮುಖ್ಯವಲ್ಲ ಎಂದಲ್ಲ. ಪ್ರಜಾಪ್ರಭುತ್ವದ ಈ ದಿನಗಳಲ್ಲಿ ಜನ ಆಗ ಇದ್ದುದಕ್ಕಿಂತ ಹೆಚ್ಚು ಬುದ್ಧಿವಂತರಾಗಿದ್ದಾರೆ, ಕಡೆಯಪಕ್ಷ ಅಮಾಯಕತನ ವಾದರೂ ಕಡಿಮೆಯಾಗಿದೆ—ಎಂಬ ಅಂಶ ಒಂದು ದೃಷ್ಟಿಯಿಂದ ಅತಿಮುಖ್ಯ ಅಂಶವಾಗಿ ಪರಿಗಣಿತವಾಗುತ್ತದೆ.

ತೆರಿಗೆ ವಸೂಲಿಗೆಂದು ಬಂದ ಬ್ರಿಟಿಷ್ ಅಧಿಕಾರಿಗಳು ತಮ್ಮ ಗೋಣಿಯನ್ನು ತುಂಬಿಕೊಳ್ಳುವುದರ ಮೂಲಕ ಕೆಲಸ ಪ್ರಾರಂಭಿಸುವ ಚಿತ್ರದ ಸಾರ್ಥಕ್ಯ ಜನ ಮತ್ತೊಂದು ರಾಜ್ಯಕ್ಕೆ ಹೋಗಲು ನಿರ್ಧರಿಸುವುದರಲ್ಲಿದೆ. ಕ್ರೂರ ಸರಕಾರದಲ್ಲೂ ಅಲ್ಲೊಬ್ಬ ಇಲ್ಲೊಬ್ಬ ದಯೆಯುಳ್ಳ ಅಧಿಕಾರಿಗಳು ಕಂಡುಬರುವಂತೆ ಇಲ್ಲೂ ಒಬ್ಬ ಇದ್ದಾನೆ; ಆದರೆ ಅವನ ಆಟವೇನೂ ನಡೆಯದೆ ಹೋಗುತ್ತದೆ; ಇಂಥ ಚಿತ್ರಗಳು ಆಡಳಿತದ ಕ್ರೌರ್ಯ ಸ್ಪಷ್ಟವಾಗಿ ಕಾಣಲು ಸಹಕಾರಿಯಾಗುತ್ತವೆ. ಮುಸಲ್ಮಾನರೂ ಶಿವನನ್ನು ನೆನೆಯುವುದು ವಿಚಿತ್ರ ಅನ್ನಿಸುವುದಿಲ್ಲ—ಕವಿ "ಗುರುಸಿದ್ಧ"ನ ಪ್ರಭಾವ ಇಲ್ಲಿದೆ ಎಂದು ಯಾರಿಗಾದರೂ ಅನ್ನಿಸಿಬಿಡುವುದರಿಂದ. ಮೂರು ಮತ್ತು ನಾಲ್ಕನೆಯ ನುಡಿಗಳ ಕಡೆಯಲ್ಲಿ ಪ್ರಾಸಬದ್ಧವಾಗಿ ಸಹಜವೆಂಬಂತೆ ನಿರರ್ಗಳವಾಗಿ ಉರ್ದೂವಿನಲ್ಲೇ ಇರುವ ಪದ್ಯಗಳು ಮುಸಲ್ಮಾನರ ಮತ್ತು ಅವರ ಭಾಷೆಯ ಪ್ರಭಾವದ ತೀವ್ರ ಪರಿಣಾಮವನ್ನು ಎತ್ತಿಹಿಡಿದಿರುವಂತಿವೆ.

ಹಲಗಲಿಯ ಬೇಡರು

ಜನರಲ್ಲಿರುವ ಎಲ್ಲ ಆಯುಧಗಳನ್ನು ಸರಕಾರ ಸಂಗ್ರಹಿಸಬೇಕೆಂದು ವಿಲಾಯಿತಿಯಿಂದ ಆಜ್ಞೆ ಬಂತು. ಕತ್ತಿ ಕಟಾರಿ ಕೈಚೂರಿ ಬಾಕು ಗುರ್ದಿ ಸುರಾಯಿ ಚಕ್ರ ಬಾಲಿಯ ಬರ್ಚಿ ಬಿಚ್ಚುಗತ್ತಿ ಬಾಣ ಬಿಲ್ಲು ಪಟಾತ ಪಿಸ್ತೂಲು ಕರುಲಿ ತೇಗ ಚಾಪಗೊಡ್ಲಿಶಸ್ತ್ರ ತೋಪು ತುಬಾಕಿ ಹೊಡೆಯುವ ಮದ್ದುಗುಂಡು ಏನನ್ನೂ ಒಂದು ಚೂರೂ ಬಿಡದಂತೆ ಸಂಗ್ರಹಿಸಬೇಕೆಂಬುದೇ ಆ ಆಜ್ಞೆಯ ತಿರುಳಾಗಿತ್ತು. ಮುಚ್ಚಿಟ್ಟವರಿಗೆ ಮೂರು ವರ್ಷದ ಬೇಡಿ. ಕೊಡದೆ "ದಿಟಾಯಿ" ಮಾಡಿದವರಿಗೆ ಮರಣ. ಆಜ್ಞೆ ಮುಟ್ಟಿದ ಕ್ಷಣದಲ್ಲಿ ಜನ ಖುಷಿಯಿಂದ ತಂದೊಪ್ಪಿಸಬೇಕು. ಆ ಆಜ್ಞೆಯ ಡಂಗುರವನ್ನು ಕೇಳಿದ "ಶೂರ ಸಿಪಾಯಿಜನ" ಮಾತ್ರ ಕಣ್ಣಲ್ಲಿ ನೀರು ತಂದರು, ಆಯುಧ ಕೈಬಿಡುವಾಗ ಅವರು ದುಃಖತಪ್ತರಾದರು.

ಹುಕುಮನ್ನು ಕೇಳಿದ ಕೆಲವರು ತಂದೊಪ್ಪಿಸಿದರು. ಸಾಲಸೋಲಮಾಡಿ ದನಕರು ಮಾರಿ ಹಬ್ಬದಲ್ಲಿ ತಂದ ಅಮೂಲ್ಯ ಆಯುಧಗಳನ್ನು ನೋಡುನೋಡುತ್ತ ಹೇಗೆ ಕೊಡುವುದು ಎಂದುಕೊಂಡು ಹುಗಿದಿಟ್ಟರು ನೆಲದಲ್ಲಿ. ಆಗ ಜಾಯಿತಸಾಹೇಬ ಬಂದ. ಸಂದುಗೊಂದುಗಳೊಂದನ್ನೂ ಬಿಡದೆ ಮನೆಮನೆಯ ಮೂಲೆ ಮುಡುಕುಗಳನ್ನೂ ಹುಡುಕಿಸಿದ. ನಿರ್ವಾಹವಿಲ್ಲದ ಜನ ಕಂಗಾಲಾದರು. ಒಬ್ಬರಮೇಲೊಬ್ಬರು ಚಾಡಿ ಹೇಳಿದರು. ಚಾಡಿಯ ಮಾತಾದರೂ ನಿಜವಾದ ಮಾತುಗಳ ಮಾರ್ಗದರ್ಶನದಿಂದ ಎಲ್ಲ ಆಯುಧಗಳೂ ಹೋಗಿಬಿಟ್ಟುವು—ನಾಡಿನೊಳಗೆ ಏನೂ ಉಳಿಯದಂತೆ. ಚಿನ್ನಬೆಳ್ಳಿಯ ಬೆಲೆಬಾಳುವ ಆಯುಧಗಳೂ ಕವಚಗಳೂ ಕುಂಪಣಿಯವರ ಕೈಸೇರಿದುವು. ಆಯುಧಗಳನ್ನು ಕಳೆದುಕೊಂಡದ್ದಕ್ಕೆ ಹೊಟ್ಟೆಬೇನೆ ತಂದುಕೊಂಡ ಜನ ಸಾಯುವುದಕ್ಕೂ ಸಿದ್ಧರಾದರು. "ಹಲ್ಲ ಕಿತ್ತಿದಾ ಹಾವಿನ ಪರಿಯು ನಮಗ ಆದಿತಲ್ಲಾ ರಂಡಿ ಮುಸುಕಹಾಕಿ ತಿರಿಗಿದರ ನಮಮಾನ ಉಳಿಯುವದಿಲ್ಲಾ ಮಗ್ಗಲದಾಗಿನ ಹೇಣತಿ ಕೊಟ್ಟಾಂಗ ಅತಿ ಹೇಡಿ ಆದೇವಲ್ಲಾ ಸತ್ತ ಹೆಣಕ ಶೃಂಗಾರ ಮಾಡಿದ ಪರಿ ಆದಿತಲ್ಲಾ" ಎಂದು ಬಡವರು ಗೋಳಾಡಿದರೆ, "ಹಗಲಿನಲ್ಲೇ ಮನೆ ಹೊಕ್ಕು ಹಣವನ್ನು ಒಯ್ದರೆ ಕೇಳುವವರು ಯಾರೂ ಇಲ್ಲವಲ್ಲ, ನಮ್ಮ ಜೀವವೇ ಹೋಯಿತಲ್ಲ" ಎಂದು ಸಾಹುಕಾರರು ಚಿಂತೆ ಮಾಡುತ್ತಾರೆ. ಪುಂಡು ಪಾಳೆಯಗಾರರೂ ಹಟ ಮಾಡದೆ ದಂಡನ್ನಾಳುವ ದೊರೆಗಳ ದೌಲತ್ತಿಗೆ ಅಂಜಿ ಕುಳಿತುಬಿಟ್ಟರು. ಒಟ್ಟಿನಲ್ಲಿ ಜನಗಳ ಸ್ಥಿತಿ "ಪಕ್ಕ ಕಿತ್ತ ಪಕ್ಷಿ ಗತಿ" ಆಗಿತ್ತು.

ಪರಿಸ್ಥಿತಿ ಹೀಗಿರುವಾಗ ಮುಧೋಳ ರಾಜ್ಯದಲ್ಲಿ ಹಲಗಲಿ ಎಂಬ ಒಂದು ಹಳ್ಳಿ ಇತ್ತು. ಅಲ್ಲಿನ ನಾಲ್ವರು–ಪೂಜಾರಿ ಹಣಮ, ಬಾಲ, ಜಡಗ, ರಾಮ–ಕೂಡಿ ಮಸಲತ್ತು ನಡೆಸುತ್ತಾರೆ. 'ನಾವು ನಾಲ್ಕು ಮಂದಿ ಕೈಯಿನ ಹತಾರನ್ನು ಕೊಡಬಾರದು, ಕೊಟ್ಟರೆ ನಮ್ಮ ಜೀವಹೋದಂತೆ' ಎಂದು ಪ್ರತಿಜ್ಞೆ ಕೈಗೊಳ್ಳುತ್ತಾರೆ. 'ಕುಂಪಣಿ

ಸರಕಾರಕ್ಕೆ ಆಯುಧಗಳನ್ನು ಒಪ್ಪಿಸಬೇಡಿ, ಜಗಳ ಮಾಡಿರಿ, ನಿಮಗೆ ಸಹಾಯಕರಾಗಿ ನಾವು ಇರುತ್ತೇವೆ' ಎಂದು ಸುತ್ತಿನ ಹಳ್ಳಿ ಮತ್ತು ಹಳ್ಳಿಯ ದೊರೆಗಳಿಗೆ ತಿಳಿಸುತ್ತಾರೆ. ಬೇಡರೆಲ್ಲ ಕಲೆತು ಒಳಗಿಂದೊಳಗೆ ವಚನ ಕೊಡುತ್ತಾರೆ. ಆಯುಧಗಳನ್ನು ಸಂಗ್ರಹಿಸಲು ಬಂದ ಕಾರಕೂನನ ಕಪಾಳಕ್ಕೆ ಕೊಟ್ಟರು; ಶಿಪಾಯಿ ನೆಲಕ್ಕೆ ಬಿದ್ದ. ದುಃಖದಿಂದ ಅವರು ಸಾಹೇಬರಿಗೆ ಹೇಳಿಕೊಂಡರು. ಇದನ್ನು ಕೇಳಿದ ಸಾಹೇಬ ಸಿಟ್ಟಿಗೆದ್ದ. ಕುಂದರಗಿಯ ಗೌಡ ಕೃಷ್ಣನಾಯಕನನ್ನು ಸಂಧಾನಕ್ಕಾಗಿ ಕರೆಸಿದ.

'ಹಟ ಮಾಡಬಾರದು, ನಿಮ್ಮ ಹತಾರುಗಳನ್ನು ಸಾಹೇಬನ ವಶಕ್ಕೆ ಕೊಟ್ಟುಬಿಡಿ' ಎಂದು ಸಂಧಾನದ ಮಾತುಗಳನ್ನಾಡಲು ಬಂದ ಗೌಡನಿಗೆ 'ಕೈಯಲ್ಲಿ ಬಳೆ ತೊಟ್ಟಿಲ್ಲ, ಯಾವನು ಬಂದರೂ ಜೀವ ಹೋದರೂ ಕೊಡುವುದಿಲ್ಲ, ಸುಮ್ಮನೆ ಹೋಗಿರಿ' ಎಂದುತ್ತರಿಸಿದರು. ಈ ಮಾತನ್ನು ಗೌಡ ಸಾಹೇಬನಿಗೆ ತಿಳಿಸಿದ. ಸಿಟ್ಟಿನಿಂದ ಸಾಹೇಬ ಮುಂಗೈಯನ್ನು ಕಟ್ಟನೆ ಕಡಿದುಕೊಂಡು ಹುಕುಮುಕೊಟ್ಟ. ಕುದುರೆಯ ಮಂದಿ ಹಲಗಲಿಯನ್ನು ಮುತ್ತಿದರು. ಅಷ್ಟರಲ್ಲಿ ಒಳಗಿನ ಮಂದಿ ಮುಂಗಾರು ಮಳೆ ಸುರಿದಂತೆ ಹೊಡೆತಗಳನ್ನು ತಿರುಗಿಸಿದರು. ಹೊರಗಿನ ಮಂದಿ ಆ ಗುಂಡಿನ ಹೊಡೆತಗಳನ್ನು ಹತ್ತಿಕ್ಕಲಾರದೆ ಹಿಂದಕ್ಕೆ ತಿರುಗಿಸಿದರು; ಬೇಗನೆ ದಂಡು ಬರಲಿ ಎಂದು ಕಾಗದ ಬರೆದು ಕಳಿಸಿದರು. ಸಜ್ಜಾದ ದಂಡೊಂದು ಹಲಗಲಿಗೆ ಬಿರ್ರನೆ ಬಂತು; ಸರಿರಾತ್ರಿಯ ಹೊತ್ತಿನಲ್ಲಿ ಊರನ್ನು ಮುತ್ತಿತು. ಗುಂಡುಗಳು ಸೂರೆಹೋದುವು. ಕಕ್ಕಾಬಿಕ್ಕಿಯಾದ ಮಂದಿ ಅಂಜಿ ಪೇರಿಕಿತ್ತಿತು. ಓಡಿದವರ ಬೆನ್ನುಹತ್ತಿದರು ಇವರು. ಹೆಣಗಳು ಸೂರೆಯಾಗಿ ಬಿದ್ದುವು. ಏನೂ ಉಳಿಯದಂತೆ ಮತ್ತೆ ಮತ್ತೆ ಕಡಿದರು.

ಹೆಬಲಕ್ ಸಾಹೇಬನ ಸವಾರಿ ಅಗಸಿಗೆ ಬಂದು ನಿಂತಿತು. 'ಕವಳ ಕೊಡುತ್ತೇವೆ, ವ್ಯರ್ಥವಾಗಿ ಸತ್ತುಹೋಗಬೇಡಿ' ಎಂದು ಬುದ್ಧಿಯ ಮಾತು ಹೇಳಿದ

ಈ ಮಾತಿನಲ್ಲಿ ನಂಬಿಕೆ ಸಾಲದೆ ಹಣಮ ಮುಂದೆ ಬಂದು ನಿಂತ. 'ವಿಶ್ವಾಸಘಾತಕರು ಇವರು, ಹೊಡಿ ಇವರನ್ನು' ಎಂದು ಜಡಗ ಅಬ್ಬರಿಸಿದ. ಮೋಸ ಮಾಡಿ ಮುಂದೆ ನಮಗೆ 'ಬಲದೇಶ' ತೆಗೆದುಕೊಳ್ಳುತ್ತಾರೆ ಎಂದುಕೊಂಡು ಹೊಡೆದರು. ಒಂದೇ ಗುಂಡಿಗೆ ಸಾಹೇಬ ಉರುಳಿಬಿದ್ದ. ಈ ಸುದ್ದಿ ಕೇಳಿದ ಮತ್ತೊಬ್ಬ ಸಾಹೇಬ ಕಾರ್‌ಸಾಹೇಬ ಎಂಬುವವನು ಬೆಂಕಿಯ ಚೂರಾದ. ಊರನ್ನು ಲೂಟಿ ಮಾಡಲು ಆಜ್ಞೆಯಿತ್ತ. ಅದೇ ಹುರುಪಿನಲ್ಲಿ ಗುಂಡಿನ ಮಳೆ ಸುರಿಯಿತು. ನಾವೂ ಒಂದಷ್ಟು ಗುಂಡು ಹೊಡೆದು ಕೆಡವೋಣ ಎಂದು ಹಣಮ ಸಜ್ಜಾದ. ತನ್ನ ಮೇಲೆ ಬರುವ ಮುನ್ನೂರು ಮಂದಿಯನ್ನು ಎದುರಿಸುವಷ್ಟು ಧೈರ್ಯವಂತ ಅವನು. ಭೀಮ ಎಂಬುವನು ದಂಡಿಗೆದುರಾಗಿ ಐನೂರು ಮಂದಿಗೆ ಮುಳುವಾದ. ಬಾಲ ಕಸರತ್ತು ಮಾಡಿ ಹತ್ತು ಕುದುರೆಗಳನ್ನು ಕಡಿದ. ರಾಮುನ ಕಡಿತವೇನೂ ಕಮ್ಮಿಯಾಗಿರಲಿಲ್ಲ. "ಕಾವಲಿ ಹರಿತೊ ರಕ್ತಾ!". ಸಾವಿರ ಆಳಿಗೆ ಒಂಟಿಯಾಗಿ ಎದುರಾದವನೂ 'ಕಡಿಯಿರಿ ಕಡಿಯಿರಿ'

ಎಂದು ಅಬ್ಬರಿಸಿ ಮುನ್ನುಗ್ಗುತ್ತಿದ್ದ. ಹೀಗೆ ಕಡಿದು ಸತ್ತ ನಾಲ್ಕು ಮಂದಿಯೂ ಜನಕ್ಕೆ ನೆಚ್ಚಿನ ಬಂಟರೆನ್ನಿಸಿದ್ದಾರೆ.

ಆ ದೊಂಬಿಯಲ್ಲಿ ಹಣಮನಿಗೆ ಆರು ಗುಂಡುಗಳು ತಾಕಿದ್ದು ಅವನು ಕೆಳಗೆ ಬಿದ್ದದ್ದು ಯಾರಿಗೂ ಕೇಳಿಸಲಿಲ್ಲ. ಆಯುಧವನ್ನು ತೆಗೆದುಕೊಳ್ಳಲು ಶೂರನೊಬ್ಬ ಬಹಳ ಜೋರು ಮಾಡಿದ. ಏರಿಬರುತ್ತಿದ್ದ ಕುದುರೆಯ ಕಾಲನ್ನು ಕಡಿದ. ಸವಾರ ನೆಲಕ್ಕೆ ಬಿದ್ದ. ರಾಮಿ ಎಂಬ ರೋಸಿಹೋದ ಒಂದು ಹೆಣ್ಣು ಮೂರು ಮಂದಿಯ ತಲೆಗೆ ಗುಂಡಿಕ್ಕಿದಳು; ಆರು ಕುದುರೆಗಳನ್ನು ಕಡಿದಳು. ಊರೆಲ್ಲ ಲೂಟಿಯಾಗಿ ಹೋಗಿ ಬಿಕೋ ಎನ್ನುತ್ತಿತ್ತು. ಮನೆ ಹೊಕ್ಕು ಹುಡುಕಿತು ದಂಡಿನ ಮಂದಿ. ದನಕರುಗಳು ನಾಶವಾದುವು. ಸಣ್ಣ ಕೂಸುಗಳು ಸತ್ತುಹೋದುವು. ಬೆಂಕಿ ಹಚ್ಚಿ ಊರನ್ನು ಸುಟ್ಟರು.

ಕತ್ತೆ ಕುದುರೆ ಮುತ್ತು ಮಾಣಿಕ್ಯ ಬೆಳ್ಳಿ ಬಂಗಾರ ಹರಳಿನುಂಗುರ ಹೊನ್ನಿನುಂಗುರ ಗೋಲ ಸರಗಿ ಸರ್ದಳಿ ಬುಗುಡಿ ಬಾವಲಿ ಕಡಗ ಕಂಕಣ ಡಾಬು ನಡುಕಟ್ಟುವ ರುಮಾಲು ಕುಪ್ಪಸ ಸೀರೆ ಹಪ್ಪಳ ಸಂಡಿಗೆ ಕುರ್ಚಿ ಕುಡುಗೋಲು ಕೊಡಲಿ ಕೋಟಿ ಕುಡಕಬ್ಬಿಣ ಮೊಸರು ಬೆಣ್ಣೆ ಹಾಲು ಉಪ್ಪು ಎಣ್ಣೆ ಅರಿಸಿನ ಜೀರಿಗಿ ಅಕ್ಕಿ ಸಕ್ಕರೆ ಬೆಲ್ಲ ಗಂಗಳ ಚರಗಿ ಮಂಗಳಸೂತ್ರ ಬೀಸುವಕಲ್ಲು—ಏನನ್ನೂ ಬಿಡದೆ ಲೂಟಿ ಮಾಡಿದರು. ಸಿಕ್ಕಷ್ಟೆಲ್ಲವನ್ನೂ ದೋಚಿಕೊಂಡು ಊರಿಗೆ ಕೊಳ್ಳಿ ಕೊಟ್ಟು ಸರಿದು ನಿಂತರು. ಹಲಗಲಿಯ ಗುರುತು ಎಳ್ಳಷ್ಟೂ ಕಾಣಿಸದಂತೆ ಸುಟ್ಟು ಬೂದಿಯಾಯಿತು.

* * *

/ಕಳ್ಳನ ಮನಸ್ಸು ಹುಳ್ಳಹುಳ್ಳಗೆ ಎಂಬಂತೆ ಆಯುಧದಿಂದಲೇ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸುತ್ತ ಬಂದ ಬ್ರಿಟಿಷರಿಗೆ ಗೊತ್ತು 'ಆಯುಧ' ಏನೆಂಬುದು. ಸಿಪಾಯಿದಂಗೆಯ ಬಿಸಿಯನ್ನು ಅನುಭವಿಸಿದ್ದುದರಿಂದಲೋ ಏನೋ ತಮ್ಮ ಅಧಿಕಾರಕ್ಕೊಳಪಟ್ಟ ಜನಗಳಲ್ಲಿ ಆಯುಧಗಳು ಇರಬಾರದು ಎಂದು ತೀರ್ಮಾನಿಸಿ ಅವನ್ನು ಸಂಗ್ರಹಿಸಲು ೧೮೫೭ರಲ್ಲಿ ನಿರಾಯುಧ ಕಾಯಿದೆಯನ್ನು ಜಾರಿ ಮಾಡಿದರು./ ಜನರ ಮನಸ್ಸನ್ನು ಗೆದ್ದು ಒಡೆಯರಾಗದೆ ಹೋಗಿದ್ದುದರಿಂದ ಒಳ್ಳೆಯ ಮಾತಿನಲ್ಲಿ ಅವನ್ನು ಸಂಗ್ರಹಿಸುವುದು ಅಸಾಧ್ಯ ಎಂಬ ಸತ್ಯಪ್ರಜ್ಞೆ ಅವರಲ್ಲಿದ್ದುದರಿಂದಲೇ ಕಾಯಿದೆಯನ್ನು ಮಾಡಿಯಾದರೂ ಸಂಗ್ರಹಿಸಲು ಮುಂದಾಗಬೇಕಾಯಿತು. ಕಾಯಿದೆಗೂ ಬಹಳಷ್ಟು ಜನ ಜಗ್ಗದೆ ಹೋದಾಗ ಬೇರೆ ದಾರಿ ಹುಡುಕಬೇಕಾಯಿತು. ಬ್ರಿಟಿಷರ ಮತ್ತೊಂದು ಬಗೆಯ ಕುತಂತ್ರ ಇಲ್ಲಿ ವ್ಯಕ್ತವಾಗುತ್ತದೆ. ಉಪಾಯದಿಂದ ಸಂಗ್ರಹಿಸಲು ಮೊದಲು ಮಾಡುತ್ತಾರೆ. ಆಯುಧಗಳನ್ನು ಎಲ್ಲಿ ಅವಿಸಿಟ್ಟಿದ್ದಾರೆಂಬ ವಿಷಯವನ್ನು ಯಾರೊಬ್ಬರೂ ಹೇಳದೆ ಹೋದುದರಿಂದ ಒಬ್ಬೊಬ್ಬರನ್ನಾಗಿ ಕರೆದು ವಿಷಬಿತ್ತಿಯೋ ಬೆದರಿಸಿಯೋ ಹೆದರಿಸಿಯೋ–ಒಟ್ಟಿನಲ್ಲಿ ಭೇದೋಪಾಯದಿಂದ ವಿಷಯವನ್ನು ತಿಳಿದುಕೊಳ್ಳುತ್ತಾರೆ. ಅಷ್ಟು ಒಗ್ಗಟ್ಟಿನಿಂದ ಆಯುಧಗಳನ್ನು ಬಚ್ಚಿಟ್ಟವರೂ ಒಬ್ಬರಮೇಲೊಬ್ಬರು ಚಾಡಿ ಹೇಳಿದರು ಎಂಬ ಸಂಗತಿ ಕುತಂತ್ರದ ಪ್ರಖರತೆಯನ್ನು ಬಿಂಬಿಸುತ್ತದೆ.

ಬೇಡರಿಗೆ ಆಯುಧವೇ ಜೀವನಾಧಾರ. ಪೂಜಾರಿ ಹಣಮ, ಬಾಲ, ಜಡಗ, ರಾಮ- ಈ ನಾಲ್ವರಿಗೆ ಒಳಗಿಂದೊಳಗೇ ವಚನ ಕೊಟ್ಟದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಈ ನಾಲ್ಕು ಜನ ಶೂರರೇ ಈ ಲಾವಣಿಯ ನಾಯಕರು. ಮಧ್ಯೆ ಯುದ್ಧದ ಸಂದರ್ಭದಲ್ಲಿ ಭೀಮ ಎಂಬ ಮತ್ತೊಂದು ಹೆಸರು ಬರುತ್ತದೆ ; ಅವನೂ ಅಸಾಧಾರಣ ಶೌರ್ಯವನ್ನು ಪ್ರದರ್ಶಿಸುತ್ತಾನೆ. ರಾಮಿ ಎಂಬ ಒಂದು ಹೆಣ್ಣಿನ ಶೌರ್ಯವಂತೂ ಕಣ್ಣಿಗೆ ಕಟ್ಟುತ್ತದೆ.

ಈ ಲಾವಣಿಯಲ್ಲಿ ಬರುವ ಹೋಲಿಕೆಗಳೂ ಅಷ್ಟೇ ತೀವ್ರತರ ಪರಿಣಾಮವನ್ನುಂಟು ಮಾಡುತ್ತವೆ. 'ಹಲ್ಲಕಿತ್ತಿದಾ ಹಾವಿನ ಪರಿಯು...', 'ಸತ್ತ ಹೆಣಕ ಶೃಂಗಾರ ಮಾಡಿದ ಪರಿ...ಮುಂತಾದುವು ಈಗ ಕ್ಲೀಷೆ ಎನ್ನಿಸಿದರೂ 'ಮಗ್ಗಲದಾಗಿನ ಹೇಣತಿ ಕೊಟ್ಟಾಂಗ...' ಎನ್ನುವಲ್ಲಿ ಎದ್ದು ಕಾಣುವ ಅವರ ಆ ಗಡುಸು ಗಂಡಸುತನ ಎಂಥ ಹೇಡಿಯನ್ನೂ ಬಡಿದೆಬ್ಬಿಸುತ್ತದೆ. "ಕಾರಕೂನನ ಕಪಾಳಕ ಒಡದರ ಶಿಪಾಯಿ ನೆಲಕ ಬಿತ್ತು" ಎಂಬ ವರ್ಣನೆ ಅಷ್ಟೇ ಗಡುಸಾಗಿಯೂ ಅದಕ್ಕಿಂತ ಹೆಚ್ಚು ಅರ್ಥಪೂರ್ಣವಾಗಿಯೂ ಇದೆ. ಒಂದೇ ಏಟಿಗೆ ಒಬ್ಬ ಕೆಳಕ್ಕೆ ಬೀಳುತ್ತಿದ್ದ ಎಂಬ ಸಾಮಾನ್ಯ ಅರ್ಥವೂ ಆ ಬೇಡರ ಶಕ್ತಿಯನ್ನು ವರ್ಣಿಸುವುದಾದರೆ, ಈ ಮಾತು ಅದಕ್ಕಿಂತ ಹೆಚ್ಚಿನ ಅರ್ಥವನ್ನು ಒಳಗೊಂಡಿದೆ. ಆ ಬೇಡಧೀರರ ಹೊಡೆತದ ಭಯಂಕರತೆ ಇಲ್ಲಿ ವ್ಯಕ್ತವಾಗುತ್ತದೆ. ಕಾರಕೂನನ ಕಪಾಳಕ್ಕೆ ಬಿದ್ದುದನ್ನು ಕಂಡ ಶಿಪಾಯಿ ಹೆದರಿ ಮೂರ್ಛೆ ಹೋಗಿ ನೆಲಕ್ಕೆ ಬಿದ್ದ ಎಂಬ ಅರ್ಥವನ್ನು ಧ್ವನಿಸುತ್ತಿರುವಂತಿದೆ.

/ ಇದೊಂದು ಅತ್ಯಂತ ಪರಿಣಾಮಕಾರೀ ಲಾವಣಿಯೆನ್ನುವುದಕ್ಕೆ ಪ್ರಮುಖ ಕಾರಣ ಇದರ ಅದ್ಭುತ ವರ್ಣನೆಗಳು. ನಾಲ್ವರು ಶೂರರೂ ಸೆಟೆದು ನಿಂತು ಪ್ರತಿಜ್ಞೆ ಕೈಗೊಳ್ಳುವುದಾಗಲಿ, ಆಯುಧವನ್ನು ಕಳೆದುಕೊಳ್ಳುವಾಗಿನ ಜನರ ದುಃಖವಾಗಲಿ, ದಂಡು ಹಲಗಲಿಯನ್ನು ಮುತ್ತಿದ ಎರಡು ಸಂದರ್ಭಗಳಾಗಲಿ, ಯುದ್ಧದ ವರ್ಣನೆಗಳಾಗಲಿ, ಆಯುಧ ತೆಗೆದುಕೊಳ್ಳಲು ಬಹಳ ಜೋರು ಮಾಡಿದ ಶೂರನೊಬ್ಬನ ಚಿತ್ರವಾಗಲಿ, ಸಿಪಾಯಿಗಳು ದೋಚಿದ ವಸ್ತುಗಳ ಪಟ್ಟಿಯಾಗಲಿ—ಒಂದೊಂದೂ ಒಂದೊಂದು ಪರಿಣಾಮಕಾರೀ ವರ್ಣನೆಗಳಿಂದ ಕೂಡಿ ರಂಜಿಸುತ್ತವೆ./ ರಂಜನೆ ಎಂಬ ಮಾತಿನೊಂದಿಗೇ ಇಲ್ಲಿನ ಎಲ್ಲ ವರ್ಣನೆಗಳೂ ಅತ್ಯಂತ ಸಹಜ ರೀತಿಯವಾಗಿವೆ ಎಂದೂ ಹೇಳಬೇಕಾಗುತ್ತದೆ. ಈ ಲಾವಣಿಯ ಪರಿಣಾಮತೀವ್ರತೆಯಲ್ಲಿ ಅದರ ಸಹಜ ಸಾನ್ನಿಧ್ಯವೂ ಅಷ್ಟೇ ಪ್ರಮುಖ ಪಾತ್ರ ವಹಿಸುತ್ತದೆ.

ಸಂಗ್ಯನ ಅಪರಾಧ ಮತ್ತು ಸಾವು

ಹೊಂಗಲ ಎಂಬ ಪಟ್ಟಣದಲ್ಲಿ ಒಬ್ಬ ಸಾಹುಕಾರ. ಆ ಸುತ್ತಿನಲ್ಲೆಲ್ಲ ಅವನ ಹೆಸರು ಪ್ರಸಿದ್ಧ. ಬೆಳ್ಳಿ ಬಂಗಾರ ರೂಪಾಯಿ ಅವನ ವಹಿವಾಟಿನ ವಸ್ತುಗಳು. ಊರಿನಲ್ಲಿ ಯಾರಿಗೂ ಬೇಸರವಾಗದಷ್ಟು ಪ್ರಾಮಾಣಿಕತೆಯಿತ್ತು, ಅವನ ವಹಿವಾಟಿನಲ್ಲಿ.

ಮಾತಿನಲ್ಲಿ ಬಹುದಿಟ್ಟ. ಸುಳ್ಳಿನ ಎಳ್ಳೂ ಇರಲಿಲ್ಲ. ತನ್ನ ಹೊಲದ ಆಧಾರದ ಮೇಲೆ ಸಂಗ್ಯ ಸಾಲ ಮಾಡಿದ. ಕಾಲಕ್ಕೆ ಸರಿಯಾಗಿ ತೀರಿಸಲಾಗಲಿಲ್ಲ. ಕಾಗದ ಬರೆದುಕೊಟ್ಟ ಐದು ವರ್ಷದ ಮೇಲೆ ಸಾಹುಕಾರ ಬಸಲಿಂಗಣ್ಣ ಕೋರ್ಟಿಗೆ ಹೋದ. ಸವದತ್ತಿ ಕೋರ್ಟಿನ ತೀರ್ಪು ಬಸಲಿಂಗಣ್ಣನಂತೆಯೇ ಆಯಿತು. ಧಾರವಾಡದ ಕೋರ್ಟಿಗೆ ಅಪೀಲು ಹೋದ ಸಂಗ್ಯ. ವಕೀಲನನ್ನಿಟ್ಟ. ಗಾಡಿ ಮಾರಿ ಅವನಿಗೆ ನೂರು ರೂಪಾಯಿ ಕೊಟ್ಟ.

ಕಾನೂನಿನಂತೆ ಹೊಲವನ್ನು ವಶಪಡಿಸಿಕೊಳ್ಳಲು ಕಾರಕೂನ ಬಂದ. ಸಂಗ್ಯನನ್ನು ಕರೆಸಿದ. ಇದ್ದ ವಿಚಾರವನ್ನು ಹೇಳಿದ. ಕೋರ್ಟಿನ ತೀರ್ಮಾನದ ಪ್ರಕಾರ ಹಣ ಕೊಡುತ್ತೇನೆ. ಮೊದಲು ನನ್ನನ್ನು ಹೊಲದೊಳಗೆ ಬಿಡಿರಿ, ಎಂದ ಸಂಗ್ಯ. ನಡೆಯಲಿಲ್ಲ. ಹೊಲ ಜಪ್ತಿಯಾಗಿ ಫಕೀರಣ್ಣನ ವಶಕ್ಕೆ ಕೊರಟುಹೋಯಿತು. ಸಂಗ್ಯ ಮನೆಗೆ ಬಂದು ಚಿಂತಿಸಿದ. ಪರಿಷ್ಯನೊಡಗೂಡಿ ಮಸಲತ್ತು ನಡೆಸಿ 'ಆಗುವುದೆಲ್ಲ ಆಗಲಿ, ನಮ್ಮ ತಲೆ ಹೋದರೂ ಸರಿಯೆ' ಎಂದು ತೀರ್ಮಾನಿಸಿ ಇಬ್ಬರೂ ಕುಡುಗೋಲನ್ನು ಮಸೆದರು.

ಮಂಗಳವಾರ ಉದಯದಲ್ಲೆದ್ದ ಸಂಗ್ಯ ಪರಿಷ್ಯ ಇಬ್ಬರೂ ತಾಯಿಯ ಪಾದಕ್ಕೆರಗಿ, 'ಬಸವಣ್ಣ ನಡಸು ನಮ ಜಿದ್ದ' ಎಂದು ಹೇಳಿ ಕುಡುಗೋಲನ್ನು ಮಸೆದು ಬಗಲಲ್ಲಿ ಮುಚ್ಚಿಕೊಂಡು ಹೊರಟು ಮೂರು ತಾಸಿನ ಹೊತ್ತೇರುವುದರಲ್ಲಿ ಫಕೀರಣ್ಣನ ಮನೆಗೆ ಬರುತ್ತಾರೆ. ಫಕೀರಣ್ಣ ಮನೆಯಲ್ಲಿರಲಿಲ್ಲ. ತುಕ್ಕಣ್ಣ ಇದ್ದ. "ಏನು ಕೆಲಸ ಇತ್ತು?" ಎಂದು ಕೇಳಿದ. "ಬಹಳ ಕೆಲಸ ಇತ್ತು" ಎಂದು ಹೇಳಿ ಹಿಂತಿರುಗಿದ ಅವರು ಹೊಲದಲ್ಲಿ ಹೊಳೆಯಲ್ಲಿ ಹುಡುಕಿದರು. ಹುಡುಕಿ ಹುಡುಕಿ ಸಾಕಾಗಿ ಅಂಗಡಿಗೆ ಬಂದು ಕಾಯಿ ಕರ್ಪೂರ ತೆಗೆದುಕೊಂಡು ಹೋಗಿ ಬಸವಣ್ಣ ದೇವರಿಗೆ ಪೂಜೆ ಮಾಡಿ ಹೊಂಗಲದ ದಾರಿ ಹಿಡಿದರು. ರಾಚಪ್ಪನ ಮನೆಗೆ ಹೋದರು. ಅವನೂ ಇರಲಿಲ್ಲ. "ಕೊಲ್ಲವನಕಿಂತ ಕಾಯುವ ಶ್ರೇಷ್ಠ ಬಹಳ ಚಿಲೊ ಅವರ ಅದರುಷ್ಟ".

ಯಾರೂ ಸಿಕ್ಕಲಿಲ್ಲವಲ್ಲ ಎಂದು ಮನಸ್ಸಿನಲ್ಲೇ ಕುದಿದರು. ಬಸಲಿಂಗಣ್ಣನ ಮನೆಗೆ ಹೋದರು. ಈ ಇಬ್ಬರು ಬಂದದ್ದು ಅವನಿಗೆ ತಿಳಿಯಲಿಲ್ಲ. ಮುಗ್ಗುಲಲ್ಲಿ ಹೋಗಿ ನಿಂತರೂ "ಬಸಲಿಂಗಣ್ಣನ ಚಿತ್ತ ರುಪಾಯಿಮೇಲೆ". ಸಂಗ್ಯ ಬಗಲಲ್ಲಿದ್ದ ಕುಡುಗೋಲನ್ನು ತೆಗೆದು "ಕಡದನೊ ಅವನ ಚಂಡ". ಪರಿಷ್ಯನನ್ನು ಕರೆದುಕೊಂಡು ಅಲ್ಲಿಂದ ಓಡಿಹೋದ. ಬಸಲಿಂಗಣ್ಣ ಸಂಕಟದಿಂದ ಎದ್ದ. ಶಿರ ಬಾಗಿತು. "ಬಾಯಿಲಿ ಸುರಿತ ನೆತ್ತರಾ ಹಾರಿತ ಕಬರಾ ಬಿದ್ದನ ಜೀವ ಹೋಗಿ." ಕುಳಿತಿದ್ದ ಮಂದಿ ಗಾಬರಿಯಾಗಿ 'ಹಿಡಿಯಿರಿ, ಹಿಡಿಯಿರಿ' ಎಂದು ಕೂಗಿದರು. ಎದುರಿಗೆ ಬರುತ್ತಿದ್ದ ಮಂದಿ ಯಾರೂ ಹಿಡಿಯಲಾಗಲಿಲ್ಲ. ಸುದ್ದಿ ತಿಳಿದ ಹಳಬ[4]ರು ಬಂದರು. ಊರಲ್ಲೆಲ್ಲ 'ಬಬ್ಬಾಟ'ವಾಗಿ ಅವರು ಹೊಂಗಲದ 'ಗೇಟ'ನ್ನು ದಾಟಲಾಗಲಿಲ್ಲ.

---

4 ವಾಲಿಕಾರ ಅಥವಾ Village Police ಅಥವಾ Watchman.

ಇಕ್ಕಟ್ಟಿನ ಓಣಿಯೊಂದರಲ್ಲಿ ಓಡಿಹೋಗುವಾಗ ಹಳಬರು ಅವರನ್ನು ಹಿಡಿದು ಬಿಟ್ಟರು. ಅವರ ಮನಸ್ಸಿನ ಸಿಟ್ಟು ತೀರಿತ್ತು. ಮಂದಿ ಸಂತ್ರಾವರಿದು ಕೂಡಿದರು. ಕೈಯಿನ ಕುಡುಗೋಲನ್ನು ಬೀಸಿ ಒಗೆದುಬಿಟ್ಟ ಸಂಗ್ಯ. ಅವರನ್ನು ದಾರಿಯುದ್ದಕ್ಕೂ ಹೊಡೆಯುತ್ತ ಚಾವಡಿಗೆ ತಂದರು. ಕುಲಕರ್ಣಿ ಬಂದು ನೋಡಿದ. ಪೋಲೀಸು ಗೌಡನಿಗೆ ಹೊಡೆಯಲು ಅಪ್ಪಣೆ ಕೊಟ್ಟ. ಸಂಗ್ಯ ಪರಿಷ್ಯರನ್ನು ಎದುರುಬದುರಾಗಿ ಕಂಬಗಳಿಗೆ ಕಟ್ಟಿದರು. 'ಸುಮ್ಮನೆ ನಮ್ಮನ್ನು ಹೊಡೆಯಬೇಡಿ. ಸಂಪಗಾಂವಿಗೆ ನಮ್ಮನ್ನು ಕಳಿಸಿರಿ. ಕಚೇರಿಯಲ್ಲಿ ವಿಚಾರಣೆ ನಡೆಯಲಿ. ವಕ್ಕುಂದದ ಹೂವಿನರಾಮ ಇದ್ದಾನೆ ಇದರಲ್ಲಿ' ಎಂದರು ಅವರು. ಕೂಡಲೇ ಹಳಬರು ವಕ್ಕುಂದಕ್ಕೆ ಹೋದರು. ಹೂವಿನರಾಮ ಸಿಕ್ಕಿದ. ತರತರ ನಡುಗಿದ. ಉಣ್ಣಲೂ ಬಿಡದೆ ರಾತ್ರೋರಾತ್ರಿ ಎಳೆದು ತಂದರು ಅವನನ್ನು.

ಸಂಪಗಾಂವಿಯ ಕಚೇರಿಗೆ ದೂರನ್ನೊಯ್ಯಲಾಯಿತು. ಹಳಬ ಕೊಟ್ಟ ವರದಿಯನ್ನು ಸುಭೇದಾರ ಓದಿನೋಡಿದ. ಬುಧವಾರ ಸಂಜೆಯ ಹೊತ್ತಿಗೆ ಫೌಜ ದಾರನೂ ಲಗುಬಗೆಯಿಂದ ಬಂದ. ನೆತ್ತರನ್ನು ಕಂಡ. ಹೆಣವನ್ನು ನೋಡಿ ಮರಮರ ಮರುಗಿದ. ಮೃತನ ಕಡೆಯವರಿದ್ದರೆ ಅವರಿಗೆ ಹೆಣ ಒಪ್ಪಿಸಿ ಮಣ್ಣು ಮಾಡಿಸಲು ಅಪ್ಪಣೆ ಕೊಡಿಸಿದ. ಬಸಲಿಂಗಣ್ಣನ ತಾಯಿತಂದೆಯರು ಬಿದ್ದು ಹೊರಳಾಡಿ 'ಬೋರಾಡಿ' ಅತ್ತರು. ದುಃಖವನ್ನು ತಡೆಯಲಾರದ ಅವನ ತಾಯಿ ಗೋಳಾಡಿ "ಹಾಕಿದಾ ಗುಂಡಗುಳದಾಳಿ ವೊಗದಾಳ ಹರದ". ಶಿವನ ಆಟ ಯಾರಿಗೂ ತಿಳಿಯದು!

ಸಂಗ್ಯ ಪರಿಷ್ಯರನ್ನು ಕಚೇರಿಯಲ್ಲಿ ಹಾಜರುಪಡಿಸಲಾಯಿತು. "ಯಚ್ಚರ ತಪ್ಪಿ ಯತ್ತರ ಹೋದಿರಿ" ಎಂದು ಮಾಮ್ಲೇದಾರ ಹುಕುಮು ಮಾಡಿದ. ಬೆಳಗಾಂವಿಗೆ ದೂರನ್ನೊಯ್ದರು. ಹೂವಿನ ರಾಮನನ್ನು ತಂದದ್ದು ಅನ್ಯಾಯವೆಂದು ಸಾಹೇಬ ನಿರ್ಣಯ ಕೊಟ್ಟಾಗ "ಸಂಗ್ಯಾಗ ಬಿದ್ದಾಂಗ ಆದೀತ ಕೆರಿ ಬಾಂವಿ". ಬೆಳಗಾಂವಿಯಿಂದ ಮೂರು ತಿಂಗಳ ಮೇಲೆ ಉತ್ತರ ಬಂತು. ಪರಿಷ್ಯನನ್ನು ಗಡೀಪಾರು ಮಾಡಿದರು. ಸಂಗ್ಯನಿಗೆ ಮರಣದಂಡನೆ ವಿಧಿಸಿದ್ದು ಜಾಹೀರಾಗಿ ಹೋಯಿತು. ಅಲ್ಲಿಂದ ಅವನನ್ನು ಧಾರವಾಡಕ್ಕೆ ಒಯ್ಯಲಾಯಿತು.

ಧಾರವಾಡವನ್ನು ಬಿಟ್ಟರೂ ಅವನನ್ನು ಉಳಿಸಲು ಯಾರಿಂದಲೂ ಆಗಲಿಲ್ಲ. ಗಲ್ಲು ಶಿಕ್ಷೆ ಹೊಂಗಲದಲ್ಲೇ ನಡೆಯಲೆಂದು ತೀರ್ಮಾನಿಸಲಾಯಿತು. 'ಗಲ್ಲಿಗೆ ಹಾಕುವುದು ಸಾಮಾನ್ಯ ವಿಷಯವಲ್ಲ. ಹಿಂದೆ ಮುಂದೆ ಸರಿಯಾಗಿ ಪಹರೆಯಿರಬೇಕು. ಎಚ್ಚರದಿಂದ ಇರಬೇಕು' ಎಂಬ ಆಜ್ಞೆಯನ್ನು ಹೊತ್ತವರು ಸಂಗ್ಯನನ್ನು ಕಾಯುತ್ತಿದ್ದರು. ಸಂಗ್ಯ 'ಚೆಕ್ಕಡಿ'ಯ ಮೇಲೆ ಕುಳಿತಿದ್ದ. 'ಬೆಸ್ತಾರ' ದಿನ ಅಣ್ಣತಮ್ಮಂದಿರನ್ನೂ ತಾಯಿಯನ್ನೂ ಕರೆಸಿಕೊಂಡ. 'ಆಗುವುದೆಲ್ಲ ಆಗಿಹೋಗಿದೆ, ಯಾಕೆ ಅಳುತ್ತಿ' ಎಂದು ತಾಯಿಗೆ ಸಮಾಧಾನ ಹೇಳಿದ. 'ಬ್ರಹ್ಮಬರೆದ ಬರಿ ಮಾಡಿದಂತಾ ತಪ್ಪಾ ಯೆಣ್ಣರತ ಹೋದಾಂಗ ದೀಪಾ ಆರಲಪ್ಪ'.

'ಸಂತಿ ಶುಕ್ರವಾರಾ' ಸುತ್ತಿನ ಮಂದಿ ಕೂಡಿದರು. 'ಹವ್ವಹಾರಿ ಕಬರಿಲ್ಲದ' ಮಾತಾಡುತ್ತಲೇ ಇದ್ದ ಸಂಗ್ಯನನ್ನು ಊರ ಹೊರಕ್ಕೆ ತರಲಾಯಿತು. ಮಠದೊಳಗೆ ಮಣ್ಣುಮಾಡಲು ಅವಕಾಶ ಕೊಡಬೇಕೆಂದು ಸಾಹೇಬನನ್ನು ಕೈಮುಗಿದು ಕೇಳಿಕೊಂಡ. ಬಂದ ಉತ್ತರದಿಂದ "ಮಾರಿ ಬಾಡಿ ಆದಿತ ಸಣ್ಣ, ಕಳೆಗುಂದಿ ಹಾರಿತ ಬಣ್ಣಾ". ನಿರ್ವಾಹವಿಲ್ಲದೆ "ಹರಹರಾ ಅಂತ ಹಾದಿ ಹಿಡದನೋ ಹತ್ತಿ ನಿಂತ ತನ್ನ ಟಿಕಾಣ". ಗಲ್ಲಿಗೆ ಹಾಕಿದರು. ಸಂಗ್ಯ ಸ್ವರ್ಗದ ಹಾದಿ ಹಿಡಿದ ಕೈಲಾಸಕ್ಕೆ. ಅಕ್ಕತಂಗಿಯರು, ಅಣ್ಣತಮ್ಮಂದಿರು, ತಾಯಿಯು, ದುಃಖ ಮುಗಿಲಿಗೇರಿತು. 'ಜನಲೋಕ' ಸುತ್ತುಗಟ್ಟಿ ನಿಂತಿತು.

* * *

ಫ್ಲೀಟರ ಲೇಖನಗಳನ್ನು ಗಮನಿಸದೆ ಈ ಲಾವಣಿಯನ್ನು ಓದಿದರೆ ಬಸಲಿಂಗಣ್ಣ ಫಕೀರಣ್ಣ ರಾಚಪ್ಪ; ಸಂಗ್ಯ ಪರಿಷ್ಯ–ಈ ಪಾತ್ರಗಳ ನಡುವಿನ ಸಂಬಂಧಗಳು ಅರ್ಥವಾಗದೆ ಗೊಂದಲವಾಗುವ ಸಂಭವ ಉಂಟು. ಫ್ಲೀಟರು ಪ್ರತಿಯೊಂದು ಲಾವಣಿಯ ಮೊದಲಲ್ಲಿ ಕೊಡುವ ಲೇಖನಗಳಿಂದ ಆಗುವ ಪ್ರಯೋಜನಗಳಲ್ಲಿ ಇದೂ ಒಂದು.

ಸಂಗ್ಯ ಪರಿಷ್ಯ ಇಬ್ಬರೂ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡಲಿಲ್ಲ ಎಂದು ಫ್ಲೀಟ್ ಹೇಳುತ್ತಾರೆ. ಆದರೆ ಅವರು ಓಡಿಹೋದುದನ್ನೂ 'ಹಿಡಿಯಿರಿ, ಹಿಡಿಯಿರಿ' ಎಂದು ಜನ ಕೂಗಿಕೊಂಡದ್ದನ್ನೂ ಲಾವಣಿಯೇ ಹೇಳುತ್ತದೆ. ಬಹುಶಃ ಅವರು ಗಾಬರಿ ಹೆಚ್ಚಿ ಓಡಹತ್ತಿರಬೇಕು. ಅವರು ತುಂಬ ಗಾಬರಿಯಾಗಿದ್ದರು ಎಂಬುದಕ್ಕೆ ಏನೂ ಅರಿಯದ ಹೂವಿನ ರಾಮು ಎಂಬುವನನ್ನು ಸಿಕ್ಕಿಸಿದ್ದು ಒಂದು ನಿದರ್ಶನವಾಗಬಹುದು. ಸುಲಭವಾಗಿಯಂತೂ ಸಿಕ್ಕಿಬಿದ್ದದ್ದು ನಿಜ. ಆದ್ದರಿಂದ ತಪ್ಪಿಸಿಕೊಳ್ಳುವ ಹಂಚಿಕೆಯೇನೂ ಅವರಲ್ಲಿರಲಿಲ್ಲ ಎಂಬ ಫ್ಲೀಟರ ಅಭಿಪ್ರಾಯವನ್ನು ಮಾತ್ರ ಒಪ್ಪಬಹುದು. ಗಲ್ಲಿಗೆ ಹಾಕುವ ದಿನ ಸಂಗ್ಯನಿಗೆ ಹುಚ್ಚು ಹಿಡಿದಂತಾಗಿ ತನ್ನಷ್ಟಕ್ಕೆ ತಾನು ಬಳಬಳನೆ ಮಾತಾಡಿಕೊಳ್ಳುವ ದೃಶ್ಯವಂತೂ ಕರುಣಾಜನಕವಾಗುತ್ತದೆ.

ಈ ಲಾವಣಿಯಲ್ಲಿ ಬ್ರಿಟಿಷರ ಪ್ರವೇಶವಿಲ್ಲ. ಬಡವರನ್ನು ಸುಲಿದು ತಿನ್ನುವ ಬಂಡವಾಳಷಾಹಿ ಜನ ಅವತ್ತೂ ಇದ್ದರು ಎಂಬ ಸಂಗತಿಯನ್ನು ಸಾರುತ್ತದೆ. 'ಇಲ್ಲಿ ಅನೇಕ ಹೃದಯಸ್ಪರ್ಶಿವಾಕ್ಯಗಳಿವೆ' ಎಂಬ ಫ್ಲೀಟರ ಮಾತಿಗೆ "ಸಂದರ್ಭಗಳೂ ಇವೆ" ಎಂದು ಸೇರಿಸಿಕೊಂಡರೆ ಹೆಚ್ಚು ಸೂಕ್ತ ಎನ್ನಿಸುತ್ತದೆ. "ಇಡೀ ಹಾಡು ಪರಿಣಾಮಕಾರೀ ವರ್ಣನೆಗಳಿಂದ ಕೂಡಿದೆ" ಎಂದು ಫ್ಲೀಟ್ ಹೇಳುತ್ತಾರೆ. ಕೇವಲ ವಿವರನಿರೂಪಣೆಯನ್ನು 'ಪರಿಣಾಮಕಾರಿ' ಎಂದು ಒಪ್ಪಲು ಆಗುವುದಿಲ್ಲ. ನಡೆಯುವ ಪ್ರತಿಯೊಂದು ಘಟನೆಯನ್ನೂ ಲಾವಣಿಕಾರ ವಿವರವಿವರವಾಗಿ ಹೇಳಿಕೊಂಡು ಹೋಗುತ್ತಾನೆ. ಸಂಗೊಳ್ಳಿ ರಾಯಣ್ಣ, ಹಲಗಲಿಯ ಬೇಡರು—ಈ ಲಾವಣಿಗಳಲ್ಲಿ ಆಗಿರುವಷ್ಟು ಮಟ್ಟಿಗೆ ವಿವರಗಳು ವರ್ಣನೆಗಳು ಇಲ್ಲಿ ಸಾರ್ಥಕವಾಗಿಲ್ಲ.

ಕಿತ್ತೂರ ಚನ್ನಮ್ಮನ ಸೊಸೆ

ಆರು ಆನೆ ಹದಿನಾರು ಒಂಟೆ ಹನ್ನೆರಡು ಸಾವಿರ ಕಾಲಬಲ ಇಷ್ಟೆಲ್ಲ ಹೊರಟುವು ತೋಪನ್ನೆಳೆದುಕೊಂಡು. ಸುತ್ತಲೂ ಹಿಡಿಯುವ ಹತ್ತೆಂಟು ಬೆಳ್ಳಿಕಾವುಳ್ಳ ಮುತ್ತಿನ ಪಲ್ಲಕ್ಕಿ, ಅಪ್ತಾಗೇರಿ, ಚಕ್ಕಡಿಗಳು ಎಲ್ಲ ಹೋದುವು. ಕಲ್ಲೂರ ಕಲಬಸಪ್ಪ, ಕನ್ನೂರ ಮಲ್ಲಪ್ಪ, ಅವರಾದಿ ವೀರಪ್ಪ, ಕಾರುಬಾರಿಗಳಾಗಿದ್ದರು. ಇಂಥ ಸರದಾರರೂ 'ಕಂತರ-ಬಿದ್ದ ಹೋದಾರು.' 'ಪಾಂಡವರಿಗೆ ವನದೇಶ ಬಂದಂತೆ ಆಯಿತು. ಪಾಪಿ ದುಶ್ಶಾಸ ದ್ರೌಪದಿಯ ಸೀರೆಯನ್ನು ಸೆಳೆಯುವಾಗ ಐವರು ಭೂಪತಿಗಳೂ ಇದ್ದು ಏನು ಮಾಡುವರು? ನಮ್ಮಂಥ ಪಾತಕರು ಯಾರೂ ಇಲ್ಲ'—ಹೀಗೆ ಹಲುಬುತ್ತ "ಪನ್ನಂಗಧರನ ಸ್ತುತಿಸುತ ಈರವ್ವಾ ಪಾರ್ವತಿ ಅರಸನ ನೆನಸಿದಳೊ". ಪೂರ್ವಜನ್ಮದ ಲಿಖಿತ ಪುಣ್ಯ ತಪ್ಪಿತೆಂದು ಬ್ರಹ್ಮ ಇಂಥ ಬರಹವನ್ನೇಕೆ ಬರೆದನೋ.

ಸಣ್ಣ ನಡುವಿನ ಬಂಗಾರದ ಡಾಬು, ಬುಗುಡಿ, ಬಾವಲಿ, ಜುಮಿಕಿವಾಲಿ, ಚಳತುಂಬು, ಚಂದವಲ್ಲಿಡುವ ರ‍್ಯಾಗುಟಿ, ಚೆವರಿಹೆಳಲು, ಸಾವಿರದ ಹೊನ್ನಿನ ಸರದಾಳಿಗಳು, ಮೊಹರದ ಮುತ್ತಿನ ಮೂಗುತಿ, ಮೇಲೆ ಕೆತ್ತಿಸಿದಂಥ ವಜ್ರ, ಕಂಠಕ್ಕೆ ಧರಿಸುವ ಕರಡಿಗೆ ಸರವಣಿ, ಕಟ್ಟಣಿ, ಕರಿಮಣಿ ಪಟ್ಟಿಗೆ ಮುತ್ತು, ಹವಳದ ಸರ, ಹಿರಿಪಿಲ್ಲಿಗಳು, ಕಿರಿಪಿಲ್ಲಿಗಳು, ಲುಲ್ಲುಮಿಂಟಿಕಿ,* ರುಳ್ಳಿಯಗೆಜ್ಜೆ, ಕಾಲ್ಕಡ ಸರಪಳಿ, ಕಾಲುಂಗುರ ಇಷ್ಟೆಲ್ಲ ಮಂದರಧರನ ಕರುಣ ತಪ್ಪಿ ಒಂದೂ ಉಳಿಯದೆ ಹೋದುವಲ್ಲ. ಮುಂದೆ ಆಸರೆಯಿಲ್ಲದಂತೆ! ಒಕ್ಕಲಿಗಿತ್ತಿಯರು ಮಂತ್ರಿತರರು 'ಅಕ್ಕ ನಿಲ್ಲಿಸಾ ದುಃಖ ' ಎಂದು ಸಂತೈಸಿಕೊಂಡರು. ರಾಮಲಕ್ಷ್ಮಣರು ಪ್ರೇಮದಿಂದಿರುವಾಗ ಕೆಟ್ಟ ರಾವಣ ಜಾನಕಿಯನ್ನೊಯ್ದು ವನದೊಳಗಿಟ್ಟ. ಹನುಮಂತ ಲಂಕೆ ಸುಟ್ಟ. ವಿಭೀಷಣನಿಗೆ ಪಟ್ಟ ಕಟ್ಟಿದರು. ಗಟ್ಟಿ ಶಿಖೆಯ ಹಾಕಿ ಹಿಂಡು ದೈತ್ಯರನ್ನೆಲ್ಲ ಬಂಡು ಮಾಡಿದ ಭೂಪ ಕುಲದೀಪ. ಹೋದಂಥ ಮಗ ನಿಮ್ಮ ಸಹಾಯಕ್ಕೆ ಬರುತ್ತಾನೆ ಎಂದು ಎಲ್ಲರೂ ಹೇಳುವವರೇ.

ಹೊದೆಯುವಂಥ ಹೊದಿಕೆಗಳೂ ಎಷ್ಟೋ ರಾಜ್ಯಕ್ಕೆ ಹಂಚಿಹೋದವು. ಮಕ್ಕಳು ಉಡುವ ಮಂದಿಲ ಸೀರೆ, ತೊತ್ತುಗಳು ಉಡುವ ತೋಪಿನ ಸೀರೆ, ಉತ್ತಮರು ಉಡುವ ವುಳ್ಳಿಗಣಿ ಸೀರೆ, ರಾಣಿಯರು ಉಡುವ ರಾಗಾವಳಿ ಸೀರೆ, ಬಾಲೆಯರು ಉಡುವ ಬಾಳೆಪಟ್ಟೆ ಸೀರೆ, ಚದುರೆಯರು ಉಡುವ ಚಂದ್ರಕಾಳಿ ಸೀರೆ, ಹುಡುಗಿಯರು ಉಡುವ ಹೂವಿನ ಸೀರೆ, ಸಣ್ಣವರು ಉಡುವ ಸಾಸಿಬಣ್ಣದ ಸೀರೆ, ಕನ್ಯೆಯರು ಉಡುವ

---

* ಮುಂಟಿಗೆ ಎಂಬ ಆಭರಣ ಇದು. ಶ್ರೀಮಂತರು ಬಂಗಾರದಲ್ಲೂ ಸಾಮಾನ್ಯರು ಬೆಳ್ಳಿಯಲ್ಲೂ ಮಾಡಿಸಿಕೊಳ್ಳುತ್ತಿದ್ದುದುಂಟು. ಕಾಲಿನ ನಾಲ್ಕನೆ ಬೆರಳಿಗೆ, ಅಂದರೆ ಕಾಲಿನ ಕಿರುಬೆರಳಿನ ಪಕ್ಕದ ಬೆರಳಿಗೆ ಧರಿಸುವ ಆಭರಣ ಇದಾಗಿದ್ದು ಮೇಲ್ಭಾಗದಲ್ಲಿ ಮಂಟಪದ ಆಕಾರ ಹೊಂದಿರುತ್ತದೆ. ಮಂಟಪದ ನಾಲ್ಕೂ ಅಂಚಿನ ಪಾದದಲ್ಲಿ ಸಣ್ಣ ಸಣ್ಣ ಗುಂಡುಗಳೂ ನೆತ್ತಿಯ ಮೇಲೆ ಗೋಪುರದಾಕಾರದ ಗುಂಡೂ ಇರುತ್ತದೆ.

ಕಂಬಾವತಿ ಸೀರೆ, 'ಕೂಸಿಗೆ ಹೊಚ್ಚುವ ಕುಲಾಯಿ ಕೊಂಚಿಗಿ'—ಎಷ್ಟೆಂದು ಹೇಳಲಿ! ತೊಪ್ಪಿಗೆ, ನಾಗಮುರಿ, ಶಲ್ಯ, ಮುಂಡಾಸು, ಶಾಲು, ಶಕಲಾತಿ, ಪಚ್ಚೆದ ಅಂಗಿ, ಪರಿಮಳ ಪಾವಡ, ಹೊದೆಯುವಂಥ ಧೋತರ, ನಾಕ್ಪರಿ — ಎಲ್ಲ ಹೋಗಿಬಿಟ್ಟುವು. ಇದು 'ಮಲ್ಲಸರ್ಜ ಮಾಡಿದ ಬದುಕು'. ಇಷ್ಟೆಲ್ಲವನ್ನೂ ಕಳೆದುಕೊಂಡು ದುಃಖತಪ್ತಳಾಗಿದ್ದ ಈರವ್ವ ಕಟ್ಟಿದ ಅಲಗನ್ನು ಹಾಯುವೆನು ಎನ್ನುತ್ತ ಪಟ್ಟನೆ ನೆಲಕೆ ಹಣೆಯನ್ನು ಗಟ್ಟಿಸಿಕೊಂಡಳು. ತೊತ್ತುಗಳು ಸುತ್ತಲೂ ಮುತ್ತಿಕೊಂಡರು. ತಾಯಿ ನಿಮಗೆ ಬಂದದ್ದೇನು ಎಂದು 'ಉಮ್ಮಾಯ'ದಿಂದ ಹೇಳಿದರು. ಈರವ್ವ ಸುಮ್ಮನಿರದೆ ಅಳುತ್ತಲೇ ಇದ್ದಳು. ಹನ್ನೆರಡು ಸಾವಿರ ದಂಡು ನಮ್ಮನ್ನು ಬಿಟ್ಟುಹೋಯಿತು. "ವಡದಾಂಗ ಆದಿತು ತುಂಬಿದ ಕೆರಿ".

ನಾಡನ್ನು ಆಳುವ ದೊರೆಗಳಿಗೆ ಇಂಥ ಕೇಡು ಬರಬಾರದು ಎಂದು ಕಿತ್ತೂರ ನಾಡೆಲ್ಲ ಮರಮರ ಮರುಗಿತು. ಹಸಿದೇನು ಎಂದರೂ ಕೇಳದೆ ಹಣ್ಣು ಹಾಲು ಸಕ್ಕರೆ ನೀಡಿ, ವಸ್ತ್ರವನ್ನು ಕೊಡುತ್ತಿದ್ದರು ಜನ. 'ರಾಯನಾಯಕ ರಾಜ್ಯಕ್ಕೆ ಗೋಜು ಹಚ್ಚದೆ ಇದ್ದರೆ ಮೋಜಾಗಿ ದೌಲತ್ತು ಸಾಗುತ್ತಿತ್ತು' ಎಂದು ಮಹಾಜನರೆಲ್ಲ ಮರುಗುತ್ತಿದ್ದರು. ದೇಸಾಯಿಗೆ ಪಟ್ಟಗಟ್ಟಿ ಚನ್ನವ್ವನನ್ನು ಒಯ್ದು ಹೊಂಗಲದಲ್ಲಿ ಹಾಕಿದರು. ಕೇಳಿದವರಿಗೆ ದೇಸಾಯಿ ಸಾಕಿದ ಮಗ ಎಂದು ಹೇಳುತ್ತಿದ್ದರು. "ಆಕಾಶದ ಮೇಗಿನ ಚಂದ ಲೇಸಾಗಿ ಬೆಳಕಿಲ್ಲದಿದ್ರ ಯೇಸೊಂದಿದ್ದರೇನ ನಕ್ಷತ್ರ".

'ನಾಳೆ ಹೊರಡಿ' ಎಂಬ ಪತ್ರವನ್ನು ವೇಳೆವೇಳೆಗೆ ಉತ್ತರ ಹೇಳಿಹೇಳಿ ಬರೆಯುತ್ತಾರೆ. "ವಸ್ತ್ರಾ ಮಡವಿ ಯಲ್ಲಾ ಉಚ್ಚಿ ಪೊಡವಿಗೆ ವಗದಾಳೊ ಬಡವಿ, ಉದರಸ್ತಾಳೊ ಕಣ್ಣೀರಾ". ಬಂಡಿಗೆ ಎಲ್ಲವನ್ನೂ ಹೇರಿ ಎತ್ತು ಸಾಗಲಿ ಮುಂದಕ್ಕೆ ಎಂದು ಹೇಳಿ ಎಲ್ಲ ದನಕರುಗಳನ್ನೂ ಬಿಚ್ಚಿ ಹೊಡೆದರು. ಗುರುವನ್ನು ಕರೆಸಿ ಪಲ್ಲಕ್ಕಿ ತರಿಸಿ ಮೇಲೆ 'ಅಪ್ತಾಗೇರಿ' ಹಿಡಿಸಿ ಛತ್ರಚಾಮರಗಳನ್ನು ಹಾರಿಸುತ್ತ ಹೊರಟರು. "ಹೊಂಡಹೊಂಡಂದರ ಮಂಡಾಟ ಹಿಡದಾಳೊ. ಬಂಡಮಾಡಿ ಅವರು ಯೆಳಿಯಕ ಹೋದರ, ಕಂಡವರ ಕಾಲ ಹಿಡದಾಳೊ". ಮಂಡಲವನ್ನಾಳುವ ಪುಂಡರು ಮಡಿವಲ್ಲೆ ಕೆಂಡ ಹಾದು ನಾನು ಪ್ರಾಣ ಕೊಡಲಿಲ್ಲ ಎಂದು ಗಂಡನನ್ನು ನೆನೆಸಿಕೊಂಡು ಅಳುತ್ತಾಳೆ. ನಮ್ಮಂಥ ದೆಸೆಗೇಡಿ ಯಾರೂ ಇಲ್ಲ. ಹೊಟ್ಟೆಯಲ್ಲಿ ಒಬ್ಬ ಪುತ್ರ ಇದ್ದಿದ್ದರೆ ದೇಶದ ಗತಿ ಯಾಕೆ ಮುಳುಗುತ್ತಿತ್ತು? ನೀರಿಲ್ಲದೆ ಮಲ್ಲಿಗೆ ಬೇರೇ ಒಣಗಿಹೋದಂತೆ ಅತಂತ್ರವಾಯಿತು ಸಂಸಾರ.

ಎಷ್ಟು ಮಾಡಿದರೂ ನಮ್ಮನ್ನು ಬಿಟ್ಟು ಹೋಗುವುದಿಲ್ಲವೆಂದುಕೊಂಡು ನಿಷ್ಠೆಯಿಂದ ವೀರನನ್ನು ಸ್ತುತಿಸಿದಳು. ಅತ್ತೆಮಾವಂದಿರನ್ನು ನೆನೆದು ಡೋಲಿಯನ್ನು ಹತ್ತಿದಳು. ಬೋವಿಗಳು ಹೊತ್ತು ನಡೆದರು. ಮುಂದೆ ಮುನ್ನೂರು ಬಾರಿನ ಮಂದಿ· ಹಿಂದೆ ಇನ್ನೂರು ಕುದುರೆ ಮಂದಿ, ಪಾರಾಗಸ್ತಿ ಮಾಡುತ್ತ ಹೊರಟರು. ರಾಯನಾಯಕ ಬಂದುಬಿಡುತ್ತಾನೆಂಬ ಭಯದಿಂದ ಎಡಬಲಗಳಲ್ಲಿ ಹತ್ತೆಂಟು ಹಿರಿದ ಕತ್ತಿಗಳು

ಸಿದ್ಧವಾಗಿದ್ದುವು. ನಡಿಗೆಯುಲ್ಲಿ ಚುರುಕು ಕಂಡಿತು. ಸರದಾರ ಧಾರವಾಡಕ್ಕೆ ಹೋಗಿ ಅವರ ಸ್ಥಿತಿಯನ್ನು ಕೇಳಿದ. ನಮಗೆ ಕೆಟ್ಟದ್ದನ್ನು ಬಯಸುತ್ತೀಯೆ ಎಂದ. ರಾತ್ರಿಹೊತ್ತು ರಾಯನಾಯಕನನ್ನು ಬಿಟ್ಟು ಸುತ್ತಿನ ಹಳ್ಳಿಗಳನ್ನು ಸುಡಿಸುತ್ತೀಯೆ ಎಂದು ಆಪಾದಿಸಿದ. ಇವಳನ್ನು ಒಬ್ಬಳನ್ನೇ ಪ್ರತ್ಯೇಕವಾಗಿಡಿರಿ ಎಂದ. ಬೋವಿಗಳು ಕುಸುಗಲ್ಲಿಗೆ ಹೊತ್ತರು. ಈರವ್ವ ಬಲುದುಃಖ ಮಾಡಿದಳು. 'ತಾಯಿಲ್ಲದ ಮಕ್ಕಳಿಗೆ ಆಯಿಲ್ಲ ಸಿರಿಯಿಲ್ಲ', ಕಾಯುವನ್ನು ಇಡಬಾರದು, ಎಂದುಕೊಂಡು ಶಿವನಲ್ಲಿ ಸಾವನ್ನು ಬೇಡಿದಳು. "ನೀರವಳಗಿನ ಮೀನ ತಗಿದು ಬ್ಯಾರಿ ಚೆಲ್ಲಿದ್ಹಾಂಗ" ಆಯಿತು ನಮ್ಮ ಅವಸ್ಥೆ ಎಂದು ಕೊರಗಿದಳು.

ಇನ್ನು ಈ ಧರೆಯುಲ್ಲಿರಬಾರದು ಎಂದು ಅನ್ನ ಉದಕ ಎಲ್ಲವನ್ನೂ ಬಿಟ್ಟು ಬಿಟ್ಟಳು. ಕೈಕಾಲುಗಳು ಸಣ್ಣವಾದುವು. ಮಣ್ಣುಪಾಲಾಗಲಿ ಎಂದು ಬಣ್ಣ ಒಣಗಿಸಿ ಬಿಟ್ಟಳು. ಕೇಳಿದವರಿಗೆ 'ಸುಗ್ರಾಣಿ ಬೇನೆ' ಎಂದು ಹೇಳಿ "ಸುಣ್ಣದ್ಹಾಂಗ ದೇಹ ಸುಟ್ಟಳು". ನಾಡಿನೊಳಗಿದ್ದ ನವಲಗುಂದ ಕಾಡಸಿದ್ದನ ಬಳಿಗೆ ಹೋಗಿ ಮಿಂದು ಮಡಿಯುನ್ನುಟ್ಟಳು. ಜಂಗಮು ತೀರ್ಥವನ್ನು ಪಡೆದು ಅಂಗದ ಮೇಲಿನ ಸ್ಮರಣೆ ಯನ್ನು ಮರೆತು ಲಿಂಗದ ಮೇಲೆ ಧ್ಯಾನ ಇಟ್ಟಳು. ಭಕ್ತಿಯಲ್ಲಿ ವಿರಕ್ತರನ್ನು ಕರೆಸಿ ತ(ಚ?)ಕ್ಕಡಿ ತುಂಬ ಬಂಗಾರ ತರಿಸಿ ತೂಕ ಮಾಡಿ ದಾನ ಕೊಟ್ಟಳು. 'ಮುಕ್ಕಣ್ಣಹರ ಗುರುವೇ ನಮಗೆ ಮುಕ್ತಿಕೊಡು' ಎಂದು ಧಾರವಾಡಕ್ಕೆ ಹೊರಟುಬಂದಳು. ಚಿಕ್ಕ ಮಗ ಮಲ್ಲಸರ್ಜ ಸಿಕ್ಕಿಬಿದ್ದನೆಂಬುದು ತಿಳಿದಾಗ ಈರವ್ವ 'ಜಕ್ಕನ ಜೇರಿಗೆ' ಇಳಿದು ಹೋದಳು. ಕೊಡ ಹೊನ್ನಿದ್ದರೇನು, ಬಡವಿಯಾಗಿರುವುದು ಲೇಸು. ಗಂಡ ಎಂಬುವನು ಮನೆಯುಲ್ಲಿದ್ದರೆ ಒಡವೆ ವಸ್ತ್ರಗಳಿಗಿಂತ ಲೇಸು. ಧಾರವಾಡಕ್ಕೆ ಹಿಂತಿರುಗಿ ಬಂದಮೇಲೆ ಮೂರಾರು ದಿನ ಇದ್ದಳು. ಮರಣಕಾಲ ಬಂತು. ಪ್ರಾಣಬಿಟ್ಟಳು.

'ಶ್ರವ'ವನ್ನು ಎತ್ತಿಕೂರಿಸಿ ಮುಖ ತೊಳೆದು ವಿಭೂತಿ ಹಚ್ಚಿದರು. ಅತ್ತೆ ಚನ್ನವ್ವ ಉಡುತ್ತಿದ್ದ ಮುತ್ತಿನ ಸೀರೆಯನ್ನು ಉಡಿಸಿದರು. ಕಸ್ತೂರಿಗಂಧವನ್ನು ಪೂಸಿದರು. ವಸ್ತ್ರದ ಪೆಟ್ಟಿಗೆ ತರಿಸಿ ಮೈತುಂಬ ಇಟ್ಟು ಅಲಂಕರಿಸಿದರು. ಹತ್ತೆಂಟು ಸಾವಿರದ ಹೊನ್ನಿನ ರತ್ನವನ್ನುಳ್ಳ ನತ್ತನ್ನು ಮೂಗಿಗಿಟ್ಟರು. ಲೆಕ್ಕವಿಲ್ಲದಷ್ಟು ಊದಿನಕಡ್ಡಿ ಉರಿಯುತ್ತಿರುವಾಗ ಕಂಚಿನಾರತಿ ಕಲಶಗಿಂಡಿ ತುಂಬಿಟ್ಟರು. ಪುರಾಣ ಪುಸ್ತಕಗಳನ್ನೋದುವ ಶಾಸ್ತ್ರಕಥೆಯನ್ನು ನಡೆಸುವ ನಾಡುನಾಡಿನ ಜಂಗಮರು ನೆರೆದರು. ಮಹಾನಾಡಿನ ಜನರು ಕೂಡಿ ನಿಂತು ಕಣ್ಣೀರು ಸುರಿಸಿದರು. ಅತ್ತೆಮಾವರಿಲ್ಲ, ಅತ್ತಿಗೆ ನಾದಿನಿಯರಿಲ್ಲ, ಹೊತ್ತು ಬುದಾಗ ಮರುಗುವ ಹೆತ್ತವ್ವನಿಲ್ಲ, ಅಕ್ಕಅಣ್ಣಂದಿರಿಲ್ಲ, ತಂಗೆತಮ್ಮಂದಿರಿಲ್ಲ, ಅರಮನೆಯೊಳಗೆ ಇನ್ನು ಅಡ್ಡಾಡುವವರು ಯಾರೂ ಇಲ್ಲ— ಎಂದು ತೊತ್ತುಗಳೆಲ್ಲ ಅತ್ತರು. ಅರಸು ಬಾಪುಸಾಬ್ ಒಂದು ವರುಷವೂ ಇರಲಿಲ್ಲ, ಪುರುಷನನ್ನು ಕೂಡಿ ಒಮ್ಮೆಯಾದರೂ ಸರಸವಾಡಲಿಲ್ಲ—ಎಂದು ರಾಹುತರೆಲ್ಲ ಮರುಗಿದರು. ಉಪ್ಪುಂಡ ಮಕ್ಕಳೆಲ್ಲ ದಪ್ಪನೆ ನೆಲಕ್ಕೆ ಬಿದ್ದು ಬಾಪುಸಾಹೇಬನ ಮಡದಿಯನ್ನು ನೆನೆದು ಅಳುತ್ತಿದ್ದರು.

ರಾಜ್ಯರಾಜ್ಯದ ಜನರೆಲ್ಲ ರೇಜುಂಗಟ್ಟಿ ಅಲ್ಲಿಗೆ ಬಂದು ನೆರೆದರು. ಬಲ್ಲಂಥ ಬಡಗಿಯನ್ನು ಕರೆಸಿ ಬೇಕಾದ ಸಾಹಿತ್ಯವನ್ನೆಲ್ಲ ಕೊಡಿಸಿ ದೊಡ್ಡ ವಿಮಾನವನ್ನೇ ಮಾಡಿಸಿದರು. ತರತರದ ಕನ್ನಡಿಗಳಿಂದ ಹಾರಗಳಿಂದ ಅದನ್ನು ಅಲಂಕರಿಸಿದರು. ಹತ್ತೆಂಟು ಸಾವಿರದ ಹೊನ್ನಿನ ಮುತ್ತಿನ ಗೊಂಡೆಗಳನ್ನು ಜರತಾರಿ ಶಾಲುಗಳನ್ನೂ ಸುತ್ತಲೂ ಬಿಗಿದರು. ಛತ್ರಚಾಮರಗಳನ್ನು ಹಾರಿಸುತ್ತ ಶ್ರವವನ್ನು ಹೊತ್ತು ನಡೆದರು. ಹಲಗೆ ಕಾಳಿ ಕರ್ನಿ ಕರಡಿ ಸಂಬಾಳ ಸಂಪರದಾಸಿ—ಮುಂತಾದುವನ್ನು ಬಾರಿಸುತ್ತ ಮುಂದೆ ಸರದಾರರು ಹೊರಟರು. ದಿಕ್ಕುದಿಕ್ಕಿನ ಮಂದಿಯೆಲ್ಲ ಅಕ್ಕ ಈರವ್ವನನ್ನು ನೋಡಿ ದುಃಖ ಮಾಡಿದರು. ಧಾರವಾಡದ ಮಂದಿ ಭೋರಿಡುತ್ತ ಅಳುತ್ತಿರುವಾಗ ಪಹರೆಗೊಳಪಟ್ಟಿದ್ದ ಮುಗ ಶಂಕರನನ್ನು ಸ್ತುತಿಸುತ್ತ ನೂರೊಂದು ದುಃಖ ಮಾಡಿದ. ಎತ್ತಿನ ಬಂಡಿಗಳು ಹತ್ತುವ ಕುದುರೆಗಳು ಶ್ರವದ ಮುಂದೆ ಸಾಗಿಹೋಗುವುದನ್ನು ಕಂಡು ಅವನ ದುಃಖ ಇಮ್ಮಡಿಸಿತು. ದಾನಧರ್ಮವನ್ನು ಕೊಟ್ಟು ನೇಮನಿತ್ಯವನ್ನು ತೀರಿಸಿ ಮುಂದೆ ಮುಕ್ತಿಯನ್ನು ಕೊಡುವ ಬಸವನನ್ನು ಸ್ತುತಿಸುತ್ತ ಮಣ್ಣೊಳಗಿಟ್ಟು ಹಿಂತಿರುಗಿದರು.

* * *

ಕನ್ನಡದ ನೆಲದಲ್ಲಿ ಬ್ರಿಟಿಷರ ಆಳ್ವಿಕೆಯ ಕಡೆಯ ಹಂತ ಕಿತ್ತೂರಿನ ಆಕ್ರಮಣ. ಕಿತ್ತೂರಿನ ವೈಭವವನ್ನು ಸಾರುವುದರೊಂದಿಗೇ ಆ ವೈಭವದ ಕಡೆಯ ಹೆಜ್ಜೆಯಾದ ಈರವ್ವನ ಅಂತ್ಯವನ್ನೂ ಅದ್ಭುತವಾಗಿ ಚಿತ್ರಿಸುತ್ತದೆ ಈ ಲಾವಣಿ. ಆನೆ ಕುದುರೆ ಕಾಲಾಳುಗಳ ಬೃಹತ್ ಸೈನ್ಯವನ್ನೂ ಅಲ್ಲಿನ ರಾಜಮನೆತನದ ಒಡವೆವಸ್ತುಗಳ ಬೃಹತ್ತನ್ನೂ ವರ್ಣಿಸುವುದರಲ್ಲಿ ಕಾಣುವ ಯಶಸ್ಸನ್ನೇ ಈರವ್ವನ ಕಡೆಯ ದಿನಗಳನ್ನು ವರ್ಣಿಸುವುದರಲ್ಲಿಯೂ ಕಾಣಬಹುದು. 'ಸಂಗ್ಯನ ಅಪರಾಧ ಮತ್ತು ಸಾವು' ಬೆಳಗಾಂ ಜಿಲ್ಲೆಯ ಅಚ್ಚುಮೆಚ್ಚಿನ ಲಾವಣಿಯೆಂದು ಫ್ಲೀಟ್ ಅವರು ಹೇಳಿದ್ದರೂ ಪ್ರಸ್ತುತ ಲಾವಣಿಯಲ್ಲಿ ಬರುವ ಅತ್ಯದ್ಭುತ ವರ್ಣನೆಗಳನ್ನೂ ಕರುಳು ಮಿಡಿಯುವ ಸನ್ನಿವೇಶಗಳನ್ನೂ ಕಂಡಾಗ ಅದಕ್ಕಿಂತ ಇದೇ ಹೆಚ್ಚು ಪರಿಣಾಮಕಾರಿಯಾದ ಲಾವಣಿಯೆನ್ನಿಸಿಕೊಂಡಿದ್ದೀತು ಎನ್ನಿಸದಿರದು. ಕಿತ್ತೂರ ದೇಸಾಯಿಯರ ಮನೆತನ ಜನರ ಮನಸ್ಸನ್ನೂ ಅಭಿಮಾನವನ್ನೂ ಸೂರೆಗೊಂಡಿದ್ದ ರೀತಿಯನ್ನು ಇಲ್ಲಿನ ಒಂದು ವರ್ಣನೆಯಿಂದ ತಿಳಿಯಬಹುದು. ಈ ವರ್ಣನೆ ಬಹುಶಃ ಲಾವಣಿಕಾರನ ವೈಯಕ್ತಿಕ ಅಭಿಮಾನವಿರಬಹುದು ಎನ್ನಿಸಲು ಆಧಾರಗಳಿಲ್ಲ. ಈ ಸಂದರ್ಭವನ್ನು ನೋಡಿ: ಈರವ್ವ ಸೆರೆಸಿಕ್ಕಿ ಕಾಯವನ್ನು ತೊರೆಯಬೇಕೆಂಬ ಉದ್ದೇಶದಿಂದ ಅನ್ನ ನೀರು ಬಿಟ್ಟು ಬಿಟ್ಟ ಮೇಲೂ ನವಲಗುಂದದ ಕಾಡಸಿದ್ದನ ಬಳಿಗೆ ಹೋಗಿ ಮಿಂದು ಜಂಗಮತೀರ್ಥವನ್ನು ಪಡೆದು ಅಂಗದಮೇಲಿನ ಸ್ಮರಣೆಯನ್ನು ಮರೆತು ಲಿಂಗದ ಮೇಲೆ ಧ್ಯಾನ ಇಡುವುದೂ ಅಲ್ಲಿಂದ ಮರಳಿ ಧಾರವಾಡಕ್ಕೆ ಬರುವುದೂ—ಕಡೆಯ ಕಾಲದಲ್ಲಿ ಇವೆಲ್ಲ ಸರಿ ಎನ್ನಿಸಿದರೂ, ತಕ್ಕಡಿಯ ತುಂಬ ಬಂಗಾರ ತರಿಸುವುದೂ ತೂಕಮಾಡಿ ದಾನ ಕೊಡುವುದೂ ವಿಚಿತ್ರವಾಗಿ ಕಾಣುತ್ತವೆ. ಸೆರೆಸಿಕ್ಕಮೇಲೆ ಇವೆಲ್ಲ ಅವಳಿಗೆ ಎಲ್ಲಿ

ದೊರೆತುವು ? ಸರ್ವಸ್ವವೂ ತಮ್ಮೊಂದಿಗೇ ದೋಚಲ್ಪಟ್ಟಿರುವಾಗ ಇವೆಲ್ಲ ಸಾಧ್ಯವೇ? —ಎಂಬ ಸಂಶಯ ಸಹಜವಾಗಿಯೇ ಉಂಟಾಗುತ್ತದೆ. ಇದಕ್ಕಿಂತ ಹೆಚ್ಚಾಗಿ, ಈರವ್ವ ನನ್ನು ಸೆರೆಹಿಡಿದು ತರುವಾಗ ರಾಯನಾಯಕ ಬಂದಾನು ಎಂಬ ಭಯದಿಂದ ಬಿಚ್ಚು ಗತ್ತಿಯ ಪಹರೆಯನ್ನು ಅಣಿಮಾಡಿದವರು ಧಾರವಾಡದಿಂದ ನವಲಗುಂದದ ತನಕ ಹೋಗಲು ಹೇಗೆ ಬಿಟ್ಟರು? —ಎಂಬ ಸಂಶಯ ಪ್ರಬಲವಾಗಿ ಕಾಡುತ್ತದೆ. ಕಿತ್ತೂರ ದೊರೆಗಳ ಮೇಲೆ, ಅವರ ರಾಣಿವಾಸದ ಮೇಲೆ, ಜನರಲ್ಲಿದ್ದ ಅಭಿಮಾನವನ್ನೂ ತಮ್ಮ ಪ್ರಜೆಗಳ ಮೇಲೆ ದೊರೆಮನೆಯವರು ಇಟ್ಟಿದ್ದ ವಾತ್ಸಲ್ಯವನ್ನೂ ಮೆರೆದು ತಾನು ಸೈ ಎನ್ನಿಸಿಕೊಳ್ಳಲು ಲಾವಣಿಕಾರ ಈ ಪ್ರಸಂಗವನ್ನಿಲ್ಲಿ ಸೇರಿಸಿರಬಹುದೆ ? ಅಷ್ಟೆಲ್ಲವನ್ನೂ ದಾನ ಕೊಟ್ಟ ಈರವ್ವ, ಹಾಗೆ ದಾನ ಕೊಟ್ಟದ್ದರಿಂದ ಕಿತ್ತೂರ ದೌಲತ್ತು ಕಿರಿದಾಯಿತು ಎಂದು ಅಳುವುದು ಈ ಸಂದರ್ಭದಲ್ಲಿ ಎಷ್ಟು ಸಹಜ ? ಬಹುಶಃ ಕಿತ್ತೂರ ದೌಲತ್ತಿನ ಮೇಲೆ ಅವಳಿಗಿದ್ದ ಅಪಾರ ಪ್ರೇಮ ಅವಳಿಂದ ಹಾಗೆ ಮಾಡಿಸಿತೆ ? ಅದು ಏನೇ ಆಗಿರಲಿ, ಈರವ್ವ ಕಿತ್ತೂರ ನಾಡಿನಲ್ಲಿ ಒಬ್ಬ ಜನಪ್ರಿಯ ವ್ಯಕ್ತಿ ಎಂಬುದನ್ನು ಲಾವಣಿಯ ಕಡೆಯ ನುಡಿಗಳು ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿಸುತ್ತವೆ.

೪

ಫ್ಲೀಟರ ಸಂಗ್ರಹದಲ್ಲಿ, ಇಂಡಿಯನ್ ಆಂಟಿಕ್ವರಿ ಸಂಪುಟಗಳಲ್ಲಿ ಪ್ರಕಟವಾಗಿರುವುವು ಕೇವಲ ಐದು ಲಾವಣಿಗಳು. ಆಸಕ್ತಿಯುತವಾದುವು ಎಂದು ಅವರೇ ಹೇಳಿಕೊಂಡಿರುವ ಎಂಟು ಲಾವಣಿಗಳಲ್ಲಿ ಇನ್ನೂ ಮೂರು ಪ್ರಕಟವಾಗದೆ ಉಳಿದು ಹೋಗಿವೆ. ಈ ದೃಷ್ಟಿಯಿಂದ ಫ್ಲೀಟರ ಈ ಸಂಗ್ರಹ ಅಪೂರ್ಣ*. ಆದರೂ " ಅವರ ಸಂಗ್ರಹದ ಬಾಹುಳ್ಯಕ್ಕಿಂತ, ಸಂಗ್ರಹಣೆಯಲ್ಲಿ ಅವರು ತೋರಿರುವ ಒಪ್ಪ, ಓರಣ ಹಾಗೂ ಶಾಸ್ತ್ರೀಯ ದೃಷ್ಟಿಗಳು ಇಂದಿಗೂ ನಮಗೆ ಮೇಲ್ಪಂಕ್ತಿಯಾಗಿವೆ ".

ತಮ್ಮ ಆಜ್ಞೆಗೆ ಎದುರುಬಿದ್ದವರನ್ನು ಕಂಡರೆ ಬೆಂಕಿಯಾಗುತ್ತಿದ್ದ ಬ್ರಿಟಿಷರು ಪಕ್ಕಾ ಕುತಂತ್ರಿಗಳು ಎಂಬ ಅಂಶ ಬಹುಪಾಲು ಲಾವಣಿಗಳಲ್ಲಿ ವ್ಯಕ್ತವಾಗಿರುವುದನ್ನು ನೋಡಿದರೆ, ಅವರ ಬಗೆಬಗೆಯ ಕುತಂತ್ರಗಳಿಗೆ ಬಲಿಯಾದ ಸಂಗೊಳ್ಳಿ ರಾಯಣ್ಣನಂಥವರ ಮೇಲೆ, ಹಲಗಲಿಯ ಬೇಡರಂಥವರ ಮೇಲೆ, ಆ ಮೂಲಕ ನಮ್ಮ ಮೇಲೆಯೆ ನಾವು ಅನುಕಂಪದ ದೃಷ್ಟಿ ಹರಿಸಬೇಕಾಗುತ್ತದೆ.

ಪಾರ್ಸೀ ಮತ್ತು ಗುಜರಾತೀ ಭಾಷೆಯ ಕೆಲವು ಪ್ರೇಮಗೀತೆಗಳನ್ನೂ ಗುಜರಾತೀ ಲಾವಣಿಯನ್ನೂ ಕೊಡುವ ಪುತ್ಲೀಬಾಯಿ ಡಿ. ಎಚ್. ವಾಡಿಯಾ ಅವರು ಹಾಡುಗಾರಿಕೆಯ ಲಕ್ಷಣಗಳ ಯಾವ ಬಗೆಯ ಸೂಚನೆಯೂ ಇಲ್ಲದ ಹಿಂದೀ ಲಿಪಿಯ ಪಠ್ಯ ಮತ್ತು ಅಷ್ಟೇ ಮಟ್ಟಿನ ಅವ್ಯವಸ್ಥೆಯಿಂದ ಕೂಡಿರುವ ಭಾಷಾಂತರವನ್ನು ಕೊಡುತ್ತಾರೆ.

---

* ಫ್ಲೀಟರು ಸಂಗ್ರಹಿಸಿದ ಐದು ಐತಿಹಾಸಿಕ ಲಾವಣಿಗಳು—ಎಂಬ ಹೆಸರಿನಲ್ಲಿ ಪ್ರಕಟವಾದ ಗ್ರಂಥಕ್ಕೆ ಮಾತ್ರ ಅನ್ವಯಿಸುವ ಮಾತು. ಪ್ರಸ್ತುತ ಸಮಗ್ರ ಸಂಗ್ರಹಕ್ಕೆ ಅನ್ವಯಿಸುವುದಿಲ್ಲ.

ಹೆಣ್ಣುಮಕ್ಕಳಿಂದ ಅವು ಹಾಡಲ್ಪಡುತ್ತವೆ ಎಂದು ಹೇಳುವ ಅವರು ಅವನ್ನು ಹಾಡುವ ರೀತಿನೀತಿಗಳ ಬಗೆಗೆ ಏನನ್ನೂ ಹೇಳುವುದಿಲ್ಲ. ಹಿಂದೂಸ್ತಾನೀ ಮತ್ತು ಗುಜರಾತೀ ಪದಗಳ ಬೆರಕೆಯು ಇತರ ಪಾಠಗಳು ಸಿಕ್ಕುತ್ತವೆ ಎಂದು ಹೇಳುತ್ತ ಕೈಯಿಂದ ತಾಳ ಹಾಕುತ್ತ ಉರಿಯುವ ದೀಪದ ಸುತ್ತ ಸುತ್ತುತ್ತ ಹಾಡುತ್ತಾರೆ ಎಂದು ಹೇಳಿ ಪಠ್ಯದ ಭಾಷಾಂತರವನ್ನು ಪ್ರಾರಂಭಿಸಿಬಿಡುತ್ತಾರೆ. ಬರ್ಮಾ ಜಾನಪದದ ಬಗ್ಗೆ ಹೇಳುವ 'ಟಾ ಸೇನ್ ಕೊ' ಅವರು ಜಾನಪದವನ್ನಾಗಲಿ ಅದರ ಯಾವುದೇ ರೂಪದ ವಿವರಣೆಯನ್ನಾಗಲಿ ವಿಶ್ಲೇಷಣೆಯನ್ನಾಗಲಿ ನೀಡದೆ ಕೇವಲ ಕಥೆಯೊಂದರ ಭಾಷಾಂತರವನ್ನು ನೀಡುವುದರೊಂದಿಗೆ ತಮ್ಮ ಕೆಲಸ ಪ್ರಾರಂಭಿಸುತ್ತಾರೆ. ಆಳವಾದ ಅರ್ಥದ ಬಗ್ಗೆ ಶ್ಲಾಘಿಸಲಾಗುವ ಒಂದು ಪ್ರೇಮಗೀತೆಯನ್ನೂ ಅಲ್ಪಸ್ವಲ್ಪ ಪಾಠಾಂತರಗಳೊಡನೆ ಬರ್ಮಾದಾದ್ಯಂತ ಪ್ರಚಲಿತವಿರುವ ಶಿಶುಪ್ರಾಸವನ್ನೂ ಕುರಿತು ಬರೆಯುವ ಆರ್. ಸಿ. ಟೆಂಪಲ್ ಅವರೂ ಕೂಡ ಲಾವಣಿಯನ್ನು ಕುರಿತು ಇಲ್ಲಿ ಏನನ್ನೂ ಹೇಳುವುದಿಲ್ಲ. ತೆಲುಗು ಲಾವಣಿಗಳನ್ನು ಸಂಗ್ರಹಿಸುವ ಜೆ. ಎ. ಬಾಯ್ಲ್ ಅವರು ಕೆಲವು ಕಡೆ ಚೌಪದಿಗಳಾಗಿ ವಿಂಗಡಿಸುತ್ತಾರೆ ಅಷ್ಟೆ. ತೆಲುಗು ಜಾನಪದದ ಬಗ್ಗೆ ಬರೆಯುವ ಜಿ. ಆರ್. ಸುಬ್ರಾಮಯ್ಯ ಪಂತುಲು ಅವರೂ ಕೂಡ ಏನನ್ನೂ ಹೇಳದೆ ಕೇವಲ ಕಥೆಗಳನ್ನು ಕೊಡುತ್ತಾರೆ. ಕೆಲವು ಪ್ರೇಮಗೀತೆಗಳನ್ನೂ ಅವನ್ನು ಹಾಡುವ ಸಂದರ್ಭಗಳನ್ನೂ ವಿವರಿಸುವ ಎಸ್.ಎಂ. ನಟೇಶ ಶಾಸ್ತ್ರಿಗಳು ಧಾಟಿಯನ್ನಾಗಲಿ ಇತರ ವಿವರಗಳನ್ನಾಗಲಿ ಕುರಿತು ಏನನ್ನೂ ಹೇಳದೆ ಇಂಗ್ಲಿಷ್ ಲಿಪಿಯ ತೆಲುಗು ಪಠ್ಯವನ್ನೂ ಇಂಗ್ಲಿಷ್ ಭಾಷಾಂತರವನ್ನೂ ಕೊಟ್ಟು ಸುಮ್ಮನಾಗುತ್ತಾರೆ. ಟಿಬೆಟನ್ ಜಾನಪದದ ಬಗ್ಗೆ ಬರೆಯುವ ಎಲ್.ಎ. ವಡ್ಡೆಲ್ ಅವರು ಒಂದು ಪುಟ್ಟ ಜನಪದ ಕಥೆಯನ್ನು ಮಾತ್ರ ಹೇಳುತ್ತಾರೆ. ಉತ್ತರ ಭಾರತದ ಕೆಲವು ಲಾವಣಿಗಳನ್ನು ಸಂಗ್ರಹಿಸಿರುವ ವಿಲಿಯಂ ಕ್ರೂಕ್ ಅವರು ಕೇವಲ ಪಠ್ಯ ಮತ್ತು ಭಾಷಾಂತರಗಳನ್ನು ಕೊಟ್ಟು ಉಳಿದದ್ದೇನನ್ನೂ ಹೇಳುವುದಿಲ್ಲ. ಬ್ರಾಹೂಇ ಜಾನಪದವನ್ನು ಕುರಿತು ಬರೆಯುವ ಜಿ. ಷರ್ಟ್ ಅವರು, ಹಾಡುವವರು ಸಾಮಾನ್ಯವಾಗಿ ವಿದೇಶೀಯ ಧಾಟಿಯನ್ನು ಇಚ್ಛಿಸುತ್ತಿದ್ದರು ಎಂದು ಮಾತ್ರ ಹೇಳಿ ಒಂದು ಪುಟ್ಟ ಲಾವಣಿಯನ್ನು ಕೊಡುತ್ತಾರೆ.*

ಈ ಎಲ್ಲವನ್ನೂ ಹಿನ್ನೆಲೆಯಾಗಿಟ್ಟುಕೊಂಡು ನೋಡುವಾಗ ಫ್ಲೀಟರ ಕೆಲಸ ಅದ್ಭುತವಾಗಿ ಕಾಣುವುದರಲ್ಲಿ ಆಶ್ಚರ್ಯವೇನಿಲ್ಲ. ಪ್ರತಿಘಟ್ಟದಲ್ಲೂ ಹಾಡಿನ ಧಾಟಿ ಏರಿಳಿತಗಳನ್ನು ನಿರ್ದಿಷ್ಟವಾಗಿ ಹೇಳುವ ಅವರ ಸಂಶೋಧನೆಯ ಸೂಕ್ಷ್ಮತೆ ದಂಗು ಬಡಿಸುತ್ತದೆ, ಮೂಕರನ್ನಾಗಿಸುತ್ತದೆ. ಧಾಟಿಯನ್ನು ಗುರುತಿಸುವಾಗ ಚ್ಯೇ ಅಥವಾ ಚ್ಯಾಲ

---

*ಈ ಪ್ಯಾರಾದ ಸಂಗತಿಗಳೆಲ್ಲ ಫ್ಲೀಟರ ಲಾವಣಿಗಳಿಗಾಗಿ ಇಂಡಿಯನ್ ಆಂಟಿಕ್ವರಿ ಸಂಪುಟಗಳನ್ನು ತಡಕುತ್ತಿದ್ದಾಗ ಸಿಕ್ಕಿದಂಥವು.

(with a change of meter), ಯೇರ (Raising the voice) ಇಳವ (Lowering the voice)—ಮುಂತಾದ ಅವರ ವಿವರಗಳು ವಿಸ್ಮಯಕಾರಿಯಾಗಿವೆ. ಇಷ್ಟೇ ಅಲ್ಲದೆ ತಮ್ಮ ಲೇಖನದಲ್ಲಿ ಈ ಲಾವಣಿಗಳ ಛಂದಸ್ಸು ಪ್ರಾಸ ಅನುಪ್ರಾಸ ರಾಗಗಳನ್ನು ಕುರಿತೂ ವಿವೇಚಿಸಿರುವುದು ಅವರ ವಿದ್ವತ್ತಿಗೂ ಪ್ರತಿಭೆಗೂ ಜ್ವಲಂತ ಸಾಕ್ಷಿಯಾಗಿವೆ. ೧೮೮೫ರಲ್ಲಿ ಅವರು ಲಾವಣಿಗಳನ್ನು ಪ್ರಕಟಿಸುವ ಮೊದಲು ಎಲ್ಲ ಲಾವಣಿಗಳನ್ನೂ ಚೆನ್ನಾಗಿ ಅಭ್ಯಾಸ ಮಾಡಿ, ತಮ್ಮ ಅನುಭವಗಳನ್ನೂ ಸೇರಿಸುತ್ತ, 'ಕನ್ನಡ ಲಾವಣಿಗಳ ಸಂಗ್ರಹ' ಎಂಬ ಲೇಖನವನ್ನು ಬರೆಯುತ್ತಾರೆ. ಲಾವಣಿಗಳ ಪ್ರಕಟಣೆಗೆ ಆ ಲೇಖನ ನಾಂದಿ ಹಾಡುತ್ತದೆ. ಅದಲ್ಲದೆ ಪ್ರತಿ ಲಾವಣಿಯ ಹಿನ್ನೆಲೆಯಲ್ಲಿರುವ ರಾಜಕೀಯ ಧಾರ್ಮಿಕ ಸಾಂಸ್ಕೃತಿಕ ಚಾರಿತ್ರಿಕ ಅಂಶಗಳನ್ನು ಕುರಿತು ಅವರು ಆ ಲಾವಣಿಗಳ ಮೊದಲಲ್ಲಿ ಪ್ರತ್ಯೇಕ ಲೇಖನಗಳನ್ನೂ ಒದಗಿಸುತ್ತಾರೆ. ಸಮರ್ಥ ಭಾಷಾಂತರವನ್ನೂ ಅಡಿಟಿಪ್ಪಣಿಗಳಲ್ಲಿ ಎಷ್ಟೋ ಪದಗಳ ಹಿನ್ನೆಲೆಮುನ್ನೆಲೆಗಳನ್ನೂ ಅರ್ಥಗಳನ್ನೂ ಕೊಡುತ್ತಾರೆ. ಇಷ್ಟೆಲ್ಲವನ್ನೂ ಅವರು ಒದಗಿಸಿಕೊಟ್ಟಿರುವುದನ್ನು ಕಂಡಾಗ ಅವರು ಅದಕ್ಕೆ ಹಿಂದೆ ಅನೇಕ ವರ್ಷಗಳು ಅಧ್ಯಯನದಲ್ಲಿ ತೊಡಗಿದ್ದಿರಬೇಕು ಎನ್ನಿಸುವುದು ಸಹಜ. ಅಧ್ಯಯನಕ್ಕೆ ಸಾಮಗ್ರಿಯಾಗಿ ಸಂಗ್ರಹಿತ ಸಾಹಿತ್ಯ ಅವರಲ್ಲಿದ್ದಿರಲೇಬೇಕು. ಆದ್ದರಿಂದ ಮೊದಲ ಲಾವಣಿ ಪ್ರಕಟವಾಗುವುದಕ್ಕೆ ಬಹಳ ಮುಂಚೆಯೇ ಅವರು ಸಂಗ್ರಹಕಾರ್ಯದಲ್ಲಿ ತೊಡಗಿರಬೇಕೆಂದು ಹೇಳಲು ಅವಕಾಶವಿದೆ. ಕರ್ತವ್ಯಾರ್ಥವಾಗಿ ಹಳ್ಳಿಗಳಿಗೆ ಹೋಗಿ ಬಿಡಾರ ಹೂಡುತ್ತಿದ್ದ ಸಂದರ್ಭಗಳಲ್ಲಿ ಹಾಡುಗಾರರನ್ನು ತಮ್ಮ ಬಿಡಾರದ ಬಳಿಗೇ ಕರೆಸಿಕೊಂಡು ಬೆಳದಿಂಗಳ ರಾತ್ರಿಯಲ್ಲಿ ಹೇಳಿಸಿ ಸಂಗ್ರಹಿಸುತ್ತಿದ್ದರು. ಅಂಥ ಸಂದರ್ಭಗಳಲ್ಲಿ ಸುತ್ತಮುತ್ತಲ ಊರುಗಳ ಜನರು ಬಿಡಾರದ ಸುತ್ತ ಮರಗಿಡಗಳಡಿಯಲ್ಲಿ ಇಡೀರಾತ್ರಿ ಕೇಳುತ್ತ ಕುಳಿತಿರುತ್ತಿದ್ದುದೇ ಆ ಲಾವಣಿಗಳ ಜನಪ್ರಿಯತೆಯನ್ನು ಸಾರುತ್ತದೆ.

ಉತ್ತರ ಕರ್ಣಾಟಕದಲ್ಲಿ ಪ್ರಬಲರಾಗಿದ್ದ ಮುಸ್ಲಿಮರ ಪ್ರಭಾವ ಭಾಷೆಯಲ್ಲಿ ಹೆಚ್ಚಾಗಿ ಕಾಣಿಸುತ್ತದೆ. ಉರ್ದೂ ಪದಗಳು ಹೇರಳವಾಗಿ ಬಳಕೆಯಾಗಿವೆ. ಅಷ್ಟೇ ಮಟ್ಟಿನ ಶುದ್ಧ ಜನಪದ ರೂಪಗಳೂ ಇವೆ. ಹಳೆಯ ಮೈಸೂರಿಗರಿಗೆ ಅರ್ಥವಾಗದ ಅಲ್ಲಿನ ಜೀವಂತ ರೂಪಗಳೂ ಹೆಚ್ಚಾಗಿಯೇ ಕಾಣಸಿಗುತ್ತವೆ.

ಪಲ್ಲವಿಯ ಪದ್ಯದಲ್ಲೆ ಇಡೀ ಕಥೆಯ ಸಾರ ಅಡಗಿರುವುದು ಈ ಲಾವಣಿಗಳಲ್ಲಿ. ಎದ್ದು ಕಾಣುವ ಒಂದು ವೈಶಿಷ್ಟ್ಯ. ಲಾವಣಿಗಳ ಉದ್ದಕ್ಕೂ ಅಲ್ಲಲ್ಲಿ ಕಾಣುವ ಉದ್ಗಾರಗಳು ಸಂದರ್ಭಕ್ಕೆ ತಕ್ಕ ಪರಿಣಾಮ ಬೀರುವುದರಲ್ಲಿ ಯಶಸ್ವಿಯಾಗಿವೆ.

ಬ್ರಿಟಿಷರ ಆಳ್ವಿಕೆಯ ಬಗ್ಗೆ ಈ ಜನಗಳ ಅಪ್ಪಟ ಅಭಿಪ್ರಾಯ ಏನು ಎಂಬ ಪ್ರಧಾನಾಂಶವನ್ನು ಕಂಡುಕೊಳ್ಳುವುದಕ್ಕಾಗಿಯೆ ಈ ಅತಿಸುಗಮ ಹಾದಿಯನ್ನು ಫ್ಲೀಟ್ ಅವರು ಹಿಡಿದಿದ್ದರೂ ಕೂಡ, ಆ ಮೂಲಕ ಅವರು ಸರಕಾರದ ಪ್ರೀತಿಯನ್ನು ಹೆಚ್ಚಾಗಿ ಗಳಿಸಿಕೊಂಡಿದ್ದರೂ ಕೂಡ, ನಮ್ಮ ಜನಪದ ಬದುಕಿನ ಆ ಕಾಲದಲ್ಲಿದ್ದ ಸ್ಥಿತಿಗತಿಗಳನ್ನು ಅರಿಯಲು ಸುಲಭಮಾರ್ಗ ಹಾಕಿಕೊಟ್ಟಿರುವುದರಿಂದ ಅವರನ್ನು ಅಭಿನಂದಿಸಲೇ

ಬೇಕಾಗಿದೆ. ಅವರ ಈ ದೃಷ್ಟಿಸಂಕೋಚ ಇಲ್ಲದಿದ್ದರೆ, ಕನ್ನಡದ ಜನಪದ ಬದುಕಿನ ಬಗ್ಗೆ ಜನಪದ ಸಾಹಿತ್ಯದ ಬಗ್ಗೆ ನಿಜವಾದ ನಿಷ್ಠೆಯನ್ನು ಬೆಳೆಸಿಕೊಂಡು ಇನ್ನೂ ಹೆಚ್ಚಿನ ಮುತುವರ್ಜಿಯಿಂದ ಕೆಲಸ ಮಾಡಿದ್ದಿದ್ದರೆ, ಬಹುಶಃ ಅವರು ಕನ್ನಡ ಜಾನಪದ ಲೋಕದ ಧ್ರುವತಾರೆಯಾಗಿ ನಿಲ್ಲುತ್ತಿದ್ದರು.* ಆದರೂ, ಈಗ ಮಾಡಿರುವಷ್ಟೇ ಕೆಲಸ ವನ್ನು—ಉದ್ದೇಶ ಯಾವುದಾಗಿದ್ದರೂ—ಅಚ್ಚುಕಟ್ಟಾಗಿಯೇ ಮಾಡಿದ್ದಾರೆ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. "ಒಟ್ಟಿನಲ್ಲಿ ಕನ್ನಡದಲ್ಲಿ ಯಾವ ಸಂಗ್ರಹಕನೂ ತೋರದ ಉತ್ತಮ ವೈಜ್ಞಾನಿಕ ದೃಷ್ಟಿಯನ್ನು ಅವರು ಕನ್ನಡದ ಆದ್ಯಸಂಗ್ರಹಕರಾಗಿ ತೋರಿ ಹೋಗಿದ್ದಾರೆ."

—ಕ್ಯಾತನಹಳ್ಳಿ ರಾಮಣ್ಣ

---

*ಈ ಎರಡು ವಾಕ್ಯಗಳು ತೀವ್ರತರವಾದ ಆಕ್ಷೇಪಗಳನ್ನೆದುರಿಸಿವೆ. ಬ್ರಿಟಿಷ್ ಸರಕಾರದ ಬಗ್ಗೆ ಜನಾಭಿಪ್ರಾಯ ಸಂಗ್ರಹಣೆ ಫ್ಲೀಟರ ಉದ್ದೇಶ ಆಗಿರಲಿಲ್ಲ ಎಂದು ಹೇಳಲು ಪುರಾವೆಗಳಿಲ್ಲ. ಮತ್ತು ಹಾಗೆ ಮಾಡುವುದರಿಂದ ಸರಕಾರದ ಪ್ರೀತಿಯನ್ನು ಅವರು ವಿಶೇಷವಾಗಿ ಬೆಳೆಸಿಕೊಂಡಿರಲಿಲ್ಲ ಎಂದು ಹೇಳಲು ಕೂಡ ಪುರಾವೆಗಳಿಲ್ಲ. ಆ ಕಾಲದ ಪ್ರತಿಯೊಂದು ಆಡಳಿತದಲ್ಲೂ ಬೇಹುಗಾರಿಕೆಯ ವ್ಯವಸ್ಥೆಯನ್ನು ಕಂಡ ಕಣ್ಣು, ಅದೇ ಕಾಲದ ನಿರ್ದಿಷ್ಟ ಆಡಳಿತಪದ್ಧತಿಯೊಂದರ ಬಗ್ಗೆ ಕುತೂಹಲ ವ್ಯಕ್ತಪಡಿಸುವುದು ಅಸಹಜವಲ್ಲ ಎಂಬುದು ನನ್ನ ಪ್ರಾಮಾಣಿಕ ಅಭಿಪ್ರಾಯ. "ಧ್ರುವತಾರೆಯಾಗಿ ನಿಲ್ಲುತ್ತಿದ್ದರು" ಎಂಬ ಮಾತು ಕುತೂಹಲದ ಹಿನ್ನೆಲೆಯುಳ್ಳದ್ದೇ ಹೊರತು ದುರುದ್ದೇಶದ ಹಿನ್ನೆಲೆ ಯುಳ್ಳದ್ದಲ್ಲ. ಏಕೆಂದರೆ, ಫ್ಲೀಟ್ ಅವರು ಕನ್ನಡ ಜಾನಪದ ಲೋಕದ ಧ್ರುವತಾರೆ ಎಂಬುದು ಸೂರ್ಯ ಪ್ರಕಾಶದಷ್ಟೆ ಸತ್ಯವಾದ ಸಂಗತಿಯಾಗಿದೆ. ಈ ಬಗ್ಗೆ ಭಿನ್ನಾಭಿಪ್ರಾಯಕ್ಕೆ ಎಡೆಯೇ ಇಲ್ಲ.

'ದೃಷ್ಟಿಸಂಕೋಚ' ಎಂಬ ಮಾತು 'ಸೀಮಿತ ಅವಕಾಶ' ಎಂಬ ಅರ್ಥದಲ್ಲಿ ಬಳಕೆಯಾಗಿದೆ ಯಷ್ಟೆ. ಫ್ಲೀಟರಿಗಿದ್ದ ಅವಕಾಶ ಎಷ್ಟರಮಟ್ಟಿಗೆ ಸೀಮಿತವಾಗಿತ್ತು ಎಂಬುದಕ್ಕೆ ಅವರ ಅಪ್ರಕಟಿತ ಹಸ್ತಪ್ರತಿಯಲ್ಲಿನ ಅನೇಕರ ಕೈಬರಹಗಳೇ ಇಂದಿಗೂ ಸಾಕ್ಷಿಯಾಗಿ ನಿಂತಿವೆ.

ಕನ್ನಡ ಲಾವಣಿಗಳ ಸಂಗ್ರಹ*

ಇತ್ತೀಚೆಗೆ ಭಾರತದ ಜಾನಪದ ಗಮನಾರ್ಹವಾಗುತ್ತ ನಡೆದಿದೆ. ಹತ್ತು ವರ್ಷಗಳ ಅಥವಾ ಅದಕ್ಕಿಂತ ಹಿಂದೆ ಚಾರ್ಲ್ಸ್ ಇ. ಗೋವರ್ ಅವರ Folk-songs of Southern India ಎಂಬ ಅತ್ಯಂತ ಉತ್ತಮ ಅಭಿರುಚಿಯುಳ್ಳ ಸಂಗ್ರಹ ಪ್ರಕಟವಾಗಿದೆ. ಅನಂತರ, ಈ ಪತ್ರಿಕೆಯಲ್ಲಿ ಪ್ರಕಟವಾದ ಅಮೂಲ್ಯ ಲೇಖನಗಳ ಜೊತೆಗೆ ವಿಶೇಷ ಮಾಸಿಕವಾದ Culcutta Review ದಲ್ಲಿ ಐತಿಹ್ಯಗಳನ್ನು ಕುರಿತು ಆರ್.ಸಿ. ಟೆಂಪಲ್ ಅವರು ಸಂಗ್ರಹಿಸಿದ Legend of the Punjab ಎಂಬುದು ಉತ್ತರಭಾರತದ ಐತಿಹ್ಯಗಳು ಮತ್ತು ಜಾನಪದಕ್ಕೆ ಅವರು ನೀಡಿದ ಕಾಣಿಕೆಯಾಯಿತು; ಅದು ಆ ಪತ್ರಿಕೆಯ ಒಂದು ಸಂಪುಟದುದ್ದಕ್ಕೂ ಮುಂದುವರಿಯಿತು. ಜಿ. ಎ. ಗ್ರಿಯರ್‌ಸನ್ ಅವರಿಂದ ಪ್ರಕಟಿಸಲ್ಪಟ್ಟ ಆಲ್ಹಾ ಮತ್ತು ರೂದಲ್‌ನ ಭೋಜಪುರಿ ಮಹಾಕಾವ್ಯದಲ್ಲಿ ಇನ್ನೊಂದು ಬಗೆಯನ್ನು ಕಾಣುತ್ತೇವೆ ಅದು ಜಾನಪದಕ್ಕೆ ಸಂಬಂಧಿಸಿದಂತೆಯೇ ಐತಿಹಾಸಿಕ ಮತ್ತು ಭಾಷಾವಿಜ್ಞಾನಗಳ ಬಗ್ಗೆಯೂ ಹೆಚ್ಚು ಭರವಸೆ ಮೂಡಿಸುತ್ತದೆ.

ಈ ದೇಶದ ಸಾಹಿತ್ಯದಲ್ಲಿ ಮತ್ತೊಂದು ಶಾಖೆಯಿದೆ. ಅದು ಜಾನಪದದಂತೆ ಹೆಚ್ಚು ಪರಿಚಯವಿಲ್ಲದ್ದು ಮತ್ತು ಅದರಂತೆಯೇ ಸಾಹಿತ್ಯಕ ಆಡಂಬರವಿಲ್ಲದ್ದು; ಆದರೂ ಗಮನಾರ್ಹವಾದದ್ದು. ಅದೇ ಈ ಶತಮಾನದ ಜನಪ್ರಿಯ ಲಾವಣಿಗಳ ಶಾಖೆ. ಈ ಲಾವಣಿಗಳು ಇತ್ತೀಚಿನ ಐತಿಹಾಸಿಕ ಮತ್ತು ರಾಜಕೀಯ ಘಟನೆಗಳನ್ನು ನೆನಪು ಮಾಡಿಕೊಡುವಂಥವು. ಅಲ್ಲದೆ, ಕೆಳವರ್ಗದ ಬಹಳಷ್ಟು ಜನರಲ್ಲಿ ನಿಕಟವಾಗಿ ಮತ್ತು ವೈಯಕ್ತಿಕವಾಗಿ ಸಾಕಷ್ಟು ಪ್ರಾಮುಖ್ಯ ಪಡೆದಿವೆ.

ಬ್ರಿಟಿಷ್ ಅಧಿಕಾರದ ಏಕೀಕರಣದ ಸಮಯದಲ್ಲಿ ಸ್ಥಳೀಯ ಆಳ್ವಿಕೆಯಿಂದುಂಟಾಗಿದ್ದ, ಪರಂಪರಾಗತ ಪ್ರಭಾವಕ್ಕೆ ಸಿಕ್ಕಿಬಿದ್ದಿದ್ದ ಕಾನೂನುರಹಿತ ಜೀವನಕ್ಕೆ ಜನ ಒಗ್ಗಿಹೋಗಿದ್ದರು. ಪ್ರತಿಯೊಬ್ಬನೂ ತನ್ನ ನೆರೆಹೊರೆಯವರೊಂದಿಗೆ ವಿರೋಧಿಯಾಗಿದ್ದಾಗ, ಅಧಿಕಾರಕ್ಕೆ ಬಂದ ಬ್ರಿಟಿಷ್ ಆಳ್ವಿಕೆಯ ಕಾನೂನು ಕಟ್ಟಳೆಗಳು ಈ ಎಲ್ಲರಿಗೂ ವಿರುದ್ಧವಾದುದರಿಂದ, ಶಾಂತಿ ದಯೆ ಮತ್ತು ನಿಯಮಿತ ಅಧಿಕಾರಿಗಳಿಗೆ ನಿರ್ವಾಹವಿಲ್ಲದೆ ಅವರು ವಿಧೇಯರಾಗಬೇಕಾಯಿತು. ಈ ಸಮಯದಲ್ಲಿ, ಕನ್ನಡ ಮತ್ತು ಮರಾಠಾ ರಾಜ್ಯಗಳಲ್ಲಿ ಹರಡಿಕೊಂಡಿದ್ದ ಘಟ್ಟಗಳಲ್ಲಿ, ಅದರಲ್ಲೂ, ನೈಸರ್ಗಿಕ ಕೋಟೆಗಳಿಂದ ಆವೃತವಾಗಿ ಅಜೇಯ ಆಶ್ರಯಗಳಾಗಿದ್ದ ದಟ್ಟವಾದ ಪಶ್ಚಿಮ ಘಟ್ಟಗಳಲ್ಲಿ ಬ್ರಿಟಿಷ್ ಆಳ್ವಿಕೆಯ ಪ್ರವೇಶದ ವಿರುದ್ಧ ಮೊದಮೊದಲು ಅಂಥ ವಿರೋಧವೇನೂ

---

* A Selection of Kanarese Ballads—John Faithful Fleet; Indian Antiquary; 1885; Vol. 14; p. 293.

ಇರಲಿಲ್ಲ. ಕಾಡುವಂಥ ಬಂಡಾಯ ಆನಂತರ ಕಂಡುಬಂದರೂ ಅದು ಹುರುಳಿಲ್ಲದ್ದಾಗಿ ಹೋಯಿತು. ಈ ಘಟನೆಗಳನ್ನೂ ಪ್ರಸಿದ್ಧ ಪುರಾತನ ಸ್ಥಳಗಳ ಪತನವನ್ನೂ ವಿವರಿಸುವ ಲಾವಣಿಗಳು ದೇಶದಲ್ಲೆಲ್ಲ ಹೇರಳವಾಗಿವೆ.

ಹಾಗೆಯೇ, ಸಮಾಜದ ಬಹುಪಾಲು ಗಮನವನ್ನು ಸೆಳೆಯುವ ಸಾಮಾನ್ಯ ಅಭಿರುಚಿಯ ವಸ್ತುಗಳನ್ನುಳ್ಳ ಹಾಡುಗಳು ಇಂದಿಗೂ ಹಾಡಿಸಿಕೊಳ್ಳುತ್ತಿವೆ. ನಿರಾಯುಧ ಕಾಯಿದೆ, ರೆವಿನ್ಯೂ ಸರ್ವೆ ಇಲಾಖೆಯ ಸ್ಥಾಪನೆ, ಆದಾಯ ತೆರಿಗೆಯ ಪ್ರವೇಶ ಮುಂತಾದುವು ಅಂಥವುಗಳಲ್ಲಿ ಕೆಲವು. ಹಳ್ಳಿಯ ಲೇವಾದೇವಿಯವನ ಅಪ್ರಾಮಾಣಿಕತೆ ಮತ್ತು ದಬ್ಬಾಳಿಕೆಗಳಿಂದ ನಿರಾಶೆಯ ದವಡೆಗೆ ಸಿಕ್ಕಿದ ಬೇಸಾಯಗಾರನ ಸಂಗತಿ, ಕೊನೆಗೆ ಬೇಸಾಯಗಾರ ತನ್ನ ನಾಶವನ್ನು ತಾನೇ ತಂದುಕೊಂಡ ಎಂಬಂತೆ ತಿರುವು ಪಡೆಯುವ ವಿಚಿತ್ರ ಸಂದರ್ಭಗಳೂ ಲಾವಣಿಗೆ ವಸ್ತುವಾಗಿವೆ. ಜನರಿಗೆ ತಿಳಿಯದ ಕಾನೂನುಗಳಿಂದ ಜೀವವನ್ನೇ ದಂಡವಾಗಿ ತೆರಬೇಕಾಗಿ ಬರುವ ಪರಿಸ್ಥಿತಿಯೂ ವಸ್ತುವಾಗುತ್ತದೆ.

ನಾನು ಮೇಲೆ ಹೇಳಿದಂತೆ ಈ ಜನಪ್ರಿಯ ಲಾವಣಿಗಳಲ್ಲಿ ಸಾಹಿತ್ಯಕ ಆಡಂಬರವೇನೂ ಇಲ್ಲ. ದೇಶೀಯ ಭಾಷೆಗಳ ಬಗ್ಗೆ ನನಗಿರುವ ಜ್ಞಾನ ಪ್ರಮುಖವಾಗಿ ಚಿತ್ರಿಸುವಂತೆ ಪೂರ್ವಕಾಲದ್ದೇ ಆಗಲಿ ಮಧ್ಯಮಕಾಲೀನದ್ದೇ ಆಗಲಿ ಆಧುನಿಕದ್ದೇ ಆಗಲಿ, ವಾಸ್ತವವಾಗಿ ಈ ಲಾವಣಿಗಳಿಗೂ ಕೃತಕರಚನೆಗಳಿಗೂ ಅಂಥ ದೊಡ್ಡ ವ್ಯತ್ಯಾಸವೇನೂ ಕಾಣುವುದಿಲ್ಲ. ಅನಕ್ಷರಸ್ಥ ಹಳ್ಳಿಗರಿಂದ ರಚಿಸಲ್ಪಡುವುದರಿಂದ ವಾಕ್ಸಂಪ್ರದಾಯದಲ್ಲಿ ದೊರೆತದ್ದನ್ನೇ ಅವರು ನಮಗೆ ನೀಡುವುದರಿಂದ ಭಾಷಾ ವಿಜ್ಞಾನದ ಮೌಲ್ಯವೂ ಅಷ್ಟರಮಟ್ಟಿಗೆ ಸೀಮಿತವೆಂದೇ ಹೇಳಬೇಕು. ದೇಶೀಯವೆಂಬಂತೆಯೇ ಅದು ಹಾಡಲ್ಪಟ್ಟರೂ ಎರವಲು ಪದಗಳ ಮತ್ತು ನುಡಿಗಟ್ಟುಗಳ ಮಿಶ್ರಣದ ಪ್ರಮಾಣ ಅದನ್ನು ಕಟ್ಟಿ ಹಾಡುವವರನ್ನು ಅವಲಂಬಿಸಿರುತ್ತದೆ. ನಮ್ಮ ಪದ್ಧತಿ ಮತ್ತು ಆಡಳಿತಗಳನ್ನು ಕುರಿತು ಮತ್ತು ಆ ಆಡಳಿತ ಪರಿಚಯಿಸುತ್ತಿದ್ದ ಕಡ್ಡಾಯಮಾಡುತ್ತಿದ್ದ ತರತರದ ಆಲೋಚನೆಗಳನ್ನು ಕುರಿತು ಅವರು ಕೊಡುವ ಅಪ್ಪಟ ಸ್ಥಳೀಯ ದೃಷ್ಟಿಯಲ್ಲಿ ಅವರ ಚಾರಿತ್ರಿಕ ಮತ್ತು ರಾಜಕೀಯ ಮೌಲ್ಯಗಳು ಮೈಗೂಡಿರುತ್ತವೆ. ಅವರ ಆ ದೃಷ್ಟಿ ಯೂರೋಪಿಯನ್ನರ ಕಿವಿಗಳನ್ನೆಂದೂ ಉದ್ದೇಶಿಸಿದ್ದಲ್ಲ. ಪ್ರಸಿದ್ಧ ಘಟನೆಗಳಲ್ಲಿ ಪ್ರಮುಖ ಪಾತ್ರ ವಹಿಸುವ ಮತ್ತು ಕೆಳವರ್ಗದವರಿಗಾಗಿ ಸರ್ಕಾರದೊಡನೆ ನಿಕಟ ಸಂಪರ್ಕವನ್ನಿಟ್ಟುಕೊಂಡು ಜನಪ್ರಿಯರಾಗಿದ್ದ ಸ್ಥಳೀಯ ಅಧಿಕಾರಿಗಳು ಈ ಹಾಡುಗಳಲ್ಲಿ ಸತತವಾಗಿ ಬರುತ್ತಿರುತ್ತಾರೆ. ರೂಢಿಯಾಗಿಹೋಗಿರುವ ಸ್ಥಳೀಯ ಲಕ್ಷಣಗಳನ್ನುಳ್ಳ ಚಾತುರ್ಯಪೂರ್ಣ ಚಿತ್ರಗಳೋ, ಇಲ್ಲದಿದ್ದರೆ, ಈ ನಾಡಿನಲ್ಲಿ ಅಧಿಕಾರದ ಅನುಭವ ಹೇರಳವಾಗಿರುವವರ ಚಿತ್ರಗಳೋ ಈ ಹಾಡುಗಳಲ್ಲಿ ಕಂಡುಬರುತ್ತಿರುತ್ತವೆ. ಹೀಗೆ, ನಾನು ಕೊಡುವ ಮೊದಲ ಲಾವಣಿಯಲ್ಲಿ, ಸಮರ್ಥ ರಾಣಿ ವಿಕ್ಟೋರಿಯಾ ಅವರು ಖುದ್ದಾಗಿ ಬೊಂಬಾಯಿಗೆ ಬಂದಿದ್ದಾಗ ಧಾರವಾಡದಿಂದ ನ್ಯಾಯಾಧೀಶರ

ವರದಿಯನ್ನು ತರಿಸಿಕೊಂಡು ತಾವೇ ಪರಿಶೀಲಿಸಿ, ಗ್ರಾಮಾಂತರ ಪ್ರದೇಶಗಳಲ್ಲಿ ಉಳಿದು ಬಂದಿರುವ ನಂಬಿಕೆಯನ್ನು ಎತ್ತಿ ತೋರಿಸಿದ್ದಾರೆ. ರಾಯಣ್ಣನ ದಂಗೆಯ ಸುದ್ದಿ ತಲಪಿದಾಗ ನ್ಯಾಯಾಧೀಶ 'ಕಳೆದುಹೋದ ಸಂಗತಿ'ಯ ಬಗ್ಗೆ ವೃಥಾ ತೊಂದರೆ ಅನಗತ್ಯ ಎಂಬ ಉಲ್ಲಾಸಕರ ವಿವರಣೆಯನ್ನು ಮೊದಲು ಹಾರೈಸಿದ್ದ. ಆಮೇಲೆ, ಆ ದಂಗೆಯು ನಿಜವಾದ ತಿಳಿವಳಿಕೆಯುಂಟಾದಾಗ ಹಲ್ಲುಹಲ್ಲುಕಡಿದು ರೋಷದಿಂದ ಮುಂಗೈಯನ್ನು ಕಚ್ಚಿ ಹ್ಯಾಟನ್ನು ಬಿಸಾಡಿ ವಿಚಾರಣೆಯ ವರದಿಯನ್ನು ಬರೆಯಲು ಕುಳಿತ. ಯುರೋಪಿಯನ್ನರ ಕಿವಿಗೆ ಬೀಳಲೆಂದೇನೂ ಕಟ್ಟಿಲ್ಲದ ಹಾಡಿನಲ್ಲಿ ರಕ್ಷಿಸಲ್ಪಟ್ಟಿರುವಂತೆಯೇ ದುಡುಕಿನ ತೀರ್ಪನ್ನು ಪ್ರಯಾಸದಿಂದ ಬರೆದ. ವಿವರಣೆ ಉದ್ದಕ್ಕೂ ವಿಶಿಷ್ಟತೆಯಿಂದ ಕೂಡಿತ್ತು. ಡಂಗುರ ಹೊಡೆಸಿ ಸಾರಿಸಿದ ಬಹುಮಾನದ ಆಸೆಗೆ ಮೂವರು ವಿಶ್ವಾಸಘಾತಕರು ಪಕ್ಕಾದರು. ನ್ಯಾಯಾಧೀಶರಿಗೆ ಔಪಚಾರಿಕ ಸೂಚನೆ ನೀಡುವುದಕ್ಕೆ ಮುಂಚೆಯೇ ತಮ್ಮ ತಮ್ಮಲ್ಲೇ ಒಪ್ಪಿಗೆ ಪತ್ರ ಮಾಡಿಕೊಂಡ ಅವರು ಒಟ್ಟಾಗಿ ರಾಯಣ್ಣನನ್ನು ಮೋಸದಿಂದ ಹಿಡಿದುಕೊಡಲು ಒಳಸಂಚು ಹೂಡಿದರು. ರಾಯಣ್ಣ ತಮ್ಮ ಶಕ್ತಿಗೆ ಎಟುಕುವಷ್ಟು ಮಟ್ಟಿಗೆ ವಿಶ್ವಾಸಕ್ಕೆ ಪಾತ್ರರಾಗುವ ಮೂಲಕ ಮೆಲ್ಲಮೆಲ್ಲಗೆ ಗುಪ್ತವಾಗಿ ಕೆಲಸಮಾಡಿ ಯಶಸ್ವಿಯಾದರು. ಇಂಥ ಧೈರ್ಯಶಾಲಿಗೆ ಸಾವಿಗಿಂತ ಮೇಲಾದ ವಿಧಿಯೊಂದನ್ನು ವಿಧಿಸುವ ಮಟ್ಟದಲ್ಲಿ ನ್ಯಾಯಾಧೀಶ ಆಲೋಚಿಸುವುದಾದರೆ, ಹಾಗೆ ರಾಯಣ್ಣನೇನಾದರೂ ಕ್ಷಮಿಸಲ್ಪಟ್ಟರೆ, ಎಂದು ಭಯಗೊಂಡಿದ್ದ ವಿಶ್ವಾಸಘಾತಕರು ಮತ್ತೆ ಅವನ ಭೇಟಿಯನ್ನು ತಪ್ಪಿಸಿಕೊಳ್ಳುವ ಸಲುವಾಗಿ ನೇತುಹಾಕಿಕೊಂಡಾದರೂ ಸಾಯುತ್ತಿದ್ದರೇನೋ. ಕೊನೆಗೆ ರಾಯಣ್ಣ ಫಾಸಿಗೆ ಹಾಕಲ್ಪಟ್ಟಾಗ ಜನ ಗೋಳಾಡಿದ್ದು, ಅವನ ಅಂತ್ಯಕ್ರಿಯೆಗೆ ತನ್ನ ಸ್ವಂತ ಹಣವನ್ನೇ ವಿನಿಯೋಗಿಸುವ ಮೂಲಕ ವಿಶೇಷ ದುಃಖವನ್ನು ತೋರ್ಪಡಿಸಿದ ನ್ಯಾಯಾಧೀಶನ ವೈಶಿಷ್ಟ್ಯ, ಅವನ ಸಮಾಧಿಯ ಮೇಲೆ ಜನ ಮರ ನೆಟ್ಟದ್ದು, ಅದರ ಕೊಂಬೆಗಳಮೇಲೆ ತೊಟ್ಟಿಲುಕಟ್ಟಿ ತೂಗಾಡಿಸಿದ್ದು, ಅವನಿಗೆ ಹರಕೆ ಹೊತ್ತು ಮಕ್ಕಳನ್ನು ಪಡೆದದ್ದು—ಈ ಎಲ್ಲ ಜನಪ್ರಿಯ ಅಭಿಪ್ರಾಯಗಳು ರಾಯಣ್ಣ ಒಬ್ಬ ಶೂರನೆಂದೂ ದುರಾಚಾರಕ್ಕೆ ದೂರವಾದವನೆಂದೂ ಸ್ತುತ್ಯರ್ಹನಾದವನು ಅನ್ಯಾಯವಾಗಿ ಕೂಡಲೇ ಕೊಲ್ಲಲ್ಪಟ್ಟನೆಂದೂ ಸಾರಿ ಹೇಳುತ್ತವೆ.

ಈ ಲಾವಣಿಗಳ ಜಾಗತಿಕ ಜನಪ್ರಿಯತೆಗೆ ಸಂಬಂಧಿಸಿದಂತೆ ಹೇಳುವಾಗ, ಅಪಾರ ಅನುಭವವನ್ನು ಪಡೆದಿರುವ ನಾನೇ ಸಾಕ್ಷಿಯಾಗಿ ನಿಲ್ಲುತ್ತೇನೆ. Folk-songs of Southern India ಎಂಬ ತಮ್ಮ ಗ್ರಂಥದ ಪ್ರಸ್ತಾವನೆಯಲ್ಲಿ ಗೋವರ್ ಅವರು ಚೆನ್ನಾಗಿ ವಿವರಿಸಿರುವಂತೆ ಅವು ದಾಸರಿಂದ ಹಾಡಲ್ಪಟ್ಟವು. ಆದರೆ ಆ ಘಟನೆಗಳಿಗೆ ಸಂಬಂಧಪಟ್ಟ ಪ್ರದೇಶದ ಮತ್ತು ಸುತ್ತಮುತ್ತಲ ಪ್ರದೇಶದ ಸಾಮಾನ್ಯ ಹಳ್ಳಿಗರಿಂದಲೂ ಅವು ಹಾಡಲ್ಪಡುತ್ತಿದ್ದುವು. ನಾನು ಸಂಗ್ರಹಿಸಿದ ಬಹುಪಾಲು ಲಾವಣಿಗಳೆಲ್ಲ ಹಳ್ಳಿಗರಿಂದ ಹೇಳಿಸಿ ಬರೆದುಕೊಂಡವು; ಕೆಲವು ಮಾತ್ರ ದಾಸರಿಂದ ಸಂಗ್ರಹಿಸಿದವು.

ಬೆಳಗಾಂ ಜಿಲ್ಲೆಯ ದಕ್ಷಿಣಕ್ಕೆ ಅಥವಾ ಧಾರವಾಡದ ಉತ್ತರಕ್ಕೆ ಇರುವ ಪುಟ್ಟ ಹಳ್ಳಿಯೊಂದರಲ್ಲಿ, ಸಂಗೋಳ್ಳಿ ರಾಯಣ್ಣನ ಲಾವಣಿಯನ್ನಾಗಲಿ ಕಿತ್ತೂರ ಈರವ್ವನ ಗೋಳಾಟವನ್ನಾಗಲಿ ನರಗುಂದದ ಆಕ್ರಮಣವನ್ನಾಗಲಿ ಹಾಡಬಲ್ಲ ಒಬ್ಬರೂ ಕಂಡು ಬರಲಿಲ್ಲ. ಲೆಕ್ಕಪತ್ರಗಳ ಪರಿಶೀಲನೆಗೆ ಹಳ್ಳಿಗರೆಲ್ಲ ಒಟ್ಟಾಗಿ ಸೇರಿದಾಗ, ಆ ಕೆಲಸ ಮುಕ್ತಾಯದ ಹಂತಕ್ಕೆ ಬಂದಾಗ, ಅವರಲ್ಲಿ ಯಾರಾದರೊಬ್ಬರಿಗೆ ಪ್ರಚಲಿತ ಹಾಡುಗಳನ್ನು ಹಾಡಲು ಹೇಳುತ್ತಿದ್ದರು; ಅದಕ್ಕಿಂತ ಹೆಚ್ಚಿನ ಮನರಂಜನೆ ಅವರಿಗೆ ಬೇರೆ ಇರಲಿಲ್ಲ. ಮತ್ತು ಆಗಾಗ, ಸಂಜೆಯ ಊಟ ಆದಮೇಲೆ, ಲಾವಣಿ ಹಾಡುವವರನ್ನು ನನ್ನ ಡೇರೆಗೆ ಬರಮಾಡಿಕೊಳ್ಳುವ ಏರ್ಪಾಡನ್ನು ಮಾಡಿಕೊಂಡಾಗಲೆಲ್ಲ ಸಂದ್ದಿ ಸುತ್ತೆಲ್ಲ ಹರಡಿ ಜನ ಹಳ್ಳಿಯಿಂದೀಚೆಗೆ ಬಂದು ಆ ತಣ್ಣನೆಯ ಸಂಜೆಯಲ್ಲಿ ಡೇರೆಯ ಸುತ್ತು ಮುತ್ತಿನ ಮರಗಳ ಕೆಳಗೆ ಕುಳಿತು, ನಡೆಯುತ್ತಿದ್ದುದನ್ನು ಕೇಳಿ ಆನಂದಿಸುವಷ್ಟು ಮಟ್ಟಿಗೆ ಈ ದೃಷ್ಟಾಂತ ಜನಪ್ರಿಯತೆಯನ್ನು ಗಳಿಸಿಬಿಟ್ಟಿತ್ತು.

ರಚನೆಯಲ್ಲಿ ಈ ಲಾವಣಿಗಳು ಸಂಸ್ಕೃತದ ಆರ್ಯಾ, ಗೀತಿ ಮತ್ತು ಚೌಪದಿಗಳಿಗೆ ಉತ್ತರವೆಂಬಂತೆ, ಕನ್ನಡ ಛಂದಸ್ಸಾದ 'ಕಂದ'ದ ಸೂತ್ರವನ್ನು ಅನುಸರಿಸಿವೆ. ಆದರೆ ನಿರಂಕುಶ ಛಂದಸ್ಸಿನ ಖಚಿತ್ಯವೇನೂ ಗುರಿಯಾಗಿರಲಿಲ್ಲ. ರಚನೆಯ ಸೂತ್ರ ಸ್ಪಷ್ಟವಾಗಿ ಗುರುತಿಸುವಂತಿದ್ದರೂ ಛಂದಸ್ಸಿನ ಪ್ರಕಾರ ಅದನ್ನು ಬಿಡಿಸುವಾಗ ಅಥವಾ ಪದಗಳನ್ನು ಧಾಟಿಗೆ ತಕ್ಕಂತೆ ಹೊಂದಿಸುವಾಗ ಚಿಕ್ಕ ಪಾದಗಳು ದೊಡ್ಡವಾಗಿ ಎಳೆಯಲ್ಪಡುತ್ತವೆ ಮತ್ತು ದೊಡ್ಡ ಪಾದಗಳು ಚಿಕ್ಕವಾಗಿ ಅದುಮಲ್ಪಡುತ್ತವೆ. ಒಂದು ನಿಯಮದ ಪ್ರಕಾರ ಒಂದೇ ಸಂಖ್ಯೆಯ ಪಾದಗಳನ್ನುಳ್ಳ ನುಡಿಗಳನ್ನು ವಿಭಾಗಿಸ ಬಾರದು. ಹಾಡುಗಳ ಲಯ ಮಾತ್ರ ಹಾಡುವುದನ್ನು ಕೇಳಿಯೇ ತಿಳಿಯುವಂಥದು. ರೂಢಿಯಲ್ಲಿರುವ, ಕನ್ನಡ ಕಾವ್ಯದ ವೈಶಿಷ್ಟ್ಯವಾದ ಅನುಪ್ರಾಸ ಅಥವಾ ದ್ವಿತೀಯಾಕ್ಷರ ಪ್ರಾಸದ ಬದಲು ಶಿಷ್ಟಸಾಹಿತ್ಯದ ಸೂತ್ರಗಳನ್ನು ಆಧರಿಸಿ ಅಂತ್ಯಪ್ರಾಸ ಬಳಕೆಯಾಗಿರು ವುದು ಮತ್ತೊಂದು ಗಮನಾರ್ಹ ಅಂಶವಾಗಿದೆ. ಅಂತ್ಯಪ್ರಾಸ ಉಳಿದವುಗಳಿಗಿಂತ ಹೆಚ್ಚು ಬಳಕೆಯಾಗಿರುವುದಕ್ಕೆ ಬಹುಶಃ ಕಟ್ಟಿದವನ ಪ್ರತಿಭೆಯೋ ಬೇಕುಬೇಡಗಳೋ ಕಾರಣಗಳಾಗಿರಬಹುದು. ಮನಕರಗಿಸುವಂಥ ಅಥವಾ ಉದ್ವೇಗಕ್ಕೊಳಪಡಿಸುವಂಥ ನಿರ್ದಿಷ್ಟ ಸಂದರ್ಭಗಳಲ್ಲಿ, ಸಲಿಲವಾಗಿ ಬರುವ ಅನುಪ್ರಾಸದಿಂದಲೋ ಲಯಬದ್ಧವಾಗಿ ಬರುವ ಸಾಮಾನ್ಯ ಗದ್ಯದಿಂದಲೋ ಬಹಳಷ್ಟು ಕಡೆಗಳಲ್ಲಿ ಅಂತ್ಯಪ್ರಾಸವನ್ನು ಬಿಟ್ಟು ಬಿಡಲಾಗಿದೆ. ರಾಗಗಳಂತೂ ಬಹಳ ಆಕರ್ಷಕವಾಗಿರುತ್ತವೆ; ಆದರೆ, ಎಲ್ಲ ಸ್ಥಳೀಯ ಸಂಗೀತಗಳಂತೆ, ಇದನ್ನು ಕೂಡ ಗ್ರಹಿಸಲು ಮತ್ತು ಬರವಣಿಗೆಗೆ ಅಳವಡಿಸಲು ತುಂಬ ಕಷ್ಟವಾಗುತ್ತದೆ. ವಾಸ್ತವವಾಗಿ 'ನುಡಿ'ಗಳ ಹಾಡುಗಾರಿಕೆ ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುತ್ತ ಹೋಗುತ್ತದೆ; ಆದರೆ 'ಪಲ್ಲವಿ' ಅಥವಾ 'ಹಿಮ್ಮೇಳ'ದ ರಾಗ ಮಾತ್ರ ಮೋಹಕ, ನಿರ್ದಿಷ್ಟ ಮತ್ತು ಪ್ರಸಿದ್ಧ. ಕೆಲವು ಕಡೆಗಳಲ್ಲಂತೂ ಹಿಮ್ಮೇಳದ ಧಾಟಿಯನ್ನು ಗ್ರಹಿಸಲು ಮತ್ತು ಬರವಣಿಗೆಗೆ ಅಳವಡಿಸಿಕೊಳ್ಳಲು ಇಂಗ್ಲಿಷ್ ಪದ್ಧತಿ

ಯನ್ನೇ ಅನುಸರಿಸಿ ಯಶಸ್ವಿಯಾಗಿದ್ದೇನೆ. ದೃಷ್ಟಾಂತಕ್ಕೆ, ನನ್ನ ಮೊದಲ ಲಾವಣಿಯ ಹಿಮ್ಮೇಳ ಓಟದಲ್ಲಿ ಇತರ ಹಿಮ್ಮೇಳಗಳಂತೆಯೇ ಇದೆ.

ನಾನು ಸಂಗ್ರಹಿಸಿದ ಲಾವಣಿಗಳಲ್ಲೆಲ್ಲ ಅತ್ಯಂತ ಆಸಕ್ತಿಯುತವಾದುದೆಂದರೆ: ಕಿತ್ತೂರ ಈರವ್ವನ ಗೋಳಾಟ; ಸಂಗೋಳ್ಳಿ ರಾಯಣ್ಣನ ದಂಗೆ; ಇಂಗ್ಲಿಷರಿಂದ ಬದಾಮಿಯಲ್ಲಿ ಪ್ರಸಿದ್ಧವಾದ ರಣಮಂಡಲ ಕೋಟೆಯ ಆಕ್ರಮಣ; ಬಂಡಾಯದ ಕಾಲದಲ್ಲಿ ನರಗುಂದದ ಆಕ್ರಮಣ; ಆದಾಯ ತೆರಿಗೆಯ ಪ್ರವೇಶವನ್ನು ಕುರಿತ ಒಂದು ಹಾಡು; ನಿರಾಯುಧ ಕಾಯಿದೆಗೆ ಸಂಬಂಧಪಟ್ಟಂತೆ ಹಲಗಲಿಯ ಬೇಡರ ದಂಗೆ; ನಿರ್ದಯತೆಗೆ ಸಿಕ್ಕಿದ ಬೇಸಾಯಗಾರ ಸಂಗಣ್ಣನಿಂದ ಹಳ್ಳಿಯ ಲೇವಾದೇವಿಯವನ ಕೊಲೆ, ಅನಂತರ ಅವನ ವಿಚಾರಣೆ ಮತ್ತು ಶಿಕ್ಷೆ ವಿಧಿಸಿದ್ದು; ಇಂಗ್ಲಿಷ್ ದೇಶದ ಶಕ್ತಿ ಮತ್ತು ಕೀರ್ತಿಗಳನ್ನು ಕುರಿತ ಒಂದು ಹಾಡು; ರೆವಿನ್ಯೂ ಸರ್ವೆ ಇಲಾಖೆಯನ್ನು ಕುರಿತ ಒಂದು ಅನುಪ್ರಾಸಬದ್ಧ ಗದ್ಯರಚನೆ.

—ಜಾನ್ ಫೇಯ್ತ್‌ಫುಲ್ ಫ್ಲೀಟ್

ಸಂಗೋಳ್ಳಿ ರಾಯಣ್ಣನ ದಂಗೆ*

ಈ ಹಾಡಿನಲ್ಲಿ ಹೇಳಲಾಗಿರುವ ಘಟನೆಗಳು ಬೆಳಗಾಂ ಜಿಲ್ಲೆಯ ಚಾರಿತ್ರಿಕ ವೃತ್ತಾಂತಗಳಲ್ಲಿಯೇ ಶ್ರೇಷ್ಠವಾದುವು. ಎಚ್. ಜೆ. ಸ್ಟ್ರೋಕ್ಸ್ ಅವರು ಹೇಳುವಂತೆ:

"ಈ ಜಿಲ್ಲೆಯನ್ನು ಮುಟ್ಟಿದ ಮತ್ತೊಂದು ಮುಖ್ಯ ಘಟನೆಯೆಂದರೆ ಸಂಗೋಳ್ಳಿ ರಾಯಣ್ಣನ ದಂಗೆ. ಅವನು ಸಂಗೊಳ್ಳಿಯ ತೆರಿಗೆ ಅಧಿಕಾರಿಯಾಗಿ ಕಿತ್ತೂರ ದೇಸಾಯಿಯರ ಚಾಕರರಲ್ಲೊಬ್ಬನಾಗಿದ್ದ. ೧೮೨೪ರ ದಂಗೆಯಲ್ಲಿ ಭಾಗವಹಿಸಿದ್ದಕ್ಕೆ ಕ್ಷಮೆಯನ್ನು ಪಡೆದಿದ್ದ; ಆದರೆ ಈಗ, ತನ್ನ ಅಧೀನದಲ್ಲಿದ್ದ ಭೂಮಿಯನ್ನು ಸರಕಾರ ಮುಟ್ಟುಗೋಲು ಹಾಕಿಕೊಂಡದ್ದರಿಂದ ನಿರ್ವಾಹವಿಲ್ಲದೆ ಹಿಂದಕ್ಕೆ ಬಿಟ್ಟುಕೊಟ್ಟದ್ದರಿಂದ (ಅವನಂಥ ಇತರ ಅಪರಿಮಿತ ಅನಾವಶ್ಯಕ ತೆರಿಗೆ ಅಧಿಕಾರಿಗಳ ಮೂಲಕ ಬಂದ ಒಂದು ಅಳತೆ ಅವನ ವ್ಯವಹಾರಕ್ಕೂ ಇದ್ದದ್ದೇ) ಮತ್ತು ತನ್ನ ಹಳ್ಳಿಯ ಕುಲಕರ್ಣಿಯೊಂದಿಗಾದ ಜಗಳದಿಂದ ರೇಗಿ, ಅವನ ಸುತ್ತ ರಾಜನಿಷ್ಠೆಯಿಲ್ಲದ ಕೆಲವರನ್ನು ಸೇರಿಸಿದ; ಕಿತ್ತೂರಿನ ಗತಿಸಿದ ದೇಸಾಯಿಯಿಂದ ದತ್ತವಾಗಿ ಸ್ವೀಕರಿಸಲಾಗಿದೆಯೆಂದು ಹೇಳಲಾಗುತ್ತಿದ್ದ ಹುಡುಗನನ್ನು ಕರೆದುಕೊಂಡು, ಸಂಸ್ಥಾನವನ್ನು ಪೂರ್ವಸ್ಥಿತಿಗೆ ತರುವುದನ್ನು ಒಪ್ಪಿಕೊಂಡು ಅದಕ್ಕಾಗಿ ಪಿತೂರಿಯನ್ನೇ ಪ್ರಾರಂಭಿಸಿದ.

"ಕಿತ್ತೂರಿನ ದೇಸಾಯಿಗಳು ತಮ್ಮ ರಾಜ್ಯದ ಬಡಜನತೆಯ ಬಗ್ಗೆ ಯಾವಾಗಲೂ ಕರುಣೆಯನ್ನು ತೋರುತ್ತಿದ್ದವರು. ಅವರನ್ನು ಮಮತೆಯಿಂದ ಕಾಪಾಡುವ ಮನಸ್ಸನ್ನು ಹೊಂದಿದ್ದವರು. ಜನಸಮೂಹದಲ್ಲಿ ಲಿಂಗಾಯತರೇ ಹೆಚ್ಚು ಸಂಖ್ಯೆಯಲ್ಲಿದ್ದುದರಿಂದ, ಯಾವ ನಿರ್ದಯತೆಗೂ ಕಾರಣವಿಲ್ಲದೆ ಬಡಜನರನ್ನು ಸಹಜವಾಗಿಯೇ ವಿನಯದಿಂದ ಆದರಿಸುತ್ತಿದ್ದರು. ಇನ್ನೊಂದು ಕಡೆ, ಮೂವತ್ತನಾಲ್ಕು ವರ್ಷ ಆಳಿದ ಮಲ್ಲಸರ್ಜ, ನಡೆಯುತ್ತಿದ್ದ ಅಪಾರ ಸುಲಿಗೆ ಕೆಲಸಗಳನ್ನು ಆಗಾಗ ಗಮನಿಸುತ್ತಿದ್ದುದರಿಂದ, ಶ್ರೀಮಂತ ವರ್ಗವನ್ನು ಮನ್ನಿಸಲಿಲ್ಲ. ಪ್ರಸ್ತುತ ಶತಮಾನದ ಪ್ರಾರಂಭದಲ್ಲಿ, ಮಲ್ಲಸರ್ಜ ಜಿಲ್ಲೆ ಮತ್ತು ಹಳ್ಳಿಗಳಲ್ಲಿ ವಂಶಪಾರಂಪರ್ಯವಾದ ಅಧಿಕಾರಿಗಳಿಗೆ ಇನಾಮಾಗಿ ನೀಡಿದ್ದ ಭೂಮಿಯೆಲ್ಲವನ್ನೂ ಹಿಂದಕ್ಕೆ ತೆಗೆದುಕೊಂಡು, ಯೋಗ್ಯ ಆದಾಯಗಳ ಮೇಲೆ ತೆರಿಗೆ ವಿಧಿಸಿ, ಅದನ್ನು ವಸೂಲು ಮಾಡಲು ಕಾರಕೂನರನ್ನು ಸಂಬಳದ ಮೇಲೆ ನಿಯಮಿಸಿದ. ಈ ಬಗೆಯ ಕಾರ್ಯಗಳು ವಿನೀತವರ್ಗಗಳಲ್ಲಿ ಮಾತ್ರ ಅವನ ಜನಪ್ರಿಯತೆಯನ್ನು ಹೆಚ್ಚಿಸಿದುವು. ಇದರಿಂದ ಸಂಸಾರದ ಪುನರ್ವ್ಯವಸ್ಥೆಯ ಗುರಿಗಾಗಿ ತೋರಿಕೆಯ ಕಲಹಗಳು ನಡೆದರೂ ಅವನ ಬಗ್ಗೆ ಹೇರಳ ಅನುಕಂಪ ಮಾತ್ರ ಇದ್ದೇ ಇತ್ತು.

---

* The Insurrection of Rayanna of Sangôlli; Indian Antiquary; 1885; Vol. 19; p. 295.

"೧೮೨೯ರ ಮೊದಲಲ್ಲಿ ರಾಯಪ್ಪ 'ಬೀಡಿ'ಯಲ್ಲಿದ್ದ ಕಚೇರಿಯನ್ನು ಸುಡುವುದರೊಂದಿಗೆ ತನ್ನ ಬಂಡಾಯವನ್ನು ಪ್ರಾರಂಭಿಸಿದ. ಆಗ ಅವನು ನೂರರಷ್ಟು ಜನ-ಬಲವನ್ನು ಹೊಂದಿದ್ದ. ಆಮೇಲೆ ಇನ್ನೂ ಅನೇಕರು ಸೇರಿಕೊಂಡರು. ಅಲ್ಲಿಂದಾಚೆಗೆ 'ಬೀಡಿ'ಯ ಇತರ ಹಳ್ಳಿಗಳನ್ನು ಲೂಟಿ ಮಾಡಲು ಮತ್ತು ಸುಡಲು ಹೊರಟ. ಉಳಿದ ಕಾರ್ಯವೆಲ್ಲ ನಂದಿಗಡದಲ್ಲಿ ಮುಂದುವರಿಯಿತು. ಅತಿ ಕಡಿಮೆ ಕಾಲದಲ್ಲೇ ಅವನು ಸಾವಿರ ಜನರ ನಾಯಕನಾಗಿದ್ದ. ಬಾಳಗುಂದ ಮತ್ತು ಹಂಡಿಬಡಗನಾಥ ಬೆಟ್ಟಗಳಲ್ಲಿ ಹಗಲನ್ನು ಕಳೆದು, ರಾತ್ರಿ ವೇಳೆಗಳಲ್ಲಿ ಲೂಟಿಮಾಡಲು ಗುಂಪುಗಳಾಗಿ ವಿಭಜಿಸಿಕೊಳ್ಳುತ್ತಿದ್ದರು. ಸಂಪಗಾಂವಿಯ ಮಾಮ್ಲೇದಾರರೂ ನನ್ನ ವಕ್ತೃವಿನ ತಂದೆಯವರೂ ಆದ ಕೃಷ್ಣರಾವ್ ಅವರು ರಾಯಪ್ಪನನ್ನು ಸೆರೆಹಿಡಿಯಲು ಪ್ರಯತ್ನಿಸುವುದಕ್ಕಾಗಿ ಸೂಚನೆಗಳನ್ನು ಪಡೆಯುತ್ತಿದ್ದರು. ರಾಯಪ್ಪ ೫೦,೦೦೦ ರೂಪಾಯಿಗಳನ್ನು ಮಸೀದಿಯ ಮಾಳಿಗೆಯ ಮೇಲೆ ಬಚ್ಚಿಟ್ಟು, ಕಾವಲಿಗಾಗಿ ಕೆಲವು ಆಳುಗಳನ್ನು ನಿಯಮಿಸಿ, 'ಬೀಡಿ'ಗೆ ಹೊರಟ. ಅವನಿಗೆ ವಿರುದ್ಧವಾಗಿ ದಂಗೆ ಹುಟ್ಟಿಕೊಂಡಿದೆಯೆಂದು ಪ್ರಚುರವಾಗಿದ್ದರೂ ಅವು ತನ್ನನ್ನು ಸೆರೆಹಿಡಿಯಲು ನಡೆಯುತ್ತಿರುವ ಸಂಚುಗಳನ್ನು ಅಡಗಿಸಲು ಅವನೇ ಮಾಡಿದ ಪ್ರಯತ್ನಗಳಾಗಿದ್ದುವು. ಬಂಡಾಯ, ಸೈನ್ಯಬಲವಿಲ್ಲದೆ, ಎದ್ದದ್ದು ಎದ್ದಹಾಗೇ ಇಳಿದುಹೋಗುತ್ತದೆ ಎಂದು ಮೊದಮೊದಲು ಭಾವಿಸಲಾಗಿತ್ತು. ಆದರೆ, ಕಿತ್ತೂರಿನ ತೆರಿಗೆ ಅಧಿಕಾರಿಗಳು ಸೇವೆ ಸಲ್ಲಿಸಲು ಯಾವಾಗ ನಿರಾಕರಿಸಿದರೋ ಮತ್ತು ವಿಕ್ಷೋಭೆ ಏರುತ್ತಲೇ ಸಾಗಿತೋ, ಆಗ ಮಾತ್ರ ಪ್ರಬಲ ತುಕಡಿಗಳ ಸೇವೆಯನ್ನು ಪಡೆಯುವುದು ಅನಿವಾರ್ಯವಾಯಿತು. ನಿರೀಕ್ಷಿಸಿದ್ದಂತೆ ಈ ನಿಯಮಿತ ಪಡೆಗಳು ಹೇಗೂ ಸುಲಿಗೆಗಾರರ ಸುಳಿವನ್ನು ಕಂಡು ಹಿಡಿಯಲು ರಾಜ್ಯದುದ್ದಕ್ಕೆ ಎಲ್ಲಿಯೂ ಸಾಧ್ಯವಾಗಲಿಲ್ಲ. ಕೃಷ್ಣರಾವ್ ಅವರು ಕಾಡುಗಳ ನಿಷ್ಫಲ ಹಾಯುವಿಕೆಯ ಅನಂತರ, ಹೆಚ್ಚಿನ ಸಂಖ್ಯೆಯ ತೆರಿಗೆ ಅಧಿಕಾರಿಗಳೊಂದಿಗೂ ಕೆಲವು ಜಾಗೀರಿನ ಕುದುರೆಗಳೊಂದಿಗೂ 'ಬೀಡಿ'ಯಿಂದ 'ಮುಗುಟಖಾನ್ ಹುಬ್ಬಳ್ಳಿ'ಗೆ ಬಂದರು. ಸ್ವಲ್ಪ ಅಜ್ಞಾತ ದಾರಿಯಾದ 'ಕಾದರೋಳ್ಳಿ'ಯ ಮೂಲಕ ಸಂಪಗಾಂವಿಗೆ ಬಂದು ಅಲ್ಲಿದ್ದ ಕಚೇರಿಯನ್ನು ಸುಟ್ಟು ದಾಖಲೆ ಪುಸ್ತಕಗಳನ್ನು ನಾಶಮಾಡಿರುವುದು ಕಂಡುಬಂದಾಗ ರಾಯಪ್ಪ ತನ್ನ ಕಣ್ಣಿಗೆ ಮಣ್ಣೆರಚಿದ್ದುದನ್ನು ಕೃಷ್ಣರಾವ್ ಅರಿತರು. ಅಲ್ಲಿಂದ ಅವಸರವಾಗಿ ಮುಂದುವರಿದು ಸಂಪಗಾಂವಿಯ ಹೊರಗೆ ಉತ್ತರಕ್ಕಾದಂತಿದ್ದ ಪುಟ್ಟ ಹೊಂಡವೊಂದರಲ್ಲಿದ್ದ ರಾಯಪ್ಪನ ಗುಂಪಿನ ಹಿಂಭಾಗವನ್ನು ಮೆಲ್ಲಗೆ ಕೂಡಿಕೊಂಡರು. ಅವರು ತಮ್ಮೊಂದಿಗೆ ಹತ್ತು ಜನ ಸವಾರರನ್ನು ಹೊಂದಿದ್ದು ಕೇವಲ ನಾಲ್ಕು ಜನ ದಂಗೆಕೋರರನ್ನು ಕೊಲ್ಲುವುದರಲ್ಲಿ ಯಶಸ್ವಿಯಾದರು. ಎರಡು ದೊಡ್ಡ ಗುಂಪುಗಳಾಗಿ ವಿಭಾಗಿಸಿಕೊಂಡಿದ್ದ 'ಸುತ್ತಗಟ್ಟಿ'ಗೆ ಉಳಿದ ರಾಯಪ್ಪನ ಜನ ಹಿಂದಕ್ಕೆ ಹೋದರು. ಒಂದು ಗುಂಪು 'ಮರಿಕಟ್ಟಿ'ಯನ್ನು ಸುಟ್ಟು ಲೂಟಿ ಮಾಡುತ್ತಿರುವ ವೇಳೆಯಲ್ಲಿ ಮತ್ತೊಂದು ಗುಂಪು ಸಂಗೊಳ್ಳಿಯಿಂದ

ಕಿತ್ತೂರ ಬೆಟ್ಟಕ್ಕೆ ರಾಯಪ್ಪನೊಡನೆ ಹಿಂತಿರುಗಿತ್ತು. ಎರಡನೆಯ ಗುಂಪನ್ನು ಮಾಮ್ಲೇದಾರ ಕೃಷ್ಣರಾವ್ ಅವರು ನೇಸರ್ಗಿ ಬೆಟ್ಟದ ಮೇಲೆ ಎದುರಿಸಿ, ಚೆದರಿಸಿ, ಹತ್ತೋ ಇಪ್ಪತ್ತೋ ಮಂದಿಯನ್ನು ಕೊಂದು, ಸುಮಾರು ನೂರು ಜನರನ್ನು ಸೆರೆಹಿಡಿದುಕೊಂಡು ಹೋದರು.

"ಈ ವೇಳೆಯಲ್ಲಿ, ಗತಿಸಿದ ದೇಸಾಯಿಯ ಪತ್ನಿಯಾದ ವಿಧವೆ ಈರವ್ವ ಬೈಲ ಹೊಂಗಲದಲ್ಲಿ ವಾಸಿಸುತ್ತಿದ್ದಳು. ಅವಳನ್ನು ಧಾರವಾಡಕ್ಕೆ ಸಾಗಿಸುವುದು ಉಚಿತವೆಂದು ತೋರಿತು. ಇದು ಇನ್ನೊಂದು ದಂಗೆಗೆ ಉದ್ರೇಕಕಾರಿಯಾಯಿತು; ವಸ್ತುತಃ, ಆನೆಗೊಳದ ಬಳಿ ಸಾವಿರ ಜನರು ಸೇರಿ ಈರವ್ವನ ಸ್ಥಳಾಂತರವನ್ನು ವಿರೋಧಿಸಿದರು. ಉಳಿದವರು ರಾಯಪ್ಪನನ್ನು ಸೇರಿಕೊಳ್ಳುವಾಗ ಇವರಲ್ಲಿ ಬಹಳಷ್ಟು ಜನ ಕ್ಷಮೆಯನ್ನು ಸ್ವೀಕರಿಸಿ ಸುಮ್ಮನಾದರು.

"ಸ್ವಪ್ರೇರಣೆಯಿಂದಲೋ ಪರಪ್ರೇರಣೆಯಿಂದಲೋ ವಿಷಪ್ರಾಶನದ ಕಾರಣದಿಂದ ಈರವ್ವ ಧಾರವಾಡದಲ್ಲಿ ಜೇಲೈನಲ್ಲಿ ತೀರಿಕೊಂಡಳು. ಇದಾದಮೇಲೆ ಕೂಡಲೇ ದಂಗೆ ಅಡಗಿಸಲ್ಪಟ್ಟಿತು. ತನ್ನ ಸ್ವಂತ ಮಗನನ್ನೇ ದತ್ತಸ್ವೀಕಾರಕ್ಕೆ ಕೊಟ್ಟು ದೇಸಾಯಿಯ ಉತ್ತರಾಧಿಕಾರಿಯನ್ನಾಗಿ ಮಾಡಿದುದು ನಿರಾಕೃತವಾದದ್ದಕ್ಕೆ ಖಂದಾನ್ ಪುರದ ಪಾಟೀಲನಾದ ಲಿಂಗನಗೌಡ ಸಿಟ್ಟಾದುದನ್ನು ಮಾಮ್ಲೇದಾರ ಕೃಷ್ಣರಾವ್ ಅವರು ಕಂಡುಕೊಂಡಿದ್ದರು. ಆದ್ದರಿಂದ, ರಾಯಪ್ಪನನ್ನು ಮೋಸದಿಂದ ಹಿಡಿದು ಕೊಡಲು ತಕ್ಕ ಆಯುಧವಾಗಿ ಅವನು ಆಯ್ಕೆಗೊಂಡ. ದಂಗೆಕೋರರನ್ನು ಕೂಡಿ ಕೊಂಡು, ಮುನ್ನೂರು ಜನರನ್ನು ಒದಗಿಸಿಕೊಡಬಲ್ಲ ಖಂದಾನ್‌ಪುರದ ಪಾಟೀಲನನ್ನು ಕಾಣುವಂತೆ ಪ್ರಚೋದಿಸಲು ಗೂಢಚಾರರು ಕಳುಹಿಸಲ್ಪಟ್ಟರು. ಈ ಆಕರ್ಷಕ ಸೂಚನೆಯನ್ನು ಸ್ವೀಕರಿಸಿದ ರಾಯಪ್ಪ ಸಹಕಾರವನ್ನು ಕೋರಿ ಲಿಂಗನಗೌಡನಿಗೆ ಪತ್ರ ಬರೆದ. ಮಾಮ್ಲೇದಾರ ಒಂದಷ್ಟು ಜನರ ಕಾವಲಿನಲ್ಲಿ ಲಿಂಗನಗೌಡನನ್ನು ಕಳಿಸಿದ; ಅವನು ಪುಕ್ಕಲನೂ ಅಶಕ್ತನೂ ಆಗಿದ್ದುದರಿಂದ ದಿಟ್ಟನೂ ಧೈರ್ಯಶಾಲಿಯೂ ಆದ ನೇಗಿಲಹಾಳದ ಯೆಂಕನಗೌಡನನ್ನೂ ಅವನ ಬೆಂಬಲಕ್ಕಾಗಿ ಕಳಿಸಿದ. ಅವರು ರಾಯಪ್ಪನನ್ನು ಕೂಡಿಕೊಂಡು ಎರಡು ವಾರಗಳ ಕಾಲ ಅವನೊಡನೆ ಲೂಟಿಯಲ್ಲಿ ಪಾಲ್ಗೊಂಡರು. ಆಮೇಲೊಂದು ದಿನ, ನೇಗಿಲಹಾಳದ ತೆರಿಗೆ ಅಧಿಕಾರಿ ಲಕ್ಕಪ್ಪ ಎಂಬುವನು, ರಾಯಪ್ಪ ಸ್ನಾನ ಮಾಡುತ್ತಿದ್ದ ಸಮಯದಲ್ಲಿ ಮಿಂಚಿನಂತೆ ನುಗ್ಗಿ ಅವನನ್ನು ತಬ್ಬಿಹಿಡಿದುಕೊಂಡಾಗ ಇನ್ನೊಬ್ಬ ಆಯುಧಗಳನ್ನು ಭದ್ರಪಡಿಸಿಕೊಂಡ. ಉಳಿದವರು ಅವನ ಮೇಲೆ ಮುಕ್ಕರಿಬಿದ್ದು ಅವನ ಕೈಕಾಲುಗಳನ್ನು ಕಟ್ಟಿ ಕೈಮಂಚದ ಮೇಲೆ ಹಾಕಿಕೊಂಡು ದಿಗ್ವಿಜಯದಿಂದ ಧಾರವಾಡಕ್ಕೆ ಸಾಗಿಸಿದರು.

"ಅವನ ಪ್ರಮುಖ ದರೋಡೆಯು ದೃಶ್ಯವಾಗಿ, ನಂದಿಗಡದಲ್ಲಿ ನೇಣುದಂಡನೆಗೆ ಗುರಿಯಾದ. ಗಲ್ಲುಮರದೆಡೆಗೆ ರಸ್ತೆಯಲ್ಲಿ ಸಾಗುತ್ತಿರುವಾಗಲೇ ತನ್ನನ್ನು ಹೂಳುವ ಜಾಗವನ್ನು ಗುರುತಿಸಿದ. ತನ್ನ ಪಳೆಯುಳಿಕೆಗಳಿಂದ ಆ ಮಹಾವೃಕ್ಷವೂ ಚಿಗುರಬಹುದು

ಎಂದುಕೊಂಡ. ಅವನು ಇಷ್ಟಪಟ್ಟಲ್ಲೆ ಅವನನ್ನು ಹೂಳಲಾಯಿತು. ನಂದಿಗಡದ ಬಳಿ ರಸ್ತೆಗೆ ಹೊಂದಿಕೊಂಡು ಅವನ ಸಮಾಧಿಯಿಂದಲೇ ಬೆಳೆದಿದೆಯೇನೋ ಎಂಬಂತೆ ಒಂದು ಬೃಹತ್ ಆಲದಮರ ಕಾಣಿಸುತ್ತದೆ. ಅದರ ನೆರಳಿನಲ್ಲೊಂದು ಗುಡಿ ಎದ್ದಿದೆ. ಮಕ್ಕಳು, ಸಂಪತ್ತು, ಆರೋಗ್ಯಗಳಿಗಾಗಿ ದೂರದೂರದಿಂದ ಬಡಜನರು ಅಲ್ಲಿಗೆ ಯಾತ್ರೆ ಕೈಗೊಳ್ಳುತ್ತಾರೆ. ನಂದಿಗಡದ ಮಾರುಕಟ್ಟೆಯಲ್ಲಿ ತಮ್ಮ ಪದಾರ್ಥಗಳಿಗೆ ಒಳ್ಳೆಯ ಬೆಲೆ ದೊರಕಿದಾಗ ಜನ ಹರಕೆ ಸಲ್ಲಿಸುತ್ತಾರೆ. ರಾಯಪ್ಪನಿಗೆ ಆರೋಪಿತವಾದ ಈ ದೈವತ್ವ ಅವನ ಚರಿತ್ರೆಯಲ್ಲೇ ಒಂದು ಅತ್ಯಂತ ವಿಶಿಷ್ಟಪಾತ್ರವಾಗಿ ಪರಿಣಮಿಸಿದೆ. ಇದು ಹಳೆಯ ಪದ್ಧತಿಯಾದ ದೆವ್ವಾರಾಧನೆಯ ಪಳೆಯುಳಿಕೆಯಾಗಿ ಆರೋಪಿಸಿದ್ದಿರ ಬಹುದು; ಅವನ ಜೀವಿತಕಾಲದಲ್ಲಿ ಉತ್ಪನ್ನವಾದ ಅತ್ಯಂತ ದುರ್ದೈವದ ಸಲುವಾಗಿ ಅವನು ಈಗ ಗೌರವಿಸಲ್ಪಡುತ್ತಿದ್ದಾನೆ; ಅಥವಾ ಬಡಜನತೆಯ ನಾಯಕನಾಗಿ ಅವನು ಗಳಿಸಿದ ಜನಪ್ರಿಯತೆ, ಅವರ ಸಂತಾಪ, ಅವನು ಪರಮಪದಕ್ಕೇರಲು ಕಾರಣಗಳಾಗಿರ ಬಹುದು–ಮುಂತಾದ ಪ್ರಶ್ನೆಗಳು ಅವರಲ್ಲಿ ಸಹಜವಾಗಿ ಮೂಡಬಹುದು.

"ರಾಯಪ್ಪನ ದಂಗೆ ಸುಮಾರು ನಾಲ್ಕು ತಿಂಗಳಿಗೇ ಅಂತ್ಯಗೊಂಡಿತು. ಕಾವಲು ಪಡೆಯ ಬದಲಾವಣೆಯ ಸಮಯದಲ್ಲಿ ಮಿಂಚಿನಂತೆ ನುಗ್ಗಿ ಬೆಳಗಾಂ ಕೋಟೆಯನ್ನು ಸ್ವಾಧೀನಪಡಿಸಿಕೊಳ್ಳಬೇಕೆಂಬ ಇಚ್ಛೆಯಿಂದ ಅವನು ಒಂದುಸಲ ಕಣಬರ್ಗಿಗೆ ಬಂದದ್ದುಂಟು. ಆದರೆ ತನ್ನ ಇಚ್ಛೆಯನ್ನು ಕಾರ್ಯಗತಗೊಳಿಸಲಿಲ್ಲ. ಅವನನ್ನು ಮೋಸದಿಂದ ಹಿಡಿದುಕೊಟ್ಟವರು ಇನಾಮುಗಳಿಂದ ಬಹುಮಾನಿತರಾದರು. ಯೆಂಕನಗೌಡ ಧಾರವಾಡದ 'ಡೋರಿ' ಎಂಬ ಹಳ್ಳಿಯನ್ನೂ, ಲಿಂಗನಗೌಡ ಕಿತ್ತೂರಿನ ಬಳಿ ಇರುವ 'ಕಲ್ಲೊಳಿ'ಯನ್ನೂ ಪಡೆದರು."

ಪಲ್ಲಾ

ಸಂಗೊಳ್ಳಿ ರಾಯಿನಾಯಿಕಾ ಸಜ್ಜಾರ್
ಸಂಪಗಾಂವಿ ಸುಭೆಯದಾರನ ಮ್ಯಾಗ
ತಳ್ಳಿ ಮಾಡತಾನೊ ಪುಂಡಾ

ಮತ್ತರದಿಂದ ಸುತ್ತಿನ ಹಳ್ಳಿ ಮುತ್ತಿಗಿ ಹಾಕಿ ಬಡೆದಾರಣ್ಣಾ
ಗೊತ್ತ ಇಲ್ಲದ ಹಾಂಗೆ ಹೋತ್ಯೊ ಬಂಡಾ

೧ನೆ ನುಡಿ

ಪೂರ್ವದ ಮಾತ ಹೇಳತೆವ ನಿಮಗ
ಸರ್ವರು ಕುಂತ ಕೇಳರಿ ವಿಸ್ತಾರಾ

ಗರ್ವ ಬಂತ ಸಂಗೊಳ್ಳಿ ಕುಲಕಣ್ಣಿಗೆ
ಚಂದದಿಂದ ರಾಯಿನಾಯಿಕ ಹೊಂದಿಕೊಂಡ ಇದ್ದ
ಅವರ ಮುಂದ ಹುಟ್ಟಿತಲ್ಲೆ ಕದನ ಬ್ಯಾಗಿ

ಕುಲಕಣ್ಣಿ ಬಾಳಪ್ಪ ರಾಯಣ್ಣ ಜಳಕಾ ಮಾಡುಹೊತ್ನ್ಯಾಗ
ಧೋತರ ಶಳ ತಾ ಅಂತ ಕೊಟ್ಟನವರ ಕೈಗಿ

ಇಷ್ಟು ಮಾತಿಗೆ ಶಿಟ್ಟ ಮಾಡಿ ಧಿಟ್ಟತಾನ ಹಿಡಿದು
ರಾಯಣ್ಣ ಮುಟ್ಟಾಕಿಲ್ಲಂದರವೀ ಯೆಂದೆಂದಿಗಿ

ಯಾಕಲೆ ಹಳಬಾ ಜೋಕ್ಯಾಗಿದ್ದಿ
ಸೊಕ್ಕ ಬಂತೀಗೇನೊ ನಿನಗ
ದಿಗರಾಡ್ತಿ ನಿಂತ ಇದರಿಗಿ

ಕೇಳಿ ರಾಯಣ್ಣ ತಾಳಿ ಸಿಟ್ಟು
ಹೋಳಿ ಆಡ್ತಿನ್ನ ಬಿಡುವೇನೆಂದು
ಹೇಳಿ ಹೊಂಟ ಹಿಂದಕ ತಿರಿಗಿ
ವಳ್ಳೆದೊ ಬಾಳಣ್ಣ ನನ್ನ ತಳ್ಳಿ ಮಾತರ ಹಿಡಿಯೊ
ಇನ್ನ ದಾಳಿ ಬಂತ ತಿಳಿಯೊ ಸುತ್ತಿನ್ಹಳ್ಳಿಗೆ

೨ನೆ ನುಡಿ

ವತ್ತರ ಮಾಡಿ ರಾಯಿನಾಯಿಕಾ ಹೆತ್ತ ತಾಯಿ ಪಾದಕ ಬಿದ್ದು
ಮತ್ತ ಕತ್ತಿ ಹಿಡಿಕೊಂಡೊಂಟ ಧೀರಾ

ಮುಗಲಾಯರ ಶೀವಿಂಗಿ ಹೋಗಿ
ಸುರಪೂರರಸರ ಯಿದರಿಗಿ ನಿಂತು
ಕರವ ಮುಗಿದು ಮಾಡಿದಾನ ನಮಸ್ಕಾರಾ

ಧೀರ ಹೌದೊ ರಾಯಿನಾಯಿಕಾ
ಹಾರಿ ಹನ್ನೆರಡಕ್ಕಡಿ ಜಿಗದಾ
ಅರಸ ನೋಡಿದಿವನ ಕಣ್ಹಾರಾ

ಅರಸು ಮೆಚ್ಚಿ ಹರುಷವಾಗಿ
ಸರ್ಜ್ಯಾ ನಿನಗೆ ಸರಿಯಿಲ್ಲೆಂದು
ಯೇನ ಬೇಡಿ ಬೇಡಂದ ರಣಸೂರಾ

ಯೆನಗ ವಲಿದಾರ ನೀನು
ಮುಂನ್ನುರು ಬ್ಯಾಡಿಕಿ ಕೊಡು
ಇನ್ನು ಆರಿಸಿ ವೈತೇನೋ ಪೂರಾ
ದಂಡನೆಲ್ಲಾ ತೊಕೊಂಡು ಬಂದು
ಭಂಡಾಯಿ ಮಾಡುನೆಂತೆಂದು
ಅವರಿಗ್ಹೇಳಿದಾನೊ ಚಾತುರಾ

ರವಡ ಮಾಡಿ ರಾಯಿಃನಾಯಿಕಾ
ದವಡ ಮಾಡಿ ತಂದ ದಂಡನ
ಗಿಡದಾಗ ವೋದಿಟ್ಟ ಯೆಲ್ಲಾ ಬಾರಾ

೩ನೆ ನುಡಿ

ತಂದ ದಂಡಿಗ್ಹೇಳತಾನೊ ಹೊಂದಿಕಿಂದ ಮಾತಗೋಳು
ಮುಂದ ನಿಂತ ಮಾಡಿ ವಳೆ ಸಿಸ್ತಾ
ಯೆಚ್ಚರದಿಂದ ಇರರಿ ನೀಂವು
ಸುತ್ತುಕಡಶಿ ಹುಸಿಯಾರಾಗಿ ಯತ್ತರ ಹೋದಿರಿ ನೀಂವು ಮುತ್ತು

ಹಸ್ತರ ಮನುಷ್ಯರನ ತಿನ್ನುಹಂತಾ
ಹಬಶರ್ನ ತಂದಿಟ್ಟಾನಲ್ಲೆ ಸುತ್ತುಕಡೆ
ಮಾಡಿ ಬಂದೊಬಸ್ತಾ ವಿಸ್ತಾರಾ ದಂಡಿಗೆಲ್ಲಾ

ಸಿಸ್ತ ಮಾಡಿ ತೈಯಾರಾಗಿ
ವತ್ತರದಿಂದ ನಡಿರೆಂದ ಮುತ್ತಾ

ಕಡವು ಕತ್ತಿ ಕೈಚೂರಿಗಳು
ಇರವು ಕಂಜಿರ ಬಾಕು ಪಿಸ್ತೂಲ
ಶಿಟ್ಟಿನ ಭಂಟರೊ ಸಮಸ್ತಾ
ಕಟಾರಿ ಬಿಲ್ಲು ಈಟಿ ಬಾಣ
ಧಿಟ್ಟತನದಲಿಹಡವು ಡಾಲು ಮೈಗ ತೊಟ್ಟರೊ ಚಿಲ್ಕಟಾ

ದುಂದಗ್ಯಾಂವಿ ಹೊಂದಿಕಿಂದ
ಗಂಧಕಸ್ತೂರಿಯು ಧರಿಸಿ
ಮುಂದ ಹೂಲಿಗಾಳಿ ಹಿಡಿಸುತಾ

ಅಬ್ಬರದಿಂದ ವೊಬ್ಬರ ಉಳಿಯಂದ
ಕಬರ ಇಲ್ಲದ ಬಂದರಣ್ಣಾ ರಣಸೂರಿ ಯಾವಾಗ ಮಾಡೆವಂತಾ

೪ನೆ ನುಡಿ

ಭೇರಿ ಕಾಳಿ ಕರ್ನಿ ಹಿಡಸಿ ವೀರಿದ ಹಲಿಗಿ ಹೊಡಸಿ
ಕಾಲ್ಮಂದಿ ವುಂಂದಕ ಕಳವಿದಾ

ರಂಗವಾಗಿ ಇರಂವುವ ಕರ್ನಿಗೆ ಜೆಂಗಂ ಜಲ್ಲಿ ಘಂಟಿಸರವಳಿ
ವುಂಂಗೈಯಾಗ ತೋಡೆವ ಹಾಕ್ಕಿದಾ
ಹಲ್ಲ ತಿಂತ ಹವಣಸ್ತ ಕಾಲ ಕೆದರಿ ಕತ್ತಿ ಹಿಡಿದು
ಜಿಗತಾ ಮಾಡತಾರ ಕುಸಿ ಬಂದು

ಬಿಚ್ಚಗತ್ತಿ ಚನಬಸಣ್ಣ ವುಂಂಚಿ ಶಮಸರಗಡಕ ಹೋಗಿ
ವಿಚಿತ್ರ ಹೊಡವುನು ನಡಿರ್ಯೆಂದಾ

ಗಜವೀರ ಹೇಳತಾನು ಬಾಳ ಗದ್ದಲ ಮಾಡುನ ಯಿಂದ
ಯೇನ ಉಳಿಯಂದ ವಳಗಿಂದಾ

ಕಡ್ಡಿಗಂದ್ದಿ ಬಾಳಣ್ಣಾ
ದೊಡ್ಡಕಿಲಿಯಂದ ಭೀಮಣ್ಣಾ
ಬೆಳ್ಗೊಡಿ ವಡ್ಡರ ಯೆಲ್ಲಣ್ಣ ಕತ್ತಿ ಹಿರದಾ
ಸತ್ತ್ಯ್ಯಳ್ಳ ಶಿರಸಂಗಿ ಕಾಳವ್ವಾ
ವುತ್ತ ಕಕ್ಕೆರಿ ಕರಿಯಂವ್ವಾ
ನವ್ಮ ಕತ್ತಿಗೆ ಬ್ಯಾಸನ ಕೊಡರೆಂದಾ

ಯೆಲ್ಲಾ ವುಂದಿ ಕೂಡಿಕೊಂಡು ನಿಲ್ಲದ್ಹೋಗಿ ಶಮಸರಗಡಾದ
ಹಲ್ಲಾ ಯೇರಿ ವುಂತ್ತಿಗಿ ಹಾಕಿದಾ

೫ನೆ ನುಡಿ

ಗಡಾದವಳಗ ಹೋಗಿ ತಾಂವು ಬಾಳ ಗದ್ದಲ ಮಾಡ್ಯಾರಣ್ಣಾ
ಶಿಕ್ಕ ವುಂದಿ ಚಂಡ ಕೋದರಲ್ಲಾ

ಹಿಡದು ಹೊಡದು
ಕಡದು ಬಡದು
ದಂಡಲ ಮಾಡ್ಯಾರ ಗವಿಂಕಿಂದ
ಗಡಾದೊಳು ಮಂದ್ಯಾರು ಉಳಿಯಲಿಲ್ಲಾ

ಯಾತರದವಗ ಇಲ್ಲೊ ದರಕಾರಾ
ಕಾಲಿಲ್ಲಗರೊ ಕತ್ತಿಗಾರ
ಕಡದ ಹೋಗತಾನು ಶಿಗಂದಿಲ್ಲಾ

ಗಡಾದವಳಗ ಗದ್ದಲ ಆದಾ
ಸುದ್ದಿ ಕೇಳಿ ಸುಭೆಯಂದಾರಾ ಗಾಬರಿಯಾಗಿ ಯೆದ್ದ ಬಂದನಲ್ಲಾ

ಹಿತ್ತಲ ಕಾಸಿ ಸುತ್ತೈಳ ಸಮುದುರ
ಮತ್ತ ನಮ್ಮ ನಾಡವಳಗ
ಹಿಂತಾವರು ಯಾರ್‍ಯಾರು ಬಂದಿದ್ದಿಲ್ಲ

ಲೂಟಿ ಮಾಡಿದ ಬದಕು ಯೆಲ್ಲಾ
ರವಡ ಮಾಡಿ ವೋದಾರಲ್ಲಾ
ಈಟ ಗಡಾದವಳಗ ಬಿಡಲಿಲ್ಲಾ

ಸುತ್ತುಕಡಸೆ ನೋಡಿದರ
ಯಾತ್ತು ಯಾರ್‍ಯಾರಿಲ್ಲದಾಗಾಗಿ
ಕತ್ತಲ ಗುವದ ಹಾಕಿತಣ್ಣಾ ಜ್ಯಾಲಾ

ಆದ ರೀತಿ ಮಾತಗೋಳನು
ಸುಭೆಯಂದಾರ ಕುಂತಕೊಂಡು ಧಾರವಾಡಕ ಬರದ ಹಾಕಿದಲ್ಲಾ

೬ನೆ ನುಡಿ

ಬರದ ಪತ್ತರ ವತ್ತರದಿಂದ
ವಾಲಿಕಾರು ವೋದರಣ್ಣಾ
ದಾರಿ ಕೂಡಿಕೊಂಡ ಧಾರವಾಡಕ

ಗಚ್ಚಿನ ಬಂಗಲೆದವೊಳಗ ಕಚೆರಿಯಾಗಿತ್ತು
ಕಾಗದಾ ಬಿಚ್ಚಿ ವೋದಾರ ಸಾಹೆಬನ ಹುಂತೆಕ

ಓದಿಕೊಂಡ ಸಾಹೇಬ ನೋಡಿ
ಹೋದ ಮಾತಿಗೆ ಇನ್ನ್ಯಾಕೆಂದು
ಗಾದಿ ಬಿಟ್ಟ ಯೆದ್ದನಾಕ್ಷಣಕಾ
ಟೊಪ್ಪಿಗಿ ವೊಗಿದು
ಮಂಂಗೈ ಕಡಿದು
ಶಿಟ್ಟಿಲಿಂದ ಹಲ್ಲ ತಿಂದು
ಕಂಂತ ಪತ್ರ ಬರದ ಮಮ್ಮಾಯಂಕ್ಕ

ವಿಕ್ಟ್ರೋರಿಯಂ ಯೆಂಬಂ ಹಂತಾ ಶಕ್ತಿವುಳ್ಳ ರಾಣಿಯಂವರಂ
ಮೊಕ್ತಾ ನೋಡಿ ತಿಳಿದಾರ ತಮ್‌ವಂನಕ

ಐದನೂರಾ ಸೋದರ ಮಂದಿ
ಯೆಂರಡನೂರ ಕರಿಯಂಮಂದಿ
ಕಳವಿ ಕೊಟ್ಟ್ಯಾಳಾಗ ಟಾಕೊಟಾಕಾ

ಯೆಂಳದಂ ಅಷ್ಟ್ಟ ದಂಡ ಬಂತು
ಕಾಳಗಕಸ್ತಾ ಮಾಡಲಿಕೆ
ಬೆಳಗಾಂವಿ ಧಾರವಾಡ ಜಿಲ್ಲೇಕಾ

ಸಂಭೆಯಂದಾರ ತೊಗೊಂಡ ಯಿನ್ನ
ಸಬರ ಹಿಡಿಯಂದ ಹೋಗಬೇಕಂತಾನ
ಜೆಬರದಿಂದ ರಾಯಂನ ಕೊಲ್ಲುಂದಕ

೭ನೆ ನುಡಿ

ಶಿಟ್ಟಿಲಿಂದ ಸಂಭೆಯಂದಾರ
ಅಷ್ಟ್ಟ ಮಂಂದಿ ಹೊಂಡಿಸಿಕೊಂಡ್ಹೋಗಿ
ಹುಡಕ್ಯಾನೊ ರಾಯಂನ ಮಂದೆಲ್ಲೈತೆಂತ

ಹಳ್ಳ್ಯಾ ಕೊಳ್ಳ್ಯಾ ಗಂಡ್ಡ ಗಂವಿಯಾ
ಗಿಡ ಕಾಂತಾರಾ ಹುಡಕುತ ಹೊಂಟಾರಾ
ಹಳ್ಳ್ಯಾಲ ಗುಂಡ್ಡಕ ಹೋದರ ಮಂತ್ತಾ

ಇವರ ದಂಡಾ ಬಂತ ಆಂಬಂ ಸಂಳವು ನೋಡ್ಯಾನು ರಾಯಿಂನಾಯಿಂಕಾ
ಫಳಾರ ಮಾಡಿತವನ ಮಂಂದಿ ಕಂಂತಾ

ತವಕದಿಂದ ತಯಾರಾಗಿ
ಗಿಡಕ ಜ್ಯಾಂವಿಗಿ ಕಟ್ಟಿ ದೂರ ಹೋಗಿ ನಿಂತಾರೊ
ಹೂಲಿಗಾಳಿ ಹಿಡಿಸುತಾ

ಇಲ್ಲೆ ಆದಾನ ರಾಯಿನಾಯಿಕಾ
ಅಂದು ನೋಡೊ ಅವರು ಆಗ ಪೈರಗಟ್ಟಿ
ಹೊಡದಾರೋ ಸುತ್ತಾ

ಗುಂಡ ಮದ್ದು ಅವಟ ಗುಂಡು
ಗರನಾಲು ಟುಬಾಕಿ ಕರುಲಿ
ಹೊಡವುತಾರೊ ಇಲ್ಲ ಪುರಸೊತ್ತಾ

ಆವಾಜ ತಡಪಡ ಅಳ್ಳ ಹುರದಾಂಗ
ಕೊಳ್ಳದೊಳಗಿನ ಗಿಡಕ ಹೊಡದಾರ
ಗುದ್ದ ನಾದ್ಬಿಡದಿತ ಗದಣಿಸುತಾ

ಮೂರ ತಾಸ ಹೊಡದಾರ್ಕೆಲ್ಲಾ
ಮದ್ದು ಗುಂಡು ತೀರಿ ಹೋತಿ
ಮುನದಾನು ಅವರಿಗೆ ಬಗವಂತಾ

೪ನೆ ನುಡಿ

ಮದ್ದು ತೀರಿ ಬಂಡ ಆದಾರ
ಗುಂಡ ಹಾಕು ಸಪ್ಪಳ ನಿಂತದ್ದು
ಕಂಡ ರಾಯಣ್ಣ ಬಂದ ಬೆನ್ನ ವ್ಯಾಲಿ

ಕುರಿವೊಳಗ ತೋಳ ಹೊಕ್ಕ ಮುರಮುರದ
ವೊಗವೊಗದ ಹಿರಿಹಿರಿದ ಕಡದಾರ ಕತ್ತೀಲಿ

ಸುತ್ತಗಟ್ಟಿ ಕತ್ತಿಮಂದಿ ಯೆತ್ತ್ಯತ್ತೋಗಗೊಡದ ಕಡದಾರ
ಮುತ್ತಿಗಿ ಹಾಕ್ಯಾರೊ ದಂಡಿನ ವ್ಯಾಲಿ

ಪಿಸ್ತೂಲ ಪಿರಂಗ ಹಿರದು
ಬಾಕ ಬಿಲ್ಲು ಬಾಲೆಲೊಗದು
ನಾಕನೂರಾ ಮಂದಿ ಕೊಂದರಲ್ಲಿ

ಕಂಡ ಮಂದಿ ಚಂಡಿ ಕೋದಾರ
ರಂಡ ಬಿದ್ದವು ಗೊತ್ತ ಇಲ್ಲದ
ತಂಡ ತಂಡ ಮಾಡ್ಯಾರೊಂದ ಟೋಲಿ

ಕೊಳ್ಳದೊಳಗ ಕತಂತ್ರ ಆಗಿ ನೆತ್ತರ ಕಾವಲಿ
ಹರದೀತಣ್ಣಾ ಹಿಂತಾ ಶರಿ ಸೂರಿ ಆಗಿದಿಲ್ಲೊ ಯಲ್ಲಿ

ಉಳದ ಮಂದಿ ತೆಳಗ ಬಿದ್ದಂ
ಕತ್ತಿ ಚಲ್ಲಿ ಹಂಲ್ಲ ಕಚ್ಚಿ
ಕಲ್ಲ ಹೊತ್ತಾರಣ್ಣಾ ತೆಲಿ ಮ್ಯಾಲಿ

ಆದಕ್ಕೆಲೆ ಉದಯಂಕ ಯೆದ್ದ
ಹೋದ ಕಿತ್ತೂರ ತಳದ ಮ್ಯಾಲಿ
ತೇತಫಿರಂಗೆರ ದಂಡಿತ್ತಲ್ಲಿ

ಸೂರಿ ಮಾಡಿ ಬಿಡಂವುನಂತಾರ
ಯಾರಂ ರಾಜ್ಯ ಆಳದಾಂಗ
ಮೀರಿ ಇರವುನಂ ನಾಂವು ಲೋಕದಲ್ಲಿ

೯ನೆ ನುಡಿ

ಚಕ್ಕರಟೊಪ್ಪಿಗಿ ಫಿರಂಗೆರನಾ
ಲೆಕ್ಕವಿಲ್ಲದ ಕಡದ ದಂಡಿನ
ದಿಕ್ಕ ತೆಪ್ಪಿಸಿ ಬಿಟ್ಟಾರ್ಕೆಲ್ಲಾ ಹೋತಿ
ಪುಂಡರಾಗಿ ತರವುನ ಹೊನ್ನ
ಕಂಡ ಕಂಡ ಊರ ಬಡಿದಂ
ದಂಡಿಗಿ ನಮಂಗೆಲ್ಲಾರಿಗಿ ಆಗತತಿ

ಹಳ್ಯಾಲ ಹನವಂನಗಟ್ಟಿ
ತಳ್ಳಿ ಮಾಡಿ ತಾಳಾವಾಡಿ
ಹೋಗಿ ಬಡದಾರಣ್ಣಾ ಗಡಾದ ಪ್ಯಾಟಿ

ಅಗಸನ್ನಳ್ಳಿ ಅಂಬಡಗಟ್ಟಿ
ಕಾದರೊಳ್ಳಿ ಹಂಣಚಿಕಟ್ಟಿ ಬೆಳವಡಿ ಬಡದಾರ ಯೆಲ್ಲಾರಂ ಮಂತ್ತಿ

ಸೋದಳ್ಳಿ ಗೋದಗೇರಿ ಬಾಳಗುಂಡ ಇಟ್ಟಿಗಿ
ಬಡದ ಬಾಗೊಡೂರು ಮಂದಿ ಹೊಕ್ಕತಿ

ಚಮತದಿಂದ ರಾಯಿಂನಾಯಿಂಕಾ ಸಂಪಗಾಂವಿಯ ಕಚೆರಿ ಹೊಕ್ಕ
ಬೆಂಕಿ ಹೋದ ಸುಟ್ಟ ಹೋತಿ

ಹೊಂಗಲದೂರಾಗ ಹಾಸಿಕೊಂಡ ಕಿತ್ತೂರ ಕಿಲೆಯಂಕ ಹೋಗಿ
ಮತ್ತ ಅವರಿಗೆ ಹೇಳತಾನೊ ಈಗತಿ
ಅಂಜಬ್ಯಾಡ್ಯಾರ್‌ಯಾವಳಿನ್ನ ಬರತಾಳ ನೋಡುನಿಲ್ಲೆ
ಕಾವಲ ಕುಂತತಿ ಮಂದಿ ಹಿರದಕತ್ತಿ

ಯೆಷ್ಟ ದಾಳಿ ಮಾಡಿದಾನೊ
ಬಂಟ ಹೌದೊ ರಾಯಿಂನಾಯಿಂಕ
ಹುಟ್ಟಿದ ನಕ್ಷತ್ರ ಸಾಮರ್ಥಿ

೧೦ನೆ ನುಡಿ

ಅವನ ಹಿಡದ ಕೊಟ್ಟರ
ನಿಮಗ ಇನಾಮು ಕೊಡತೇವಂತ
ಡಂಗರ ಸಾಹೆಬ ಹೊಡಸಿದಾನ ಹತ್ತಿ ಶಿಟ್ಟಾ

ಸೂರಿ ಮಾಡಿ ಬಿಟ್ಟಾನಣ್ಣಾ ಯಾರು ಇದರ ಆಗಲಿಲ್ಲಾಂವಗ
ಮೀರಿ ಕುಂತ ಸರವರ ವಳಗ ಭಂಟಾ

ಹರುದಿಂದ ಮೂವರ ಕೂಡಿ
ಕುಶಾಲದಿಂದ ಮಾತಾಡಿ
ಮಸಲತ್ತ ಮಾಡ್ಯಾರೊ ಕುನಗಂಟಾ

ಸರ್ದಾರನ ಮುಂದ ಹೋಗಿ ವರ್ದಿ ಕೊಟ್ಟ
ಹೇಳತಾರು ಕಾಯಿಮು ಮಾಡಿ ಮಾತ ಗಟ್ಟಿ ಮುಟ್ಟಾ

ರಾಯಿಂನಾಯಿಂಕನ ಹಿಡದ ನಿಮಗ
ತಂದ ಕೊಡತೆವಂತ ಬಂದರ
ಮೂವರ ಕೂಡಿ ಕಾಗದ ಬರಕೊಟ್ಟಾ

ರಾಯಿಂನಾಯಿಂಕನಲ್ಹೋಗಿ
ಭಾಂವಸಂದ್ದ ಮಾತನಾಡ್ಯಾರ
ಜೀಂವದೊಳಗಿನ ಕಾಳಜಿ ಯಂಲ್ಲಾ ಬಿಟ್ಟಾ

ನಿನ್ನ ಕಡಶಿ ಇರತೆವಣ್ಣಾ
ನಮ್ಮನ ಮಾತರ ಉಳವಿಕೊಳ್ಳೊ
ಆಣೆ ಮಾಡಿ ಬಂದಿದೇವೊ ಹೊಂಟಾ

ಉಪ್ಪು ಗೊಬ್ಬರ ವಂಂಟ್ಟಿ
ಉರವು ದೀವಿಗಿ ವಂಂದ ಕಂಂತಂ ಹೇಳತಾರೊ ಕ್ರಿಯಾ ಕೊಟ್ಟಕೊಟ್ಟಾ

ಸಾವಿರ ದೇವರ ಆಣಿ ಕೊಟ್ಟು
ಸಕಾಟವಾಗಿ ಇದ್ದರಣ್ಣಾ
ತಿಳಿಯಂಲ್ಲಿಲ್ಲೊ ವಂನಸಿನ್ಯಾನ ಶಿಟ್ಟಾ

೧೧ನೆ ನುಡಿ

ನಡಿ ಹೋಗುವ ರಾಯಿನಾಯಿಂಕಾ
ನಾಡಸ್‌ಯೆಲ್ಲಾ ಬಡದ ತರವುನ
ಕೇಡ ಮಾಡಿ ಸುತ್ತಿನ ಹಳ್ಳಿಗೋಳಾ

ಕೂಡಿ ವಂಂದಿ ಹೊಂಟಿತಣ್ಣಾ
ದವಡ ಮಾಡ್‌ಹಂಬ್ಬಳ್ಳಿಗೆ ಬಂದು
ಕೇಡ ಮಾಡಿ ಹೋದರ ಬಾಳ ಗೋಳಾ

ಮಂದಿನೆಲ್ಲಾ ವಂಂದ ಕಳವಿ
ಹೊಂದಿಕ್ಕಿಂದ ನಾಲ್ವರ ನಾಂವು
ಹಿಂದ ಹೋಗುನಂತರ ಆತಿ ನಿವಳಾ

ಮಾತ ಕೇಳಿ ರಾಯಂಣ್ಣಾ ವಂನಸೋತ ಅವರ ಬೆನ್ನ ಹತ್ತಿದ
ಇಸವಾಸಕ ಬಿದ್ದ ಆದ ವಂಳ್ಳಾ

ಹಳ್ಳಿಕ ಹೋಗಿ ಜಳಕಾ ಮಾಡಿ ಉಣ್ಣು ಯಾಳಿಕ ಹೋಗುನಂದರ
ಕೇಳಿದ ರಾಯಣ್ಣಾ ಮಾತಗೋಳಾ

ಕತ್ತಿ ಇಟ್ಟ ಕಬರ ಬಿಟ್ಟ
ತೊಟ್ಟ ಚಣ್ಣ ತಗಿಯಾಕ ಕುಂತನ
ಹೊತ್ತಿ ಹಿಡಿದಾರ ಬಂದ ಮಾಡಿ ಬಾಳಾ

ಮಂದಿ ಕೂಡಿ ಹೊರಸಿನ ಮೇಲೆ ತಂದ ಹಾಕಿ ಬಿಕ್‌ಕೊಂಡ್‌ಹೋದಾರ
ಅವಗೆ ಹೊದಗಿತಣ್ಣಾ ಮಾಯಾ ಕಳಾ

ಕಚೇರಿವಳಗ ಹೋದ ಇಳವ್ಯಾರ
ಹೆಚ್ಚಿನ ಭಂಟ ರಾಯಿನಾಯಿಕನ್ನಾ
ಸರದಾರ ನೋಡಿದನ ಕಳಾ
ಧೀರ ಅಂಬು ಕೂನಾ ಸರದಾರ

ಪೂರಾ ತಿಳದು ಇವನ ಕೊಲಬಾರದಂದ
ಮುರಗ್ಯಾವ ಇವನ ಕರುಳಾ
ಇಷ್ಟು ಮಾತು ಕೇಳಿ ಮೂರ ಮಂದಿ
ನಿಷ್ಟಾದಿಂದ ಸಾಹೆಬಗ ಹೇಳ್ಯಾರ
ಕಷ್ಟು ತಂದ ಇಟ್ಟರಿ ನಮುಗ ಬಾಳಾ

೧೨ನೆ ನುಡಿ

ಸರದಾರನ ಮುಂದ ನಿಂತು
ಕರವ ಮುಗಿದು ಹೇಳತಾರ ಯಿಂವರು
ನೀಂವು ತಂದಿರಿ ನಮ್ಮ ಜೀಂವದ ಸಂತ್ರಾ

ರಾಯಿನಾಯಿಕನ ಬಿಟ್ಟರ ನೀಂವು
ನಾಂವು ಮಾತರ ನಾಡಾಗಿರುದಿಲ್ಲ
ನಮ್ಮನ್ನ ಕಡದ ಹಾಕತಾನ ಪುರ್ತಾ

ನಮಗ ಮುಂಚೆ ಗಲ್ಲಿಗ್‌ಹ್ಯಾಕಿ
ಸುಮ್ಮನ ಬಿಡರಿ ನೀಂವು ಇವನ
ಅಂತಾರಿವರು ಸಾಹೆಬನ ಮುಂದ ನಿಂತಾ

ಇದನ್ನು ಕೇಳಿ ಸಾಹೆಬ ಆಗ
ಆದರಂತೆ ಮುಮ್ಮಾಯಂಕ ಬರದಾ
ಹಾಕಿದಾನೊ ಮಾಡಿ ಸಹಿ ಚಮಂತಾ

ತಳದಾಗ್ಹೋಗಿ ಚವಕಶಿ ಆಗಿ
ತಿಳದ ವಿಚ್ಯಾರ ಮಾಡಿ ಕಳವ್ಯಾರ
ಬೆಳದ ಮನುಷ್ಯನ ಕೊಲ್ಲಬಾರ್ದಂತಾ

ಉತ್ತರ ಬರದ ಬರವುದರೊಳಗ
ವತ್ತರ ಮಾಡಿ ರಾಯಿನಾಯಿಕನ್ನ
ಗಲ್ಲಿಗ್ಹಾಕ್ಯಾರಣ್ಣಾ ಅವರು ನಿಂತಾ

ಧೀರ ರಾಯಿನಾಯಿಕನ ಕೊರಳಿಗೆ
ಸವಕ ಹಾಕಿ ತೂಗ ಬಿಟ್ಟಾರ
ನಿಂತಾರೊ ಜನರೆಲ್ಲಾ ಮರಗುಂತಾ

ಹಿಂತಾ ಭಂಟ ರಾಯಿನಾಯಿಕನ
ಮತ್ತ ಕೊಲ್ಲಬಾರ್ದಿತ್ತಂತ
ಸುತ್ತಿನ ಜನರು ದುಖ್ಖಾ ಮಾಡಂತಾ

೧೩ನೆ ನುಡಿ

ಪಾಶ ಕೊಟ್ಟ ಸರದಾರ್ ಆಗ ದ್ಯಾಸಾ ಆಗಿ ಮರಗುತ ನಿಂತಾನ
ಹಿಂತಾ ಭಂಟನ ಕೊಲ್ಲಬಾರ್ದಿತ್ತಂತಾ

ಹತ್ತ ರೂಪಾಯಿ ಖರ್ಚ ಮಾಡಿ
ಮತ್ತ ಇವರ ಮಣ್ಣ ಕೊಡರೆಂತ
ವತ್ತರ ಮಾಡಿ ಹೇಳಿದ ಸಾಹೆಬ ನಿಂತಾ

ಚಂದದಿಂದ ರಾಯಿನಾಯಿಕನ
ಮಂದಿ ಕೂಡಿ ಮಣ್ಣ ಕೊಟ್ಟಾರ
ಇಂದಿಗೆ ಮುಳಗಿದಾಂಗ ಆತಿ ಹೊತ್ತಾ

ಆದ ಜ್ಯಾಗಾದ ಮೇಲಿ ಗಿಡಾ
ಬ್ಯಾಗದಿಂದ ತಂದ ಹಚ್ಯಾರ
ತೂಗತಾವ ತೊಟ್ಟಿಲ ಸುತ್ತಮುಂತ್ತಾ

ಸತ್ಯವಂತ ರಾಯಿನಾಯಿಕಗ
ಮತ್ತಾ ಜನರು ನಡಕೊಂಡವರಿಗೆ
ಪುತ್ರಸಂತಾನ ಕೊಟ್ಟುದಾನ ಮಸ್ತಾ

ವೆಂಕನಗೌಡಾ ನಿಂಗನಗೌಡಾ
ಬಾಳನಾಯಿಕಾ ಮೂವರ ಕೂಡಿ
ಹರುಷವಾಗಿ ಬಂದರ ನಕ್ಕೊಂತಾ

ಬಿಚ್ಚಗತ್ತಿ ಚನಬಸವಣ್ಣಾ
ಹೆಚ್ಚಿನ ಭಂಟಾ ಗಜವೀರಾ
ಇವರು ಕುಂತ ಹಾಕತಾರೊ ಮಸಲತ್ತಾ

ಕಡ್ಡಿಗುದ್ದಿ ಬಾಲಣ್ಣಾ ಕಿಲ್ಲೆದ ಭೀಮಣ್ಣಾ
ಬೆಳವಡಿ ವೊಡ್ಡರ ಯೆಲ್ಲಣ್ಣಾ
ಕಚೆರಿಗೆ ಹೋದರೆಲ್ಲ ಮಂದಿ ಸಹಿತಾ

ಸರದಾರಗ ಹೋಗಿ ಅಂತರ ಯೇನ ಬಿರದ ಕಳದೆ ನಮದು
ಹೋತೆ ನಮ್ಮ ಜೀಂವದ ಕಡ್ಡಿ ಸತ್ತಾ

ಹಿರದ ಕತ್ತಿ ಕೈಗ ಹಿಡಕೊಂಡು
ತಿರಿಗಿ ಗುಂಡ್ಡ ಬಿದ್ದ ವೋಡ್ಯಾರ
ಮರತ ಹೋದಿತಣ್ಣಾ ಯಲ್ಲ ಮಾತಾ

ಮಂಡಲ ಹೆಬ್ಬಳ್ಳಿ ಪುಂಡರು ಬಸವರು ಮಾಡಿದ ಲಾವಣಿ
ಕಂಡು ಹೇಳಿದ ಕವಿ ಮಾಡಿ ಸ್ವಥಾ

ಆದಾಯ ತೆರಿಗೆ*

ಸದ್ಯದ ಆದಾಯ ತೆರಿಗೆಗೆ ಈ ಲಾವಣಿ ಅನ್ವಯಿಸುವುದಿಲ್ಲ. ೧೮೬೦ರ ಜುಲೈ ೩೧ ರಿಂದ ಜಾರಿಗೆ ಬಂದ ೩೨ನೆಯ ಕಾಯಿದೆಯ ಪ್ರಕಾರ ಆಸ್ತಿ ಉದ್ಯೋಗ ವ್ಯಾಪಾರ ಮತ್ತು ಕಚೇರಿಗಳ ಆದಾಯಗಳ ಮೇಲೆ ಹಾಕಿದ ಮೂಲ ಸುಂಕವನ್ನು ಕುರಿತದ್ದು ಈ ಲಾವಣಿ. ೧೮೬೮ರ ೮ನೆಯ ಕಾಯಿದೆ ಬರುವತನಕ ಹಿಂದಿನ ಕಾಯಿದೆ ರದ್ದಾಗದಿದ್ದರೂ ಹಾಡಿನಲ್ಲಿ ಬರುವ ಹೇಳಿಕೆಯಿಂದ ನಮಗೆ ತಿಳಿದುಬರುವಂತೆ ಈ ಸುಂಕ ಕೇವಲ ಎರಡು ವರ್ಷಗಳವರೆಗೆ ಮಾತ್ರ ಸಂಗ್ರಹಿತವಾಯಿತು.

ನಂಬಿಕೆಯಾಗದ ಯಾವ ಅಂಶವೂ ಈ ಹಾಡಿನಲ್ಲಿಲ್ಲ. ಯಾವಾಗಲೂ ಗಮನಿಸಲ್ಪಡುತ್ತಿದ್ದ ಆದಾಯ ಮತ್ತು ಸನದು ತೆರಿಗೆಗಳ ಬಗ್ಗೆ ಇದ್ದ ಅಪಖ್ಯಾತಿ ಮತ್ತು ಸಂಶಯಗಳನ್ನು ಕುರಿತು ಈ ಹಾಡು ಉದ್ದಕ್ಕೂ ಸರಳವಾಗಿ ವಿವರಿಸುತ್ತ ಹೋಗುತ್ತದೆ. ಅದರಲ್ಲೂ ಭೂಕಂದಾಯವನ್ನು ತೆರುತ್ತಿದ್ದ ಬೇಸಾಯಗಾರರು ಮುಖ್ಯರು. ಈ ತರಹದ ನೇರತೆರಿಗೆ ಅವರಿಗೆ ಹೊರೆಯಾಗಲಿ ಎಂದಾಗಲೀ, ಅಪರೂಪದ ಸಂದರ್ಭಗಳಲ್ಲಿ ರಕ್ಷಣೆ ಯಾಗಲಿ ಎಂದಾಗಲೀ, ಅಲ್ಲ. ಆದರೆ ಹೆಚ್ಚು ಕಡಿಮೆ ಅಂಥ ತೆರಿಗೆಗಳು ಅವರ ಮೇಲೆಯೇ ಹೆಚ್ಚಾಗಿ ಬೀಳುತ್ತಿದ್ದುದರಿಂದ ಅದರಿಂದುಂಟಾಗುತ್ತಿದ್ದ ಫಲಿತಾಂಶಗಳನ್ನು ತಡೆಯಲು ಇಂಗ್ಲಿಷ್ ಜಿಲ್ಲಾಧಿಕಾರಿಗಳ ಎಲ್ಲ ಪ್ರಯತ್ನಗಳನ್ನು ವಿರೋಧಿಸಲಾಗುತ್ತಿತ್ತು.

ಹಾಡಿನ ಪ್ರಮುಖ ಅಂಶಗಳು ತಿಳಿಸುವಂತೆ, ಸಾಮಾನ್ಯ ಉದ್ದೇಶಗಳಿಗೆ ಶೇಕಡಾ ಮೂರರಂತೆಯೂ, ರಸ್ತೆಗಳು ಕಾಲುವೆಗಳು ಮತ್ತು ಇತರ ರಿಪೇರಿ ಕೆಲಸಗಳಿಗಾಗಿ ಶೇಕಡಾ ಒಂದರಂತೆಯೂ, ಸುಂಕವನ್ನು ವಿಧಿಸಲಾಗುತ್ತಿತ್ತು. ರಸ್ತೆ ಮಾಡಿಸುವುದು ಮತ್ತು ಇತರ ರಿಪೇರಿ ಕೆಲಸಗಳನ್ನು ನಡೆಸುವುದು ಮುಂತಾದ ಯೋಜನೆಗಳೆಲ್ಲ ರೈತರ ಹಣವನ್ನು ಸುಲಿಯುವುದಕ್ಕಾಗಿ ಕಂದಾಯದ ಅಧಿಕಾರಿ ಒಡ್ಡುತ್ತಿದ್ದ ನೆವಗಳಾಗುತ್ತಿದ್ದುವು. ಅಲ್ಲಿ ಕೆಲವು ನಿಯಮಗಳಿದ್ದುವು. ವಾರ್ಷಿಕ ಆದಾಯ ಇನ್ನೂರು ರೂಪಾಯಿಗಳಿಗಿಂತ (ಹೆಸರಿಗೆ ಮಾತ್ರ ಬ್ರಿಟಿಷ್ ನಾಣ್ಯದ ಇಪ್ಪತ್ತು ಪೌಂಡುಗಳು) ಕಡಿಮೆ ಇದ್ದರೂ ತೆರಿಗೆ ವಿಧಿಸಲ್ಪಡಬೇಕು ; ಒಟ್ಟುಮೊತ್ತ ಕಡೆಯಪಕ್ಷ ಆರುನೂರು ರೂಪಾಯಿಗಳನ್ನು ಮುಟ್ಟದಿದ್ದರೂ, ಬರೀ ಬೇಸಾಯದ ಕಸಬುಗಳಿಂದ ಆದಾಯವಿಲ್ಲದಿದ್ದರೂ, ತೆರಿಗೆ ವಿಧಿಸಲ್ಪಡಬೇಕು ; ಐದುನೂರು ರೂಪಾಯಿಗಳಿಗಿಂತ ಕಡಿಮೆ ಆದಾಯಗಳಿಂದ ಶೇಕಡಾ ಎರಡರಷ್ಟು ಸಂಗ್ರಹಿಸಲ್ಪಡಬೇಕು ; ಮತ್ತು ಸಾರ್ವಜನಿಕ ಕೆಲಸಗಳಿಗೆ ಶೇಕಡಾ ಒಂದರಷ್ಟೂ ಇಲ್ಲ. ಜನಪ್ರಿಯ ಶೂರ 'ಹಿತ್ತಾಲಿ ವೀರಭದ್ರ' ದೃಶ್ಯದಲ್ಲಿ ಕಾಣಿಸಿ ಕೊಂಡಾಗ, ಅಪೀಲುವಿಚಾರಣೆಯ ಅಧಿಕಾರಗಳನ್ನುಳ್ಳ ಅಧಿಕಾರಿಯಿಂದುಂಟಾದ ವಿಚಾರಣೆಗಳಿಗೆ ಉತ್ತರಿಸುತ್ತ, ತನ್ನ ಹಳ್ಳಿಯ ಜನಗಳ ಆದಾಯಗಳಿಗನುಸಾರವಾಗಿ

---

* The Income tax; Indian Antiquary; 1886; Vol. 15; p. 389.

ಪ್ರಾಮಾಣಿಕವಾಗಿ ಐದುನೂರು ರೂಪಾಯಿಂಗಳ ಮಿಂತಿ ಹಾಕಿದುದು, ಕಂದಾಯಂದ ಅಧಿಕಾರಿ ಮತ್ತು ಹಳ್ಳಿಗರಿಗೆ ಸಂತೋಷವಾಗುವಂತೆ ಇತ್ತು.

ಇಬ್ಬರು ಇಂಗ್ಲಿಷ್ ಅಧಿಕಾರಿಗಳನ್ನು ಹೆಸರಿಸಬೇಕು : ಒಬ್ಬ, 'ಗಾಡಿನ್ ಸಾಹೆಬ್' ಎಂದು ಕರೆಸಿಕೊಳ್ಳುತ್ತಿದ್ದ ಧಾರವಾಡ ಜಿಲ್ಲೆಯ ನ್ಯಾಯಾಧೀಶನೂ ಮೊಟ್ಟಮೊದಲ ಸಹಾಯಕ ಕಲೆಕ್ಟರನೂ ಆಗಿದ್ದ ಬೊಂಬಾಯಿ ಸಿವಿಲ್‌ಸರ್ವಿಸ್‌ನ ದಿ. ಎಂ. ಸ್ಟೀವರ್ಟ್ ಸೆಯಿಂಟ್ ಜಾನ್ ಗೋರ್ಡನ್ ; ೧೮೬೦ರ ಅಕ್ಟೋಬರ್‌ನಲ್ಲಿ ಧಾರವಾಡ ಜಿಲ್ಲೆಯ ಆದಾಯ ತೆರಿಗೆಯ ವಿಶೇಷ ಅಧಿಕಾರಿಯಾಗಿ ನೇಮಿಸಲ್ಪಟ್ಟವನು. ಗೌರ್ನರ್ ಜನರಲ್ ಅವರ ಆಲೋಚನಾಸಭೆಯ 'ಹೆಚ್ಚಿನ ಸದಸ್ಯ'ನ ಸ್ಥಾನದಲ್ಲಿದ್ದಾಗ ಈತ ೧೮೬೭ ಅಥವಾ ೧೮೬೮ರಲ್ಲಿ ನಿಧನನಾದ. ಈತ ಸತ್ತಮೇಲೆ, ಹುಬ್ಬಳ್ಳಿಯ ಹೊಸ ಬಡಾವಣೆಯೊಂದಕ್ಕೆ 'ಗೋರ್ಡನ್ ಪೇಟೆ' ಎಂದು ಕರೆಯಲಾಯಿತು. ಔಷಧಾಲಯ, ಹಳೆಯ ಮತ್ತು ಹೊಸ ಹುಬ್ಬಳ್ಳಿಗಳನ್ನು ಬೆಸೆದಿರುವ ಸೇತುವೆ, ಊರಿಗೆ ನೀರನ್ನು ಪೂರೈಸುವಲ್ಲಿ ಪ್ರಮುಖಪಾತ್ರ ವಹಿಸುತ್ತಿದ್ದ ಗುರುಸಿದ್ದಪ್ಪ ಹೊಂಡ ಅಥವಾ ಜಲಾಶಯ–ಇವೆಲ್ಲ ಅವನ ನಿರ್ದೇಶನದಲ್ಲಿ ನಿರ್ಮಾಣವಾದವು. ಎರಡನೆಯ ಅಧಿಕಾರಿ, 'ಯೆಲಪಾಟ್ ಸಾಹೆಬ್' ಎಂದು ಕರೆಸಿಕೊಳ್ಳುತ್ತಿದ್ದ ಎಂ. ಜಾನ್‌ಎಲ್ಫಿನ್‌ಸ್ಟನ್ ಇತ್ತೀಚೆಗೆ ನಿವೃತ್ತನಾದ. ಈತ ಮೊದಲ ಸಹಾಯಕ ಜಿಲ್ಲಾಧಿಕಾರಿಯಾಗಿ, ಅನಂತರ ಜಿಲ್ಲಾಧಿಕಾರಿ ಮತ್ತು ನ್ಯಾಯಾಧೀಶನಾಗಿ–೧೮೬೧ರ ಆಗಸ್ಟ್‌ನಿಂದ ೧೮೬೩ರ ಜೂನ್ ವರೆಗೆ ಮತ್ತು ಅನಂತರ ಅನೇಕ ಸಂದರ್ಭಗಳಲ್ಲಿ–ಕೆಲಸ ಮಾಡಿದ. ಜಿಲ್ಲೆಯ ಜನಗಳಲ್ಲಿ ಅತ್ಯಂತ ಪ್ರಸಿದ್ಧನಾಗಿದ್ದ.

ಈ ಸಂದರ್ಭದಲ್ಲಿ ಪಲ್ಲವಿಯ ಧಾಟಿಯ ಬಗ್ಗೆಯೂ ಹೇಳಬೇಕಾಗಿದೆ. ಪಲ್ಲವಿಯ ಈ ಧಾಟಿ ಹೆಚ್ಚುಕಡಿಮೆ ಹಾಡಿನ ಉದ್ದಕ್ಕೂ ಬರುತ್ತದೆ. ಪ್ರಾಸಬದ್ಧತೆಯು ಗುಣ ಹಿಂದಿನ ಲಾವಣಿಗಿಂತ ಈ ಲಾವಣಿಯಲ್ಲಿ ಹೆಚ್ಚು ನಿಯತವಾಗಿ ಪಾಲಿಸಲ್ಪಟ್ಟಿದೆ. ಪ್ರೊಫೆಸರರ ಮಗನಿಂದ ಸಂಯೋಜಿತವಾದುದು ಎಂಬ ನಿರೀಕ್ಷೆಯನ್ನು ಸುಳ್ಳಾಗಿಸದೆ ಕಾರ್ಯನಿರ್ವಹಣೆ ಉದ್ದಕ್ಕೂ ಹೆಚ್ಚು ಕಲಾತ್ಮಕವಾಗಿದೆ.

ಪಲ್ಲಾ

ಏನ ಹೇಳಲಿ ಜನ್ಮದ ಗೋಳಾ
ಇಂಗ್ರಜಿ ಉಪದರ್ ಆದೀತ ಬಾಳಾ
ಬಡವರ ಆಳತಾರೊ ಗಳಗಳಾ
ಮಾಡತಾರ ಚಿಂತಿ

೧ನೆ ನುಡಿ

ಮಂದಲಿಂದ ಕೇಳರಿ ಮಂಜಕೂರಾ
ಬಂದಾರ ಗಾಡಿನ್–ಸಾಹೇಬ ಸರದಾರಾ
ಕಂಂತಕೊಂಡ ತಗದ ಒಂದ ಹಂನ್ನಾರಾ
ದಂಡ್ಡ ಎಳೋ ಈ ಗತಿ

ಗಾಡಿನ್ ಸಾಹೇಬ ಹೇಳತಾನ ತೋರಿ
ಹಸನ ಮಾಡಿಸ್ತೇನ ರಾ–ದಾರಿ
ಇದಕ ನೀವ ಏನ ಅಂತೀರಿ
ಕೆಲಸ ನಿಮಂದs ಅತಿ

ಪಂಚರ್ ಎಲ್ಲಾರು ಆದಾರಾ ಕಬೂಲಾ
ಮಂಂದ್ ಹಿಂಗ್ ಆದೀತ್ ಅನ್ನುದಂ ತಿಳಿಲಿಲ್ಲಾ
ದಂಡ್ಡಿನ ಗರ್ವಿಲಿ ತೆರದಾರ ಹಳ್ಳಾ
ಇಲ್ಲ ಕಕಲಾತಿ ॥ಚಾಲ॥*

ಆಗ ಹಾಕಿದಾರ ಕೇಳ ಕಷ್ಟಪಟ್ಟಿ
ಕಠಿಣ ಬಡವರದ ತುಂಬಂದಂ ಹೊಟ್ಟಿ
ಮಾರಿ ಕೊಟ್ಟಾರೊ ನೂಲಂವ ರಾಟಿ

ದಂಡ್ಡಿನ್ ಆಸೆ ಹತ್ತಿತ ಸರಕಾರಕ
ಚೌಕಾಶಿ ಬಾಳಾತ ದಿನದಿನಕ
ಸಗಣಿ ಗಂಟ್ಟಿ ಮಾಡ್ಯಾರ ಆ ಕ್ಷಣಕ

ಕಟಗಿ ಮಾರತಾರ ಮಾಡಿ ತೂಕ
ಪ್ಯಾಂಡಾರೆರು ಲಮಾಣೆರು ಕಟಗಿ
ಮಾರಿ ತಮ್ಮ ಮಕ್ಕಳ್ನ ಮಾಡತಿದ್ರು ಜೋಕಿ
ಈಗ ಬೇಡಂದ ಬಂದತ್ತಿs ಬಿಕ್ಕಿ
ಕೆಲಸ ಹೀಂಗ್s ಅತಿ

---

* ಧಾಟಿ

೨ನೆ ನುಡಿ

ಸರಕಾರಕ ದೊರಿತ ಮಸಲತ್ತಾ
ಕರಪಟ್ಟಿ ಹಾಕ್ಯಾರ ತುರತಾ–ತುರತಾ
ರೈತರ ದುಡ್ಡ ಎಳುವ ಹಿಕಮತ್ತಾ
ಮಾಡಿದಾರ ಹೀಂಗ

ಸರಕಾರದ ಆತ ಬಲಜೋರಿ
ಲೋಟಿಸ ಕೊಟ್ಟ ವಾಯಿದೆ ಮಾಡಾರಿ
ಕೊಡಲಿದ್ರ ಬೆಸಕ ಜೋರಿ
ನಡಸರಿ ಅಂಜಿಕಿಲದ್ಹಾಂಗೆ

ಕಲೆಕಟರ ಸಾಹೇಬ ಬಂದ ಆಗ
ಬಂದಂ ಇಳದಾನ ಬಂಗಲೇದಾಗ
ಜನರೆಲ್ಲ ಹೋಗಿ ಮಂತ್ರಿದಾರ್ ಅವಂಗ
ಶಿವಾ ಇಳದ್ಹಾಂಗ

ವಾಯಿದೆ ಮೀರಿದರ್–ಹಚ್‌ಚರಿ ಬಡ್ಡಿ
ಮನಿ ಮಾರ ತಗೋಳ್ರಿ ಲಿಲಾವ ಮಾಡಿ
ಬಾಳ ಮಂದಿ ಕೊಟ್ಟಾರೊ ಗೋಳಿ–ಆಡಿ
ಹೆದರಿ ಮನದಾಗ ‖ಚಾಲ‖

ದೈವದವರೆಲ್ಲಾ ಕೂಡಿ ಸಮಸ್ತಾ
ಅರ್ಜಿ ಕೊಟ್ಟಾರೊ ಮಾಡಿ ಮಸಲತ್ತಾ
ಚೌಕಾಶಿ ಮಾಡರಿ ದಣೇರಕಂಟಾ
ಪಟ್ಟಿ-ಕಂಡೊ ನಮಗ್–ಇಲ್ಲ ತಾಕತ್ತಾ

ಸಾಹೇಬ ಮನಸಿಗೆ ತರಲಿಲ್ಲಾ
ಈ ಮಾತs ನಮ್ಮ ಕಡೆ ಇಲ್ಲಾ
ಓಡಿಯಾಡಿ ಹೋದವ ಕೈ–ಕಾಲಾ
ಕಂಳ ನೀರ ಬಿಟ್ಟ ಕುಂತರ್-ಅಲ್ಲಾ

ಸೌಕಾರ ವಸ್ತೊಡವಿ ತಗದಿಟ್ಟು
ಹರಕ ದೋತರ ಅಂಗಿಯಂ ತೊಟ್ಟು

ಬಂಗಲೆಕೆ ಹೋಗಂವ ನಾಚಿಕಿ ಬಿಟ್ಟು
ಬಡವರಾ ಗತಿ

೩ನೆ ನುಡಿ

ಸಾವಕಾರ ಮಾಡ್ಯಾರ ಯಂದಿಗಟ್ಟಿ
ಬಿಟ್ಟೀತಂತ ನಮಗೆ ಕರಪಟ್ಟಿ
ಬಾಳಾ ಬಟ್ಟರ್ ಅಣ್ಣಾ ಕಟಪಟಿ
ಬಂಗಲೆಕ ಓಡಿಯಾಡಿ

ಕೂಡಿ ಕಂಂತರಣ್ಣಾ ಸಾವಕಾರಾ
ಕಂಂತಂಗ ಕಂಂತ್ರೋ ಕೂಲಿ ತಳವಾರಾ
ತಮ್ಮ್ಮತಮ್ಮ್ಯೊಳಗ ಹಾಕತಾರ ಉಸರಾ
ತೆಳಕ ಮಾರಿ ಮಾಡಿ

ಉರೆಲ್ಲ ಪಟ್ಟಿ ಯಂತ್ಯಾರಂ
ಕಮಂರಿ ಪ್ಯಾಟ್ಯಾಗ ಬಂದ ಕಂಂತಾರಂ
ಜೋರಿಲಿಂದ ಬದಕ ತರಸ್ಯಾರಂ
ಜಪ್ತಿ ಮಾಡಿ

ಪಟಿಗಾರ ಹೇಳ್ಯಾರ ಸುಭೆದಾರಗ
ನೀ ನಮಂ ಹಡದ ತಂದಿ ಹಾಂಗ
ಸೊಲ್ಪ ಕರಣ ಬಂದ ಹೊಟ್ಯಾಗ
ಬಿಡೊ ದಯಂ ಮಾಡಿ

ತುಮಂ ಖಾವಂದ ಛೇ ಮಾಯಂ ಬಾಪ್
ಹವಶಾರೆ ಪಟ್ಟಿ ಕರೋ ತುಂವಿಂ ಮಾಪ್
ಕಾಟ್‌ಲಾಯಾ ಚೋಳಿನಂ ಚಾಪ್
ದಿದಾ ರಡಿ–ರಡಿ ॥ಚಾಲ॥

ಹಲಗಿ ಕಂಂಟೀ ರೆಸವಿಂ–ಪಟ್ಟಿ
ಬಾಂಡೆ–ಸಾಮಾನಾ ಜಂಮಾನಂ–ತಾಟಿ
ಲಿಲಾವ ಮಾಡಸ್ಯಾರಂ ಕಿಮ್ಮ್ಮತ ಕಟ್ಟಿ ॥ಚಾಲ॥

ಬಾಳ ಕೆಟ್ಟರ್‌ಅಣ್ಣಾ ಸರಕಾರಾ
ಬಡವರ ತಂದಾರ ಕಣ್ಣೀರಾ
ಹೆಂತಾ ಯಾಳೇ ತಂದಿ ಈಶ್ವರಾ
ನಮಗ್ಯಾರದಿಲ್ಲ ಆಧಾರಾ

ಲೈ ರಡ್ಯಾ ಕಹ್ ತರಿ ಸಬಿ ಬೈಟಿ
ಕಾ ಕರೆ ತರ್-ಬಿ ಚಂಕ್ತ ನೈಪಟ್ಟಿ
ಚಡಾಯ್-ಲಾಯಾ ಜವಯಂನಂ-ತಾಟಿ
ಕರಿ ಕಹ್ ನ ಚಾತಿ

೪ನೆ ನುಡಿ

ಹರವನಳ್ಳಿ ರಾಯಪ್ಪ ಬರಕೊಟ್ಟಾ
ಇವರಿಗಿ ಹುಟಾಜ್-ಐತಿರಿ ಯತ್ತಿಪ್ಪಾ
ಬಡವರ ಸುತ್ತ ತಂದನೊ ಕಷ್ಟಾ
ಉಳೀಲಿಲ ದರಮಾ

ಕಮಂರಿ ಪ್ಯಾಟಿ ಮಂಸಲಾರ್-ಒಳಿಗಟ್ಟಿ
ಕೊಡುದಿಲ ಹೋಗಂದಾರ ಕರಪಟ್ಟಿ
ಬೇಕಾರ ತಗೋಳ್ರಿ ದಂಡಾ ಕಟ್ಟಿ
ಇದರ ನಿಮಂ ಹಂಕಂಮಂ

ಸಂಭೆದಾರ ಸಿಟ್ಟಲಿ ಆದ ಬೆಂಕಿ
ಮನಿ-ಮನಿ ನೋಡ್ಯಾನೊ ಎಲ್ಲಾ ಹಂಡಿಕಿ
ತಾಂಬರ-ಚೂರ ಕರವಾಯಿ ಸಂಟಕಿ
ಪೊದದ್ದ ಕೇಳ್ರಿ ನೇಮಾ ॥ಚಾಲ॥

ಮಂಸಲರ ಎಲ್ಲಾ ಕಂತಾರ ಕೂಡಿ
ಮಸೂತಿ ವಳಗ ಮಸಲತಾ ಮಾಡಿ
ಕಾ ಹೈ ಧೊಂಡ್‌ಕರ್ ಲಕಾವ್-ಅರೆ ಲಕಡಿ
ಹಿಂದಕ ಸರಿದಿರಿ ಅನಮಾನ ಮಾಡಿ

ಮಸಲತ್ತ ಹಾಕಿದಾರ ಹೀಂಗ
ಬೇಸೇಕ ಹೊಡಂನಂ ಬಂದಮಂಗ

ಆದ್ರ ಬೀಡಿ ಹಾಕ್ಯಾರ ನಮಗ
ವಂತ್ರೇನ ಮಾಡ್ಯಾರ ಇದ್ರ ಮ್ಯಾಗ

ಬಡೆ ಕಟ್ಯೆ ನವೆ ರೆ ದಿವಾನಾ
ಸರಕಾರ್-ಕೆ ಸಾತ್ ವಂಸ್ತಿ ನಾ ಕರ್ನಾ
ಮಾ ಬಾಪ್ ಕ ರಕೋೀ ಪಾವಾ ಪಡ್ನಾ
ಕಯಿಂ ತೊ ವೇರ್ ಆತಿ

೫ನೆ ನುಡಿ

ಎಲಪಾಟ್ ಸಾಹೇಬ ಬಂದ ಸರದಾರಾ
ಬಡವರ ಮ್ಯಾಲ ಇದ್ದ ಬಲ ಫೇರಾ
ಆಗ ಕಂಂತ ಮಾಡ್ಯಾನ ವಿಚಾರಾ
ಕೇಳರಿ ಹೀಂಗ

ಆಗ ಮಂಸಲರೆಲ್ಲಾರಂ ಕೂಡ್ಯಾರು
ಮಂಸಲತ ಮಾಡಿ ಅರ್ಜಿ ಕೊಟ್ಟಾರಂ
ಬಂಗಲೆಕ ಬಂದ ಎಲ್ಲಾರ ಕೂಡ್ಯಾರಂ
ಕೇಳರಿ ಆಗ

ತಂಮ್ ಖಾವಂದ ಅರ್ಜಿ ಯಿಂ ಸಂನ್ನಾ
ಹಮಾರಿ ಪಟ್ಟಿ ಮಾಪ್ ತಂಂ ಕರ್ನ್ನಾ
ನಿಂತಕೊಂಡ ನೋಡಿದಾನ ಬಡವರನಾ
ಕರುಣ ಹೊಟ್ಯಾಗ

ಸಾಹೇಬ ನೋಡಿದಾನ ಸೋಸಿ
ಲಗಂಮಾಡಿ ಅರ್ಜಿ ಕಂಡಂತಾನ ಬರಸಿ
ಅವನ ಹೊಟ್ಯಾಗ್-ಆತ ಕಸವಿಸಿ
ಬೆಂಕಿ ಬಿದ್ದಾಂಗ

ಹೆಂಗಸರಂಟ್ಟಂತ ಹರಕ ಪರಕ ಸೀರಿ
ನಿಂತಕೊಂಡ ನೋಡಿದನ ಐಸ್ವರಿ
ಗರ್ಮೆಂ ನೈ ಕರ್ಕೋೀ ಚಾರಿ
ಅಳತಾರ ಆವಾಗ

ಆಗ ಸರದಾರಾ ಮಾಡ್ಯಾನ ವಿಚಾರಾ
ಕುಂತಿದಾರಣ್ಣಾ ದೊಡ್ಡ ಸಾವಕಾರಾ
ಬಡವರ ಮಾಡ್ಯಾರ ನಮಸ್ಕಾರಾ
ಸಾಹೇಬ ಕೇಳಿದ ಕಿವಿಗೊಟ್ಟಾ
ಇವರಿಗಿ ಹುಟಾಜ್-ಆತಿ ಹೇಳ್ರಿ ಎಷ್ಟಾ
ಹಿಟಾಳಿ ಈರಬದ್ರಪ್ಪಾ ಬರಕೊಟ್ಟಾ
ಐನೂರ ರೂಪಾಯ್ದು ಅಂದಾಜಿಟ್ಟ
ನೀವ ಹೇಳಬ್ಯಾಡ್ರಿ ಕಿರೆ-ಸುಟ್ಟಾ
ಪುಂಚರ ಕಿವಿಮ್ಯಾಗ್ ಇಟ್ಟಾ

೬ನೆ ನುಡಿ

ಎಲ್ಲಾರ ಕೂಡಿ ಮಾಡತಾರ ಲೆಕ್ಕಾ
ತಮುತಮೊಳಗ ಹಾಕತಾರ ತೂಕ
ಎಷ್ಟೂಂತ ಹೇಳಲಿ ಜನರ ದುಃಕ್ಕ
ಕೆಲಸ ನಡದತಿ

ಪ್ರತಮ್ ಶೆಟ್ಟಿ ಮಾಕಪ್ಪ ಪುಣಿವಂತಾ
ಲೆಕ್ಕಹಾಕಿ ಮಾಡಿದಾ ತಾ ಕುಂತಾ
ಎಲ್ಲರ ಮುನಸ ಆತ ಸನಮುಂತಾ
ಕೇಳರಿ ಇನ್ನಾ

ಬಡವರ ನಿಂತಾರ ಮಾರಿ–ಮಾರಿಗಿ
ನಿಂತ ಬೇಡಿಕೊಂಡಾರೊ ದೊರಿಗಿ
ಕೊಟ್ಟುಂತ ಪಟ್ಟಿ ಕೊಡಿಸಿದಾನ ತಿರಿಗಿ
ಸಾಯೇಬ ಪುಣಿವಾನಾ

ಮುಂಸಲರ ಅಂತಾರ ಆರೆ ಅಲ್ಲಾ
ವರ್ಸಾತ ಗೋದಿ ಅಕ್ಕಿ ಉಂಡಿಲ್ಲಾ
ನಮ್ಮ ಪಡಿಪಾಟ್ಲ ಶಿವನೆ ಬಲ್ಲಾ
ಕೊಡುಂನು ನಾವ್–ಏನಾ

ಪರಮುಧೂತ–ನಾವು–ಸುಂವಚ್ಚರಗಾ
ಕರಪಟ್ಟಿ ಹಾಕಿತಣ್ಣಾ ಸರಕಾರಾ

ಬಡವರ ಮುರಗಿದಾರ ಮುರಮುರಾ
ಸ್ವಾಮಿ ಭಗವಾನಾ

ಪರಜೋತ್ಪತ್ಯಾ–ಸುಂವಚ್ಛರ ತನಕ
ಜನರ ಆದಾರೊ ಬಾಲ ಹಲಾಕ
ಬಡತನ ಬುಂತುಂತಾರ ಸರಕಾರಕ
ಹೋಗುಂನುಂತಾರ ಮುತ್ತೊಂದ ರಾಜಿಕ
ಬಾಳ ಸರಾಪ್ಯಾರ ಪುಂಚರ ಗುಂಣಕ
ಶೆಟ್ಟಿ ಸುಭೇದಾರ ಕಾವುಡ್ಯಾ ಜನಕ

ಈ ಪದಾ ಹುಟ್ಟಿತ ಹುಬ್ಬಳ್ಯಾಗ
ಅುಂಕುಂಸ್–ತುಂರಾಯು ಡಬ್ಬಿನ ಮ್ಯಾಗ
ವಸ್ತಾದ ಹನುಮುಂತ್ರಾವನ ಮುಗ
ಗುರು ಸಿದ್ದೇಶನ ದಯಾನ ಮ್ಯಾಗ
ಕವಿ ಗುರುಸಿದ್ದ ದಾನ–ಚಾತುರಾ
ಮಾಡಿ ಹೇಳಿದಾನ ಅಕ್ಷರಾ
ಕುಂತ ಕೇಳಾರೆಣ್ಣಾ ಮುಂಜಕೂರಾ
ಆದ ಪಜೀತಿ

ಹಲಗಲಿಯ ಬೇಡರು*

ದಕ್ಷಿಣ ಮರಾಠಾ ನಾಡಿನ ಮುಧೋಳ್ ಸಂಸ್ಥಾನಕ್ಕೆ ಸೇರಿದ ಹಲಗಲಿ ಎಂಬ ಹಳ್ಳಿಯ ದೃಶ್ಯವನ್ನೊಳಗೊಂಡ ೧೮೫೭ರ ಬಂಡಾಯದ ಪರಿಣಾಮವಾಗಿ ಬ್ರಿಟಿಷ್ ಜಿಲ್ಲೆಗಳಲ್ಲಿ ಮತ್ತು ರಾಜಕೀಯ ಮೇಲ್ವಿಚಾರಣೆಗೊಳಪಟ್ಟ ಸ್ವದೇಶೀ ಸಂಸ್ಥಾನಗಳಲ್ಲಿ ಜಾರಿಗೆ ಬಂದ ನಿಶ್ಶಸ್ತ್ರೀಕರಣ ಹುಚಿಕೆಗಳಿಗೆ ಸಂಬಂಧಪಟ್ಟದ್ದು ಈ ಲಾವಣಿ.

೧೮೫೭ರ ೨೮ನೆಯ ನಿಶ್ಶಸ್ತ್ರೀಕರಣ ಕಾಯಿದೆಯನ್ನು ಜಾರಿಗೆ ತಂದಮೇಲೆ "ಆಮದು, ತಯಾರಿಕೆ, ಶಸ್ತ್ರಗಳನ್ನೂ ಮದ್ದುಗುಂಡುಗಳನ್ನೂ ಮಾರಾಟ ಮಾಡುವಿಕೆ, ಮತ್ತು, ಇಟ್ಟುಕೊಳ್ಳುವ ಅಥವಾ ಬಳಸಿಕೊಳ್ಳುವ ಹಕ್ಕನ್ನು ವ್ಯವಸ್ಥೆಗೊಳಿಸುವುದಕ್ಕೆ ಸಂಬಂಧಿಸಿದ ಈ ಕಾಯಿದೆ"ಯಂತೆ ಈಸ್ಟ್ ಇಂಡಿಯ ಕಂಪನಿ—ಹಾಡಿನ ಪ್ರಾರಂಭದ ಪದ್ಯದಂತೆ ಕುಂಪಣಿ ಸರ್ಕಾರ–ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಹೊಂದಿದ್ದ ಪ್ರತಿಯೊಂದು ತರಹದ ಎಲ್ಲ ಆಯುಧಗಳನ್ನೂ ಮುಟ್ಟುಗೋಲು ಹಾಕಿಕೊಳ್ಳಲು ಆಜ್ಞೆ ಹೊರಡಿಸಿತು. ಬ್ರಿಟಿಷ್ ಆಳ್ವಿಕೆಯ ಭದ್ರತೆಗೆ ಇನ್ನೂ ಸರಿಯಾಗಿ ಹೊಂದಿಕೊಳ್ಳದಿದ್ದ ಜನರಿಗೆ ಈ ಆಜ್ಞೆ ಒಂದು ದೊಡ್ಡ ಆಘಾತವೇ ಆಯಿತು. ಆದರೂ, ಈ ಆಜ್ಞೆ ಎಲ್ಲೆಲ್ಲಿ ಪಾಲಿತವಾಯಿತೋ ಹೆಚ್ಚುಕಡಿಮೆ ಅಲ್ಲೆಲ್ಲ ಶಾಂತಿಯುತವಾಗಿಯೇ ಅಪೇಕ್ಷಿತ ಗುರಿಯನ್ನು ಮುಟ್ಟಿತು. ಬಂಡಾಯದಲ್ಲಿ ಮುಧೋಳ್ ಸಂಸ್ಥಾನ ಯಾವ ಪಾತ್ರವನ್ನೂ ವಹಿಸಿರಲಿಲ್ಲ; ಪ್ರಸ್ತುತ ಸಂದರ್ಭದಲ್ಲೂ ಅದು ರಾಜನಿಷ್ಠವಾಗಿಯೇ ಉಳಿದುಕೊಂಡಿತು. ಆದರೆ, ಹಾಡಿನಲ್ಲಿಯೇ ಉಲ್ಲೇಖಿತವಾಗಿರುವ ಪೂಜಾರಿ ಹಣಮ, ಬಾಲ, ಜಡಗ ಮತ್ತು ರಾಮ ಎಂಬ ನಾಲ್ವರಿಂದ ಪ್ರೇರೇಪಿತರಾಗಿ ಅದೇ ಸಂಸ್ಥಾನದ ಹಳ್ಳಿಯಾದ ಹಲಗಲಿಯ ಬೇಡರು ಆಯುಧಗಳನ್ನು ತಂದೊಪ್ಪಿಸಲು ನಿರಾಕರಿಸಿ ಪುಟ್ಟದೊಂದು ಸ್ಥಳೀಯ ಬಂಡಾಯವನ್ನೇ ಎಬ್ಬಿಸಿದರು. ಕೊಂದು ತಿಂದು ಬದುಕುವ, ಬೇಟೆಯೇ ವೃತ್ತಿಯಾದ ಈ ಬೇಡರು, ಜಾರಿಗೆ ಬಂದ ಹುಚಿಕೆಗಳಿಂದ ಇತರ ವರ್ಗಗಳಿಗಿಂತ ಹೆಚ್ಚು ಸಿಟ್ಟಾದರು. ಕೆಳವರ್ಗದ ಜನರಾದ ಅವರು ಬಹುಮಟ್ಟಿಗೆ ದಂಗೆಕೋರ ಸ್ವಭಾವದವರಾಗಿದ್ದರು. ಡಕಾಯಿತಿ, ಹೆದ್ದಾರಿ ದರೋಡೆ ಮತ್ತು ಕಾಲ್ನಡೆಯಿಂದಾಗಬಹುದಾದ ಎಂಥ ಅಪಾಯಕಾರಿಯಾದುದಾದರೂ ಸರಿ – ಇಂಥ ಅಪರಾಧಗಳಲ್ಲಿ ಭಾಗವಹಿಸಲು ಅವರಲ್ಲಿ ಬಹಳಷ್ಟು ಜನ ಯಾವಾಗಲೂ ಅಣಿಯಾಗಿರುತ್ತಿದ್ದರು. ಮುಧೋಳ್ ಸಂಸ್ಥಾನದ ಹಕ್ಕುಗಳ ಪ್ರಕಾರ ಸಹಜವಾಗಿ ಆಯುಧಗಳನ್ನು ತಂದೊಪ್ಪಿಸಲು ಆ ಹಳ್ಳಿಯ ಬೇಡರು ಮೊದಲು ನಿರಾಕರಿಸಿದರು. ಆಜ್ಞೆಗಳನ್ನು ಜಾರಿಗೊಳಿಸಲು ಬಂದ ಕೆಳಗಿನ ಉದ್ಯೋಗಸ್ಥರ ಹಿಂಸೆಯನ್ನು ಪ್ರತಿಭಟಿಸಿದರು. ಅನಂತರ ಈ ವಸ್ತುಸ್ಥಿತಿ

---

*The Bedas of Halagali; Indian Antiquary; 1887; Vol. 16; p. 356.

ಗಳನ್ನು ಸಂಸ್ಥಾನದ ರಾಜಕೀಯ ಕಾರಭಾರಿಗೆ ವರದಿ ಮಾಡಲಾಯಿತು. ಆ ಕಾರಭಾರಿ ಬೇಡರನ್ನು ಒಲಿಸುವ ಹಂಚಿಕೆಯನ್ನು ಮಾಡಿದ. ಗಮನಾರ್ಹ ಸ್ಥಳೀಯ ಪ್ರಭಾವ ವನ್ನು ಹೊಂದಿದ್ದ ಕುಂದರ್ಗಿ ಎಂಬ ಪಕ್ಕದ ಹಳ್ಳಿಯ—ಗೌಡ ಅಥವಾ ಪಾಟೀಲ ಎನಿಸಿಕೊಳ್ಳುತ್ತಿದ್ದ—ಕೃಷ್ಣನಾಯಕನೆಂಬುವವನನ್ನು ಬಂಡಾಯವೆಬ್ಬಿಸುವವರೊಂದಿಗೆ ಮಾತನಾಡಲು ಮತ್ತು ಅಂಥವರನ್ನು ತನ್ನ ಗಮನಕ್ಕೆ ತರಲು ಕಳಿಸಿದ.

ಈ ಪ್ರಯತ್ನ ಯಶಸ್ವಿಯಾಗಲಿಲ್ಲ. ಆಮೇಲೆ ವಿಧೇಯತೆಯನ್ನು ಪಡೆಯಲು ಸಶಸ್ತ್ರ ಪೊಲೀಸರಿಂದ ಬಲಾತ್ಕರಿಸುವ ಯತ್ನವೂ ನಡೆಯಿತು. ಈ ಹೆಜ್ಜೆಯೂ ಅಯಶಸ್ವಿಯಾಯಿತು. ಆ ಪೊಲೀಸರ ಮೇಲೆಯೇ ಗುಂಡಿನ ಮಳೆ ಸುರಿಸಿ ಅವರು ಹಿಮ್ಮೆಟ್ಟುವಂತೆ ಮಾಡಲಾಯಿತು. ನಿಯಮಿತ ಪಡೆಗಳ ತುಕಡಿಯನ್ನು ಕಳಿಸದೆ ಅನ್ಯಮಾರ್ಗವೇ ಉಳಿಯಲಿಲ್ಲ. ಕ್ರಮವಾಗಿ ದಕ್ಷಿಣ ಮರಾಠಾ ಕುದುರೆಯ ಗುಂಪು ಮತ್ತು ಬೊಂಬಾಯಿ ಎನ್.ಐ.ನ ೨೮ನೆಯ ದಂಡಿನ ಗುಂಪುಗಳನ್ನು ಹಲಗಲಿಗೆ ಕಳಿಸ ಲಾಯಿತು. ಸೇನಾಪತಿಯ ಹಸ್ತಕನಾದ Lieut ಎಂಬುವನೂ ಜೊತೆಯಲ್ಲಿದ್ದ. ಹಾಡಿನಲ್ಲಿ ಬರುವ ಕಾರ್‌ಸಾಹೇಬ್ ಎಂಬುವನೂ "ಬೆಂಕಿನವಾಬ" ಎನಿಸಿ ಕೊಂಡವನೂ ಆದ ಬೊಂಬಾಯಿ ಎನ್.ಐ.ನ ೨೮ನೆಯ ದಂಡಿನ ವಿಲಿಯಂ ಅಲೆಕ್ಸಾಂಡರ್ ಕೆರ್ರ್ ಎಂಬುವನೂ ಇದ್ದ.

ಹಾಡಿನ 'ಹೆಬಲಕ್ ಸಾಹೇಬ'ನಾದ ಬೊಂಬಾಯಿ ಸಿವಿಲ್ ಸರ್ವಿಸ್‌ನ ಮಿ. ವಿಲಿಯಂ ಹೆನ್ರಿ ಹ್ಯಾವ್‌ಲಾಕ್ ಎಂಬ ರಾಜಕೀಯ ಸಾಮರ್ಥ್ಯವುಳ್ಳವನನ್ನೂ ಕಳಿಸಲಾಯಿತು; ಇವನು ಆಮೇಲೆ ಬೆಳಗಾಂ ಜಿಲ್ಲಾ ನ್ಯಾಯಾಧೀಶನಾಗಿಯೂ ಮೊದಲ ಸಹಾಯಕ ಕಲೆಕ್ಟರನಾಗಿಯೂ ಅಧಿಕಾರ ವಹಿಸಿಕೊಳ್ಳುತ್ತಾನೆ. ಅತಿರೇಕದ ಹಂಚಿಕೆ ಗಳೇನನ್ನೂ ಅಳವಡಿಸಿಕೊಳ್ಳುವ ಅಗತ್ಯಬೀಳದಂತೆ ಶಾಂತರೀತಿಯಿಂದ ಆಯುಧಗಳನ್ನು ಒಪ್ಪಿಸುವಂತೆ ಬೇಡರ ಮನವೊಲಿಸುವ ಇನ್ನೊಂದು ಪ್ರಯತ್ನವನ್ನೂ ಇವನು ಮಾಡು ತ್ತಾನೆ. ವಿಕ್ಷೋಭೆಯ ತುಂಟರ ನಾಯಕರಿಂದ ಹೇಗೂ ಇವನ ಪ್ರಯತ್ನಗಳೆಲ್ಲ ನಿಷ್ಫಲ ವಾದುವು. ಗುಂಡು ಹಾರಿಸಲ್ಪಟ್ಟು ಅವನು ಕಂಡೂ ಕಾಣದಂತೆ ಗಾಯಗೊಂಡ. ಅನಂತರ ನಿತ್ಯದಾಳಿ ಪ್ರಾರಂಭವಾಯಿತು. ಬೇಡರ ಗುಂಪಿನಲ್ಲಿ ಸ್ವಲ್ಪವುಟ್ಟಿನ ನಷ್ಟವಾಗಿ, ಬ್ರಿಟಿಷರ ಕಡೆಯೂ ಕೆಲವರು ಗಾಯಗೊಂಡಮೇಲೆ, ಹಳ್ಳಿಯನ್ನು ವಶಕ್ಕೆ ತೆಗೆದು ಕೊಂಡು, ಶಿಕ್ಷೆಯೆಂಬಂತೆ ಅದನ್ನು ಸುಡಲಾಯಿತು. ಬಂಡೆದ್ದವರಿಗೆ ಆಗುವ ಶಾಸ್ತಿಗೆ ಇದೇ ಉದಾಹರಣೆಯೂ ಆಯಿತು.

ಪಲ್ಲ

ಹೊತ್ತು ಬಂದಿತು ಮತ್ತ ನೋಡರಿ ಕತ್ತಿ ಹಿಡಿವ ಜನಕ
ಶಿಸ್ತಿನ ಮಂದಿ ಭಂಟರ ಹಲಗಲಿ ಮುಟ್ಟಲಿಲ್ಲ ದಡಕ

೧ನೆ ನುಡಿ

ವಿಲಾತಿಯಿಂದ ಹುಕುಮು ಕಳವಿದರ ಕುಂಪಣಿಸರಕಾರಾ
ಎಲ್ಲ ಜನರನಾ ತರಿಸಿ ಜೋರಿ ಮಾಡಿ ತರಬೇಕ ಹತಾರಾ

ಕತ್ತಿ ಕಟಾರಿ ಕೈ-ಚೂರಿ ಬಾಕು ಗುರ್ದಿ ಸುರಾಯಿ ಚಕ್ರಾ
ಬಾಲಿಯು ಬರ್ಚಿ ಬಿಚ್ಚುಗತ್ತಿ ನೋಡ ಬಾಣಬಿಲ್ಲಿನವರಾ

ಪಟಾತ ಪಿಸ್ತುಲ ಕರುಲಿ ತೇಗಾ ಚಾಪಗೊಡ್ಲಿಶಸ್ತ್ರಾ
ತೋಪು ತುಬಾಕಿ ಹೊಡವು ಮದ್ದ ಗುಂಡ ಬಿಡಬ್ಯಾಡರಿ ಚೂರಾ

ಮುಂಚ್ಚಿ ಇಟ್ಟವರಿಗೆ ಮೂರು ವರ್ಷದ ಬೇಡಿ ಹಾಕರಿ ಪೂರಾ
ಕೊಡದ ದಿಟಾಯಿ ಮಾಡಿದವರನಾ ಕಡದ ಹಾಕರಿ ತಾರಾ ॥ಚ್ಯಾಲ॥

ಬೇಡಿದಾ ಕ್ಷಣಕ ತಾವು ತಂದು
ಕೊಡತಾರ ಹಿಡಿಹಿಡಿರ್ ಎಂದು

ವತ್ನ ಕೊಡತೇವ್ ಅನ್ನರಿ ವೊಂದ್ ಒಂದು
ತಂದು ಕೊಡತಾರ ತಮ್ಮ ಕುಸಿಲಿಂದು

ಬಂದಿತು ಹುಕುಮು ಹೀಂಗ್ ಎಂದು
ಡಣ್ಗುರ ಸಾರಿದರ ಮುಂದು

ಶೂರ ಶಿಪಾಯಿಜನರ ತಾವು ತಿಳಿದು
ಅಳತಾರು ಕಣ್ಣಿಗೆ ನೀರ್ ತಂದು ॥ಯೇರ॥

ಬಹಳ ಚಿಂತಿಯ್‌ಆಗಿ ದುಃಖದಿಂದ ಅವರು ಬಿದ್ದರ್–ಅಣ್ಣ ನೆಲಕ

೨ನೆ ನುಡಿ

ಕೇಳುತ ಹುಕುಮಾ ಕೆಳವರ ತಂದ ಕಂದ ಕೊಟ್ಟಾರ ಆವಾಗ
ಬಹಳ ಬೆಲಿವು ಹೆಚ್ಚಿನ ಹತಾರಾ ಮುಂಚ್ಚಿ ಇಟ್ಟರ ವೊಳಗ

ಸಾಲಸಮುದ ಮಾಡಿ ದನ–ಕರ ಮಾರಿ ತಂದಿನ್ನಿ ಹಬ್ಬದಾಗ
ನೋಡ ನೋಡ ಹ್ಯಾಂಗೆ ಕೊಡುನ್‌ಅಂತ ಹುಗಿದ್‌ಇಟ್ಟರ ನೆಲದಾಗ

ಶೂರ ಚಟಿಗಾರು ಜಾಯಿತಸಾಹೇಬ ಬುದಾರ ಆವಾಗ
ಸಂದಿಯುಗೊಂದಿ ವೊಂದು ಉಳಿಯುದ್‌ಅಂಗ ಹೊಕ್ಕ ಹುಡಿಕೆರ
ಮನಿಯಾಗ

ತೆಪ್ಪಿತ್‌ಉಪಾಯಿ ಇನ್ನ ಮಾತರ ಮಾಡಂನ್‌ಅಂತರ ಹ್ಯಾಂಗ
ವೊಬ್ಬರಕ್‌ಒಬ್ಬರ ಜ್ಯಾಡ ಹೇಳತರ ವರ್ಮ ಸಾಧಿಸಿದ್‌ಹಾಂಗ ॥ಚ್ಯಾಲ॥

ಜ್ಯಾಡಸಿ ಹೋದವೊ ಯಂಲ್ಲಾ
ನಾಡ್‌ಒಳಗೆ ಯೇನಂ ಉಳಿಲಿಲ್ಲಾ

ಅಜ್ಞವಂಂತ್ರೆರ ಹಿಡಂವ ಪಿಸ್ತೂಲ
ಕಾಸದ್‌ಒದರ ಕತ್ತಿಯಂ ಡಾಲಾ

ಕವಚ ಬೆಳ್ಳಿಯಂ ವಂಕಮಾಲಾ
ರತ್ನದ ಹಿಡಿಕಿವ ಹೋದವು ಯೆಲ್ಲಾ ॥ಯೇರ॥

ಹೋದ ಹತಾರಕ ಹೊಟಿಬ್ಯಾನಿ ಹಚ್ಚಿಕೊಂಡ ನಿಂತರ ಸಾವುದಕ

೩ನೆ ನುಡಿ

ಹಲ್ಲ ಕಿತ್ತಿದಾ ಹಾಂವಿನ ಪರಿಯಂ ನವಂಗ ಆದಿತ್‌ಅಲ್ಲಾ
ರಂಡಿ ಮುಂಸಂಕ ಹಾಕಿ ತಿರಿಗಿದರ ನವಂ ಮಾನ ಉಳಿಯಂಂವದಿಲ್ಲಾ

ಮಗ್ಗಲದಾಗಿನ ಹೇಣತಿ ಕೊಟ್‌ಅಂಗ ಆತಿ ಹೇಡಿ ಆದೇವ್‌ಅಲ್ಲಾ
ಸತ್ತ ಹೆಣಕ ಶೃಂಗಾರ ಮಾಡಿದ ಪರಿ ಆದಿತ್‌ಅಲ್ಲಾ

ಸಾವಕಾರು ನಮ್ಮ ಜೀವ ಹೋದಿತ್‌ಅಂತ ಚಿಂತಿ ಮಾಡೇರ್‌ಅಲ್ಲಾ
ಹಗಲಿ ಮನಿ ಹೊಕ್ಕ ಹಣಾ ವೋದರ ಕೇಳವರ್‌ಯಾರ್‌ಇಲ್ಲಾ

ಪುಂಡ ಪಾಳೆಗಾರ ಪಚ್ಛ್ಯಾ ವಜೀರರಂ ಪಂತ ಹಿಡಿಯಲಿಲ್ಲಾ
ದಂಡನ್ ಆಳುವ ಧೊರಿ ದೌಲತರ್‌ಅಂಜಿ ಕುಳಿತರ್‌ಅಲ್ಲಾ ॥ಚ್ಯಾಲ॥

ದೇವರ ತಂದ ಪಡಿಪಾಟಾ
ಚಿಂತಿ ಹತ್ತಿ ಆದರೋ ನಪ್ಟಾ

ಅಧಿಕಾರ ಉಳಿಯಂಲಿಲ್ಲ ಯೆಳ್‌ಅಪ್ಪಾ
ಕೇಡಗಾಲ ಬಂದಿತಂ ಕನಿಕಪ್ಪಾ

ಹೆಂಗಸ್‌ಆಗಿ ಶೀರಿಯಂ ವುಟ್ಟಾ
ಸೋಂಡ್‌ಒಣಗಿ ಆದೀತೋ ಬೊಬ್ಬಾಟಾ

ಆದ್‌ಹಾಂಗ್‌ಆತಿ ಸ್ತ್ರೀಯರ ಕ್ರೀಡಾದ್‌ಆಟಾ
ಭಂಟರಿಗೆ ಬಂದಿತೊ ಬಿಕ್ಕಷ್ಟಾ ॥ಯೇರಾ॥

ಪಕ್ಕಾ ಕಿತ್ತ ಪಕ್ಷಿ ಗತಿ ಆಗಿ ಚಿಂತಿ ಆದರ ಮನಕ

೪ನೆ ನುಡಿ

ಹಲಗಲಿ ಅಂಬುವ ಹಳ್ಳಿ ಮಂಧೋಳರಾಜ್ಯದಾಗ ಇತ್ತು
ಪೂಜೆರಿ ಹಣಮಾ ಬಾಲ ಜಡಗ ರಾಮ ಮಾಡ್ಯಾರ ಮಸಲತ್ತು

ಕೈನ ಹತಾರ ಕೊಡಬಾರದೊ ನಾವು ನಾಲ್ಕು ಮಂದಿ ಜತ್ತು
ಹತಾರ ಹೋದ್‌ಇಂದ ಬಾರದ ನಮ್ಮ ಜೀವ ಸತ್‌ಓಗುದು ಗೊತ್ತು

ಸಂತ್ರಿನ ಹಳ್ಳಿ ಮಂತ್ತ ಧೊರಿಗಳಿಗೆ ತಿಳಶೆರ ಹೀಂಗ್‌ಅಂತು
ಮಾಡರಿ ಜಗಳಾ ಕೂಡ್‌ಇರತೇವು ಕುಮಂಕಿ ಯಾವತ್ತು

ಪೊಳಗಿಂದ್‌ಒಳಗ ವಚನ ಕೊಟ್ಟರೊ ಬ್ಯಾಡರ್‌ಎಲ್ಲ ಕಲಿತು
ಕಾರಕೂನನ ಕಪಾಳಕ ಬಡದರ ಶಿಪಾಯಿ ನೆಲಕ ಬಿತ್ತು ॥ಚ್ಯಾಲ॥

ದುಃಖದಿಂದ ಅವರು ಅಲ್ಲಿಗ್‌ಹೋಗಿ
ಸಾಹೆಬಗ ಹೇಳಿದರ ಕೂಗಿ

ಕೇಳಿ ಸಾಹೇಬ ಯೆದ್ದ ಸಿಟ್ಟಿಗಿ
ತಿರಿಗಿ ಹೋದ ಆವಾಗ ಕಲಾದಗಿ

ಕರ್‍ಸಿ ಕೃಷ್ಣನಾಯಂಕಗೌಡ ಕಂಂದರಗಿ
ಕರಶ್ಯಾನ ಸಂಧಾನಕ್ಕೆಆಗಿ ॥ಯೇರ॥

ಹಟಾ ಮಾಡಬಾರದು ನಿಮ್ಮ ಹತಾರ ಕೊಡಿರಿ ಸಾಹೇಬನ್ ಈಶಕ

೫ನೆ ನುಡಿ

ಹತಾರ ಕೊಡಲಿಕೆ ಹೆಂಗಸ್‌ಆಗಿ ಬಳಿಯ್‌ಇಟ್ಟಿಲ ಕೈಯಾಗ
ಯಾವ ಬಂದೀರಿ ಜೀವಹೋದರು ಕೊಡುಂದಿಲ್ಲ
ಸುಮ್ಮನ್‌ಹೋಗರಿ ಈಗ

ಅಂದ ಮಾತ ಯೆಲ್ಲ ಬಂದ ಹೇಳಿದಾನ ಆವಾಗ ಸಾಹೆಬಗ
ಶಿಟ್ಟಿಲಿ ಮುಂಗ್ಯೆ ಕಟ್ಟನೆ ಕಡಕೊಂಡ ಹುಕುಮು ಕೊಟ್ಟರ್‌ಆಗ

ಕುದರಿಯುಮಂದಿ ಕೂಡಿ ಮುಂಟ್ಟಿತೊ ಹಲಗಲಿಸ್ಥಳದ ವೇಗ
ವೊಳಗಿನ ಮಂದಿ ವೊಟ್ಟರಲೆ ಹೊಡದರ ಮುಂಗಾರಿ ಮಳಿ ಸುರದ್‌ಆಂಗ

ಹೊರಗಿನ ಮಂದಿ ಗುಂಡ ಹತ್ತಿಕೆರ ತಿರಿಗೆರ ಆವಾಗ
ಕಾಗದ ಬರದ ಕಳವೆರ ಬೇಗನ ದಂಡ ಬರಲ್‌ಎಂತ ಹೀಂಗ ||ಚ್ಯಾಲ||

ದಂಡ ಬಂತ ನೋಡ ತಯಾರ್‌ಆಗಿ
ಜಲದ ಮಾಡಿ ಬಂತ ಹಲಗಲಿಗಿ

ಆರ ತಾಸ ರಾತ್ರ್ಯಾಗ ಹೋಗಿ
ಊರಿಗಿ ಹಾಕಿದಾರ ಮುಂತ್ತಿಗಿ

ಗುಂಡ ಹೊಡದಾರ ವಿಪರೀತ ಸೂರಿಆಗಿ
ಅಂಜಿ ವೋಡಾಕ್‌ಹತ್ತಿತ ಮುಂಂದ್‌ಆಗಿ

ಬೆನ್ನ ಹತ್ತಿ ನೋಡಿದಾರ ಇವರ್ ಆಗಿ
ಬಿದ್ದಾವ ಹೆಣಗೋಳಂ ಸೂರಿ ಆಗಿ ||ಯೇರ||

ಮುಂತ್ತಿಗಿ ಹಾಕಿ ಆವರು ಕತ್ತಿಲಿ ಕಡದರ ಅಂಜಲಿಲ್ಲ ಯಾತ್‌ಎತಕ

೬ನೆ ನುಡಿ

ಬೆನ್ನ ಹತ್ತಿ ತಿರಿತಿರಿವಿ ಕಡದರೊ ಯೇನಂ ಉಳಿಯಂದ್‌ಆಂಗ
ನಡವಿ ಹಾಕಿಕೊಂಡ ಹೊಡದರ ಗುಂಡ ದರಜ ಇಲ್ಲದ್‌ಹಾಂಗ

ಕವಾತ ಫೈರಾ ಸುತ್ತಗಟ್ಟಿ ತಂಬು ನುಡಿಶಾರ ಆವಾಗ
ತೋಪು ತುಬಾಕಿ ಕರುಲಿ ಪಿಸ್ತೂಲ ಬಾಕ ನಡವಿನಾಗ

ಶಿಡಿಲಿನ ಹಂತ ಗುಂಡ ಹೊಡವುತ ಕತ್ತಿಲಿ ಕಡದರ ವೊಲತ್‌ಆಂಗ
ನಡುಂಗಿತಂ ಬ್ಯಾಡಕಿ ಕೆನ್–ಧೂಳ ಹರಿದ್–ಆಂಗ ಕಡದಾಟವು ಹ್ಯಾಂಗ

ಕೇಡ–ಗಾಲ ಬಂದಿತ ನಡವಿ ಶಿಕ್ಕರೊ ಬಿಡಸವರ್–ಯಾರ್–ಈಗ
ಚಟಿಕಾರರಂ ಚಾಟಿ ಮಾಡಂತ ನಡದರ ಗಂಡದಾಗ ||ಇಳವ||

ಆಗಸಿಗೆ ಬಂದುಂ ನಿಂತಿತಂ
ಹೆಬಲಕ್–ಸಾಹೇಬಂದುಂ ತಾವು ನಿಂತುಂ

ಹೇಳತಾರ ಬುದ್ಧಿಯು ಮಾತು
ಕೊಡತೇವ ಕವಲ ಈ ಹೊತ್ತು
ಹೋಗಬ್ಯಾಡರಿ ವೆರ್‍ರಾ ನೀವು ಸತ್ತು ॥ಯೇರ॥

ಯೆಂಬು ಮಾತಿಗೆ ನಂಬಿಗೆ ಸಾಲದ ಹಣಮು ಬಂದ ಮುಂದಕ

೭ನೆ ನುಡಿ

ಜಡಗ ಹೇಳತನ ಹೊಡಿ ಇವರನಾ ಈಗ ಘಾತಕರೊ ಯಿವರಾ
ಇಸವಸ-ಘಾತಾ ಮಾಡಿ ನೆಂಬಿಗಿಲೆ ಮಾಡತಾರು ಫೀತುರಾ

ಮಾಸ-ಮಾಡಿ ಬಲ-ದೇಶ ತಗೋತರ ಮುಂದ ನಮುಗ ಗೋರಾ
ಅಂದ ಹೊಡದಾರೊ ವೊಂದು ಗುಂಡಿಗೆ ಆದ ಸಾಹೇಬ ಟಾರಾ

ಕಾರ್‍-ಸಾಹೇಬ ಬೆಂಕಿ-ಚೂರ ಆಗಿ ತಾನು ಲೂಟಿ ಮಾಡ್-ಅಂದ ವೂರ
ಹುರಪಿಲಿ ಹೊಡದರ ಮಳಿ ಆದ ಹಾಂಗ ಗುಂಡ ಸುರದವು ಬರಪೂರಾ

ಹಣಮು ಹೇಳತನ ಗುಂಡ ಹೊಡದಕೆರ ಕೆಡವುನ್-ಅಷ್ಟು ಬಾರಾ
ಮುನ್-ನೂರ ಮುಂದಿ ಯನ್ನ ಮೇಗೆ ಬಿಟ್ಟ ಆಗ ನೋಡರಿ
ಜೋರಾ ॥ಚ್ಯಾಲ॥

ಭೀಮುನು ಇದರಿಗೆ ನಿಂತಾ
ಐ-ನೂರ ಮುಂದಿಗೆ ಮುಲತಾ

ಬಾಲನು ಮಾಡಿದ ಕಸರತ್ತಾ
ಕುಂದರಿಯು ಕಡದನೊ ಹತ್ತಾ

ರಾಮುನ ಕಡತ ವಿಪರೀತಾ
ಕಾವಲಿ ಹರಿತೊ ರಕ್ತಾ

ಸಾವಿರ ಆಳಿಗೆ ವೊಬ್ಬ ಮುಲತಾ
ಕೂಗುತಾನೊ ಕಡಿ-ಕಡಿರ್‍-ಎಂತಾ ॥ಯೇರ॥

ನಾಲ್ಕು ಮುಂದಿ ಹೀಂಗ ಕಡದ ಸತ್ತರೊ ಭುಂಟರ್‍-ಅನಸೆರ ಜನಕ

೮ನೆ ನುಡಿ

ಯಾರು ಕೇಳಲಿಲ್ಲ ಆರು ಗುಂಡ ತಾಕಿ ಹಣಮು ಬಿದ್ದ ನೆಲಕ
ಚೀರಿ-ಆಡುತ ಜನ ಸುತ್ತಗಟ್ಟಿತೊ ಅಂಜಿ-ಕೊಂಡ ಜೀವಕ

ಶೂರವೊಬ್ಬ ಬಹಳ ಜೋರ ಮಾಡಿದನ ಹತಾರ ತಗೊಳುದಕ
ಯೇರಿ ಬರು ಕುದರಿ ಕಾಲ ಕಡದನೊ ಸ್ವಾರ ಬಿದ್ದ ನೆಲಕ

ರಾಮಿ ಗುಂಡಿಲಿ ಜೋರ ಮಾಡಿ ಹೊಡದಳೊ ಮೂರ ಮಂದಿ ಶಿರಕ
ಆರ ಕುದರಿಯು ಕಡದ ಸಿಡದಳೊ ಬಾಲನ ಸೂರಾಯುಕ ॥ಚ್ಯಾಲ॥

ಯಾರ್-ಯಾರು ಇಲ್ಲದ್-ಆದೀತು
ಊರ್-ಎಲ್ಲಾ ಲೂಟಿ ಆಗಿ ಹೋತು

ಮಂದಿ ಮನಿ ಹೊಕ್ಕ ಹಂಡಕಿತು
ದನ-ಕರಾ ಲಯಾ ಆದೀತು

ಸಣ್ಣ ಕೂಸಗಳು ಹೋದವು ಸತ್ತು
ಬೆಂಕಿ ಹಚ್ಚ್ಯಾರ ಪೂರ ಸುಟ್ಟಿತು

ನಷ್ಟ ಆತಿ ನೋಡರಿ ಈವತ್ತು
ನಾ ಹೇಳತೇನ ಈ ಮಾತು ॥ಯೇರ॥

ಇಷ್ಟ್-ಎಲ್ಲ ಅಳವ್-ಆಗಿ ಹೋದಿತೊ ಮುಟ್ಟಲಿಲ್ಲ ಯಾತ್-ಎತಕ

೯ನೆ ನುಡಿ

ಕತ್ತಿ ಕುದರಿ ಮುತ್ತು ಮಾಣಿಕಾ ಯಾವದು ಬಿಡಲಿಲ್ಲಾ
ಬೆಳ್ಳಿ ಭಂಗಾರಾ ಹರಳಿನ್-ಉಂಗರಾ ಹೊನ್ನ್-ಉಂಗರ ಗೋಲಾ

ಸರಗಿ ಸರ್ದಳಿ ಬುಗುಂಡಿ ಬಾವಲಿ ಬಿಡಲಿಲ್ಲಾ
ಕಡಗ ಕಂಕಣಾ ನಡವಿನ-ಡಾಬಾ ನಡಕಟ್ಟು ರುಮಾಲಾ

ಕುಬಶಾ ಶೀರಿ ಹಪ್ಪಳ ಶಾಂಡಿಗಿ ಕಂರ್ಚಿಗಿ ಕುಡಗೋಲಾ
ಕೊಡಲಿ ಕೋಟಿ ಕುಡ-ಕಬ್ಬಿಣಾ ಮುಸರು ಬೆಣ್ಣೆ ಹಾಲಾ

ಉಪ್ಪ ಯೆಣ್ಣೆ ಅರಶಿಣ ಜೀರಿಗಿ ಅಕ್ಕಿ ಸಕ್ಕರಿ ಬೆಲ್ಲಾ
ಗಂಗಳ ಚರಗಿ ಮಂಗಳ-ಸೂತ್ರಾ ತಕೊಂಡ ಹೋದರ ಬಿಸು-ಕಲ್ಲಾ ॥ಇಳವ॥

ಹಾಳ್-ಆಗಿ ಹೋದಿತೊ ಇಷ್ಟು
ವರ್ಣಿಸಿ ಹೇಳಲು ಎಷ್ಟು

ಯೆಲ್ಲ ತಗೊಂಡರೊ ಶಿಕ್ಕ್-ಅಷ್ಟು
ಸರ್ದ ನಿಂತರೊ ಪೂರಿಗೆ ಕೊಳ್ಳಿ ಕೊಟ್ಟು

ಬೂದಿ ಮಾಡೆರ ಹಲಗಲಿ ಸುಟ್ಟು
ಹಲಗಲಿ ಗುರ್ತ ಎಳ್ಳಷ್ಟು

ಕಾಣಸ್ತ ಹೋದಿತೊ ಕೆಟ್ಟು
ವರ್ಣಿಸಿ ಹೇಳಿದೆನು ಇಷ್ಟು ||ಯೇರ||

ಕುರ್ತಕೋಟಿ–ಕಲ್ಮೇಶನ ದಯುದಿಂದ ಹೇಳುದ–ಕೇಳುದಕ

ಸಂಗ್ಯನ ಅಪರಾಧ ಮತ್ತು ಸಾವು*

ಬೆಳಗಾಂ ಜಿಲ್ಲೆಯ ಬಹಳ ಅಚ್ಚುಮೆಚ್ಚಿನ ಲಾವಣಿ ಇದು. ಅನೇಕ ಬಡ ಬೇಸಾಯಗಾರರ ಮನೆಗಳಲ್ಲಿ ನಿರ್ದಿಷ್ಟವಾಗಿ ಹಾಡಿಸಿಕೊಂಡು ತನ್ನ ಜನಪ್ರಿಯತೆಗಾಗಿ ಋಣಿಯಾಗಿದೆ. ಇದ್ದ ಒಬ್ಬ ಅಂಥ ಬಡ ಬೇಸಾಯಗಾರ ಸಂಗ್ಯ ತನ್ನ ಅಭಿಪ್ರಾಯ ವನ್ನು ಮನಃಪೂರ್ವಕವಾಗಿ ದೃಢಪಡಿಸುವಂತೆ (ಲನೆಯ ನುಡಿಯ ಕಡೆಯಲ್ಲಿರುವಂತೆ):

ಇಂಗ್ರೆಜಿ ಕಾಯಿದೆ ಬಿಕ್ಕಟ್ಟ। ನಡುವದಿಲ್ಲ ಯಾರ್‍ಯಾರ ಆಟ॥

ಬೈಲಹೊಂಗಲ ಎಂದು ಹೆಚ್ಚು ಬಳಕೆಯಲ್ಲಿರುವ ಹೊಂಗಲದಲ್ಲಿ ೧೮೬೩ರ ಅಕ್ಟೋಬರ್ ೧೨ ರಂದು ನಡೆದ ಒಂದು ಕೊಲೆಯ ಆಧಾರದ ಮೇಲೆ ಈ ಹಾಡಿನ ಕ್ರಿಯೆ ಸಾಗುತ್ತದೆ. ಕೊಲೆಗೆ ಆಹುತಿಯಾಗುವವನು ಬಸಲಿಂಗಣ್ಣ ಎಂಬ ಲೇವಾದೇವಿ ವ್ಯವಹಾರದವನು. ಮೊದಲನೆಯ ನುಡಿಯಲ್ಲಿ ಇವನ ವ್ಯಾಪಾರ ಮತ್ತು ವೈಯಕ್ತಿಕ ಅಭಿರುಚಿಗಳು ವಿವರಿಸಲ್ಪಟ್ಟಿವೆ. ಬಸಲಿಂಗಣ್ಣನ ಸಾಲಗಾರರಲ್ಲಿ ಸಂಗ್ಯನೂ ಒಬ್ಬ. ಇವನು ತನಗೆ ಹಣದ ಆವಶ್ಯಕತೆ ಉಂಟಾದಾಗ ಪಡೆದ ಸಾಲದ ಭದ್ರತೆಗಾಗಿ ತನ್ನ ಭೂಮಿಯನ್ನು ಒತ್ತೆಯಿಡುತ್ತಾನೆ. ಸಾಲಿಗ ಸೌಂದತ್ತಿಯ 'ಕೆಳಗಿನ ನ್ಯಾಯಾಲಯ'ದಲ್ಲಿ ವ್ಯಾಜ್ಯ ನಡೆಸಿ ಕಾನೂನಿಗಿಂತ ಹೆಚ್ಚು ನಿರ್ದಯತೆಯನ್ನು ತೋರಿಸದೆ ಸಂಗ್ಯನ ವಿರುದ್ಧ ವಾಗಿ ತೀರ್ಪು ಪಡೆದ. ಧಾರವಾಡದ ಜಿಲ್ಲಾ ನ್ಯಾಯಾಧೀಶರ ಬಳಿಗೆ ಅಪೀಲು ಹೋಗುವ ವಿಫಲ ಯತ್ನವನ್ನು ಮಾಡಿದ ಸಂಗ್ಯ. ಆಮೇಲೆ ಇವನ ಭೂಮಿಯನ್ನು ಹರಾಜು ಹಾಕುವುದರ ಮೂಲಕ ತೀರ್ಪನ್ನು ಕಾರ್ಯಗತಗೊಳಿಸಲು ನ್ಯಾಯಾಲಯದ ಕಾರಕೂನನನ್ನು ಕಳಿಸಲಾಯಿತು. ಸಂಗ್ಯ ಮತ್ತೆ ಅದನ್ನು ಕೊಳ್ಳಲು ಅಶಕ್ತನಾಗಿದ್ದ. ಸಾಲಿಗನ ಬಳಿ ಮತ್ತೆ ಗಡುವು ಪಡೆಯಲೂ ಸಾಧ್ಯವಾಗಲಿಲ್ಲ. ಭೂಮಿ ಬಸಲಿಂಗಣ್ಣನ ಪಾಲಾಯಿತು. ಸಂಗ್ಯ ತನ್ನ ಸೋದರ ಪರ್‍ಸ್ಯನೊಂದಿಗೆ ಆಲೋಚನೆ ನಡೆಸಿ ಸೇಡು ತೀರಿಸಿಕೊಳ್ಳಲು ಬಸಲಿಂಗಣ್ಣನನ್ನು ಕೊಲ್ಲುವ ನಿರ್ಧಾರ ಮಾಡಿದ. ಮಾರನೆಯ ಬೆಳಿಗ್ಗೆ ಎದ್ದವನೇ ಸಂಗ್ಯ ತನ್ನ ತಾಯಿಯ ಪಾದಕ್ಕೆ ಅಡ್ಡಬಿದ್ದ. ತಮ್ಮ ಕಾರ್ಯವನ್ನು ಯಶಸ್ವಿಯಾಗಿ ನಡೆಸಿಕೊಡಲು ಸಂಗ್ಯ ಮತ್ತು ಪರ್‍ಸ್ಯ ಇಬ್ಬರೂ ತಮ್ಮ ಪ್ರಿಯವಾದ ದೈವ ಬಸವಣ್ಣನಿಗೆ ಪ್ರಾರ್ಥನೆ ಸಲ್ಲಿಸಿದರು. ಬಸಲಿಂಗಣ್ಣನ ಸೋದರರಲ್ಲೊಬ್ಬನಾದ ಫಕೀರಣ್ಣನನ್ನು ಮೊದಲು ಕೊಲ್ಲಲು ಆಲೋಚಿಸಿದರು; ಆದರೆ ಅವನು ಸಿಕ್ಕಲಿಲ್ಲ. ಅದೃಷ್ಟವಶಾತ್ ಅವನು ಮನೆಯಲ್ಲಿಲ್ಲದುದರಿಂದ ಪರಮೇಶ್ವರನೇ ಅವನನ್ನು ಕಾಪಾಡಿದ ಎನ್ನಬೇಕು. ಮತ್ತೆ ಅವರು ಬಸವಣ್ಣದೇವರನ್ನು ಪ್ರಾರ್ಥಿಸಿ, ಬಸಲಿಂಗಣ್ಣನ ಇನ್ನೊಬ್ಬ ಸೋದರ ರಾಚಪ್ಪನನ್ನು ಕೊಲ್ಲಲು ನಿರ್ಧರಿಸಿದರು. ಆದರೆ ಅವನನ್ನು ಭೇಟಿಯಾಗಲೂ ಆಗಲಿಲ್ಲ. "ಕೊಲ್ಲುವನಕಿಂತ ಕಾಯುವ ಶ್ರೇಷ್ಠ। ಬಹಳ

* The crime and Death of Sangya ; Indian Antiquary ; 1889; Vol. 18 ; P. 353.

ಚೆಲೊ ಅವರ ಆದರುಷ್ಟ‼" ಆಮೇಲೆ ಅವರು ನೇರವಾಗಿ ಬಸಲಿಂಗಣ್ಣನ ಮನೆಗೆ ಹೋಗಿ ವ್ಯಾಪಾರದಲ್ಲಿ ತೊಡಗಿದ್ದ ಅವನನ್ನು ಕಂಡರು. "ಬಸಲಿಂಗಣ್ಣನ ಚಿತ್ತ ರುಪಾಯಿ ಮೇಲೆ." ಅಲ್ಲಿದ್ದವರ ಗಮನಕ್ಕೆ ಬರದಂತೆ ಸಂಗ್ಯ ಕೊಂಕುಳಲ್ಲಿ ಅವಿಸಿದ್ದ ಕುಡಲನ್ನು ತೆಗೆದು ಅವನ ಕತ್ತನ್ನು ಕತ್ತರಿಸಿಬಿಟ್ಟ. ಬಸಲಿಂಗಣ್ಣನ "ಬಾಯಿಲಿ ಸುರಿತ ನೆತ್ತುರಾ। ಹಾರಿತ ಕಬರಾ। ಬಿದ್ದನ ಜೀವ ಹೋಗಿ।" ತಪ್ಪಿಸಿಕೊಳ್ಳುವಲ್ಲಿ ನಿರ್ದಿಷ್ಟ ಪ್ರಯತ್ನವೇನೂ ಇರಲಿಲ್ಲ; ವಾಸ್ತವವಾಗಿ ಸಂಗ್ಯನ ಪಶ್ಚಾತ್ತಾಪಪ್ರಜ್ಞೆ ಓಡಿ ಹೋಗಲು ಬಿಟ್ಟುಕೊಡಲಿಲ್ಲ. ಇಬ್ಬರನ್ನೂ ಬಂಧಿಸಿ ಗ್ರಾಮದ ಪೊಲೀಸು ಠಾಣೆಗೆ ಕರೆದೊಯ್ಯಲಾಯಿತು. ಇಬ್ಬರನ್ನೂ ಎದುರುಬದುರಿಗೆ ಕಂಬಕ್ಕೆ ಕಟ್ಟಿ ತಮ್ಮ ಅಪರಾಧವನ್ನು ಒಪ್ಪಿಕೊಳ್ಳುವವರೆಗೂ ಅವರನ್ನು ಹೊಡೆಯಲಾಯಿತು. ಅವರು ತಮ್ಮ ವೈಯಕ್ತಿಕ ಮತ್ಸರವನ್ನು ತೃಪ್ತಿಪಡಿಸಿಕೊಳ್ಳಲು ಹೂವಿನ ರಾಮು ಎಂಬ ಮುಗ್ಧ ನೊಬ್ಬನನ್ನು ಸಿಕ್ಕಿಸಲು ಪ್ರಯತ್ನಿಸಿದರು. ಆಮೇಲೆ ನಿಜವಾದದ್ದೇನೆಂದು ತಿಳಿದು ಕೊಳ್ಳಲು ದಫೇದಾರ ಬಂದ. ಸಂಪಾಗಾಂವಿಯ ಮಾಮ್ಲೇದಾರನ ಬಳಿಗೆ ಬಂದಿ ಗಳನ್ನು ಒಯ್ಯಲಾಯಿತು. ಅಲ್ಲಿಂದ ಅವರನ್ನು ವಿಚಾರಣೆಗಾಗಿ ಬೆಳಗಾಂವಿಗೆ ಒಯ್ದರು. ಹೂವಿನ ರಾಮು ನಿರ್ದೋಷಿಯೆಂದು ಬಿಡುಗಡೆಯಾದ. ಪರ್ಸ್ಯನನ್ನು ಗಡೀಪಾರು ಮಾಡಿ ಸಂಗ್ಯನಿಗೆ ಮರಣದಂಡನೆ ವಿಧಿಸಿದರು. ಎರಡು ಜಿಲ್ಲೆಗಳಿಗೆ ಮುಖ್ಯ ಕಾರಾಗೃಹವಾಗಿದ್ದ ಧಾರವಾಡದ ಕಾರಾಗೃಹಕ್ಕೆ ಮೊದಲು ಸಂಗ್ಯನನ್ನು ಒಯ್ಯ ಲಾಯಿತು. ಆಮೇಲೆ ಹೊಂಗಲದಲ್ಲೇ ದಂಡನೆಯನ್ನು ಕಾರ್ಯಗತಗೊಳಿಸಲು ನಿರ್ಧರಿಸ ಲಾಯಿತು. ಪ್ರಯಾಣ, ಸಂಗ್ಯ ತನ್ನ ತಂದೆತಾಯಿಗಳನ್ನು ಬೀಳ್ಕೊಳ್ಳುವುದು, ತನ್ನ ಅಕಾಲ ಅದೃಷ್ಟಕ್ಕಾಗಿ ದುಃಖಿಸುವುದು, ಕಾರ್ಯಾಚರಣೆಯ ವಿವರಣೆ—ಇವುಗಳಿಂದಲೇ ಲಾವಣಿಯ ಇತರ ಭಾಗಗಳೆಲ್ಲ ತುಂಬಿಹೋಗಿವೆ. ಇಲ್ಲಿ ಅನೇಕ ಹೃದಯಸ್ಪರ್ಶಿ ವಾಕ್ಯಗಳಿವೆ. ಇಡೀ ಹಾಡು ಪರಿಣಾಮಕಾರೀ ವರ್ಣನೆಗಳಿಂದ ಕೂಡಿದೆ.

ಅಪ್ಪು ಎಂಬ ಮರಾಠಾ ವೃತ್ತಿಲಾವಣಿಕಾರನಿಂದ ಈ ಲಾವಣಿ ರಚಿತವಾಯಿತು ಎಂದು ಹಾಡಿನ ಕೊನೆಯಲ್ಲಿ ಬರುವ ಹೇಳಿಕೆ ತಿಳಿಸುತ್ತದೆ. ಇದೇ ವೃತ್ತಿಯ ಎದುರಾಳಿಗಳ ಮೇಲೆ ಈ ಲಾವಣಿಯನ್ನು ಹಾಡಿ ಅವನ ಗುಂಪು ಯಶಸ್ವೀ ಗೆಲುವನ್ನು ಪಡೆಯುತ್ತದೆ.

ಪಲ್ಲ

ಬಡತನ ಅಂಬುದು ಬ್ಯಾಳಕೆಟ್ಟ
ಬಡವಗ ಬಂತು ಬಹು ಶಿಟ್ಟ
ಸಾವಕಾರ ಸಾಲಾ ಕೊಡಬೇಕಾದರ
ಸಂಗ್ಯಾಗ ಆದಿತೊ ಸಂಕಷ್ಟ

೧ನೆ ನುಡಿ

ಶಹರ್ ಹೊಂಗಲದಾಗ ಸಾವಕಾರ
ದೂರವಜಂತಿ ಅವನ ಹೆಸರ
ಬೆಳ್ಳಿ ಬಂಗಾರ ರೊಕ್ಕ ರುಪಾಯಿ
ಅಳ್ಳಿಯು ವಹಿವಟ ವ್ಯಾಪಾರ
ಚಿನಾಯು ಕುರೇದ ಚಾಕತರ
ರುಪಾಯಿ ವೋಯಂತ್ಯಾರ ಪತ್ತಾರ
ವಾರವಾರ ಚಲತಿ ಚಾಕಲೆಕ್ಕ ಮಾಡೊದು ಶನಿವಾರ
ಅಂದಾದುಂದಿ ಅವನ ಕಾರ್ಭಾರ
ಹತ್ತೆಂಟು ಮಂದಿ ಅವನ ಮನುಷ್ಯರ
ಮಾಗಿ ಮಳಿಗಾಲ ಹತ್ತಿ ಅರವುತಾರ ಗೊತ್ತ ಇಲ್ಲದ ಹೆಂಗಸರ ||ಚ್ಯೀ||

ಯೇನ ಹೇಳಲವನ ಕಾರ್ಬಾರಕಿ
ಅವ ಮಾಡುತ್ತಿದ್ದನೊ ಚಿನವಾರಕಿ
ಅಣ್ಣತಮ್ಮರಿಬ್ಬರು ತಿಳವಳಿಕಿ
ಅವರ ಮಾಡುಂದಕ ಕಡಿಮಿಲ್ಲ ಗಳಿಕಿ
ಊರಾಗ ಯಾರಿಗಾಗಿಲ್ಲ ಬೇಸರಿಕಿ
ಬಹಳ ಸಾಚೆ ಇಟ್ಟದ ಸಾವಕಾರಿಕಿ ||ಇಳವ||

ಅವನ ಪೋಷಾಕ ಹೇಳತೇನ ನಿಮಗ
ಕೇಳ ಈಗ
ಅವ ಹಿಡಿದ ತಿರಗತಿದ್ದ ವೋಣಿ
ಚೌಕ ಶಿಖಾಮಣಿ
ಹಾಕಿದ್ದ ಕೊರಳಾಗ
ಜೆರಕಾಟಿ ರುಮಾಲ ತಲಿಮೇಗ
ನೋಡ ಅವಗ
ಹೊತ್ತಿರು ದೋತರ ನಾಕಪ್ಪರಿ
ಕೆಮಲಟ ಬೇರೆ
ಅಂಗಿ ಮೈಯಾಗ
ಚಂದ್ರಹಾರ ಗೋಪ ಚಂದ ಹ್ಯಾಂಗ
ಯೆದಿಮೇಗ
ತಳತಳ ಹೊಳುದು ಬಂಗಾರ

ಪವಿತ್ರದಂಂಗರಾ
ಇಟ್ಟಿದ್ದ ಬೆರಳಾಗ ||ಯೇರ||

ಮಾತಿಲಿ ಇದ್ದನ ಬಹುದಿಟ್ಟ
ಸಂಳ್ಳ ಮಾತ ಇಲ್ಲ ಯಂಳ್ಳಷ್ಟ

೨ನೆ ನುಡಿ

ಮೊದಲ ಕೇಳ ಮಾತಿನ ಜರಿ
ಖಾತೆದ ಹೊಲ ನೋಡ ಜಾತ ಯೆಂರಿ
ಐದ ವರಷದ ದಿನ ಮುಂದ್ದತ ಮಾಡಿದನ ಬರಕೊಟ್ಟ ಕಾಗದ ಬರಾಬರಿ
ನ್ಯಾಯಂ ಬಂದಿತೊ ಹೋದಬರಿ
ಜೋರಿ ಮಾಡಲಿಲ್ಲ ಕಾಯಂದೆ ಮೀರಿ
ಮಾಸೀಲಿ ಪ್ರಕಾರ ಫಿರ್ಯಾದಿ ಮಾಡಿದನ ಸವದತ್ತಿ ಕೋರ್ಟಿನ್ಯಾಗ
ಬಿತ್ತಮುಂರಿ
ಬಸಲಿಂಗಣ್ಣನ ಮಾತ ಸರಿ
ಶ್ಯಾಪ ಚೆಲ್ಲಿ ಮಾಡಿದ ಮುಂಜರಿ
ಮುಂನಸ್ಸಫ ಅಂತನ ಅಪಿಲರ್ಜಿ ಧಾರ್ವಾಡಕೆ ಹೋಗಿ ಮಾಡರಿ ||ಚ್ಯೇ||

ಅಲ್ಲಿಂದ ಬಂದನ ಹೊಂಗಲಕ
ಮುಸಲತ್ತ ಮಾಡಿದ ಹೊಗುಂದಕರಿ
ನೂರ ರೂಪಾಯಿಂ ತೊಗೊಂಡ ಹಂತೇಕ
ಇಲ್ಲಿಂದ ಹೊಂಟನ ಧಾರ್ವಾಡಕ
ಅಪಿಲರ್ಜಿ ಕೊಟ್ಟನ ಸರಕಾರಕ
ಮಕಿಲನಿಟ್ಟನೊ ಆಗಿನ ಕ್ಷಣಕ ||ಇಳವ||

ಅರ್ಜಿ ಅಂತ ಮಾಡಿ ಕೊಡ ನಮುಗ ನೀ ಈಗರ
ನೂರ ರಂಪಾಯಿಂ ತೊಗೊ ಮಾರಿ ಗಾಡಿ
ಹೇಳ ಲಗಂ ಮಾಡಿ
ಯೇನಂತಿ ನಮುಗ
ವಕೀಲ ತಿಳದ ಮನದಾಗ
ನೋಡ ಆಗ
ಹೀಂಗಂತ ಕೊಟ್ಟ ವಚನ
ಕಟ್ಲೇದ ಸಂದನ

ಚಿಂತಿ ಯಾಕೊ ನಿನಗ
ನೂರ ರೂಪಾಯಿ ಕೊಟ್ಟ ವಕೀಲಗೆ
ಕೈಯಾಗ
ಪಹಿಲಾ ತಾರೀಖ ಮುಂದ್ದತ ಆದಿತ್ಯವಾರ
ಮುಂದ ಸೋಮವಾರ
ಜಬತಿ ಬಂತ ಬೇಗ ॥ಯೇರ॥

ಕಾರ್ಕೂನ ತಂದ ಜಬತಿ ಇಟ್ಟ
ಬಸಲಿಂಗ ನಡಿಸಿದ ತನ್ನ ಹಟ

೩ನೆ ನುಡಿ

ಮುನ್ನೂರ ರುಪಾಯಿದ ಮಾಸೀಲಾ
ನಿನ ಮೇಲಾಯಿತೊ ಫೈಸಲಾ
ಕಾರ್ಕೂನ ಅಂತಹ ಸಂಗೆಣ್ಣ ಕರಸು ನೀ ಯೇನ ಮಾಡತಿ ಸವಾಲಾ
ಸಂಗ್ಯಾಗ ಬಿತ್ತೊ ಮುಹಜಾಲಾ
ಹೇಳಿಕೊಂಡ ತನ ಅನಕೂಲಾ
ಫೈಸಲ ಪ್ರಕಾರ ರುಪಾಯಿ ಕೊಡತೆನ ಹೊಲದ ವಳಗ ಬಿಡಸರಿ ಪಾಲಾ
ಸರ್ವ ತಪ್ಪು ನಂದ ಆಯಿತಲ್ಲಾ
ನಿನ್ನಿಂದ ಹೊರತ ಗಟಿಯಿಲ್ಲಾ
ಬಸಲಿಂಗಣ್ಣನ ಮಾತ ಮೀರುದಿಲ್ಲ
ಕೈ ಮುಗದ ಹಿಡಿದನ ಕಾಲಾ ॥ಚ್ಯೆ॥

ಜಪ್ತಿ ಬಂದ ಬಳಿಕ ಯೇನ ಹೇಳಲಿ
ಇಂದಿಗೆ ನಿನ್ನ ಹೊಲ ಹೋಯಿತಿ
ಬಸಲಿಂಗಣ್ಣ ಮಾಡಿದನ ಜಾತಿ
ಫಕಿರಣ್ಣನ ಜುಮೆಂಕ ಹೊಲ ಆತಿ
ಸಂಗ್ಯಾ ಮನಿಗೆ ಹೋಗಿ ಮಾಡ್ಯಾನ ಚಿಂತಿ
ಖಾತೆದ ಹೊಲಾ ಇಂದಿಗೆ ಯಾರವಾತಿ ॥ಇಳವ॥

ಮುತ್ತೊಂದ ಮಾಡ್ಯಾರ ಮುಸಲತ್ತ
ನೋಡ ಬೇತ
ಸಂಗ್ಯಾ ಪರಿಪ್ಯಾ ಇಬ್ಬರು ಕೂಡಿ
ನಗತ ಮಾತಾಡಿ

ಯಾರಿಗಿಲ್ಲ ಗೊತ್ತ
ನಮ್ಮ ನಿಮ್ಮರ ವೊಳಗಿನ ಮಾತಾ
ಹೀಂಗಂತಾ
ಯಾರ್‌ಯಾರಿಗೆ ತಿಳಿಯಂಬಾರದ ಹೀಂಗ ಮಾಡುನು ಬಲ್ಲಾಂಗ
ಹೋಗುನು ಹರ್ಯಾನ ಹೊತ್ತ
ಅವರ ಮಂಸದರ ಕಂಡಗೋಲ ಕುಂತ
ಕಡುನು ಅಂತ
ಇಂದಿಗೆ ಹೋಗಲಿ ನಮ್ಮ ತಲಿ
ಆಗುವದು ಆಗಲಿ
ಜೀವದಿಂದ ಹೊರತಾ ||ಯೇರ||

ವಕ್ಕುಂದ ಊರ ಬಸಲಿಂಗ ಬಿಟ್ಟ
ನಾಳೆ ಹಾಕಂದು ಮಂಹನೌಮಿಂಗಟ್ಟ

೪ನೆ ನುಡಿ

ಮಂಗಳಾರ ಉದಯಂಕ ತಾ ಯೆದ್ದ
ತಾಯಿ ಪಾದಕ ಹೋಗಿ ಬಿದ್ದ
ಸಂಗ್ಯಾ ಪರಿಪ್ಯಾ ಇಬ್ಬರು ಅಂತರ ಬಸವಣ್ಣ ನಡಸು ನಮ ಜಿದ್ದ
ಕುಡಗೋಲ ಮಂಸದ ಅವ ಹಿಡಿದ ಬಗಲಗ ಮುಂಚ್ಚಿಕೊಂಡ ತಾ ನಡದ
ಮೂರ ತಾಸ ಹೊತ್ತೇರಿತ ಆಗ ಫಕೀರಣ್ಣನ ಮನಿಗೆ ಬಂದ
ಮನಿಯಾಗ ಕೇಳತಾರ ಯೆಲ್ಲಿ ಹೋದ
ಬಹಳ ಕೆಲಸ ಇತ್ತ ಅವನಿಂದ
ತುಂಕ್ಕಣ್ಣ ಅಂತನ ಯಾತಕ ಬಂದಿ ಯೇನ ಕೆಲಸ ನನ ಮುಂದ ||ಚ್ಯೇ||

ಇಷ್ಟು ಕೇಳಿ ಹಿಂದಕ ತಿರಿಗಿ ಹೋದ
ಹೊಲದಾಗ ಹೊಳಿಯಾಗ ಹುಡಿಕಿದಾ
ಅವ ಶಿಕ್ಕರ ಪ್ರಾಣ ಹೋಗುಂದಾ
ಫಕೀರಣ್ಣನ ಪರಮೇಶ್ವರ ಕಾದ
ಹುಡಿಕಿಯಾಡಿ ಅಂಗಡಿಗೆ ಬಂದ ಕಪ್ಪುರ ಕಾಯಿ ತೊಗೊಂಡ
ವೊಂದ ||ಇಳವ||

ಬಸವಣ್ಣದೇವರಿಗೆ ನಡದ ಮಾಡಿ ಜಲದ
ಕಾಯಿ ವಡದ ಬೆಳಗಿ ಕಪ್ಪರ ಮಾಡಿ ನಮಸ್ಕಾರ ಹೊಂಗಲ ದಾರಿ ಹಿಡಿದ

ಸಂಗಣ್ಣ ಬಂದ ಮುಂದ ಮುಂದ
ಅಲ್ಲಿಂದ
ವೆಂಗುಟಿ ಪರಸ ಯೇನಂದ
ಮುಂಚೆ ಕಂಡನಂದ
ರಾಚಪ್ಪನ ಹಿಡಿದಾ
ಹೀಂಗ ಮಾತಾಡಿ ಪರಿಪರಿದಿಂಗ
ವೊಂಡ್-ಖಂಡಾ
ರಾಚಪ್ಪನ ಮನಿಗೆ ಹೋಗಿ ಕೇಳ್ಯಾರ ಮುಂದಿಕಿಗಿ ಅಣ್ಣಪ ಯೆಲ್ಲಿ ಹೋದಾ
॥ಯೇರ॥

ಕೊಲ್ಲವನಕಿಂತ ಕಾಯುಂವ ಶ್ರೇಷ್ಠ
ಬಹಳ ಚೆಲೊ ಅವರ ಅದರುಷ್ಟ

೫ನೆ ನುಡಿ

ಬಂದದ್ದಾತಿ ಅಂತಾರ ಕಾಲಿ
ಶಿಟ್ಟ ಆದರ ತಮ್ಮ ಮನದಲ್ಲಿ
ಬಸಲಿಂಗಣ್ಣನ ಮನಿಗೆ ಹೋದರೊ ತಿಳಿಯಲಿಲ್ಲ ಇಬ್ಬರ ನೆಲಿ
ವೊಂಬತ್-ತಾಸ ವೇಳೆದ ಮೇಲೆ ಪೂರ್ವಲಿಖಿತ ನದಗಿತ ಅಲ್ಲಿ
ಸಂಗ್ಯಾ ಪರಿಪ್ಯಾ ಮುಂಜರಿ ಮಾಡಿಕ್ಯಾರ ಹೋಗಿ ನಿಂತರೊ ಅವನ
ಬದಿಯಲಿ

ಬಸಲಿಂಗಣ್ಣನ ಚಿತ್ತ ರಂಪಾಯಿಂ ಮೇಲೆ
ಮೂರುಂ ನಾಕು ಮಂದಿ ಅವನ ಬದಿಯಲ್ಲಿ
ಕಡದಾರು ಅಂಬುದುಂ ಅವಗ ತಿಳಿಯಲಿಲ್ಲ
ಶಿವ ತಂದೆ ಹಾಕಿದ ಮಾಲಿ ॥ಚ್ಯೇ॥

ಸಂಗ್ಯಾ ಮುಂಗೈಯುಂಗಿಯು ತೇಡಿಕೊಂಡ ಬಗಲನ್ನು ಕಂಡಗೋಲ
ತಕ್ಕೊಂಡ
ನಿಂತ ನೋಡಿ ಕಡದನೊ ಅವನ ಚಂಡ
ಅದರಂತ ಕಂಡಗೋಲ ಯಂಳಕೊಂಡ
ಕಡದವನ ಹಿಂದಕ ಸರಕೊಂಡ
ವೋಡಿ ಹೋದನ ಪರಿಪ್ಯಾನ್ನ ಕರಕೊಂಡ ॥ಇಳವ॥

ಬಸಲಿಂಗಣ್ಣ ಯೆಂದ್ದ ಸಂಗಟಾಗಿ
ಶಿರ ಬಾಗಿ

ಬಾಯಿಂಲಿ ಸುರಿತ ನೆತ್ತರಾ
ಹಾರಿತ ಕಬರಾ
ಬಿದ್ದನ ಜೀವ ಹೋಗಿ
ಕುಂತಿರು ಮಂದಿ ಗಾಬ ಆಗಿ ಹೊರಗ ಹೋಗಿ
ಯೆಲ್ಲರು ಅಂತರ ಹಿಡಿ ಹಿಡಿ ಮೋಡತನ ಮೋಡಿ
ಕೋದ ಕುತ್ತಿಗಿ
ಬರುಹಂತ ಮಂದಿ ಇದಿರಿಗಿ ಬದಿಗಾಗಿ
ಅವನ ಹಿಡಿಯಲಿಲ್ಲ ಯಾರ್‌ಯಾರಾ
ಬಂದರ ಹಳಬರಾ ಆಗ ಸುದ್ದಿ ಆಗಿ ||ಯೇರ||

ಊರಾಗ ಆದಿತ ಬಬ್ಬಾಟ
ದಾಟಲಿಲ್ಲ ಹೊಂಗಲ ಗೇಟ

೬ನೆ ನುಡಿ

ಶಿಟ್ಟ ತೀರಿತ ಅವರ ಮನದಂದಾ
ಮಂದಿ ಕೂಡಿತೊ ಸುತ್ತರದಾ
ಕೈಯಾನ ಕುಡಗೋಲ ಬಿಸಾಟಿ ಮೊಗೆದಾನ ಪಾಪ ಹೋಗಗೊಡಲಿಲ್ಲ ಮುಂದಾ
ಬಿಕ್ಕಟ್ಟ ಹಾದಿ ಮೋಣೆಯು ಸಂದಾ
ಹಳಬರ ಹಿಡಿದರ ಮಾಡಿ ಜಲದಾ
ಹೊಡಕೊಂತ ಚಾವಡಿಗೋದರ ಮರ‍್ಯಾದೆ ಉಳಿಯಲಿಲ್ಲ ಸಂಗ್ಯಾಂದಾ
ಕುಲಕರ್ಣಿ ಬಂದ ನೋಡಿದಾ
ಪೋಲಿಸಗವಡ ಹೊಡಿ ಅಂದಾ
ಇದರ–ಬದರ ಸಂಗ್ಯಾನ ಪರಿಷ್ಯಾನ ಕಂಬಕೆ ಕಟ್ಯಾರೊ ಬಿಗಬಿಗದ ॥ಚ್ಯೇ॥

ಸುಳ್ಳ ಬಡಿಯಬೇಡರಿ ನಿವ ನವಂಗ
ಕಡದಾಂಗ ಕಬೂಲ್ ಆದೇವ್ ಈಗ
ನಮ್ಮಾನ ಹಿಡದ ಕಳವರಿ ಸುಪಗಾಂವ್ಯಾಗ
ಚೌಕಾಸಿ ಆದಿತ ಕಚೇರ‍್ಯಾಗ
ಹೂವಿನ ರಾಮಾ ಇದ್ದನ ಇದರಾಗ
ಅವ ಅಯಿದಾನ ವಕ್ಕುಂದ ಊರಾಗ ॥ಇಳವ॥

ವಕ್ಕುಂದ ಊರಿಗೆ ಹೊಂಟರೊ ಹಳಬರಾ ತಯಾರಾ
ಅವ ಶಿಕ್ಕ ಹೂವಿನಾ ರಾಮಾ

ಆಗಿ ಬೇಪಾಮ ಜೀವಕ ಬಂತ ಗೋರಾ
ಆದವತಿಗೆ ಹೇಳತಾರ ಅವರ ಇಬ್ಬರಾ
ಅಂಜಿ ನಡಗತಾನ ತರತರಾ
ಇದ್ ಎನ ಆಕಾರ ಕಣ್ಣಿಗೆ ತಂದ ನೀರಾ
ಊರಾಗ ಹೇಳತಾರ ದೀರಾ
ಎಲ್ಲಾರಾ
ಈ ಪಾಪದಾಗ ಜರ್ ಇಲ್ಲ ಯೇನೇನಾಗುದಿಲ್ಲ ಅಂತಾರ
ಗೆಣೆಯರಾ ||ಯೇರ||

ರಾತ್ರೊರಾತ್ರಿಲಿ ಅವ ಹೊಂಟ
ಉಣಗೊಡಲಿಲ್ಲ ವಂದೀಟ

೭ನೆ ನುಡಿ

ಪೋಲಿಸ ಕುಲಕರ್ಣಿ ಯೇನಂದ
ಬಹಳ ಹುಷಾರಿ ಇರಬೇಕಂದ
ವೊಳೆ ಸಾವಕಾರನ ಕಡದ ಹಾಕಿದಾರ ಹಿಂತ್ ಆದ ಆಗಕಿಲ್ಲ
ಯೆಂದ್ ಎಂದ
ರಪೋರ್ಟ ಮಾಡೆರ ಕಾಗದ ಬರದ
ಹಳಬ ತೊಗೊಂಡ ಸಂಪಗಾಂವಿಗೆ ಹೋದ
ಕಚೇರಿವೊಳಗ ರಪೋರ್ಟ ಚೆಲ್ಯಾನ ಸುಭೇದಾರ ವೋದಿ ನೋಡಿದ
ಫೌಜ್‌ದಾರ ಲಗುಬೇಗ ತಯಾರ ಆದ
ಕುದುರಿಗಿ ತಡಿ ಬೇಗ ಹಾಕಂದ
ಬಿಲ್ಲಿ ಮನುಷ್ಯನ ತೊಗೊಂಡ ಬುಧವಾರ ಚೆಂಜಿವೇಳೆದಲಿ ಅವ
ಬಂದ ||ಚ್ಯೇ||

ಬಂದ ನಿಂತ ನೋಡಿದ ಫೌಜ್‌ದಾರ
ಕಣ್ಣಿಲಿ ಕಂಡನ ನೆತ್ತರಾ
ಹೆಣ ನೋಡಿ ಮರಗಿದ ಮರಮರಾ
ಯೇನ ಮುನಿದಾನ ಹರಿಬ್ರಹ್ಮ ದೇವರಾ
ಇವನ ಕಡದಾಗ ಇದ್ದರ ಯಾರ್‌ಯಾರ
ಮುಟೂರ ಅಯ್ಯಗೋಳ ಪಂಚಪ್ಪ ಮೂವರ ||ಇವಳ||

ಇಷ್ಟ ಕೇಳಿ ಮಣ್ಣ ಕೊಡರೆಂದಾ
ಆರತಿಂದಾ
ತಾಯಿತಂದಿ ಅಳತಾರೊ ಬೋರ್ಯಾಡಿ
ಬಿದ್ದ ಹೊರಳ್ಯಾಡಿ
ಆದರುಪ್ಪಕವರ್ ನಮದಾ
ಯೇನ ಕಡಿಮಿಯಿಲ್ಲ ಆನಂದಾ ದಯದಿಂದಾ
ಯೇನ ಬೇಡಿ ಬಂದನ ಶಿವನಲ್ಲಿ ನಮ್ಮ ಹೊಟ್ಟಿಲಿ ಮಗ ಬಿಟ್ಟ ಹೋದಾ
ನಾನಾಪರಿ ದುಕ್ಖ ಸ್ತ್ರೀಯಳದಾ
ಹಾಕಿದಾ ಗುಂಡ-ಗುಳದಾಳಿ ವೊಗದಾಳ ಹರದ
ಇನ್ನೇನ ಅತಿ ನಂದ
ಮಣ್ಣಿಗೆ ಮರಿ ಆದ ॥ಯೇರ॥

ದುರ್-ಮಣ ಆದಿತೊ ವೈಕುಂಠ
ಯಾರಿಗೆ ತಿಳಿಯದೊ ಶಿವನಾಟ

೮ನೆ ನುಡಿ

ಮಹನೌಮಿ ಅಮಾಸಿ ಸೋಮವಾರ
ಆಶ್ವೀಜ ಶುದ್ಧ ಪಾಡ್ಯ ಮಂಗಳಾರ
ಸಕೆ ಸತ್ತರಾಸೆ ಪಂಚಾ–ಐಂಶಿ ರುದ್ರೋದ್ಗಾರಿನಾಮ ಸಂವತ್ಸರಾ
ಹೀಂಗ ಮಾಡಿದರ ವಿಚಾರ
ಪೋಲಿಸ ಕುಲಕರ್ಣಿ ಫೌಜ್‌ದಾರಾ
ಸಂಗ್ಯಾನ ಪರಿಷ್ಯಾನ ಕೈದ–ವೊಳಗ ಸಂಗಟ ಹೊಂಟರ ಹಳಬರಾ
ಇದ ಮೇಗ ಬಲ–ಹುಷಾರ
ಕಚೇರಿವೊಳಗ ಹಾಜರಾ
ಯಚ್ಚರ ತಪ್ಪಿ ಯತ್ತರ ಹೋದಿರಿ ಹುಕುಮ ಮಾಡಿದಾನ
ಮಾಮ್ಲೇದಾರಾ ॥ಜೈ॥

ಇಲ್ಲಿ ತಾಲೂಕ ಬಿಟ್ಟರ ಸಂಪಗಾಂವಿ
ವೋದ ಹಾಕ್ಯಾರ ಜಿಲ್ಲೆ ಬೆಳಗಾಂವಿ
ಕರಸಿ ಸಾಹೇಬ ಮಾಡಿದ ನಿರ್ಣಾಯ
ಸಂಗ್ಯಾಗ ಬಿದ್ದಾಂಗ ಆದೀತ ಕೆರಿ ಬಾಂವಿ
ಕಟ್ಟಿ ಬರದ ಕಳಿವ್ಯಾರ ಮುಮ್ಯಾಗಿ
ಹುವ್ವಿನ ರಾಮನ ತಮದ್ದ ಅನ್ಯಾಯ ॥ಇಳವ॥

ಮೂರ ತಿಂಗಳಿಗೆ ಬಂತ ಉತ್ತರಾ ಮಂಜಕೂರಾ
ವೋದಿ ನೋಡಿದಾನ ಸ..ದಾರಾ
ಪರಿಷ್ಕಾನ ಕರಿ-ನೀರಾ
ಬಿಡಂದು ಆತಿ ಪೂರಾ
ಸಂಗಣ್ಣಾ ಅವಲ ಕೈದಿದಾರ
ಕರಾರ
ಧಾರ್ವಾಡಕ ಸಾಹೇಬ ಹೋಗಂದ ಸ್ರಜಾ ಗಲ್ಲಿಂದ ಆತಿ ಜಾಹಿರಾ
ಸಂತ್ರಮಂತ್ತ ಅವನ ಮೇಲಿ ಪಾರಾ
ಚೆಟಿಗಾರಾ
ಧಾರ್ವಾಡಕ ಹಾಕಿದರ ತಂದ ಹೂನಾರ
ಮುಂದಿಂದ ತಿಳಿಯಲಿಲ್ಲ ಜರಾ ||ಯೇರ||

ಇಂಗ್ರೆಜಿ ಕಾಯಿಂದೆ ಬಿಕ್ಕಟ್ಟ
ನಡಂವದಿಲ್ಲ ಯಾರ್‌ಯಾರ ಆಟ

೯ನೆ ನುಡಿ

ಧಾರ್ವಾಡ ವೂರ ಬಿಟ್ಟ ಬಂದಾ
ಉಳಸಣ ಆಗಲಿಲ್ಲ ಯಾರಿಂದಾ
ಸಾಹೇಬ ಸಂಭೇದಾರ ಫೌಜ್‌ದಾರ ಕಾರ್ಕೂನ ಹೊಂಗಲಕ
ತೊಕೊಂಡ ನಡಿರೆಂದಾ

ಯಂಚ್ಚರಿಕೆ ಇರಬೇಕ ಯಂಚ್ಚರದಿಂದ
ಹಿರದ ಕಟ್ಟಿ ಪಾರಾ ಹಿಂದ ಮುಂದಾ
ಗಲ್ಲಿಗ್ ಹಾಕಂದು ಸಾಮಾನ ಯೆಲ್ಲಾ
ಸಂಗ್ಯಾ ಚಿಕ್ಕಡಿ ಮೇಗ ಕುಂತಿದ್ದ
ಮಾಡಿ ತಂದರೊ ಬಲಿ-ಬಂದ
ಮಾತಾಡತಾನ ದರಜಿಲ್ಲದ
ಬೆಸ್ತಾರ ದಿವಸಾ ಅಣ್ಣತಮ್ಮರನಾ ತನ್ನ ತಾಯಿನಾ ಕರಸಿದಾ ||ಚ್ಯೇ||

ಹಡೆದ ತಾಯವ್ವಗಂತಾನೊ ಯಾಕಳತಿ
ಆಗಂಹಂತಾದೆಲ್ಲಾ ಆಗಿ ಹೋತಿ
ರಣ-ಮಂಡಲ ಅಭಿಮಾನ್ಯ ನನಗ್-ಆತಿ

ನನಗ ಯಾರ್‌ಯಾರ ಇಲ್ಲದಾಂಗ ಆತೊ ಸಾರತಿ
ಇಂದಿಗೆ ರಿಣ ಹರದ ಹೋತಿ
ಇನ್ನ ಬಿಟ್ಟ-ಕೊಡ ನನ್ನ ಕಕಲಾತಿ ॥ಇಳವ॥

ಇಷ್ಟ ಹೇಳಿ ಮಾಡಿದ ಆಲಾಪ
ವಂದ ಸ್ವಲ್ಪ
ನಂದ ಹೀಂಗ ಇತ್ತ-ಪ್ರಮಾಣ ಕೆಟ್ಟ ದಿವಾಣಾ
ಕೇಳಲಿಲ್ಲ ತಪ್ಪ
ಮಾಡಿ ಬಿಟ್ಟಾರಂತಿನಿ ಮಾಪಾ ವರಷ ಟೇಪಾ
ಶಿಕ್ಯಾಂಗ ಆತೊ ಕೈಶೆರಿ ಬ್ರಹ್ಮ ಬರೆದ ಬರಿ ಮಾಡಿದಂತಾ ತಪ್ಪಾ
ಯೆಣ್ಣಿರತ ಹೋದಾಂಗ ದೀಪಾ ಆಕಲ್ಪಾ
ಹಿಂತ್‌-ಆದ ನನ್ನ ಆದರುಂಷ್ಟ
ಜಿದ್ದ ಬಲಿ-ಕೆಟ್ಟ ಇರಬಾರದೊ ಕೋಪಾ ॥ಯೇರ॥

ಮಾತವಮಾತಿಗೆ ಮಥನ ಕೆಟ್ಟ
ಚೆಲೋ ವಂನಂಷ್ಯಗ ಮಾತಿನ ಪೆಟ್ಟಾ

೧೦ನೆ ನುಡಿ

ಸಂತಿ ಶುಕ್ರವಾರಾ ಆದ ದಿನ ಸಂತ್ಯಿನ ವಂಂದಿ ಕೂಡಿತ ಜನಾ
ಹವ್ವ ಹಾರಿ ಕಬರಿಲ್ಲದ ಮಾತಾಡತಾನ ವೊರ ಹೊರಗ
ತಂದಾರೊ ಆವನಾ
ಸಾಹೇಬಗ ಹೇಳಿಕೊಂಡ ಯೇನೇನ ಕೈಮುಂಗದ ಮಾಡಿದ ಶರಣ
ಐದ ರೂಪಾಯಿಂ ಖರ್ಚು ಮಾಡಿಶ್ಯಾರ ಮಂಠದ ವೊಳಗ
ಕೊಡಸರಿ ಮಣ್ಣ
ಮಾರಿ ಬಾಡಿ ಆದಿತ ಸಣ್ಣ ಕಳೆ ಗಂಂದಿ ಹಾರಿತ ಬಣ್ಣಾ
ಹರಹರಾ ಅಂತ ಹಾದಿ ಹಿಡದನೊ ಹತ್ತಿ ನಿಂತ ತನ್ನ ಟಿಕಾಣ ॥ಚ್ಯೆ॥

ಗಲ್ಲಿಗೆ ಹಾಕ್ಯಾರ ಕೊರಳಿಗೆ ಸರಕಾ
ಸ್ವರ್ಗದ ದಾರಿ ಹಿಡಿದಾನೊ ಕೈಲಾಸಕಾ
ಆಕ್ಕತಂಗೆರ ಆಣ್ಣತಮ್ಮರ ತಾಯಿಂ ದಂಕ್ಷ
ಸುಂತ್ರಗಟ್ಟಿ ನಿಂತಿತ ಜನಲೋಕಾ
ನಾಕ ತಿಂಗಳ ಹನ್ನೆರಡ ದಿನಕ
ಅವರಾತ್ರಿ ಆಮಾಸಿ ತಾರೀಖಾ ॥ಇಳವ॥

ಊರ ಬೈಲ್-ಹೊಂಗಲ ದೊಡ್ಡ ಶಹರ
ಜಾಹೀರಾ
ಸುತ್ತ ರಾಜ್ಯದ ವಳಗ ಹೆಸರಾ
ಹನುಮಂತ-ದೇವರಾ ಅವಗ ನಮಸ್ಕಾರಾ
ತುಕಾರಾಮ ನಮ್ಮ ವಸ್ತದರಾ
ಶಾಯಿರಾ-ಕವಿ ಆಪು ಮಾಡಿದ ತಯಾರ
ದೇವಣ್ಣನಕ್ಷರ ಇಲ್ಲದಾಂಗ ಕಸರ
ಅವರ ಡಬ್ಬಿನ ಮೇಗ ಮುತ್ತಿನ ತುರಾ
ಜರ್ತರಾ
ಸಂತು ಬಸಣ್ಣ ಜೀವದ ಗೆಣೆಯರಾ
ವೈರಿಗೆ ಮಾಡ್ಯಾರ ಜೇರ
ಇಳಿತ ಕಲಿಗಿಗಿ ನೀರಾ ॥ಯೇರ॥

ಮಾದುರಾವ ಕಲಿಗಿಗೆ ಬಿದ್ದಾನೆ ಗಂಟಾ
ಹಾಡಿನ ವಳಗ ಮುಂಕಪಾಟ

ಕಿತ್ತೂರ ಚನ್ನವ್ವನ ಸೊಸೆ*

ಬೆಳಗಾಂ ಜಿಲ್ಲೆಯ ಸಂಪಗಾಂ ತಾಲ್ಲೂಕಿನ ಕಿತ್ತೂರು ಈಗ ಸರ್ಕಾರದ ಒಂದು ಹಳ್ಳಿಯಾಗಿದ್ದರೂ ಅದು ಮುಂಚೆ ದೇಸಾಯಿಯರ ರಾಜಧಾನಿಯಾಗಿತ್ತು. ಹಾಡಿನಲ್ಲಿ ಹೇಳಲಾಗಿರುವ ಶಿವಲಿಂಗಪ್ಪ ರುದ್ರುಸರ್ಜನೇ ಅದರ ಕೊನೆಯ ದೇಸಾಯಿ. ಮಕ್ಕಳಿಲ್ಲದೆ ಹೆಂಡತಿ ಈರವ್ವನನ್ನೂ ಮಲತಾಯಿ ಚನ್ನವ್ವನನ್ನೂ ಬಿಟ್ಟು ಶಿವಲಿಂಗಪ್ಪ ಸತ್ತದ್ದು ೧೮೨೪ರ ಸೆಪ್ಟೆಂಬರ್‌ನಲ್ಲಿ. ವಂಶವನ್ನು ಉಳಿಸುವುದಕ್ಕಾಗಿ 'ಮಾಸ್ತಮರ್ಡಿ ಎಂಬ ಪಕ್ಕದ ಹಳ್ಳಿಯ ಪಾಟೀಲನೊಬ್ಬನ ಮಗನನ್ನು ದತ್ತುಸ್ವೀಕಾರ ಮಾಡುವ ಪ್ರಯತ್ನವೂ ಅಲ್ಲಿನ ಕಾರಭಾರಿಯಿಂದ ನಡೆಯಿತು. ಬ್ರಿಟಿಷ್ ಸರ್ಕಾರದಿಂದ ಕಿತ್ತೂರು ರಾಜ್ಯ ಆಕ್ರಮಿಂತವಾದ ಅನಂತರದ ಘಟನೆಗಳನ್ನು ಇ. ಡಬ್ಲ್ಯೂ. ವೆಸ್ಟ್ ಅವರ ಶ್ರೇಷ್ಠ ವರ್ಣನೆಗಳಿಂದಲೇ ಹೇಳುವುದು ಒಳ್ಳೆಯದು.

"ತಮ್ಮ ಧಣಿಯು ಸಾಯುವ ಸ್ಥಿತಿಯಲ್ಲಿರುವುದನ್ನೂ ಒಬ್ಬ ಮಗನನ್ನು ದತ್ತ ಸ್ವೀಕಾರ ಮಾಡಲು ನಿರ್ಧರಿಸಿರುವುದನ್ನೂ ತಿಳಿಸಲು ಧಾರವಾಡದ ಪ್ರಮುಖ ಕಲೆಕ್ಟರ ನಾದ ಥ್ಯಾಕರೆಯ ಬಳಿಗೆ ೧೮೨೪ರ ಸೆಪ್ಟೆಂಬರ್ ೧೨ ರಂದು ದೇಸಾಯಿಯ ಪ್ರಮುಖ ಸೇವಕರು ಬಂದರು." —(ಲಾವಣಿಯ ನಾಲ್ಕನೆಯ ನುಡಿಯಲ್ಲಿ ಹೇಳಿರುವಂತೆ 'ಟಾಕುರ್ ಸಾಹೆಬ್')—"ಜುಲೈ ಹತ್ತನೆಯ ತಾರೀಖಿನ ಆ ಪತ್ರದಲ್ಲಿ, ಅದು ತಲಪಿದ ದಿನ ದತ್ತುಸ್ವೀಕಾರ ಮಾಡಿರುವುದನ್ನು ನಮೂದಿಸಲಾಗಿತ್ತು. ಧಾರವಾಡದಿಂದ ಹದಿನೆಂಟು ಮೈಲಿ ದೂರವಿರುವ ಕಿತ್ತೂರಿಗೆ ವೈದ್ಯನೊಬ್ಬನನ್ನು ತತ್‌ಕ್ಷಣ ಕಳಿಸ ಲಾಯಿತು. ಆದರೆ ಅವನು ಬಂದು ದೇಸಾಯಿ ಸತ್ತಿರುವುದನ್ನು ಕಂಡ. ಬಹುಶಃ ಕಿತ್ತೂರಿನಿಂದ ಧಾರವಾಡಕ್ಕೆ ದೂತ ಹೊರಡುವ ಮುಂಚೆಯೇ, ಅಂದರೆ, ಕೆಲವು ಗಂಟೆ ಗಳ ಹಿಂದೆಯೇ ಸತ್ತಿರಬಹುದೆಂದು ಹೆಣದ ಲಕ್ಷಣವನ್ನು ನೋಡಿ ಅವನು ನಿರ್ಧರಿಸಿದ. ಈ ಎಲ್ಲ ಘಟನೆಗಳನ್ನೂ ಗಮನಿಸಿದ ಥ್ಯಾಕರೆಗೆ ದತ್ತುಸ್ವೀಕಾರದ ಕ್ರಮ ಅನುಮಾನಾಸ್ಪದ ವಾಗಿ ಕಂಡಿತು. ಪ್ರಕಟಣೆಯನ್ನು ಸಲ್ಲಿಸುವ ಬಗ್ಗೆ ಎಚ್ಚರವಾಗಿದ್ದರೂ ಅಂಥದೊಂದು ಸಲ್ಲಿಸುವಿಕೆಯ ಅಗತ್ಯವಿದ್ದರೂ ದೇಸಾಯಿ ದತ್ತುಸ್ವೀಕಾರದ ಬಗ್ಗೆ ಅನುಮತಿ ಕೇಳಲು ಎಂದೂ ಒಪ್ಪಿರಲಿಲ್ಲ. ಕೆಲವು ತಿಂಗಳುಗಳ ಹಿಂದೆ ಥ್ಯಾಕರೆ ಅವನನ್ನು ಕಂಡಿದ್ದಾಗಲೂ, ಆರೋಗ್ಯ ಸರಿಯಿಲ್ಲದಿದ್ದರೂ ತನ್ನ ವ್ಯವಹಾರದ ಬಗ್ಗೆ ಸರಾಗವಾಗಿ ಮಾತನಾಡಿದ ದೇಸಾಯಿ ದತ್ತುಸ್ವೀಕಾರದ ಬಗ್ಗೆ ಏನನ್ನೂ ಹೇಳಿರಲಿಲ್ಲ. ಪತ್ರದಲ್ಲಿದ್ದ ದೇಸಾಯಿಯ ಸಹಿಯೂ ನ್ಯಾಯಕ್ಕೆ ದೂರವಾದಂತಿದ್ದುದಲ್ಲದೆ, ಅವನ ಸ್ವಾಭಾವಿಕ ಕೈಬರಹಕ್ಕೂ ಈ ಪತ್ರಕ್ಕೂ ವ್ಯತ್ಯಾಸ ಕಂಡುಬರುತ್ತಿತ್ತು. ದೇಸಾಯಿ ಸಾಯುವವರೆಗೆ ಅಥವಾ

---

*The Daughter-in-law of Channavva of Kittur; Indian Antiquary; 1890; Vol. 19; p. 413.

ಪ್ರಜ್ಞಾಶೂನ್ಯನಾಗುವವರೆಗೆ ದತ್ತಸ್ವೀಕಾರ ಆಗಿರಲಿಲ್ಲ ಎಂಬ ತನ್ನ ಮನಸ್ಸಿನ ಪ್ರಚೋದನೆಗೆ ಇಂಬುಗೊಟ್ಟು ಥ್ಯಾಕರೆ ಆ ತೀರ್ಮಾನಕ್ಕೇ ಬಂದ.

"ಈ ಸಂದರ್ಭಗಳನ್ನು ಸರ್ಕಾರದ ಗಮನಕ್ಕೆ ತರುವ ತನ್ನ ವರದಿಯಲ್ಲಿ ಥ್ಯಾಕರೆ, ಕೇವಲ ಹನ್ನೊಂದು ವರ್ಷ ವಯಸ್ಸಿನ ದೇಸಾಯಿಯ ಕುಟುಂಬ, ಅವನ ಮಲತಾಯಿ, ಎರಡು ತಿಂಗಳ ಹಿಂದೆ ಸತ್ತ ಅವನ ಸೋದರನ ವಿಧವೆ ಹೆಂಡತಿ—ಮುಂತಾದ ಅಂಶಗಳನ್ನು ಒತ್ತಿ ಹೇಳಿದ. ದತ್ತಸ್ವೀಕಾರಕ್ಕೆ ಗೊತ್ತಾಗಿದ್ದ ಮಗುವಿನಂತೆ ಉಳಿದ ಸಂಬಂಧಗಳೂ ಸಗೋತ್ರವಲ್ಲದೆ, ಅವರ ಹಿರೀಕರನ್ನು ಗುರುತಿಸಲಾಗದ ದೂರದ ಸಂಬಂಧವಾಗಿವೆ—ಮುಂತಾದ ಅಂಶಗಳನ್ನೂ ಹೇಳಿ, ಥ್ಯಾಕರೆ, ಅನ್ಯಾಯದ ದತ್ತಸ್ವೀಕಾರದ ಬಗ್ಗೆ ಶೋಧನೆ ನಡೆಸಲು ತಾನು ಕಿತ್ತೂರಿಗೇ ಹೊರಟಿರುವುದಾಗಿ ಪತ್ರದಲ್ಲಿ ಬರೆದ. ಅದರ ಯಶಸ್ಸಿನ ಬಗ್ಗೆ ಸರ್ಕಾರದ ತೀರ್ಮಾನವನ್ನು ಅನಿರ್ಧಾರಿತ ಸ್ಥಿತಿಯಲ್ಲಿಡಲು, ಸರ್ಕಾರದ ಮೇಲೆ ರಾಜ್ಯ ತಿರುಗಿಬೀಳದಿರಲು—ಎರಡಕ್ಕೂ ಅನುಕೂಲವಾಗುವಂತೆ ಇಬ್ಬರು ಮೇಲ್ವಿಚಾರಕರನ್ನು ನೇಮಿಸಿದ: ಒಬ್ಬ ಸರ್ಕಾರದ ಪರವಾಗಿ ಮತ್ತು ಇನ್ನೊಬ್ಬ ದೇಸಾಯಿಯ ಕುಟುಂಬದ ಪರವಾಗಿ.

"ಈ ವರದಿ ತಲಪಿದ ಮೇಲೆ, ಅನುಮತಿ ಇಲ್ಲದೆ ದತ್ತಸ್ವೀಕಾರವಾಗಿರುವುದರಿಂದ ಮತ್ತು ಅದು ನಿಜವೇ ಅಲ್ಲವೆಂಬುದಕ್ಕೆ ಆಧಾರಗಳು ಸಿಕ್ಕಿರುವುದರಿಂದ 'ಬ್ರಿಟಿಷ್ ಸರ್ಕಾರವು ದತ್ತಸ್ವೀಕಾರವನ್ನು ಮನ್ನಿಸುವುದಿಲ್ಲ'ವೆಂಬ ಪ್ರಕಟಣೆಯನ್ನು ಹೊರಡಿಸಬೇಕೆಂಬ ಸೂಚನೆಗಳನ್ನು ನೀಡಲಾಯಿತು. ಇದರಿಂದ ರಾಜ್ಯವನ್ನು ತನ್ನ ವಶಕ್ಕೆ ತೆಗೆದುಕೊಳ್ಳಬೇಕೆಂದು, ಆ ಮೂಲಕ ದತ್ತಸ್ವೀಕಾರದ ಸಂದರ್ಭಗಳ ಶೋಧನೆಗೆ ತೊಡಗಬೇಕೆಂದು ಥ್ಯಾಕರೆ ಇಷ್ಟಪಟ್ಟ. ಟಿಪ್ಪೂವಿನಿಂದ ಗೆಲ್ಲುವ ಮುಂಚೆ, ದತ್ತಸ್ವೀಕಾರಕ್ಕೆ ಗೊತ್ತಾಗಿರುವ ಹುಡುಗ ಕಿತ್ತೂರಿನ ಒಡೆಯನಾಗಿದ್ದ ದೇಸಾಯಿಯ ಸಂತತಿಯವನೋ ಅಲ್ಲವೋ ಎಂಬುದನ್ನು ಖಚಿತಪಡಿಸಿಕೊಳ್ಳುವ ಆಕಾಂಕ್ಷೆ ಸರ್ಕಾರದ್ದಾಗಿತ್ತು. ದತ್ತಸ್ವೀಕಾರ ಅಂಥ ಮಹತ್ವದ್ದಲ್ಲವೆಂದೂ ಹುಡುಗನಿಗೆ ಅವಕಾಶ ಕೊಡಬಹುದೆಂದೂ ಟಿಪ್ಪೂ ತೀರ್ಮಾನಿಸಿದ್ದ. ಇನ್ನೊಂದು ಕಡೆ, ಹುಡುಗ ಪೂರ್ವದ ದೇಸಾಯಿಯ ಸಂತತಿಯವನೂ ಅಲ್ಲದೆ ಗತಿಸಿದ ದೇಸಾಯಿಯ ಸ್ತ್ರೀಸಂಬಂಧೀಕನೂ ಅಲ್ಲದೆಹೋದ ಪಕ್ಷದಲ್ಲಿ ದತ್ತಸ್ವೀಕಾರಕ್ಕೆ ಅವಕಾಶಕೊಡಬಾರದೆಂಬ ಹೇಳಿಕೆಯೂ ಇತ್ತು.

"ವರದಿಯಾಗಿರುವಂತೆ ದೇಸಾಯಿ ಸತ್ತದ್ದು ಸೆಪ್ಟೆಂಬರ್ ೧೨ನೆಯ ತಾರೀಖಿನ ದಿನ್ನ; ಅಲ್ಲ ೧೧ನೆಯ ತಾರೀಖಿನ ರಾತ್ರಿಯಲ್ಲಿ; ಆಗ ಯಾವ ದತ್ತಸ್ವೀಕಾರವೂ ಆಗಿರಲಿಲ್ಲ; ದೇಸಾಯಿ ಸತ್ತಮೇಲೆ ಕಾರಭಾರಿಯಾದ 'ಕೊನೂರು ಮಲ್ಲಪ್ಪ' ಮತ್ತು ಇತರ ಅಧಿಕಾರಿಗಳು ದೇಸಾಯಿಯ ಪದವಿಯ ಚಿಹ್ನೆಗಳನ್ನುಳ್ಳ ಮಗುವನ್ನು ಕಂಡುಹಿಡಿದರು—ಈ ಅಂಶಗಳನ್ನು ತನ್ನ ಸ್ವಯಂ ಶೋಧನೆಯಿಂದ ಥ್ಯಾಕರೆ ಶ್ರುತಪಡಿಸಿದ. ಸಂಬಂಧಪಟ್ಟವರಿಂದ ಈ ಅಂಶಗಳು ಸಂಪೂರ್ಣ ಮನ್ನಣೆ ಪಡೆದುವು. ಥ್ಯಾಕರೆಗೆ ಕಳಿಸಲ್ಪಟ್ಟ ಜುಲೈ ಹತ್ತರ ಕಾಗದ ಸತ್ತ ದೇಸಾಯಿಯ ಕೈಯಿಂದ ಬರೆಸಿದುದು ಎಂಬ ನಿರ್ಧಾರಕ್ಕೆ

ಎಡೆಗೊಟ್ಟಿತು. ಗತಿಸಿದ ದೇಸಾಯಿಯ ಖಜಾನೆಯಿಂದ ಒಡವೆಗಳನ್ನೂ ಹಣವನ್ನೂ ಅಪಹರಿಸಿದ್ದಾನೆಂಬ ಆಪಾದನೆಯನ್ನೂ, ದೇಸಾಯಿಯ ಉತ್ತರಾಧಿಕಾರಿಯನ್ನು ಅಕ್ರಮವಾಗಿ ಆಯ್ಕೆ ಮಾಡಿದ್ದಾನೆಂಬ ಆಪಾದನೆಯನ್ನೂ ಹೊರಿಸಿ, ಸರ್ಕಾರದ ಪರ ಮೇಲ್ವಿಚಾರಕನಾಗಿ ನೇಮಿಸಲ್ಪಟ್ಟಿದ್ದ ಕೊನೂರು ಮಲ್ಲಪ್ಪನನ್ನು ಕೆಲಸದಿಂದ ತೆಗೆದು ಹಾಕಲಾಯಿತು. ಈ ಎಲ್ಲ ಆಗುಹೋಗುಗಳನ್ನೂ ವರದಿ ಮಾಡುತ್ತ ತನ್ನ ಪತ್ರದಲ್ಲಿ ಥ್ಯಾಕರೆ ಬರೆಯುತ್ತಾನೆ : 'ಇಲ್ಲಿ ಎಲ್ಲ ಶಾಂತ ಸ್ಥಿತಿಯಲ್ಲಿದೆ. ಎಂಥ ಅವ್ಯವಸ್ಥೆಯನ್ನೂ ನಾನು ನಿರೀಕ್ಷಿಸುವುದಿಲ್ಲ. ಯಾವ ಮಿಲಿಟರಿ ಸಹಾಯವೂ ಇಲ್ಲದೆ ಇಡೀ ರಾಜ್ಯವನ್ನು ನಿರ್ವಹಿಸಬಲ್ಲೆನೆಂಬ ನಂಬಿಕೆ ನನಗಿದೆ.' ಆಮೇಲೆ ಅವನು ಸಲ್ಲಿಸಿದ ಕಿತ್ತೂರ ವಂಶ ಪಾರಂಪರ್ಯದ ತನ್ನ ಶೋಧನೆಯ ಫಲಿತಾಂಶದಲ್ಲಿ, ಪೂರ್ವದ ದೇಸಾಯಿಯ ಸಂತತಿಯವರಾಗಲಿ, ಗತಿಸಿದ ದೇಸಾಯಿಯ ಸ್ತ್ರೀಸಂಬಂಧೀಕರಾಗಲಿ, ಇಲ್ಲವೆಂದು ತಿಳಿಸುತ್ತಾನೆ.

"ಈ ವರದಿಗಳು ಇನ್ನೂ ಅನಿರ್ಧಾರಿತ ಸ್ಥಿತಿಯಲ್ಲಿರುವಾಗಲೇ, ಕಿತ್ತೂರಿನಲ್ಲಿ ದಂಗೆ ಪ್ರಾರಂಭವಾಗಿರುವ, ಅದರಿಂದ ಅನೇಕ ಗಣ್ಯವ್ಯಕ್ತಿಗಳೂ ರಾಜಕೀಯ ಧುರೀಣರೂ ಸಾವನ್ನಪ್ಪಿರುವ, ವರ್ತಮಾನ ತಲಪಿದುದು ಸರ್ಕಾರಕ್ಕೊಂದು ಆಘಾತವೇ ಆಗುತ್ತದೆ. ಅಕ್ಟೋಬರ್ ೨೧ರಂದು ಈ ದಂಗೆ ಕಾಣಿಸಿಕೊಂಡಮೇಲೆ, ಖಜಾನೆಯ ಮೇಲ್ವಿಚಾರಣೆಯಲ್ಲಿದ್ದ ಗತಿಸಿದ ದೇಸಾಯಿಯ ಸಿಪಾಯಿಗಳೇ ಇದಕ್ಕೆ ಕಾರಣವೆಂದೂ, ಅವರೆಲ್ಲರೂ ವಿಶಿಷ್ಟ ಲಕ್ಷಣಗಳನ್ನುಳ್ಳ ಅಜ್ಞಾತ ವ್ಯಕ್ತಿಯೊಬ್ಬನಿಂದ ಆಜ್ಞಾಪಿತರಾಗುತ್ತಿದ್ದಾರೆಂದೂ, ಕಂಡುಕೊಂಡ ಥ್ಯಾಕರೆ ಖಜಾನೆ ಬಗ್ಗೆ ಭಯಭೀತನಾದ. ಸರ್ಕಾರೀ ಸಿಪಾಯಿಗಳನ್ನು ಪ್ರತಿ ಹೆಬ್ಬಾಗಿಲಲ್ಲೂ ನಿಲ್ಲಿಸಿದ. ಖಜಾನೆಯ ಉಸ್ತುವಾರಿಯ ಮುಖ್ಯಸ್ಥರಿಂದ ಜವಾಬ್ದಾರಿಕೆಯ ಪತ್ರವನ್ನು ಪಡೆಯಲೂ ಆಶಿಸಿದ. ಆದರೆ ದೇಸಾಯಿ ಸತ್ತಮೇಲೆ ಸಕಲ ವಹಿವಾಟುಗಳನ್ನೂ ನೋಡಿಕೊಳ್ಳುತ್ತಿದ್ದ ಚನ್ನಮ್ಮನ ಅನುಮತಿ ಇಲ್ಲದೆ ಹಾಗೆ ಮಾಡಲು ಅವರು ನಿರಾಕರಿಸಿದರು. ಆಮೇಲೆ ಥ್ಯಾಕರೆ ಹೆಂಗಸರನ್ನೆಲ್ಲ ಕರೆದು ಅವರಿಗೆ ವಿಷಯವನ್ನು ವಿವರಿಸಲು ಬಯಸಿದ. ಅವರು ಆ ದಿನ ಅವನನ್ನು ಕಾಣಲು ನಿರಾಕರಿಸಿ ಹೇಗೂ ಮಾರನೆಯ ದಿನ ಕಾಣುತ್ತೇವೆ ಎಂಬ ಮಾತುಕೊಟ್ಟು ಜಾರಿಕೊಂಡರು. ೨೨ನೆಯ ತಾರೀಖಿನಂದೂ ಅವರು ಅವನನ್ನು ಕಾಣಲು ನಿರಾಕರಿಸಿದರು. ಅವರ ಮನೆಗಳಿಗೆ ಭೇಟಿ ನೀಡಲು ಯಾವ ಸರದಾರನೂ ಜೊತೆಯಲ್ಲಿರಲು ಒಪ್ಪಲಿಲ್ಲ. ತಮ್ಮ ತಮ್ಮ ಹಳ್ಳಿಗಳಲ್ಲಿ ಸೇವಕರು ಮತ್ತಿತರರು ಸೇರುತ್ತಿದ್ದಾರೆ ಎಂಬ ವರ್ತಮಾನವನ್ನು ಕೇಳಿದಮೇಲೆ ಮುನ್ನೆಚ್ಚರಿಕೆ ವಹಿಸಬೇಕೆಂದು ಥ್ಯಾಕರೆಗೆ ಅನ್ನಿಸಿತು ಆದ್ದರಿಂದ ಹೆಬ್ಬಾಗಿಲುಗಳಲ್ಲಿ ನಿಲ್ಲಿಸಲು ಎರಡು ಫಿರಂಗಿಗಳು ಬೇಕೆಂದು ಬಂದೂಕುಪಡೆಯ ನಾಯಕನಾಗಿದ್ದ ಕ್ಯಾಪ್ಟನ್ ಬ್ಲ್ಯಾಕ್‌ನನ್ನು ಕೇಳಿಕೊಂಡ. ಬೆಳಗಿನಲ್ಲಿ ತೋಪುಗಳ ಅಧಿಕಾರಿ ಕಾವಲು ಪಡೆಯನ್ನು ಬದಲಾಯಿಸಬೇಕೆಂದು ಕೋಟೆಯ ಕಡೆಗೆ ಹೋದಾಗ ಅಲ್ಲಿ ಹೊರಬಾಗಿಲು ಮುಚ್ಚಿದ್ದುದನ್ನೂ ಒಳಗಿನ ಕೋಟೆ ಸಶಸ್ತ್ರ ಸೈನಿಕರಿಂದ ತುಂಬಿರುವುದನ್ನೂ ಕಂಡ; ಒಳಕ್ಕೆ ಹೋಗಲು ಅವಕಾಶ ಸಿಕ್ಕಲಿಲ್ಲ. ಹಲವುಸಲ ಥ್ಯಾಕರೆ

ನಿರೂಪಗಳನ್ನು ಕಳಿಸಿದರೂ ಅವರು ಲಕ್ಷಿಸಲಿಲ್ಲ. ಅವನು ಇನ್ನೆರಡು ಫಿರಂಗಿಗಳನ್ನು ತರಿಸಿಕೊಂಡು, ಇಪ್ಪತ್ತು ನಿಮಿಷಗಳಲ್ಲಿ ಬಾಗಿಲು ತೆಗೆಯದಿದ್ದರೆ ಒಡೆದು ಒಳನುಗ್ಗಬೇಕೆಂಬ ತೀರ್ಮಾನಕ್ಕೆ ಬಂದ. ಇಪ್ಪತ್ತು ನಿಮಿಷಗಳ ವಿಶೇಷ ಗಡುವು ಮುಗಿಯುತ್ತಿದ್ದಂತೆ ಕ್ಯಾಪ್ಟನ್ ಬ್ಲ್ಯಾಕ್, ಕ್ಯಾಪ್ಟನ್ ಸೀವೆಲ್, ಫಿರಂಗಿಪಡೆಯ ಲೆಫ್ಟಿನೆಂಟ್ ಡೈಟನ್ ಮುಂತಾದವರು ಬಾಗಿಲನ್ನು ಒಡೆಯಲು ಅಣಿಯಾಗುತ್ತಿದ್ದಾಗ, ಕೋಟೆಯೊಳಗಿಂದ ಅಕಸ್ಮಾತ್ತಾಗಿ ಹೊರಬಿದ್ದ ಸೈನಿಕರು ಬ್ರಿಟಿಷ್ ಅಧಿಕಾರಿಗಳನ್ನು ಕೊಲ್ಲುವುದೂ ಬಂದೂಕುಗಳನ್ನು ವಶಪಡಿಸಿಕೊಳ್ಳುವುದೂ ಮುಂತಾದ ಕೃತ್ಯಗಳಲ್ಲಿ ತೊಡಗಿದರು. ಈ ಗಂಡಾಂತರಸಮಯದಲ್ಲಿ ಕುದುರೆಯನ್ನೇರಿ ಬಂದು ದಂಗೆಕೋರರನ್ನು ಅಡಗಿಸಲು ಯತ್ನಿಸಿದ ಥ್ಯಾಕರೆ ಗುಂಡೇಟಿನಿಂದ ಕೆಳಗೆ ಬಿದ್ದ. ಅವನನ್ನು ತುಂಡುತುಂಡಾಗಿ ಕತ್ತರಿಸಿದರು. ಬ್ರಿಟಿಷ್ ತುಕಡಿಯ ಅವಶೇಷವೂ ಆಮೇಲೆ ಎದುರಿಸಲ್ಪಟ್ಟು, ತುಂಡುತುಂಡಾಯಿತು. ರಾಜಕೀಯ ಧುರೀಣರ ಸಹಾಯಕರಾದ ಮೆಸರ್ಸ್ ಸ್ಟೀವನ್‌ಸನ್ ಮತ್ತು ಎಲ್ಲಿಯಟ್ಟ್ ಎಂಬುವರು ಒಂದು ಮನೆಯಲ್ಲಿ ತಲೆಮರೆಸಿಕೊಂಡು, ಸ್ಥಳೀಯ ಅಧಿಕಾರಿಗಳಿಂದ ಮತ್ತು ಸಿಪಾಯಿಗಳಿಂದ ಬಂಧಿತರಾದರು. ಈ ಆಗುಹೋಗುಗಳಿಗೆಲ್ಲ ಪ್ರಚೋದಕರಾದ ತುಂಟರನಾಯಕ ಗುರುಸಿದ್ದಪ್ಪ ಮತ್ತು ಶ್ರೀಮಂತ ವಿಧವೆ ದೇಸಾಯಿಣಿ, ತಮ್ಮ ಮಸಲತ್ತುಗಳ ಪರಿಣಾಮ ಏನಾಗಬಹುದೆಂದು ಕಂಡುಕೊಂಡಾಗ ಭಯಪಟ್ಟದ್ದು ಅಷ್ಟಿಷ್ಟಲ್ಲ. ಆಮೇಲೆ ಅವರು ಕೈಗೆ ಸಿಕ್ಕಿದ ಯುರೋಪಿಯನ್ ಗೃಹಸ್ಥರನ್ನು ಉದ್ದೇಶಪೂರ್ವಕವಾಗಿ ಅತಿಥಿಗಳಂತೆ ಕಾಪಾಡಿದರು.

"ಬೆಳಗಾಂನಲ್ಲಿ ನೆಲೆಸಿದ್ದ ಒಂದು ತುಕಡಿ ಸೈನ್ಯ ಕಿತ್ತೂರ ಕೋಟೆಯಂಥ ಸಮರ್ಥ ಕೋಟೆಯ ಎದುರು ಅಸಹಾಯಕವಾಗಿದ್ದುದರಿಂದ ಎಲ್ಲ ನೆಲೆಗಳಿಂದಲೂ ೫೦೦೦ ಭೀತಿದಾಯಕ ಜನರನ್ನು ಈ ಕಡೆಗೆ ಕೇಂದ್ರೀಕರಿಸಲಾಯಿತು. ಗುರುಸಿದ್ದಪ್ಪನೊಬ್ಬನನ್ನುಳಿದು ಶರಣಾಗತರಾಗುವ ಎಲ್ಲರನ್ನೂ ಕ್ಷಮಿಸುವುದಲ್ಲದೆ ಇನಾಮುಗಳನ್ನೂ ಕೊಡುತ್ತೇವೆ ಎಂಬ ಒಂದು ಪ್ರಕಟಣೆಯನ್ನು ಹೊರಡಿಸಿದರು. ಕೂಡಲೇ ಶರಣಾಗತನಾದರೆ ಗುರುಸಿದ್ದಪ್ಪನಿಗೂ ದಂಡನೆಯಲ್ಲಿ ರಿಯಾಯಿತಿ ಉಂಟೆಂದೂ ಸಾರಿದರು. ಬಂದಿಗಳೊಡನೆ ಜವಾಬ್ದಾರಿಯುತರಾಗಿ ನಡೆದುಕೊಳ್ಳಬೇಕೆಂದೂ ಹಾಗೇನಾದರೂ ಅವರಿಗೆ ತೊಂದರೆ ಮಾಡಿದರೆ ತಪ್ಪಿತಸ್ಥರನ್ನು ಕ್ರೂರವಾಗಿ ದಂಡಿಸಲಾಗುವುದೆಂದೂ ಕಿತ್ತೂರಿನ ಸರದಾರರಿಗೂ ಸಿಪಾಯಿಗಳಿಗೂ ಎಚ್ಚರಿಕೆ ನೀಡಲಾಯಿತು.

"ಇದೇ ವೇಳೆಯಲ್ಲಿ ದಂಗೆಕೋರರ ಪ್ರಾಬಲ್ಯ ಹೆಚ್ಚಾಯಿತು. ಸರ್ಕಾರಕ್ಕೆ ಅವರು ಅನೇಕ ಪತ್ರಗಳನ್ನು ಬರೆದುದಲ್ಲದೆ ಸಂಸ್ಥಾನ ಮುಂದುವರಿಯಲು ಹಕ್ಕಿನ ಬೇಡಿಕೆಯನ್ನೊಡ್ಡಿದರು. 'ಕೋಲಾಪುರ'ದ ರಾಜನನ್ನೂ ತಮ್ಮ ಕಡೆಗೆ ಸೇರಿಸಿಕೊಳ್ಳಲು ಅವರು ಪ್ರಯತ್ನಿಸಿದರು. ಆದರೆ ಅವನು ತನ್ನ ಗೂಢಚಾರರನ್ನು ಬ್ರಿಟಿಷ್ ಅಧಿಕಾರಿಗಳಿಗೆ ಬಿಟ್ಟುಕೊಟ್ಟಿದ್ದ. ನವೆಂಬರ್ ೩೦ರಂದು ಕೋಟೆಗೆ ಮುತ್ತಿಗೆ ಹಾಕಿ ಕಾರ್ಯ ಸಾಧಿಸಲು ಹೊರಟ ಡೆಕ್ಕನ್ನಿನ ಕಮೀಷನರ್ ಚಾಪ್ಲಿನ್ನನು ದಂಗೆಕೋರರು ಶರಣಾಗತರಾಗಲು

ಕರೆಯಿತ್ತು. ಆದರೆ ಅವರು ಈ ಪ್ರಕಟಣೆಯನ್ನು ಲಕ್ಷ್ಯದಲ್ಲಿಟ್ಟುಕೊಂಡೇ ಬಂದಿಗಳನ್ನು ಬಿಡುವುದಕ್ಕೆ ಮುಂಚೆ ತಾವು ಹೆಚ್ಚು ಇಷ್ಟಪಟ್ಟ ಹಕ್ಕಿನ ಬೇಡಿಕೆಗಳನ್ನು ಮುಂದಿಟ್ಟರು. ಡಿಸೆಂಬರ್ ೨ನೆಯ ತಾರೀಖಿನ ಬೆಳಿಗ್ಗೆ ಬಂದಿಗಳನ್ನೆಲ್ಲ ಬಿಡುಗಡೆಮಾಡಲಾಯಿತು. ಕೋಟೆ ಇನ್ನೂ ಶರಣಾಗದೆ ಇದ್ದುದಕ್ಕೆ ೨ನೆಯ ತಾರೀಖು ಎದುರಿಸಲ್ಪಟ್ಟಿತು. ಮೊದಲನೆಯ ಬೊಂಬಾಯಿ ಯುರೋಪಿಯನ್ ಸೈನ್ಯ, ಮಹಾರಾಣಿಯ ೪೬ನೆಯ ಪಾದದ ಎರಡು ಕೂಟಗಳು, ಕುದುರೆಯ ಫಿರಂಗಿಗಳ ಸಾಲು, ಮದರಾಸ್‌ನ ೪ನೆಯ ಮತ್ತು ೮ನೆಯ ಎಲ್.ಸಿ., ೨೩ನೆಯ ಮದ್ರಾಸ್ ಎನ್.ಐ., ಬೊಂಬಾಯಿ ಎನ್.ಐ.ನ ೩ ಮತ್ತು ೬ನೆಯ ಸೈನ್ಯ—ಲೆಫ್ಟಿನೆಂಟ್ ಕೊಲೊನೆಲ್ ಡೀಕನ್‌ನ ನಾಯಕತ್ವದಲ್ಲಿದ್ದ ಈ ಎಲ್ಲ ಸೈನ್ಯಗಳೂ ಈ ಸಂದರ್ಭದಲ್ಲಿ ಕಾರ್ಯಪ್ರವೃತ್ತವಾಗಿದ್ದುವು. ಮೂರು ಜನ ಕೊಲ್ಲಲ್ಪಟ್ಟು ಇಪ್ಪತ್ತೈದು ಜನ ಗಾಯಗೊಂಡರು. ಥ್ಯಾಕರೆ ಸತ್ತಮೇಲೆ ದೃಶ್ಯದಲ್ಲಿ ಕಾಣಿಸಿಕೊಂಡ ಶೋಲಾಪುರದ ಉಪಕಲೆಕ್ಟರನಾಗಿದ್ದ ಮನ್ರೊ ಎಂಬುವನು ಕೊಲ್ಲಲ್ಪಟ್ಟವರಲ್ಲಿ ಒಬ್ಬ.

"ಬ್ರಿಟಿಷ್ ಸರ್ಕಾರಕ್ಕೆ ಹೀಗೆ ಜಾರಿಕೊಂಡ ರಾಜ್ಯವು ಕಿತ್ತೂರು, ಸಂಪಗಾಂ ಮತ್ತು 'ಬೀಡಿ' ಎಂಬ ಮೂರು ತಾಲ್ಲೂಕುಗಳಾಗಿ ವಿಭಜಿಸಲ್ಪಟ್ಟಿತು. ಇವುಗಳಲ್ಲಿ ಒಟ್ಟು ೨೮೬ ಹಳ್ಳಿಗಳೂ ೭೨ ಕುಗ್ರಾಮ ಅಥವಾ ಕೊಂಪೆಗಳೂ ಇದ್ದುವು. ಬ್ರಿಟಿಷ್ ಸರ್ಕಾರಕ್ಕೆ ಜಾರಿಕೊಂಡ ಕೂಡಲೇ ಈ ರಾಜ್ಯದ ವಾರ್ಷಿಕ ಆದಾಯ ೩,೩೩,೬೪೭ ರೂಪಾಯಿಗಳಷ್ಟಿತ್ತು. ಮೂರು ವರ್ಷಗಳಲ್ಲಿ ಅದು ೨೨,೦೦೦ ರೂಪಾಯಿಗಳಷ್ಟು ಹೆಚ್ಚಿತು. ಸರ್ಕಾರಿ ಸೇವಕರ ಪಾಲಿನ ೨೦,೯೨೫ ರೂಪಾಯಿ ಬೆಲೆಯ ಭೂಮಿ ಮತ್ತು ಗತಿಸಿದ ದೇಸಾಯಿಯ ಸೇವಕರ ಪಾಲಿನ ೨೦.೦೪೦ ರೂಪಾಯಿ ಬೆಲೆಯ ಭೂಮಿಗಳನ್ನು ಬಿಟ್ಟು ಒಟ್ಟು ಆದಾಯ ಅಷ್ಟಾಗಿತ್ತು. ಘೋಷಣೆಯ ಪ್ರಕಾರ ಭೂಮಿಗಳೆಲ್ಲವನ್ನೂ ಮತ್ತೆ ವಶಪಡಿಸಿಕೊಳ್ಳಲಾಯಿತು. ಆದರೆ ಆ ಕಾಲದಲ್ಲಿ ಈ ರೀತಿ ನಮ್ಮ ಹಕ್ಕಿನ ಕಾಗದಪತ್ರಗಳ ಬಗ್ಗೆ ವರ್ತಿಸುವುದು ಅವಿವೇಕ ಎಂದು ತೀರ್ಮಾನಿಸಲಾಯಿತು. ಕುಟುಂಬದ ಮಹಿಳೆಯರಿಗೆ ಸರ್ವಸ್ವಾತಂತ್ರ್ಯವನ್ನೂ ದೊರಕಿಸಿಕೊಡಲಾಯಿತು."

ಮೇಲೆ ವಿವರಿಸಿದ ಚಾರಿತ್ರಿಕ ಅಂಶಗಳನ್ನು ಸ್ವಲ್ಪಮಟ್ಟಿಗೆ ಒಳಗೊಂಡಿದ್ದರೂ ಈ ಹಾಡು ತನ್ನಷ್ಟಕ್ಕೆ ತಾನು ಲಾವಣಿಯಾಗಿ ಪರಿಣಮಿಸಿದೆ. ಬಾಪು ಸಾಹೇಬ್ ಶಿವಲಿಂಗ ರುದ್ರಸರ್ಜನ ಹೆಂಡತಿಯಾದ ವಿಧವೆ ಈರವ್ವನ ಶೋಕ ಮತ್ತು ಸಾವುಗಳನ್ನು ವಿವರಿಸುವ ಈ ಹಾಡಿನಲ್ಲಿ ಕಂಡುಬರುವ ಆ ಕಾಲದ ಸ್ಥಳೀಯ ಜೀವನ ಕುತೂಹಲಕಾರಿಯಾಗಿದೆ. ಜಿಲ್ಲೆಯ ಎಲ್ಲ ಜನಗಳ ಅನುಕಂಪವನ್ನೂ ಗಳಿಸಲು ಕೊನೆಯ ದೇಸಾಯಿ ಹುಡುಗನೊಬ್ಬನನ್ನು ದತ್ತಸ್ವೀಕಾರ ಮಾಡಿಕೊಳ್ಳಲು ನಿರ್ಧರಿಸಿದಾಗ ದೇಸಾಯಿಣಿ ಸ್ಪಷ್ಟವಾಗಿ ಉಪೇಕ್ಷೆ ಮಾಡಿದ್ದನ್ನು ಕಂಡು, ದಂಗೆಯನ್ನು ಪ್ರಾರಂಭಿಸಿದಾಗಲೇ ಸಂಗೊಳ್ಳಿ ರಾಯಣ್ಣ ಅಧೀರನಾಗಿದ್ದ. ಸಂಪಗಾಂ ತಾಲ್ಲೂಕಿನ ಬೈಲಹೊಂಗಲ

ಎಂದು ಪ್ರಸಿದ್ಧವಾಗಿರುವ ಹೊಂಗಲದಲ್ಲಿ ಆಗ ಈರವ್ವ ವಾಸಿಸುತ್ತಿದ್ದಳು. ಅವಳನ್ನು ಧಾರವಾಡಕ್ಕೆ ಸಾಗಿಸುವುದು ಉಚಿತವೆಂದು ತೋರಿತು. ಇದು ಇನ್ನೊಂದು ದಂಗೆಯನ್ನು ಉದ್ರೇಕಿಸಿತು; ವಸ್ತುತಃ, ಆನಿಗೊಳದ ಬಳಿ ಸಾವಿರ ಜನರು ಸೇರಿ ಅವಳ ಸ್ಥಳಾಂತರವನ್ನು ಪ್ರತಿಭಟಿಸಿದರು. ಉಳಿದವರು ರಾಯಣ್ಣನನ್ನು ಸೇರಿಕೊಂಡಾಗ ಅವರಲ್ಲಿ ಬಹಳಷ್ಟು ಜನ ಕ್ಷಮೆಯನ್ನು ಸ್ವೀಕರಿಸಿ ಸುಮ್ಮನಾದರು. ಆಮೇಲೆ ಈರವ್ವನನ್ನು ಧಾರವಾಡಕ್ಕೆ ಒಯ್ದರು: ಅಥವಾ ಲಾವಣಿ ಸರಿಯಾಗಿದ್ದರೆ ನಿಜಕ್ಕೂ ಧಾರವಾಡದಿಂದ ನೈರುತ್ಯದಿಕ್ಕಿಗೆ ಸುಮಾರು ಹನ್ನೆರಡು ಮೈಲಿ ದೂರದಲ್ಲಿರುವ ಕುಸುಗಲ್ ಎಂಬ ಒಂದು ದೊಡ್ಡ ಭದ್ರಪಡಿಸಿದ ಹಳ್ಳಿಗೆ ಒಯ್ದರು. ಅಲ್ಲಿ ಅವಳನ್ನು ಸುರಕ್ಷಿತವಾಗಿ ಇಡಲಾಯಿತು. "ಸ್ವಪ್ರೇರಣೆಯಿಂದಲೋ ಪರಪ್ರೇರಣೆಯಿಂದಲೋ ವಿಷಪ್ರಾಶನದ ಕಾರಣದಿಂದ" ಅಲ್ಲಿಂದಾಚೆಗೆ ಅನತಿ ಕಾಲದಲ್ಲೇ ಅವಳು ಧಾರವಾಡದಲ್ಲಿ ೧೮೩೦ರ ಜುಲೈನಲ್ಲಿ ಸಾವನ್ನಪ್ಪಿದಳು.

ಪಲ್ಲ

ಕಿತ್ತೂರ ಚನ್ನವ್ವನ ಸೊಸಿ ಹೊಂಗಲ ಬಿಟ್ಟು ಹೋಗುವಾಗ
ಮಾಡುತಿದ್ದಳಣ್ಣ ಮಹದುಃಖ
ಮತ್ತ ನಮ್ಮ ಮಲ್ಲಸರ್ಜ ಸತ್ತು ಹೋಗದಿದ್ದರ
ಹೊತ್ತು ಹೋಗುದ್ಯಾಕ ನಮ್ಮ ಬದಕಾ

೧ನೆ ನುಡಿ

ಆರು ಆನಿ ಹದಿನಾರು ಮುಟಿ ಹನ್ನೆರಡ ಸಾವಿರ
ಕಾಲಬಲಾ ಮಾರಾಯತೋಪ ಹೋದವು ಹೇರಿ
ಹತ್ತುಹಂತಾ ಮಂತ್ರಿನ ಪಾಲಿಕಿ ಸುತ್ತಲ್‌ಹಿಡುವ
ಹತ್ತು ಎಂಟು ಬೆಳ್ಳಿಕಾವಿನ ಅಪ್ತಾಗೇರಿ
ಚಂದದಿಂದ ಚಕ್ಕಡಿಗಳು ಮೊಂದು ವುಳಿಯಂದ್ಹೋದವು
ತುರಂಗರಥದ ಚವರಿ

ಶಿಟ್ಟಿನ ಶಿಪಾಯಿಂಗಳು ದಿಟ್ಟತನದಲ್ಲಿ
ಹತ್ತುಹಂತಾ ಯುಷ್ಟು ಇದ್ದವಲ್ಲಿ ಜರದ ಮುರಿ
ಕಲ್ಲೂರ ಕಲಬಸಪ್ಪ ಕನ್ನೂರ ಮಲ್ಲಪ್ಪ
ಅವರಾದಿ ವೀರಪ್ಪ ಇದ್ದರ ಕಾರ್ಬಾರಿ
ಹಿಂತಿಂತಾ ಸರದಾರು ಕುಂತರ ಬಿದ್ದ ಹೋದಾರು
ಹೆಂತಾ ಬಂದಿತೊ ನಮಗ ಮಾರಿ ॥ಚ್ಯೇ॥

ಪಾಂಡವರಿಗೊನದೇಸ ಬಂದಂತೆ ಆದಿತು
ಪಾಪಿ ದುಸ್ಸ್ವಾಸ ದ್ರೌಪತಿ ಸೀರಿ ಶೆಳೆದೋಯ್ವಾಗ
ಭೂಪತಿಗಳೈವರು ಇದ್ದೇನು ಮಾಡುವರು
ಪಾಪಿ ಕೇಳ ನಮ್ಮಂತಾ ಪಾತಕರ್‍ಯಾರಿಲ್ಲ
ಪನ್ನಂಗಧರನ ಸ್ತುತಿಸಂತ ಈರವ್ವಾ
ಪಾರ್ವತಿ ಅರಸನ ನೆನಿಸಿದಳೊ ||ಯೇರ||

ಪೂರ್ವಜನ್ಮದ ಲಿಖಿತ ಪುಣ್ಣೆ ನಮ್ಮದು ತಪ್ಪಿತೆಂದು
ಬರದಾನ್ಯಾಕ ಬ್ರಹ್ಮ ಹಿಂತಾ ಬರಿ

೨ನೆ ನುಡಿ

ಹೆಣ್ಣುಮಕ್ಕಳಿಡುವ ವಸ್ತಾ ಬಣ್ಣಿಸಿ ನಾ ಪೇಳ್ವೆನು
ಸಣ್ಣ ನಡುವಿನ ದಾಬ ಬಂಗಾರಾ
ಬಂಗಡಿ ಬಾವಲಿ ಜಮಿಕಿವಾಲಿ ಚಳತುಂಬು
ಚೆಂದಾದಲ್ಲಿಡವ ರ್‍ಯಾಗುಟಿ ಚೆವರಿ ಹೆಳಲ ಬಂಗಾರಾ
ಸಾವಿರದ್ಹೊನ್ನಿನ ಸರದಾಳಿಗಳು ಮೊಹರದ ಮುತ್ತಿನ
ಮೂಗತಿ ಮೇಲೆ ಕೆತ್ತಿಸಿದಂತಾ ವಜ್ಜರಾ
ಕಂಠಕ ದರಿಸುವ ಕರಿಡಿಗಿಸರಪಣಿ ಕಟ್ಟಣಿ
ಕರಿಮಣಿ ಪಟ್ಟಿಗಿ ಮುತ್ತು ಡೊರೆ
ಚಿಂತಾಕ್ಹರಡೆ ಹವಳಸರಾ
ಹಿರಿಪಿಲ್ಲಿಗಳು ಕಿರಿಪಿಲ್ಲಿಗಳು ಉಲ್ಲುವಿಂಟಿಕಿ
ರುಳ್ಳಿಯಂಗೆಜ್ಜಿ ಕಾಲ್ಕಡಗಾ ಸರಪಳಿ ಕಾಲುಂಗರಾ
ಮಂದರಧರನ ಕರುಣ ತಪ್ಪಿ ಮಂದ ವುಳಿಯುದ
ಹೋದವು ಮುಂದ ಇಲ್ಲೊ ನಮುಗ ಆಸರಾ ||ಚ್ಯೇ||

ವಕ್ಕಲಗಿತ್ತೆರು
ಸಕಲಕ ಶಹಣೆರು
ಸತ್ಯಕ ಶರಣರಾ
ಸಾಕ್ಷಿಯು ಹೇಳುವರೇನು
ಆಕ್ಕ ನಿಲ್ಲಿಸಾ ದುಃಖ್ಖ ಯೆನಂತ
ರಾಮು ಲಕ್ಷ್ಮಣ ಪ್ರೇಮುದಿಂದಿರುವಾಗ
ಕೆಟ್ಟ ರಾವಣ ಜಾನಕಿ ವೊದು ವನದೊಳಗಿಟ್ಟಾ
ಹನುಮಂತ ಹೋಗಿ ಲಂಕಾ ಸುಟ್ಟಾ

ವಿಭೀಷಣಾಗ ಕಟ್ಯಾರಂ ಪಟ್ಟಾ
ಗಟ್ಟಿ ಶಿಕೆವು ಹಾಕಿ ಹಿಂಡ ದೈತ್ಯರನೆಲ್ಲ
ಬಂಡಂ ಮಾಡಿದ ಭೂಪ
ತಾಯಿಂ ತಂದನೊ ಕುಲದೀಪಾ ||ಯೇರ||

ಹೋದಂತಾ ಮಗ ನಿಮಗ ಆದಾನು ಪೇಳವ್ವಾ ತಾಯಿ
ಭೇದಿಸಿ ಹೇಳಂರಂ ಯೆಲ್ಲರಂ

೩ನೆ ನುಡಿ

ಹೊದುಂವಹಂತಾ ಹೊದಿಕಿಗೋಳಂ ಭೇದಿಸಿ ನಾ ಪೇಳ್ವೆನಂ
ಹೋದವು ಯೆಷ್ಟೊ ರಾಜದ ಮೇಲೆ ಹೇರಿ
ಮಂಕ್ಕಳ ವುಡುವ ಮಂದಿಲಸೀರಿ
ತೊತ್ತುಗಳುಡುವ ತೋಪಿನಸೀರಿ
ಉತ್ತಮರುಡುಂವ ವುಳ್ಳಿಗಣಿಸೀರಿ
ರಾಣಿಯಂವರುಡುಂವ ರಾಗಾವಳಿಸೀರಿ
ಬಾಲೆಯಂರುಡುಂವ ಬಾಳಿಪಟ್ಟೆಸೀರಿ
ಚೆದರೆರುಡುಂವ ಚಂದ್ರಕಾಳಿಸೀರಿ
ಹಂಡಿಗಿಯಂರುಡುಂವ ಹೂವಿನಸೀರಿ
ಸಣ್ಣವರುಡುಂವ ಸಾಸಿಬಣ್ಣದಸೀರಿ
ಕನ್ಯೆರುಡುವ ಕಂಬಾವತಿಸೀರಿ
ಕೂಸಿಗೆ ಹೊಚ್ಚುವ ಕಂಲಾಯಿ ಕೊಂಚಿಗಿ
ಯೇಸೊಂದಂ ನಾ ಪೇಳಲಿ
ಅರಳೆಲಿ ಬಿಂದಲಿ ತೊಪ್ಪಿಗೆ ನಾಗಮುರಿ
ಶೆಲ್ಯವ ಮಂಂಡಸ ಶೇಲು ಶಕಲಾತಿ
ಪಚ್ಚೆದ ಅಂಗಿ ಪರಿಮಂಳಪಾವಡ
ಹೊದುಂವಂತಾ ದೋತರ ನಾಕ್ಪುರಿ
ಯೆಲ್ಲ ಹೋಗಿ ಇಲ್ಲದಾಯ್ತು ಮಂಲ್ಲಸರ್ಜ ಮಾಡಿದ ಬದಕು
ಬಲ್ಲಷ್ಟು ಹೇಳುವೆನದರ ಸೂರಿ ||ಚ್ಯೇ||

ಅಷ್ಟು ಹೋಗಿ ನಮ್ಮ ಕಷ್ಟ ಬಿಡಲಿಲ್ಲಯ್ಯ ಪಟ್ಟನೆ
ನೆಲಕ್ಹಣಿಯಂ ಬಡವುತ ಈರವ್ವ ಕಟ್ಟಿ ಹಾಯಂಂವೆನಲಗೆನುತ
ತೊತ್ತುಗಳೆಲ್ಲರಂ ಸುತ್ತಲೆ ಮಂತ್ರಿದರಂ

ತಾಯಿ ನಿಮಂಗ ಬಂದದ್ದೆನಂ
ಉಮ್ಮಾಯಂದಿಂದಲೆ ಹೇಳಿರೀರವ್ವಗ
ಸುಮ್ಮನಿರದ ಅಳುಂತಿಹಳಂ ॥ಯೇರ॥

ಹನ್ನೆರಡಸಾವಿರ ದಂಡು ಹರದ ಹೋತಿ ನಮ್ಮನ ಬಿಟ್ಟು
ವಡದಾಂಗ ಆದಿತು ತುಂಬಿದ ಕೆರಿ

೪ನೆ ನುಡಿ

ಹಂತಾ ದೊರಿಗಳು ಹೆಂತಾದಾಯಿತ ಕಂತುಹರನೆ ಕೇಳವರಿಗೆ
ಹೆಂತಾ ಹೊತ್ತ ತಂದ ಈಶ್ವರಾ
ನಾಡನಾಳಂವ ದೊರಿಗಳಿಗ್ಹಿಂತ ಕೇಡ ಬರಬಾರದಂದಂ
ಕಿತ್ತೂರ ನಾಡೆಲ್ಲ ಮರಿಗಿತೊ ಮರ್‌ಮರಾ
ಮಾನ್ಯೇಮಾನ್ಯರ ಆಳುಹಂತಾ ಹನ್ನೆರಡ ಕರೂತಿ ಹಳ್ಳಿ ಹೊನ್ನು
ಯೆತ್ತುಗಳಂ ಹೇರಿ ಹೋದವು ಇನ್ನೂರ
ಸತ್ಮಕ ಶ್ರಾವಣಮಾಸಕ ಯೆಪ್ಪತ್ತೇಳನೂರ ಮಂದಿ
ತೃಪ್ತಿಬಡುಹಂತಾ ಜಂಗಮರ
ಹಸ್ದೇನಂದರ ಕಿವಿಯಂಲಿ ಕೇಳದ
ಹಣ್ಣು ಹಾಲಂ ಸಕ್ಕರಿ ನೀಡಿ
ದಾನಾ ಕೊಡುಂವರಣ್ಣಾ ವಸ್ತರಾ
ಧರ್ಮಾ ಹೋಗಿ ಕರ್ಮಾ ಹೆಚ್ಚಿ ಪರ್ಮಾ ಪೆತ್ತಿ
ಪೇಳುವೆನು ಮರ್ಮಾ ಸಾಗವದು ಮಡದರು ಮೂವರು ॥ಚ್ಯೇ॥

ರಾಜ್ಜ್ಯಕ ರಾಯಂನಾಯಂಕ ಗೋಜ ಹಚ್ಚದಿದ್ದರ
ಮೋಜಾಗಿ ದವಲತ್ತು ಸಾಗತಿತ್ತನ್ನುತಲಿ
ಮೂಜನರೆಲ್ಲ ಮರಗುಂವರಂ
ಪಟ್ಟಗಟ್ಟಿ ದೇಸಾಯಿಗೆ ಗಟ್ಟಿ ಶಿಕೆವ ಹಾಕಿ
ಅತ್ತಿ ಚನ್ನವ್ವಾನೊಯ್ದು ಹೊಂಗಲದಾಗ ಹಾಕಿದರೂ
ಸಾಕಿದ ಮಂಗನೆಂಬಂವರಂ
ಟಾಕುರ್‌ಸಾಬ್ ಬಂದು ಟಾರ್‌ಆಗಿ ಮಡದನು
ದೀರರಿದರೊಳು ಹುಟ್ಟಿ ಊರು ತೊಗೊಳರೆಂದಂ
ಭೋರಿಡಂತ ಜನರಳುಂತಿಹರಂ ॥ಯೇರ॥

ಆಕಾಶದ ಮೇಗಿನ ಚಂದ್ರ ಲೇಸಾಗಿ ಬೆಳಕಿಲ್ಲದಿದ್ರ
ಯೇಸೋದಿದ್ದರೇನ ನಕ್ಷತ್ರ

೫ನೆ ನುಡಿ

ವ್ಯಾಳೇ ವ್ಯಾಳಿಕ ವುತ್ತರ ಹೇಳಿ ಹೇಳಿ ಬರದಾರು
ನಾಳಿ ಹೊಂಡಂಬುವ ಪತ್ತರಾ
ವಸ್ತ್ರಾ ವಡವಿ ಯಲ್ಲಾ ಉಚ್ಚಿ
ಪೊಡವಿಗೆ ವಗದಾಳೊ ಬಡವಿ
ಉದರಸ್ತ್ರಾಳೊ ಕಣ್ಣೀರಾ
ಸಂಗಡೆಲ್ಲ ಹೇರಿ ಬಂಡಿ
ಯೆತ್ತು ಸಾಗಲಿ ಮುಂದಕ ಯೆಂದು
ಬಿಚ್ಚಿ ಹೊಡೆದಾರೆಲ್ಲ ದನಕರಾ
ಗುರುವಿನ ಕರಿಶಿ ಪಾಲಿಕಿ ತರಶಿ
ಮೇಲೆ ಅಪ್ತಾಗೇರಿ ಹಿಡಸಿ
ಹಾರಸ್ತ್ರಹೊಂಟರ ಚತ್ರರ ಚಾಮರಾ
ಸಣ್ಣ ಮಂಗಳಯ್ಯಾ
ನಾನು ಸಾರಿ ನಿಮಗೆ ಪೇಳುವೆನು
ತಪ್ಪ ಕೇಳೊ ಅಪ್ಪ ಸರದಾರಾ ॥ಚ್ಯೇ॥

ಹೊಂಡ ಹೊಂಡಂದರ ಮುಂಡಾಟ ಹಿಡದಾಳೊ
ಬಂಡ ಮಾಡಿ ಅವರು ಯೆಳಿಯಂಕ ಹೋದರ
ಕಂಡವರ ಕಾಲ ಹಿಡದಾಳೊ
ಮುಂಡಲನಾಲುವ ಪುಂಡರು ಮಡದಲ್ಲೆ
ಕೆಂಡ ಹಾದು ನಾನು ಪ್ರಾಣ ಕೊಡಲಿಲ್ಲೆಂದು
ಗಂಡನ ನೆನಿಸಿ ಅಳುತಾಳೊ
ದಿಕ್ಕಿನೊಳು ನಮ್ಮಂತ ದೆಶಿಗೆಡಿ ಯಾರಿಲ್ಲ
ನಮ್ಮ ಹೊಟ್ಟಲಿ ಮಂದು ಪುತ್ರನ ಇದ್ದರ
ದೇಸ್ಗತಿ ಯಾಕ ಮುಣಗುವದು ॥ಯೇರ॥

ನೀರ ಇಲ್ಲದ ಮಲ್ಲಿಗಿ ಬೇರ ವೊಣಗಿ ಹೋದಂತೆ
ಅತಂತ್ರವಾಯಿತು ಸಂಸಾರ

೬ನೆ ನುಡಿ

ಯೆಷ್ಟು ಮಾಡಿದರ ನಮ್ಮನ ಬಿಟ್ಟ ಹೋಗುದಿಲ್ಲವೆಂದು
ನಿಷ್ಟದಿಂದ ಮಾಡೆಳ ವೀರನ ಸ್ತುತಿ
ಅತ್ತಿಮಾವನ ನೆನದು ಹತ್ತಿದಳು ಡೋಲಿಯಂ
ಹೊತ್ತರಣ್ಣ ಬೋವೆರು ಯೆತ್ತಿ
ಮುಂದ ಮುಂನ್ನೂರ ಕಂದುರಿಮಂದಿ
ಹಿಂದ ಇನ್ನೂರ ಬಾರಿನಮಂದಿ
ಮಾಡುತ್ಹೊಂಟರಣ್ಣ ಪಾರಾಗಸ್ತಿ
ರಾಯಂನಾಯಕ ಬರತಾನೆಂದು
ರೌಡ ಮಾಡಿ ನಡಿರೆಂದು
ಯಡಬಲ ಹತ್ತೆಂಟು ಹಿರದ ಕತ್ತಿ
ದಾಸೊಕದಿಂದ ದಾರಿ ಹಿಡಿದು
ಧಾರ್ವಾಡಕ ತಾಂವು ಹೋಗಿ
ಸರದಾರ ಕೇಳಿದ ಅವರ ಸ್ತಿತಿ
ಕೊಟ್ಟ ಅನ್ನ ಬಿಟ್ಟಕೇರ
ಕೆಟ್ಟ ಬುಧ್ಧಿಯುನ್ನು ಇಷ್ಟು
ಮಾಡತಿದ್ದಿ ನಮ್ಮ ವೇಗ ಜ್ಯಾಸ್ತಿ
ರಾತ್ರಿಲಿ ರಾಯುನಾಯಕನ್ನಚ್ಚಿ ರೌಡ ಮಾಡಿ
ಸಂತ್ತಿನ ಹಳ್ಳಿ ಆವನ ಕೈಲಿಂದ ಸೂಡಿಸ್ತಿ
ಕೊಲಬ್ಯಾಡರಿ ಕುಸಂಗಲ್ಲ ಗೋಡಿಯೊಳಗ
ಈಕಿನ ವೈದು ವೊಬ್ಬುಳಿಡರೆಂದನಲ್ಲ್ವಸ್ತಿ ॥ಚ್ಯೇ॥

ಹೊತ್ತರು ಬೋವೆರು ಕುಸಂಗಲ್ಲಿಗೆ ವೈದರು
ವೆಲ್ಲಕ ಕಿಲಿಯುವ ಪೋಗುವಾಗ
ಈರವ್ವ ಬಲ್ಹಾಂಗ ದುಃಖ ಮಾಡಿದಳು
ತಾಯಿಲ್ಲದ ಮಕ್ಕಳಿಗೆ ಆಯಿಲ್ಲೊ ಸಿರಿಯಿಂಲ್ಲ
ಕಾಯು ಇಡಬಾರದೆಂದು ಬಾಯು ಬಿಡುತೀರವ್ವಾ
ಸಾವ ಬೇಡಿದಳು ಶಿವನಲ್ಲಿ
ಅಕ್ಕ ತಾ ಈರವ್ವಾ ದುಖ್ಖವು ಮಾಡ್ಯಾಳೊ
ಬಕ್ಕನ ಬಾಯುವ ಬಿಡವುತಲೀರವ್ವಾ
ಜಕ್ಕನೆ ಜೇರಿಗಿಳದಾಳೊ ॥ಯೇರ॥

ನೀರವಳಗಿನ ಮೀನ ತಗಿದು ಬ್ಯಾರಿ ಚೆಲ್ಲಿದ್ಹಾಂಗ
ನಮಂದು ಸೂರಿ ಆತಿ ನಮ್ಮ ಅವಸ್ತಿ

೭ನೆ ನುಡಿ

ಇನ್ನು ಈ ದರೆಯಲ್ಲಿ ಮುಂನ್ನ ಇರಬಾರದೆಂದು
ಅನ್ನವುದಕ ಯಲ್ಲ ಬಿಟ್ಟಳೊ
ಸಣ್ಣವಾದವು ಕೈಕಾಲು
ಮಣ್ಣಪಾಲವಾಗಲಿಯೆಂದು
ಬಣ್ಣ ವಣಗಿಸಿ ಬಿಟ್ಟಳೊ
ಸಂಗ್ರಾಣಿಬ್ಯಾನಂತ ಸರ್ವಾಂಗವೆಲ್ಲ
ವಣಗಿಸಿ ಸಂಣ್ಣದ್ಹಾಂಗ ದೇಹ ಸುಟ್ಟಳೊ
ನಾಡವಳಗ ನವಲಗುಂದ ಕಾಡಶಿದ್ದನ್ನಂತೆಲಿ ಹೋಗಿ
ನೀರ ಮಿಂನದು ಮಡಿಯಂನಂಟ್ಟಳೊ
ಜಂಗಮಂತೀರ್ಥವ ಪಡೆದು
ಅಂಗದ ಮೇಲಿನ ಸ್ಮರಣೆ ಮರೆದು
ಲಿಂಗದ ಮೇಲೆ ಧ್ಯಾನ ಇಟ್ಟಳೊ
ಭಕ್ತಿಲಿ ವಿರಕ್ತರ ಕರಶಿ
ತಕ್ಕಡಿ ತಂಂಬ ಭಂಗಾರ ತರಿಸಿ
ತೂಕಾ ಮಾಡಿ ದಾನ ಕೊಟ್ಟಳೊ
ಮುಕ್ತಿ ಕೊಡೊ ನಮಗ ನೀನು
ಮಂಕ್ಕಣ್ಣಹರ ಗುರುವೆಯೆಂದು
ಧಾರ್ವಾಡಕ ಹೊಂಟ ಬಂದಳೊ ||ಚ್ಯೇ||

ಚಿಕ್ಕ ಮಗ ಮಲ್ಲಸರ್ಜ ಶಿಕ್ಕನೆಂಬಂದು ಕೇಳಿ
ಜಕ್ಕನ ಜೇರಿಗೆ ಇಳದಳೊ ಈರವ್ವಾ
ಮುಕ್ಕಣ್ಣಹರನ ನೆನದಾಳೊ
ಕೊಡ ಹೊನ್ನಿದ್ದರೇನು ಬಡಿವ್ಯಾಗಿರುವುದು ಲೇಸು
ಮಡದಿಗಿ ರಾಯರು ಮನಿವಳಗಿದ್ದರ
ವಡವಿವಸ್ತಗಳಿಡ ಲೇಸು
ವಡವಿವಸ್ತಗಳೆಲ್ಲಾ ಬಿಡದೆ ದಾನವ ಕೊಟ್ಟು
ಕಿತ್ತೂರ ದವಲತ್ತು ಕಿರದಾದಿತೆಂಬುತಲಿ
ಭರದಿಂದೀರವ್ವಾ ಅಳುತಾಳೊ ||ಯೇರ||

ಧಾರ್ವಾಡಕ ಬಂದು ತಾನು ಮೂರಾರ ದಿನಿದ್ದು
ಮರಣಕಾಲ ಬಂದ ಪ್ರಾಣ ಬಿಟ್ಟಳೊ

೮ನೆ ನುಡಿ

ಸತ್ತಂತ ಶ್ರವನೆಲ್ಲ ಯೆತ್ತಿ ಕುಂಡ್ರಿಸಿ
ಮುಂಖವ ದೊಳಿದು ವಿಭೂತಿ ಮೇಲೆ ಧರಿಶಾರೂ
ಅತ್ತಿ ಚನ್ನವ್ವಾ ವುಡವ ಮುಂತ್ತಿನ ಶರಗಿನಸೀರಿ
ವುತ್ತುಮುರು ನೀರಿಗ್ಹೊದ ವುಡಶರೂ
ಕಸ್ತೂರಿಗಂಧವ ಪೂಸಿ ವಸ್ತ್ರದಪೆಟ್ಟಗಿ ತರಸಿ
ವಿಸ್ತರಿಸಿ ಮೈಮೇಲೆ ಇಡಶರೂ
ಹತ್ತುಯೆಂಟು ಸಾವಿರದ್ಹೊನ್ನಿನ ರತ್ನವ
ತೆತ್ತಿಸಿದ ನತ್ತು ಮತ್ತ ಮೂಗಿನೊಳಗ ಇಡಿಶರೂ
ಬುಕ್ಕಿಟ್ಟ ವೂದಿನಕಡ್ಡಿ
ಲೆಖ್ಖವಿಲ್ಲದ ಸುಡುವುತಲೆ ಕುಂಚಾರ್ತಿ
ಕಲಸ್ಗಿಂಡಿ ತುಂಬಿಟ್ಟರೂ
ಪುರಾಣಪುಸ್ತಕ ವೋದುವಂಥ
ಶಾಸ್ತ್ರಕಥಿಯು ನಡಸುವಂಥ
ನಾಡನಾಡ ಜಂಗಮುರ ನೆರದಾರೂ
ಮಾಯುವಾದ ಮರಣವೆಂದು
ಮಾಹನಾಡ ಜನರು ಕೂಡಿ
ನಿಂತ ಸುರುಶಾರೊ ಕಣ್ಣೀರೂ ॥ಚ್ಯೇ॥

ಅತ್ತಿಮಾಂವರು ಇಲ್ಲ ಅತ್ತಿಗಿನದನೆರು ಇಲ್ಲ
ಹೊತ್ತ ಬಂದಾಗ ಮರಗು ಹೆತ್ತವ್ವ ನೀ ಇಲ್ಲೆಂದು
ತೊತ್ತುಗಳೆಲ್ಲಾ ಆಳುತಿಹರೂ
ಅಣ್ಣ ಅಕ್ಕಗಳಿಲ್ಲ ತಂಗಿತಮ್ಮಗಳಿಲ್ಲ
ಅರಮನಿವಳಗ ಇನ್ನ ಅಡ್ಡಾಡವರಿಲ್ಲೆಂದು
ಆಲಿಪರಿವುತ ಅಳುತಿಹರೂ
ಪುರುಷನ ಕೂಡೊಂದು ಕಾಲ ಸರಸವು ಆಡಲಿಲ್ಲಾ
ಅರಸು ಬಾಪುಸಾಬ್ ಇನ್ನೊಂದೊರುಷವಿರಲಿಲ್ಲೆಂದು
ರಾಹುತರೆಲ್ಲಾ ಮರುಗಿದರೂ ॥ಯೇರ॥

ಉಪ್ಪ ವುಂಡ ಮುಕ್ಕಳು ಯೆಲ್ಲಾ ದಪ್ಪನ ನೆಲಕ ಬಿದ್ದು
ಬಾಪುಸಾಹೆಬನ ಮಡದಿ ನೆನದಳುವರು

೯ನೆ ನುಡಿ

ರಾಜರಾಜಿದ ಜನರೆಲ್ಲಾ ರೇಜಗಟ್ಟಲ್ಲಿಗೆ ಬಂದು
ನೆರದಾರು ರಾಹುತರಾಣೆರೂ
ಬಲ್ಲಂಥ ಬಡಿಗೆನ ಕರಿಸಿ ಯೆಲ್ಲ ಸಾಹಿತ ಕೊಡಿಸಿ
ಮಾಡೆರು ವಿಮಾನವಿಸ್ತಾರಾ
ತರತರಕ ಕನ್ನಡಿ ನಿರತ ನೋಡಿ
ಹೊಂದಿಸಿ ಸರತ ನೋಡಿ ಹಾಕೆರ ಹೂವಿನ ಹಾರಾ
ಹತ್ತುಯೆಂಟು ಸಾವಿರದ್ಹೊನ್ನಿನ ಮುಂತ್ತಿನ ಗೊಂಡೆಗಳು
ಸುತ್ತಲಿ ಬಿಗದರು ಶೇಲು ಜರತರಾ
ಸತ್ತಂಥ ಶ್ರವವು ತಾಂವು ಹೊತ್ತುಕೊಂಡು ನಡದರು
ಹಾರಸ್ತರ ಮೇಲೆ ಛತ್ರ ಚ್ಯಾಮರ
ಬುಟ್ಟಿಬುಟ್ಟಲಿ ಬುಕ್ಕಿಟ್ಟ ಕಟ್ಟವಿಲ್ಲದ
ಹಾರಸ್ತ ಹಿಡದ ಹೊಂಟರ ಮಳಿಗಿ ಬಾಜರ
ಹಲಿಗಿ ಕಾಳಿ ಕರ್ನಿ ಕರಡಿ ಸಂಬಾಳ ಸಂಪರದಾನಿ
ಬಾರಸ್ತ್ಹೊಂಟ ಮುಂದ ಸರದಾರಾ
ದಿಕ್ಕದಿಕ್ಕಿನ ಮಂದಿ ಯೆಲ್ಲಾ
ಅಕ್ಕಾ ಈರವ್ವನ ನೋಡಿ
ದುಖ್ಖ ಮಾಡ್ಯಾರೆಷ್ಟು ಜನರು ||ಚ್ಯೇ||

ಧಾರ್ವಾಡದ ಮಂದಿ ಭೋರಿಡುತಳುವಾಗ
ಪಹರದಾಗಿದ್ದ ಮಗ ಶಂಕರನ
ಸ್ತುತಿಸುತ ನೂರೊಂದು ದುಖ್ಖ ಮಾಡಿದನೂ
ಯೆತ್ತುಭಂಡಿಗಳು ಹತ್ತುವ ಕುದುರಿಗಳು
ಸತ್ತ ಶ್ರವದ ಮುಂದ ಸಾಗಿ ಹೋಗುದು ಕಂಡು
ಶೋಧಿಸಿ ದುಖ್ಖ ಮಾಡಿದನೂ
ದಾನಧರ್ಮುವ ಕೊಟ್ಟು ನೇಮನಿತ್ತೆವ ತೀರ್ಶಿ
ಮುಂದ ಮುಕ್ತಿಯು ಕೊಡುವ ಬಸವನ ಸ್ತುತಿಸುತ
ಮಣ್ಣೊಳಗಿಟ್ಟ ತಿರಗಿದರೂ ||ಯೇರ||

ಸುಂದರ ಹೆಬ್ಬಳ್ಳಿ ಬಸವ ಕಂಡಷ್ಟು
ಕವಿಯು ಹೊಂದಿಸಿ ಮಾಡಿದ ವಿಸ್ತಾರಾ

ಪುಸ್ತಕ ಎರಡು

ಅಪ್ರಕಟಿತ ಹಸ್ತಪ್ರತಿಯಿಂದ

ಪುಸ್ತಕ ಎರಡು : ಭಾಗ ಒಂದು

ಲಾವಣಿಗಳು

೧. ॥ಲಾವಣಿ ಪದಾ॥

ವೀರ ಕುಂಪಣಿ ಸರದಾರ ಟಲ್ಲರ ಸಾಹೇಬಗ್ಯಾರು
ಸರಿಯೊ ಯಿೂ ಜಗದೊಳಗೆ ।
ಸಾರಿಹೇಳಿದ ಹನ್ನೆರಡುಂ ಘಂಟೆಗೆ ಸೂರಿಮಾಡಿದ
ಭೀಮರಾಯ ಧೊರಿಗೇ ॥ಪಲ್ಲ॥

ದೇಶದೇಶದೊಳು ಯಲ್ಲಿ ಕುಂಪಣಿಯವರು
ಹುಕುಮುಂ ಮಾಡಿದರೂ॥
ದೊಡ್ಡದೊಡ್ಡ ಕಿಲ್ಲೇಗಳನು ಕೆಡಹಿದರು ।
ಮಿೂರಿದ ಧೊರೆಗಳ ಸೆರೆ ಹಾಕಿದರು ।
ತಪ್ಪಿಲಿ ಸಿಗಲು ಶಿವನ ಬಿಡದಿಹರು ।
ಧರ್ಮರಾಜ್ಯನೆಲ್ಲಾನಾಳುವರು ॥
ಹಮ್ಮಿಗಿ ದೇಶಾಯಿ ಭೀಮರಾಯರು
ತಿಳಿಯದ್ದಾಗೆಯು ಮಾಡಿದರೂ ॥೧॥

ಚೆನಪಟ್ಟಣ ಹೊನಭರತಿ ಪುರಪುರ
ಪುಣ್ಯಶಾರ ಡಿಳ್ಳಿವಳಗೆ ।
ಮಿಾರಿದ ಧೊರಿಗಳ ಜಗಳದೊಳಗೆ ।
ಸೋತು ಧರೆಯೊಳಿಹ್‌ರು ಇಂದೀಗೆ ।
ದೊಡ್ಡ ಟೀಪು ಯಂದರೆ ತ್ರಿಭೂಮಿಗೇ ।
ದೊಡ್ಡದೊಡ್ಡ ಕಿಲ್ಲೆಗಳು ಕಟ್ಟಿಸಿದವನಿಗೇ ॥
ಸೋತುಕೊರೆಡರೆ ಸಾಟಿಯುಂಟೆ
ಯಿೂರೇಟಕ ಭೀಮರಾಯರಿಗೆ ॥೨॥

ಮದ್ದುಗುಂಡು ಸೋರುಪ್ಪು ಗಂಧಕ
ಯಿದ್ದಡಗಿಸಿಕೊಂಡವರು ।
ಭಾರಿ ಶೀಕ್ಷಕಕೆ ವಳಗಾಗುವರು ।
ಕುಂಪಣಿಯವರು ಸಾರಿ ಹೇಳಿದರು ।
ದೇಶದ ಮದ್ದುಗುಂಡು ಕೊಂಡಾರು ।
ಹಮ್ಮಿಗಿ ದೇಶಾಯಿ ಬಳಿಗೆ ಬಂದಾರು ॥
ಮದ್ದುಗುಂಡು ಕಠಾಕತ್ತಿ
ನಿಮಗಿದ್ದರೆ ಕೊಡು ಯಂದಾರು ॥೩॥

ಕೇಳಿ ಮಾತವ ಹೇಳಿದ ನೆಂನೊಳಂ
ಬಹಳ ಬೇಡ ತುಂಸ ನೀವು ।
ಹುಂಲಂಬಿಸಿ ಕೊಟ್ಟರೆ ಶೀಕ್ಷಕೆ ನಾವು ।
ಪಾತ್ರರು ಯಂನಲಿಕೆ ಕೊಟ್ಟರಂ ಟಾವು ।
ಯಿಂವರಲಿ ಬಹಳ ಆಯುಂಧ ಯಿದ್ದಾವು ।
ಶ್ಯಾನಭೋಗ ತಿಳಿದುಂ ಬರದ ವುತ್ತರವು ॥
ಧಾರವಾಡಕೆ ವುತ್ರ ಮುಂಟ್ಟಲಂ
ಆಗೆ ಕಂದರಿ ಬಂದಾವು ॥೪॥

ಯೆಂಲ್ಲಿ ಹಂಪಿಂಗಿ ಯಲ್ಲೆ ದೇಶಾಯಿಂ
ಯಲ್ಲೆ ಮುದ್ದುಗುಂಡುಂ ಯೆನಂತಾ ।
ಟಣ ಪೂಲಸಿ ಬಂದನುಂ ನಗಂತಾ ।
ಕರಸಿದ ಶಾನಭೋಗನ ತಂರ್ತ ।
ತೋರಿಸುಂ ಮುದ್ದುಗಂಂಡುಂ ನವಂಗೆನುತಾ ।
ದೇಶಾಯಿಂ ||ಬಳಿಗೆ॥ ಬಂದರುಂ ತುಂರುತಾ ॥
ಮೆಂಲ್ಲನಿವರುಂ ಯಂಂನ ಕೊಲ್ಲಂಬಂದರೆಂದುಂ
ನಿಲ್ಲದೋಡಿದ ದೇಶಾಯಿಂ ಅಳುಂತಾ ॥೫॥

ಬಂಣಗುಂಂದಿ ಮಾರಿ ಸಂಣದುಂ ಮಾಡಿ
ಬೆಂಣೆ ಹಳ್ಳಿಗೆ ವೋಡಿ ಬಂದುಂ ।
ಭೀಮುಂರಾಯಂಗ್ಹೇಳಿಂತಾನೆ ಶಿವಶಿವ ಯಂಂದುಂ ।
ಸಾವಿನ ಕಾಲ ನವಂಗೆ ಬಂತೆಂದುಂ ।
ಆದ ವರ್ತಮಾನ ಯಿಂತೆಂದುಂ ।
ತಿಳುಂಹಿದ ಕಂಣ ತುಂಂಬ ನೀರ ತಂದುಂ ॥
ಯಂಂನ ಹಣವು ದಳ ನಿಂನದುಂ
ಮುಂರಣಕ್ಕಿಂನು ಭಯಂವ್ವು ಬೇಡೆಂದುಂ ॥೬॥

ಕಷ್ಟ ಬಂದ ಕಾಲಕ್ಕೆ ಮಾತಂಗಳುಂ
ಯುಪ್ಪಾದರುಂ ಆಡಬಹುಂದುಂ ।
ಮುಂರಣವು ಬಂದ ಕಾಲಕಿದುಂ ಯಿರದುಂ ।
[1]ಕುಂಂಪಣಿಯುಂವರುಂ ರವ್ಯೊಲೆ[1] ಕತ್ತಿಹಿರಿದುಂ ।

---

1. ಕುಂಂಪಣಿಯುಂವರ ವ್ಯಾಲಿ (?)

ಟೋಪು ಬಾಜಿರಾಯಂನ ಮುಂರಿದು ।
ನಂಮಿಂಂದೇನಾಗುಂವದರಿದರಿದುಂ ॥
ದಿಟ್ಟ ಭೀಮಂರಾಯಂ ಮುಂಟ್ಟಹಣೆಯಂರಿದುಂ
ರಂಪ್ಪಯಂಂದಂ ಮಿೂಸಿ ಮುಂರಿದೂ ॥೭॥

ಬಿಡುಂಬಿಡುಂ ದೇಶಾಯಿಂ ಹಿಡಿಹಿಡಿ ಕತ್ತಿಯಂ
ನಡಿನಡಿ ಕಂದರಿಯಂನೇರುಂ ।
ಕರಿಯಂ ಖರಿಯಂ ಸಾಹೇಬರಿಬ್ಬಾರಂ ।
ಹೊಂನಂ ತಿಂನೊ ಭಂಟರ ಕರಸಿದರಂ ।
ಹಂಮಿಂಗಿ ಪುರವಾಕ್ಷಣ ಹೊಕ್ಕಾರುಂ ।
ಕಿವಿಮಂೂಗಂ ಶಾನಭೋಗನ ಕೊಯಿಂಸಿದರಂ ॥
ಬಂದ ಸವಾರರ ಕಡಿಬಡಿ ಯಂಂದಂ
ದುಂಂದು ಕರ ಮಾಡಿಬಿಟ್ಟಾರುಂ ॥೮॥

ಕೊರತಿಯಿಂಲ್ಲ ಹಣ ಭರತಿ ಚಕ್ಕಡಿ
ತಿರಗದೆಳಿಯಂದೆತ್ತುಗಳಂ ।
ಬಂದು ಹೊಕ್ಕನು ಡೊಂಬಳದೋಳಂ ।
ಸಂಲಿಗಿ ಮಾಡಿ ತೆಗದ ಹಣಗಾಳಂ ।
ಹಾರೋರಗೇರಿ ಬಡದ ಹಗಲೊಳುಂ ।
ಕೌಲಂರ ಮ್ಯಾಲೆ ಯಿಂಳಿದ ಯಿರಳೋಳುಂ ।
ಚೋರನಾಗಿ ತಾ ದಾರಿ ಹಿಡಿದುಂ
ಮೇಲೇರಿ ಕಂಳತ ಕಂಂಮಂಟದೋಳಂ ॥೯॥

ಗಜಿಬಿಜಿ ಆದಿತಂ ನಿಜವಿದುಂ ಭೀಮರಾಯಂ
ತಜವಿಜಿ ಮಾಡಿದನೆಂದಂ ।
ಪ್ರಜಗಳಂರಿತಿ ಭಯಂದಲಿ ಮಂನ ನೊಂದುಂ ।
ಲಿಂಗಸೂರ ಚ್ಯಾವಣಿ ಭಂಗಿಲೆಂದುಂ ।
ಭೀಮಂರಾಯಂನ ಹೆಂಡರ ಯಿಂಬ್ಬರ ಹಿಡತಂದುಂ ।
ಕೊಪ್ಪಳ ಕಿಲ್ಲೆದೊಳಗೆ ಯಿಟ್ಟರಂದೂ ॥
ಕಾಳಾಯಂುತ್ತಾಕ್ಷಿ ನಾಮಂಸಂವತ್ಸರ
ಜೇಷ್ಟ ಬಹುಂಳ ಮುಂಂದೆ ತಿಥಿ ಮಂದೂ ॥೧೦॥

ಹೆಂಡರ ಶೆರಿಯಂನು ಕಂಡುಂ ಬದುಂಕಂವ
ಭಂಡನೆ ಭೀಮಂರಾಯಂ ತಾನಂ ।

ರಾತ್ರಿಲಿ ಕುಮಟ ಬಿಟ್ಟು ಹೊಂಟಾನು ।
ಬೆಳಗೊ ಜಾವದೊಳಗೆ ಬಂದಾನು ।
ಕೊಪ್ಪಳ ಅಗಸಿ ಮುರದು ಹೊಕ್ಕಾನು ।
ಹೆಂಡರ ಮಕ್ಕಳನೆ ಕೊಡಿದನು ।
ವಳಗೆ ಶಿಕ್ಕ ಜನರನ್ನು ಜುಲುಮಿಲೆ
ಸಂಬಳ ಗೊತ್ತುಮಾಡಿದನು ॥೧೧॥

ಭೀಮರಾಯು ಕೊಪ್ಪಳವ ಹೊಕ್ಕಾನೆಂದು
[1]ನಬರ[1]ಸಂಭೇದಾರ
ಲಿಂಗಸೂರ ಚ್ಯಾವಣಿಲಿಂದ ಸಾವೀರ ।
ತುರಪಿನ ಮಂದಿ ತಂದ ಸರದಾರಾ ।
ಕೊಪ್ಪಳ ಸುತ್ತಾ ಕಂದರಿಗಳು ಪಾರಾ ।
ನಾಲ್ಕು ಕಡಿಗೆ ತೋಪು ತಯ್ಯಾರಾ ।
ಹೊಡಿಹೊಡಿ ಯನಲಿ ಯಿಲ್ಲದೆ
ಗುಂಡಂಗಳು ಕಿಲ್ಲೆ ಮಾಡಿದ ಚೂರ್‌ಚೂರ ॥೧೨॥

ಪುಂಡ ಭೀಮರಾಯು ಕಂಡಿ ಚುಣ
ಜೋಡು ಗುಂಡಿನ ಕರೂಲಿ ಪಿಡಿದು ।
ಭಾರ ಜರಿಗಸಿ ತೋಪು ಝಡಿದು ।
ಹೊರಗಣ ದುಂಡಿಗೆ ಹೊಡದ ಹಲ್ಲು ಕಡಿದು ।
ಹಶಿದ ಶಿಂಹ್ವನಂತೆ ಕೂಗ್ಯೊಡಿದು ।
ಕೊಪ್ಪಳ ಮಂದಿಯುಲ್ಲಿ ಭಯು ಹಿಡಿದು ।
ಯಂತ್ರಾಣ ಪೀಡಿ ಹತ್ತಿಕೊಂಡಿತೆಂದು ।
ಜನಗಳು ಮೌನವ ಹಿಡಿದು ॥೧೩॥

ಧಡಾ ಯುಂದಡೆ ಬಲದೊಳು ಬಿಡದೆ
ಹೊಡವ ತೋಪುಗಳು ಗುಂಡು ।
ಹೊಡಿಯುಲಿಕಾಯುತ್ತು ಅಗಸಿ ತುಂಡು ತುಂಡು ।
ಹುಮಿಗಿ ದೇಶಾಯಿ ಭೀಮರಾಯು ಕಂಡು ।
ಗಚೀಕೋಟಿ ಹೊಕ್ಕಾರು ಭಯುಗೊಂಡು ।
ಕಡಿತನಕ್ಕಾರವಿಲ್ಲ ಮಂದು ಗುಂಡೂ ॥

1?

ಗಡಬಡ ಗದ್ದಲ ಕೂಗಾರ್ಭಟದೊಳಂ
ಅಡಗಿ ನಿಂತಿತಂ ವಳದಂಡೂ ||೧೪||

ಕೊಪ್ಪಳದೊಳಗೆ ಸಪ್ಪಳಡಗಿತಾಪದ ಕಂಡ ಸರದಾರಾ ।
ಖರಖರ ಹಲ್ಲ ತಿಂದನಂ ಬಲ್ಲ ಭಾರಾ ।
ಹಲ್ಲಾ ಬಿಟ್ಟ ಕೆಂಪ ಮಾರಿಯಂವರಾ ।
ಪಡಪಡ ಗುಂಡಂ ಸಂಡುಂತ ಮುಲತವರಾ ।
ಬೆಂನ್ಹತ್ತಿ ಕಡಿದಾನಂ ಮುಂನೂರಾ ॥
ಗಚ್ಚಿನ ಕೋಟಿವಳಗೆ ಭೀಮರಾಯಂ
ಹಚೀ ಹೊಡದನಂ ರಣಶೂರ ||೧೫||

ಕಾಲ ತುಳವುತ ಧೂಳ ಮುಂಸಂಕಲಂ
ಕಾಳಗವಾದಿತಂ ಪೂರಾ ।
ಹಾಲಕೋಟಿ ಬಾವಿವಳಗೆ ಸಂಹ್ವಾರಾ ।
ಯಂತ್ರಿ ಕಡಿದ ಮುಲತ ಬಂಟಾರಾ ।
ಕಣನೊಳಂ ಬಿದ್ದೇಳದೆ ಹೊರಳುವರಾ ।
ಜಗಳದ ಹೋಲ್ಕಿ ಕರ್ನ ಅರ್ಜುನರಾ ॥
ಹೇಳಬೇಕಂ ಹಂವಿಂಗಿ ದೇಶಾಯಿಂ
ಭೀಮರಾಯಂರಿಬ್ಬಾರಾ ||೧೬||

ಹಿಂದಣ ಯುಂಗದೊಳಂ ಯಿಂದ್ರ ಜಿತನಂ
ರಾಮಚಂದ್ರನ ಬಲ ಹೊಡದಂತೆ ।
ಅಂಗದ ರಾಕ್ಷಸ ಭಯಂ ಹೊಕ್ಕಂತೆ ।
ಭೀಮರಾಯಂ ಜಗಳ ಯಿದರಂತೆ ।
ಗುಂಡಿನ ಶಬ್ದ ಅಳ್ಳ ಹುರದಂತೆ ।
ದೇಶಾಯಿಂಗಾಗೆ ಹೇಳಂತಾನೆ ನಿಂತೆ ॥
ಯಿಂದಿನದೋಳೇನಾದ್ರೆ ನಂಮುದಂ
ಮುಂದಿ ಬಂದಿತೆಂಬುದಿಲ್ಲ ಚಿಂತೇ ||೧೭||

ಕಿತ್ತು ಕತ್ತಿ ಕೈಯ್ಯತ್ತಿ ಸುತ್ತಾಮುಂತ್ತಾ
ತ್ತಾ ಕೇಳೊ ಬಂಟಾರಾ ।
ಕಡಿಯುಲಿ ಹಾರುತಿದ್ದವು ಸೀರಾ ।
ಭೀಮರಾಯಂ ಕೂಡಿ ಹೊಡದ ಸರದಾರಾ ।

ಹರವುತಲಿತ್ತು ಕೆಂಪು ನೆತ್ತಾರಾ ।
ಹಾರಿತು ಗುಂಡು ಒಂದಿಂಗೆ ಸಾವೀರಾ ।
ಹುಂದಿಂಗಿ ದೇಶಾಯಿ ಭೀಮರಾಯರು
ಅದೇ ಕ್ಷಣಕೆ ಸಂಹ್ವಾರಾ ॥೧೮॥

ಸತ್ತಾ ಭೀಮರಾಯ ವರ್ಥವಾಯಿತೆಂದು
ಒತ್ತಿಲಿರುವ ಭಂಟಾರಾ ।
ಹೊತ್ತ ಕತ್ತಿ ತುಬಾಕಿ ಬಿಸಟುವರಾ ॥
ಹತ್ತುಹತ್ತು ಜನರನ್ನು ನಿಲ್ಲಿಸಿ
ಗುಂಡಿಲೆ ಹೊಡದು ಕೊಂದರು ॥೧೯॥

ದಾರು ಹೇಳಿದರು ಊರು ಒಳಗೆ
ಪಿತೂರ ನಡದ ಸಂದ್ದಿಯನು ।
ಟಿಲ್ಲೆರ ಸಾಹೇಬನೆಲ್ಲ ಕೇಳಿದನು ।
ಮೋದಿಂ ನಾಯಕ ರಾಜಿ ನಾಯಕನು ।
ಆರೇರ ದರಮೋಜಿ ರಾಯಣ್ಣನು ।
ದರಿಯಾಪ್ತಿ ಮಾಡಿ ಹಾಕಿಸಿದ ಬೇಡಿಯನು ॥
ಬೆಣ್ಣೆ ಹಾಲು ಉಣ್ಣುವ ಬಾಯಲಿ
ಮಣ್ಣು ಒಗಿಯುಂದವನು ॥೨೦॥

ಯಲ್ಲಿ ನೋಡಿದರಲ್ಲೆ ಮದ್ದುಗುಂಡು
ಯಿಲ್ಲದಿಲ್ಲ ಕಿಲ್ಲೆವೆಲ್ಲ ।
ದೊಡ್ಡದೊಡ್ಡ ತೋಪುಗಳ ವಡಶಿದರಲ್ಲಾ ।
ಹರಿಯಿಂದ್ದ ಗೋಡಿಯುನೆಲ್ಲಾ ।
ಕೆಡಹಿಸಿಲಯವ ಮಾಡಿಸಿ ಬಿಟ್ಟರಲ್ಲ ।
ಜಗದೊಳು ಕುಂಪಣಿ ಧೊರಿಗಣೆಯಿಲ್ಲಾ ॥
ಯಿಂದ್ದ ಮದ್ದುಗುಂಡು ನೀರೊಳಗೆ
ಹಾಕಿಸಿಬಿಟ್ಟದ್ದು ಯಷ್ಟು ಲೆಕ್ಕವಿಲ್ಲಾ ॥೨೧॥

ಪೂರ್ವಜನ್ಮದೊಳು ಯಿರ್ವರೇನಾಹರು
ಪಾರ್ವತಿನಲ್ಲೆ ಬಲ್ಲರಿದನು ।
ಹುಂದಿಂಗಿ ದೇಶಾಯಿ ಭೀಮರಾಯರನು ।
ಕಾಲ್ಹಿಡದು ಯಳಸಿ ತಂದರು ಶ್ರವಗಳನು ।
ಗವಿಯ ಮಠದ ಬಯಲೊಳು ಹಾಕಶಿದನು ।

ಸುತ್ತಾಲು ವೂರ ಜನರು ಮರುಗಿ
ಅಳುತಾರೆ ನೋಡಿ ಹೆಣಗಳನು ॥೨೨॥

ಐಯ್ಯಯ್ಯೊ ಯಂದು ಭೀಮರಾಯನ
ಹೆಂಡರು ಹೊಡಕೊಂಡರು ಹಣಿಹಣಿಯಾ ।
ಭೋರೆಂದು ಅಳುತಾ ಹರಿದು ಕರೆಮಣಿಯಾ ।
ಕೊಲ್ಲುವರೇನೊ ಶಿವನ ಗುಣಮಣಿಯು ।
ಯಂದಿಗೆ ಕೂಡೆವು ನಿಂನಂತ ಧಣಿಯು ।
ಕಾಣುತ ಸುರಿದವು ಕಂಣೀರು ಹನಿಯಾ ॥
ಕಾಣುತ ಸರದಾರ ಕಳುಹಲು ಕರುಣದಿ
ಬಂದ ಹೊಕ್ಕರ ಬೆಂಣಿಹಳ್ಳಿಯಾ ॥೨೩॥

ಕಾಳಮೂಳ ಮತ್ತೇಳಲಿಲ್ಲ ಬಹಳ
ಬಾಧೆಗಳಾದವೆಂದು ।
ಹಾಸಲು ಕಲುಮು ಇದ್ದದನೊಂದು ।
ಮುಂದಿನ ಜನಕಿದು ಗೊತ್ತಿರಲೆಂದು ।
ಭೀಮರಾಯ ಮಾಡಿದಾಟ ಇಂತೆಂದು ।
ಹೇಳಿದ ಬಾವಾಸಾಹೇಬ ಯಿನೊಂದು ॥
ಭೀಮರಾಯ ಕೊಪ್ಪಳ ಕಿಲ್ಲೆದಲ್ಲಿ
ಯಿನೆರಡು ದಿವಸ ಯಿರಲೆಂದೂ ॥೨೪॥

ರಂಗರಾಯನ ತಾಯಿ ಭೀಮರಾಯ ಸತ್ತ
ಸುದ್ದಿ ಕೇಳಿದಳು ।
ಹಾಹಾ ಕಂದನೆಂದು ಮರುಗಿದಳು
ಹಿಂದೆ ಚಕ್ರಭಿಂಹ್ವ ಕೋಟಿಯೊಳು ।
ಅಭಿಮಾನ್ಯ ಮಾಡಿದನು ಕೌರುವರೊಳು ।
ಆ ಪರಿ ಆಯಿತು ಕೊಪ್ಪಳದೋಳು ।
ಪುಂಡರೀಕ ವರನಯನ ಮುನಿದ
ಶ್ರೀ ಭಂಡಿರು ನನೆದಳೂ ॥೨೫॥

ಶ್ರೀ ಶ್ರೀ ಶ್ರೀ

೨. ಬಾದಾಮೀ ಕಿಲೆ ಕೆಡವಿದ ಪದ

ಭಾದೂರ ಕಟ್ಟಿಸಿದಂಥ ಬಾದಾಮಿಂ ಕಿಲೇಕ
ಬಂತೊ ಪ್ರಳಯಂಕಾಲಾ।
ಸಂತ್ರ ರಾಜ್ಯದೊಳಂ ಮೇಲಾದ ಕಿಲೆಯಂ
ಆಯಿತೊ ನೆಲದ ಪಾಲಾ ॥ಪಲ್ಲ॥

ಕಿಲೇದ ಚಮಂತ್ಕಾರ ಹೇಳತೀನಿ ಕೇಳರಿ ಮಂಜಕೂರಾ
ಗಂಡ್ಡದ ಮೇಲೆ ಗಡಾ ಕಾಣತದ ಭಾಳ ಅಪರಂಪಾರಾ
ಮಂನ್ನೂರ ಅರವತ್ಂ ಕಿಲೇವು ಕಟ್ಟಿಸಿದ ಭಾದೂರ ಸಾಹೇಬರಾ
ಕಂಂಟ ಕಂರಂಡರಿಗೆ ಅನ್ನಕ್ಷೇತ್ರ ಅಲಿ ಇಟ್ಟಿದ ಕರಾರಾ
ಬಸರ್ಡ್ಡಿಂಗಸರಿಗೆ ಎರಡಾಳಿನ ಕೂಲಿ ಕೊಟ್ಟನ ಮಂಜೂರಾ
ಒಂಬತ್ಂ ವರಂಷ ಕಟ್ಟಿದ ಜನ ಹನ್ನೆರಡಂ ಸಾವಿರಾ
ಸಂತ್ರ ಆಳವಾರಿ ಕಬ್ಬಿಣ ದ್ವಾರಗಸಿ ಇದ್ದವನೂ
ಕಲ್ಲಂ ಗಚ್ಚಿಲೆ ಕಟ್ಟಿದ ಗೊ[ೀ]ಡಿಗೆ ಬರದಾರ ಚಿತ್ತಾರಾ ॥ಚಾಲ॥

ಬ್ರಾಮಂರಿಗೆ ಜಂಗಮಂರಿಗೆ ಭೂಮಿಂದಾನ ಪತ್ತಾರಾ ಪತ್ತಾರಾ
ಕಾಜಿ ಮಂಲ್ಲಾ ಪಕೀರಗೆ ಊರ ಕೊಟ್ಟ ಜಾಗೀರಾ ಜಾಗೀರಾ
ಸಂರ ಶಿಪಾಯಿಂ ಚಾಕ್ರಿ ಅವರ ಮೇಲೆ ಇತ್ಂ ಬಲ ಪೇರಾ ಪೇರಾ
ವರಟಾರಂ ಘನ ಶೀದಾ ಲೋಕದೊಳಗ ಜಾಹೀರಾ ಜಾಹೀರಾ
ಭೂದೂರನ ಹಂಕಂಮಂ ನಡಸಂತಿದ್ದ ಬಲ ದೂರಾ ದೂರಾ ॥ತೋಡ॥

ಪುಣ್ಯವಂತ ಮಹಾರಾಯಂರ ಗಂರತಾ ಉಳಿಯಂಲಿಲ್ಲ ಜರಾ
ಕೂನದ ಕಿಲ್ಲೆವು ಕಂಂಪಣಿಯಂವರಂ ಮಾಡ್ಯಾರ ಸಂವಾರಾ ॥೧॥

ಕಿಲೇ ಕೆಡಂವಾಗ ನಾಡಮೇಗಿನ ಜನ ಮಂರಗಿತೊ ಮಂರಮಂರಾ
ಶಿಪಾಯಿಂ ಸೂರರಂ ಉಪಾಯಂ ಏನದೆ ತಂದರ ಕಂಣಿಗೆ ನಿ[ೀ]ರಾ
ಮಂತ್ರಿನಂತ ಬಂರಜಂ ಸಂತ್ತಲೆ ಬಿದ್ದವು ಹೇಳಲೇನ ಪೆಸರಾ
ಹಂಡಂಗಾಟ ಆದಿತಂ ಕಲಿಯಂಂಗದೊಳಗ ತಿಳಿಯಂ ಚಮಂತಕಾರಾ
ಸರಕಾರ ಬಂದಂ ಕೆಡವಿದ ಮೇಲೆ ಯಾರಿಲ್ಲ ಈ ಧರಾ
ಕಳಸ ಇಲ್ಲದ ತೇರಿನಗತಿ ಬಾದಾಮಿಂ ಶೃಂಗಾರಾ
ಚಪನ್ನ ದೇಶಕೆ ಪ್ರಶಿದ್ಧ ಜಾಗಾ ಆಳಿಕೆ ಧೋಪಾರಾ
ಸಾದಾಸಿ ನೋಡಲಂ ಶಾಸ್ತ್ರಸಿದಂತ ಬಾದಾಮಿಂ ಕ್ಷೇತರಾ ॥ಚಾಲ॥

ದೇಸಾಯಿಂ ಅಂತಾನ ಗೋಪವಾದಿತಂ ಹಣೆಭಾರಾ ಹಣೆಭಾರಾ
ಯಂಗತಿದಿಂದತಿ ತೊಗಂಡರಂ ಎಲ್ಲ ರಾಜದ ಕರಾಕರಾ
ಅಲ್ಲಿಂದ ಕಿಲೇ ಅಳಿದಾರೊ ಗಂಡಿಯಂ ಗೋಪರಾ ಗೋಪರಾ
ದಿನ ಒಂದಕಂ ಹಂಕಂಮಂ ನಡಸಂತಾರ ಇಲ್ಲ ಸ್ಥೀರಾ ಸ್ಥೀರಾ ॥ತೋಡ॥

ಕ್ಷಿತಿಯೊಳಂ ಬಾದಾಮಿಂ ಪತಿ ವಿರುಪಾಕ್ಷನ ಕರುಣದಿ ವಿಸ್ತಾರಾ
ತಿಳಿದಂ ಹೇಳಿದನಂ ಜಾಣಿಸಿ ಕೇಳಿರಿ ಬಲ್ಲಂತ ಹಿರಿಯಂರಾ ॥೩॥

ಪೇಶವಾನ ಮೊಗಲಾಯಿಂ ಕಾಲಕೆ ಲಡಾಯಿಂ ಆಯಿಂತ ಟೀಕ
ಏಳನೂರ ಪಾಲಕಿ ಕಾಲಿಮಾಡಿದ್ದಂ ಟಾವಿಕಿತ್ತೊ ಜನಕ
ಹತ್ತೆಂಟಸರ್ತಿ ಲಡಾಯಿಂ ಹೊಡದವರಂ ರಾಜ್ಯಕ ಬಿಷ್ಟಂ ಬೆಳಕ
ಟೀಪುಸಂಲ್ತಾನ ಭಾದೂರ ಸಾಹೇಬಗೆ ಮಂತ್ರೊ ಮಾಣಿಕ
ಮದ್ದುಗುಂಡು ಜಂಜಾಲಂ ಟೋಪಗಳು ಇದ್ದವು ಆನೇಕ
ಶಾಣೆ ಮನುಷ್ಯನ ಜಾಣೆಸಿ ನೋಡಿರಿ ಕಂಡ್ಹಂಗ ಪ್ರತಿಲಂಕ ॥ಚಾಲ॥

ಕರ್ನಾಟಕ ಪ್ರಾಂತಕೆ ಆಧಾರ ಇತ್ತು ಈಗಡಾ ಈಗಾಡಾ
ಬಡಂಕೊಂಡಂ ಹೋದರ ಕೇಳವರ್ಯಾರಿಲ್ಲ ನಾಡಾ ಕೇಳ ನಾಡಾ
ಎಂತ ಹೊತ್ತು ತಂದ್ಯೊ ಪರಮೇಶ್ವರ ಕಿಲೆಯಂಕ ಕೇಡಾ ಭಲ ಕೇಡಾ
ಕೆಡುವಾಗ ಶಿಡಲಿನಂತ ಸಪ್ಪಳಾಯಿಂತೊ ಧಡಧಡಾ ಧಡಧಡಾ
ಧುಳ ಮಂಸಕಿ ಸೂರ್ಯಗೆ ಬಂದ್ಹಾಂಗಾಯಿತಂ
ನೋಡಂ ಮಂಡೀಡ ನೋಡ ಮೂಡಾ ॥ತೋಡ॥

ತಿಳಿದಂ ನೋಡ ಲೆಕ್ಕಾ
ಓದಿದ ಮನಂಷ್ಯಗೆ ಕಾಲಗ್ನಾನ
ವಳದಿತಂ ಮನಾಕ ॥೨॥*

*/song stress/ಬಾಳಿ ಇಂಟಿ
ಗುಳೇದಗುಡ್ಡ ೨೯ನೇ ಜಾನೆವಾರಿ ೧೮೭೪ ಇ॥
(ಒಂದು ಸಂಕ್ಷಿಪ್ತ ಸಹಿ)

೩. ಮಂಡ್ರೋಲ ಸಾಹೇಬರ ಪದ

ಮೊದಲಿಗೆ ಮಂಡ್ರೊಲ ಸಾಹೆಬ ಬಂದಂ ಬೇತಮಾಡೀ ।
ಠಣೆವ್ವಾಕಲಿಬೇಕೆಂದೊಳ್ಳೇ ಕಿಲ್ಲೆವ ನೋಡೀ ॥ಪಲ್ಲಾ॥

ಶ್ರೀಮಂತರ ದೌಲತ ಏಸಂ ಮೌಜಿಲಿತ್ತೂ ।
ಬಲೆ ಭಲೇ ಶಿಪಾಯಿಂ ಬಿಟ್ಟುಂ [1]ಹೋದರಂ[1] ಬ್ಯಾಸತ್ತೂ ।
ಆ ಸಾಹೆಬ ಗೋಕಂಲ್ಯಾ ಲಡಾಯಿಂ ಮಾಡಿ ಸತ್ತೂ ।
ಇಂಗ್ರೇಜರ ದಂಡಂ ಬಿಡದಲೆ ಬೆನ್ನತ್ತೂ ॥ಚಾಲಂ॥

ಪುಂಡ ಪಾಳಗಾರರಂ ಕೂಡೀ ।
ತಂಮೊಳಗ ತಾವು ಮಾತಾಡಿ ।
ಕಳಕೊಂಡರಂ ನೆಂಬಿದ ಗೋಡೀ ।
ಬಿಟಂಕೊಟ್ಟುಂ ಹೋದರವರೋಡಿ ॥ಏರಂ॥

ನೆಲೆಯಿಲ್ಲದಾಯಿಂತೂ ನೀವು ಕೇಳಿರೀಗ ।
ಪರಂಗೇರ ಠಾಣೆವು ಬಿದ್ದಿತಂ ಪುಂಣೇದಾಗ ॥೧॥

ಧಾರವಾಡದ ಕಿಲ್ಲೆವ ಠಾಣೆವ ಹಾಕತಾರಾ ।
ಅಲ್ಲಿಂದ ತಕ್ಕೊಂಡಾರಂ ಬೆಳಗಾವಿ ಶಾಪೂರಾ ।
ಬಾದಾಮಿಂ ಮೇಲೆ ದಂಡಂ ಕೂಡಿತೆ ಬಲಂ ಪೂರಾ ।
ಗದಿಗಿನಾ ಸೀಮೆ [2]ಮೇಲೆ[2] ನವಲಗುಂದ ಜೇರಾ ॥ಚಾಲಂ॥

ಡೊಂಬಳದ ಕಿಲ್ಲೆವ ನೋಡಿದಾರು ।
ಸನ್ಮಾತದಿಂದ ಬೇಡಿದಾರಂ ।
[3]ದೊಡ್ಡ[3]ತೋಪ ತುಂಬಿ ಹೊಡಸಿದಾರೂ ।
ಕಲ್ಲುಂಗೋಡಿ ಒಡಂ ಕೆಡಿಸಿದಾರಂ । ॥ಏರಂ॥

ಠಡದಾಡಲಿಲ್ಲ ಕರ್ನಾಟ ದೇಶದ ಮಂದೀ ।
ಜಗಳಕೆ ಜರಿದು ಕೊಟ್ಟುಂ [1]ಹೋದರಂ[1] ತಾವಂಜಿ ॥೨॥

ಸಂತ್ತಲೀ ರಾಜೆವ ಠಾಣೆವ ಹಾಕಂತಾಲೀ ।
ರೈತರಿಗೆ ರಾಜ ಮಾಡಿ ಬರದು ಕೊಟ್ಟರೋಲಿ ।
ಹಿಂಗ ತಿಳಿಯಂದ್ಹೋದಿತಂ ಪರಂಗೇರ ನೇಲಿಽ ।
ಏಕರಾಜ್ಯ ಮಾಡಿದಳಂ ಕಂಪಣಿ ಹೆಂಣ ಬಾಲಿ ॥ಚಾಲಂ॥

ಹೊದರು 2 ಮೆಲೆ 3 ದೆಡ್ಡ

ಆಕಿ ಹೇಳಿದ ವಚನಾದಿಂದ ।
ಬಾರ ನೆಡಿತಂ ಸಾಹೆಬರಾ ಮುಂದ ।
ತಂಪ್ಹಿನಾ ಫೌಜಂ ಹಿಂದಿಂದ ।
ಬಲಕಚೆರಿ ನೆರದತೆ ದಂಂದ ॥ಏರಂ॥

ರೋಣದಾಸಮುತ ತಾಲೂಕ ಸಂದ್ದಿಯೇನು ।
ಇಂಗ್ರೇಜಿ ಮುಂನಶಿ ಕಂಂತಂ ವಿಚಾರ ಮಾಡಿದಾನಂ ॥೩॥

ಎಂತೆಂತ ಕಿಲ್ಲೆವು ಬಿದ್ದುಂಹೋದವಲ್ಲ ಗೋಡೀ ।
ಮೇಗಿನ ತೋಪಗಳು ಕಿತ್ರುರಂ ಈಡ್ಯಾಡೀ ।
ತಂಮ ರಾಜ್ಯೆದ ನಡತಿ ದೇಶಕೆಲ್ಲ ಮಾಡೀ ।
ರೊಕ್ಕ ತಿಂದವರಿಗ್ಯಲ್ಲಾ ಹಾಕಂತಾರ ಬೇಡೀ ॥ಚಾಲಂ॥

ಸರದಾರ ಸಾಹೆಬ ಸಿಟ್ಟೀಲಿ ।
ಕಂಂತನಂ ಕುರ್ಸಿದ ಮೇಲೆ ।
ದಂಡ ಯಿಂಳವಿದ ಸಂತ್ರಮುಂತ್ರಾಲಿ ।
ರೈತರಿಗೆ ಬರದಂ ಕೊಟ್ಟರೋಲಿ । 4[ಏರಂ]4

ಧರಿಯೊಳಗ ಮೆಂರವ ಬ್ರಹ್ಮೇಶ ಬಟ್ಟಗೇರಿ ।
ಆತನ ಕರಂಣವಸಕರಡಿ ಬಾಲ ಸಾರಿ ॥೪॥

ಸಮಾಪ್ತ॥*

---

4 ಊ.ಪ. *ಪರಯ್ಯಾ ಬಿಂನ ವೀರಭದ್ರಯ್ಯಾ ಗಣಾಚಾರಿ ಬಾದಾಮಿ. ಶಿನೇ ಫೇಬ್ರುಆರಿ ಸ್ ೧೮೭೪ ಇಸವಿ.

೪. ಕೊಲ್ಲಾಪೂರ ಮಹಾರಾಜನ ಪದಾ

ಮೊದಲಿತ್ತ ಕೊಲ್ಲಾಪುರ ಊರಾ । ಅತಿ ದೊಡ್ಡ ಶಾರಾ ।
ಶಾಜಕ ಜಾಹಿರಾ । ದೇವ ಅವತಾರಾ ।
ರಂಕಾಳಿ ಪದ್ಮಾಳಿ । ಅಂಬುಂದುಂ ಎರಡುಂ ಹೆಸರಾ ॥ಪಲ್ಲಾ॥

ಆಗ ಗರದಿತ ಹೊನ್ನಿನ ಮಳಿ ।
ಅಂಬು ಭೂವಿಂಗೆ ಕಳಿ ।
ರಂಕಾಳಿ ಪದ್ಮಾಳಿ ಸಮಂಸ್ತ ಕೇಳಾರಿ ॥
ನಿಂವ ಆತ್ಮಜ್ಞ್ಯಾನಿಗಳ
ಸಭಾದೊಳಗ ಕಂಂತೀರಿ ॥
ದೇವಲೋಕದ ಮಂಂದಿ ಆವಾಗ ಇತ್ತ ಭೂವಿಂಮ್ಯಾಗ ।
ದ್ರುವ್ಯವ ಕೆರಿಯಾಗ । ಯಾವ ಪರಿಪರಿ ॥
ಲೆಕ್ಕಿಲ್ಲದ ಬದಕ ಇಟ್ಟಾರ । ಗೊತ್ತಯಾರಿಗಿಲ್ಲರಿ ॥
ಆ ದ್ರುವ್ಯಕ ಕಾವಲ್ಯಾರದಾ ಯ್ಯೋಳ ಹ್ಯಾಡಿದಾ ।
ಸರ್ಪ ಹುಟ್ಟಿಸಿದಾ । ಬ್ರಹ್ಮನಿಸ್ತಾರಿ ॥
ಮಂಹಾಶೇಷನ ಬದಿಯಂಲಿ ರತ್ನ ಕೊಟ್ಟಾರ ರಾತರಿ ॥
ಐದುಂ ಮಂಂದಿ [1]ದುಂ[1]ರಾತ್ಮರ ಕೂಡಿ ।
ಸಮಂ ಮಂಸಲತ್ತಾ ಮಾಡಿ ।
ಚಲೋ ಕಲ್ಲ ನೋಡಿ । ಬರದ್ದಾರ ಭಾರಿ ॥
ಅಲ್ಲಿ ಹುಂಟ್ಟಿ ಶಾರ ನೀಛೆದ ಕಲ್ಲ ।
ಯಾರಿಗೆ ತಿಳದಿಲ್ಲ । ಹಾಕಿ ಮಂಂದ್ದರಿ ॥
ಎಂಟರಾವಗಳ ಸಾಧಿಸಿ । ಜ್ಯಾಗ ಬಲಿ ಬೇಸಿ ।
[2]ನೋ[2]ಡ್ಯಾರ ಪುರವಾಸಿ । ಕಂಂತ ಬರಾಬರಿ ॥
ಅಷ್ಟಪಾಲಕರೆಂಟ ದಿಕ್ಕ ।
ಸಂತ್ತಲೆ ನೋಡ್ಯಾರತ್ಯಾರಿ ॥ಚಾಲ॥

ನಾ ನಿಮಂಗ ಹೇಳತೆ । ಕೇಳಿರಿ ಶಾಸ್ತ್ರ ಸಿದ್ಧಾಂತಾ ।
ಇದುಂ ದೇವಲೋಕದ ಮಾತಾ ॥
ಇದ ಆದ ಪುರಾತ್ಮ ಆಗೆತಿ ಆಗಿನ ಅರ್ಥಾ ।
ಅವ ಬಲ್ಲ ಕೇವಲ ಭಗವಂತಾ ॥

---

1 ವು 2 ನೊ

ಆ ಕೊಲ್ಲಾಪುರದಾ ಲಕ್ಷುಮಿ ಮಾಡಿದ ಬೇತಾ ।
ಕಲಿ[1]ಯು[1]ಗದೊಳಗ ತಿಳಿದಂತಾ॥
ಇಪ್ಪತ್ತ ಯ್ಯೋಳ ನಕ್ಷತ್ರ ಬಿಟ್ಟಿದಿ ಗುಣವಂತಾ ।
ಹಿಂಗ ಹಾಕಿ ಮಾಡಬೇಕ ಗಣತಾ ॥
ಅರವತ್ತ ಸಂವತ್ಸರ । ಹಿಡದ ಆಗೆತಿ ಈ ಮಾತಾ ।
ರುಕಾಳಿ ಅಂಬುದು ಪೂರ್ತಾ ॥ 2 ಯೇ[2]ರ ॥

ಮುಂಚೆ ಹೀಂಗ ಈತ್ತ ಪ್ರಮಾಣ ।
ಬ್ರಹ್ಮನ ವಾರಣ । ಅವನ ಕಾರಣ । ಆತಿ ತಯ್ಯಾರಾ ॥೧॥

ಪೂರ್ವ ಪಶ್ಚಿಮಕ್ಕ ಯ್ಯೋಳ ಮಂದಿ ರುಷಿ
ಬುದರ ಸಾಧಿಸಿ। ನೋಡತಾರ ಸೊಸಿ ।
ಕೆರಿ [3]ದು[3]ಡಿಲಿ ।
ಆ ಶಿಲ್ಪಿ ತಾಡವಾಲಿ ಇತ್ತ ಅವರ ಹುತಿಲಿ ॥
ಆಗ ತಗದ ನೋಡಿದರ ಕುತ
ಮುನಸ ಬಲಸುತ । ಆತಿ ಅವರುತ। ಅದ ಸ್ಥಳದಲ್ಲಿ ।
ಆನಂದನಾಮು ಸಂವತ್ಸರ ಗುರು ಬೆನ್ನಮಾಲಿ ॥
ಅಲಿ "ನಿಭೆದ" ಕಲ್ಲ ಒಂದಿತ್ತ । ನೋಡ್ಯಾರ ದೃಷ್ಟಾಂತ ।
ಒಲದ ಭಗವಂತ । ಅವರ ಮನದಲ್ಲಿ ॥
ಆಗ ಮ್ಯಾಣದ ಹಲಗಿ ಮಾಡಿ ತಕ್ಕೊಂಡ್ರು ತಮ್ಮ ಕೈಲಿ ॥
ಆ ನಿಭೆದ ಕಲ್ಲಿಗೆ ಒತ್ತ್ಯಾರು ।
ತಗದ ನೋಡ್ಯಾರು । ಓದಿಕೊಂಡಾರು ।
ಓಜನಾಥ ಅಲ್ಲಿ ।
ಆ ರುಕಾಳಿ ಕೆರಿಯಾಗ ।
ದ್ರವ್ಯವ ಇರುದ ನಿಭೆದಲ್ಲಿ ॥
ಕೆರಿಯೊಳಗ ಯ್ಯೋಳ ಹೆಡಿ ಸ[5]ರ್ಪ[5] ।
ಅದರ ತಾರೀಫ । ಕೆಳರಿ ನಿಂವ ಸ್ವಲ್ಪ ।
ಬರುದ ರಾತ್ರಿಲಿ ॥
ಆ ಸರ್ಪ ಮಾಡತಿತ್ತ [6]ಜ[6]ತ್ನ ।
ಇರುದ ಒಂದ ರತ್ನ । ಅದರ ಬಾಯಲಿ ॥ಚಾಲ॥

ಆ ಸರ್ಪ ಬರುವಾಗ ನೀರು ಬದಿಗಿ ಆಗೂತಾ ।
ಇದು ಇರುದ ಶಾಸ್ತ್ರ ಸಿದ್ಧಾ[7]ತಾ[7] ॥

1 ಯುವ 2 ವ 3 ರು 4 ನಿಭೆದ 5 ಫ಼ ೯ 6 ಓ 7 ಥಾ

ಯ್ಯೋಳ ಮಂದಿ ರಂಪಿಗಳ ಮಾಡತಾರ ಮಸಲತ್ತಾ ।
ಆ ಸರ್ಪ ಹಿಡಿಬೇಕಂತಾ ॥
ಆ ಸರ್ಪಿನ ತೆಲಿ ತಿಂದವಗ ಆಗುಂದ ದೌಲತ್ತಾ ।
ಯಾರು ತಿಳದಿಲ್ಲ ಪೂರ್ವದ ಮಾತಾ ॥
ಆಗ ಕಬ್ಬಿಣ ಪಿಂಜರ ।
ಉಕ್ಕಿನ ಅಲಗ ಸಂತಮಂತ್ತಾ ।
ಸುದ್ದಿ ಇಲ್ಲದ ಮಾ[1]ಡ್ಯಾ[1]ರ ಗೊತ್ತಾ ॥
ಆ ರಾತ್ರಿ ವೇಳೆದಲ್ಲಿ
ಆಲದ ಮರದ ಮೇಲೆ ಕುಂತಾ ।
ಆ ಸರ್ಪ ಹಿಡಿಬೇಕಂತಾ ॥ಯೇರ॥

ಆರ ತಾಸ ಆಗ ರಾತರಿ ।
ಸರ್ಪ ಬೆಂಕಿ ವುರಿ ಬಿಟ್ಟಿತೊ ಕೆರಿ ।
ಬಿಚ್ಚತಿತ್ತ ನೀರಾ ॥ ೨ ॥

ಆ ಸರ್ಪ ಬಂತೊ [2]ಭೋ[2]ರ್‍ಯಾಡಿ ।
ತಗದ ಯ್ಯೋಳ ಹ್ಯೆಡಿ । ಸಂತ್ತಲೆ ನೋಡಿ ।
ಕೆರಿಯಂ ಡಿದಂ ವ್ಯಾಗ ।
ಆ ಸರ್ಪಿಗೆ ಬಂತ [3]ಉಲ್ಲಾಸ[3] ।
ಜೀಂವಕ ಹರ್ಷ । ಆತಿ ತನ್ನೊಳಗ
ಸರ್ಪ ಉತ್ತರ ದಕ್ಷಿಣ ನೋಡಿತಂ ।
ರತ್ನ ಇಟ್ಟಿತಂ ಬೆಳಕ ಬಿದ್ದಿತಂ ।
ಚಂದ್ರ [4]ಹೊಂಟ್ಹಾಂಗ[4]
ಆ ಬೆಳಕಿಲೆ ಅಮೃತ ಮೇಂವುದ ರಾತ್ರಿವಳಗ ॥
ಸರ್ಪ ಮೇಂವುತಿತ್ತ ಅಮೃತಾ ।
ಬೆಳಕ ಸಂತಮಂತ್ತಾ ।
ಬ್ರಹ್ಮನಲಕೀತಾ । ಒದಗಿತಾವಾಗ ॥
ಆ ಸರ್ಪಿಗೆ ಬಂತ ಮರಣಾ ।
ದೇವರ ಕರಣಾ । ಆತಿ ಇಲ್ಲದ್ಹಾಂಗ ॥
ಋಷಿಗಳ ಆದಾರ ತಯಾರಾ ।
ಕಂಡಾರ ಕಂಣ್ಣಾರಾ । ದೇವರ ಹೆಸರಾ ।

---

1 ದ್ಯಾ 2 ಭೊ 3 ಉಲ್‌ಲ್ಲಾಸ 4 ಹೊಂಟಾಗ

ತಮ್ಮ ಮನದಾಗ ಹಿಂಗ ಮಾಡ್ಯಾರ ಸಂಭನ ಸ್ತುತಿ ।
ಆದ ಸಾರಥಿ । ದಯಾ ಆವರ ಮ್ಯಾಗ ॥
ಆಗ ತಗೊಂಡ ಪಿಂಜರ ಕೈಗ ।
ಕಂಂತ ಗಿಡದಾಗ ।
ಇಳಸಿದರ ಹ್ಯಾಂಗ ರತ್ನದ ಮ್ಯಾಗ ॥
ಆ ರತ್ನದ ಜೋತಿ ಕಡಿಮ್ಯಾದಿತ
ಕತ್ತಲ ಗಂವದೀತ ।
ಚಂದ್ರ ಮಂಣಗಿದ್ಹಾಂಗ ॥ಚಾಲ॥

ಆ ಸರ್ಪ ಆತಿ ಬೆಂಕಿ ಪಾರ್ಜ ।
ಪಂಚವರಣಾ ।
ಮಂನಿದಾನ ಹರಿನಾರಾಯಣಾ ॥
ಆ ಸರ್ಪಿಗೆ ದಿಕ್ಕ ತೆಪ್ಪೀತ ।
ಹಾರಿತ ಹಲ್ಲಣಾ ।
ಆ ರತ್ನದ್ಹೋತಿ ಕೀರಣಾ ॥
[1]ಯ್ಯೋಳ[1] ಹೆಡಿ ತೆಗದ
ಪಿಂಜರಕ ಬಡಿತೋ ಪೂರ್ಣಾ ।
ಇದ ಆತಿ ಯೇನ ಕಾರಣಾ ॥
ಗಡಬಡಶ ಅಬರಶ
ಬಂತ ನೋಡ ಆ ಕ್ಷಣಾ ।
ಬಡದ್ಹಾಂಗ ಆದಿತೊ ಬಾಣಾ ॥
ಆ ಅಲಗ ನಟ್ಟ ನಂವಚಿತ್ರ
ಆತಿ ಗೆಣಗೆಣಾ ।
ಆ ಸರ್ಪ ಕೊಟ್ಟಿತೊ ಪ್ರಾಣಾ ॥ಯೇಂರ॥

ಖಂಪಿಗಳ ಗಿಡ [2]ಇ[2]ಳದ ಅಲ್ಲಿಗೆ ಬಂದ ।
ಆತಿ ಪಾಸಂದಾ ಮಾಡ್ಯಾರ ಹಂನ್ನಾರಾ ॥೩॥

ಖಂಪಿಗಳಿಗೆ ದೊರಿತ ರತನಾ ।
ಮಾಡ್ಯಾರ ಜ್ಯಾತನಾ ಆವರ ಸ್ವಾಧೀನಾ ।
ಯೋಳ ಮಂದಿವಳಗ ॥
ಬೆಳಗೀನ ಬೆಳ್ಳಿ ಮಂಾಡೀತ ।

---

1 ಯ್ಯೊ 2 ಈ

ಹೊತ್ತಯೇರಿತ ।
ಬಿಟ್ಟಾರ ಆ ಜ್ಯಾಗ ।
ಆ ಸರ್ಪ ಕೈಲಿ ತಕ್ಕೊಂಡ
ಮಾಡ್ಯಾರ ತುಂಡ ತುಂಡ ।
ವಿಷಾ ತೊಳಕೊಂಡ । ಆದ ಕೆರಿ ವಳಗ ॥
ಅವರ ಮನಸ ಆತಿ ದಿಲ್ಖಾಕ ।
ಕೊಲ್ಲಾಪೂರಕ । ಬಂದಾರ ಊರಾಗ ॥
ಅವರ ಹಿಡದ ತಿರಗತಾರ ಪ್ಯಾಟಿ ।
ಮುಂದಕಿ ಮಾರಾಟಿ ।
ಆದಿತೊ ಭೆಟ್ಟಿ ।
ಕೂಡಿತ ವಳತಾಂಗ ॥
ನಮಂಗ ಮಾಡಿ ಉಣಸ ಭೋಜಣ ।
ತಗೊ ಹಿಡಿ ಮಿಣಾ ।
ನಿನ್ನ ಮನಿವಳಗ ॥
ನಮಂಗ ಕುಡಸಿಕೊಟ್ಟ ಭಗವಾನಾ ।
ಭರತಿ ಮುದ್ದಿನಾ । ಮಾಡಲಾಕ ಸ್ನಾನಾ ।
ಹೊಂಟರಾವಾಗ ॥
ಆ ಪಂಚಗಂಗ[1]ನ[1]ದಿಯಾಗ ।
ಯ್ಯಾಳ ಮುಂದಿ ಹ್ಯಾಂಗ ।
ಮಾತಾಡದಾರ ಹೀಂಗ ॥
ಮುಂದಕಿ ಆಡಗಿ ಮಾಡ್ಯಾಳ ಗಡಬಡಿ ।
ಯೆಲ್ಲಾ ಮಾಡಿ ಹುಂಡಿ ।
ನೀರ ಲಗುಮಾಡಿ ।
ತರಾಕ [2]ಹೋ[2]ದಾಳಾಗ ॥
ಆ ಮುಂದಕಿ ಮಗ [3]ನೋ[3]ಡಬಂದ ।
ಸರ್ಪಿನ ತಲಿ ತಿಂದ ಹೋದ ಲಗುಂಬ್ಯಾಗ ॥ಚಾಲ॥

ತುಂಬಿದ ನೀರ ಕೊಡದಾಗ ತಂದಳ ಲಗುಮಾಡಿ ।
ಅವರು ಬರುವ ಹಾದಿಯಾ ನೋಡಿ ।
ಯ್ಯಾಳ ಮುಂದಿ ಋಷಿಗಳ
ಬಂದರ ಸ್ನಾನಾಮಾಡಿ ।

---

1 ದ 2 ಹೊ 3 ನೊ

ಸಾಲಾಗಿ ಕಂಂತಾರ ಸಂವ ಜೋಡಿ ॥
ಆ ಮಂಂದಕಿ ನೀಡಿದಳ
ಯ್ಯೋಳ ಯಂಡಿ ಒಳಿ ನೋಡಿ ।
ಅವರಿಗೆ ನೀಡಿದಾಳ ಸಂವ ಮಾಡಿ ॥
ಯ್ಯೋಳ ಮಂಂದಿ ಖಂಪಿಗಳ
ಮಂಂದಕಿನ [1]ಕೇ[1]ಳ್ಯಾರ ಲಗಂಮಾಡಿ ।
[2]ಇದರ[2]ತಲಿ ಹೋತಿ ಯಾವ ಕಡಿ ॥
ಆ ಮಂಂದಕಿ ನೋಡತಾಳ
ಅಡಗಿ ಮನ್ಯಾಗ ಹಂಡಕ್ಯಾಡಿ ।
ತೆಲಿ ಇಲ್ಲ ಕೆಳರಿ ದಯಂಮಾಡಿ ॥ಯೇ೧ರ॥

ಆ ಮಂಂದಕಿ ಹೇಳತಳ ಆಗ ।
ಅದನ ನನ ಮಂಗ। ಕರಸತೆನ ಅವಗ ।
ಕೆಳರಿ ನಿಮಂ ಹುಜರಾ ॥೪॥

ಮಂದಕಿ ಮಂಗ ಬಂದ ಅಡರಸಿ ।
ಯ್ಯೋಳ ಮಂಂದಿ ಖಂಪಿ ।
ಕೇಳ್ಯಾರ ರಮಂಸಿ ।
ವಿನಂತಿಲೆ ಅವಗ ॥
ನೀ ನಡಿ ನಮ್ಮ ಹಿಂಬಾಲ ।
ಇರತೆವ ಭೆನ್ನ ಮ್ಯಾಲ ।
ಭೇದ ಇಲ್ಲ[3]ದ್ಹಾ[3]ಂಗ ॥
ಮಂಂದಕಿ ಮಂಗಾ ಹೊಂಟ ಬೆನ್ನಹತ್ತಿ ।
ಹೊತ್ತ ಮಂಂಣಗೆತಿ ।
ಕೆರಿದೂರತಿ ಅರ್ಯಾಣದ ಒಳಗ ॥
ಅಲ್ಲಿ ಇತ್ತ ಗಂಡ್ಡ ಕಾಂತರ ।
ಸಂಳವ ಇಲ್ಲ ಯಾರಾ ।
ರಾತ್ರಿಯಾ ಒಳಗ ॥
ಆ ಹಂತ್ರಗ ಹೇಳ್ಯಾರ ಪೂರಣಾ ।
ನಿನ್ನ ಪ್ರಮಾಣಾ । ಕೆರಿ ವಳಗ ನೀನಾ ।
ಹೋಗಂದ ಅತಿ ಈಗ ॥

---

1 ಕೆ 2 ಇದ ದರ 3 ಧ್ಹಾ

ಕೆರಿ ವಳಗ ಇರವುದಂ
ದ್ರವ್ಯವ ತರಂದ ನಿನ ದೈವ
ಹೋಗ ಬಲ್ಹಾಂಗ ॥
ಮಂದಕಿ ಮಂಗಾ ಹೊಂಟ ಕೆರಿಯಾಗ ।
ಹಾದಿ ಬಿಟ್ಟಿತವಗ ।
ನಡುನೀರಾಗ । ಹೊಕ್ಕನಾವಾಗ ॥
ಅಲ್ಲಿ ಇತ್ತ ಭಂಗಾರದ ಗುಡಿ ।
ಕಂಣ ತುಂಬ ನೋಡಿ ।
ದ್ರವ್ಯವ ಅದರೊಳಗ ॥
ಪುತ್ರ ತಗೊಂಡ ಮಂತ್ತ ಮಾಣಿಕಾ ।
ಬೆಳ್ಳಿ ಭಂಗಾರ ಬದಕಾ ।
ಬಂದನಾ[1]ಕ್ಷ[1]ಣಕಾ ।
ಕೆರಿ ಬಿಟ್ಟ ಹೊರಗ ॥
ಋಷಿಗಳ ಅಂತಾರ ಯೇನೇನ !
ಆತಿ ಪ್ರಸನ್ನ । ಮಾತಾಹಿದಾರ ಹ್ಯಾಂಗ ॥ಚಾಲ॥

ಆ ಮಂದಕಿ ಮಗ ಮಂಂದ ಮಾತ
ಹೇಳತಾನ ಹ್ಯಾಂಗ ।
ಯ್ಯೋಳ ಮಂದಿ ಋಷಿಗಳ ಬೆನ್ನಮ್ಯಾಗ ॥
[2]ಅ[2]ನಂತ ಕೋಟಿ ದ್ರವ್ಯವ
ಇತ್ತ ಕೆರಿಯಾಗ ।
ತಂದ ಇಟ್ಟಾರ ಪುತ್ರನ ಮನಿಯಾಗ ॥
ಶಿವರಾಯಂನ ಕರಣ
ತಿಳಿಯಂದ ನೋಡ ಹೆಂತವಗ ।
ದೌಲತ್ತ ಆತಿ ಪುತ್ರಾಗ ॥
ಶಿವರಾ[3]ಜ[3] ಮಾರಾಜಾ ಅಂತ ಹೆಸರ ಅಂವಾಗ ।
ಅರಸಂಕಿ ಕೊಲ್ಲಾಪುರದಾಗ ॥
ಕೊಲ್ಲಾಪುರಾ ಶಾರ ಜಾಹಿರ ಆತಿ ನಾಡಾಗ ।
[4]ಕೇ[4]ಳ ಶಿವನ ಸದರ ಇದ್ದ್ಹಾಂಗ ॥ಯೇರ॥

ದೇವಿಂದ್ರ ಸಭಾ ಇಳದ್ಹಾಂಗ ।

---

1 ಕ್ಷಾ 2 ಅ 3 ಜಿ 4 ಕಿ

ದೇವರಾಟ ಹೀಂಗ ।
ದೇಶದ ವಳಗ । ಆತಿ ಜಾಹಿರಾ ॥೫॥

ಭೋಜರಾಜ ಅಂತಾರ ಮಾರಾಜ ।
ಬಹಳ ಸಮಂಜ ।
[1]ಕಂಂತಕೆರ[1]ಸಜಾ। ಸಭೇದ ವಳಗ॥
ನಮ್ಮ ಹಿರಿಯಂರ ಪುಣ್ಯ ಯೇನ ಇತ್ತ।
ಆತಿ ದೌಲತ್ತ । ಆರಸಂಕಿ ಬಂತ ನಮಗ ॥
ಹಿಂಗ ದೌಲತ್ತ ಆಳ್ಯಾರ ಬಲ್ಂದಿನಾ ।
ಪನ್ಹಾಳಿಪಾವನಾ ।
ಗಡಾ [2]ಸಾಮಾನಾ[2] ಕಟಸಿದಾರ ಆಗ ॥
ಮಂಊರು ಲಕ್ಷ ದಂಡ ತಯ್ಯಾರ ಆತಿ
ಭರಪೂರ ಕೊಲ್ಲಾಪುರದಾಗ॥
ಮನಹಾರ ಮಂನಾ ಸಂತೋಷ
ಐವತ ಆರ ದೇಶ ।
ಅವರ ಕೈವಾಸ । ಮಾಡಿಕೊಂಡರಾಗ ॥
ಆ ಭರತ ಶಾಸ್ತ್ರ ಗುಣ
ರಾಮಲಕ್ಷಂಮಣ ಅಂಣತಮ್ಮರಿದ್ದ್ಹಾಂಗ ॥
ಕೈಲಾಸ್ಥ ವ್ಯಾಲೆ ಚಂದರಾ ।
ಒಳೇಕಂಭಿದಾರಾ ।
ಅಲ್ಲಿ ದೇವಿಂದರಾ । ಇಲ್ಲಿ ಇಧ್ಹಾಂಗ ॥
ಇರಬೇಕ ಹಿಂತಾಂವ ಶ್ರೀಮಂಂತ ।
ಅಂತಾರ ಪುಣ್ಯವಂತ । ಅರಸ ಮಾರಾಜಗ ॥
ಈಗ ನಡಂದ ಇಂಗ್ರೇಜಿ ದೌಲತ್ತಾ ।
ಬಹಳ ಬಂದೊಬಸ್ತಾ ।
ಮಾಡ್ಯಾರ ತಾಕಿತಾ । ತಮ್ಮ ರಾಜೆದಾಗ ॥
ಈಗ ದೊಡ್ಡದೊಡ್ಡ ದೌಲತ ಬಿಟ್ಟ।
ಹೋಗಿದರ ಹೊಂಟ । ಗೊತ್ತ ಇಲದ್ಹಾಂಗ ॥ಚಾಲ॥

[3]ನಿಂವ[3] ಆತ್ಮಜ್ಞ್ಯಾನಿಗಳ
ಕುಂತಿರಿ ಬುದ್ಧಿವಂತರಾ ।

---

1 ಕುಂತರಕೆರ 2 ಸಾಮಾನಾಗ 3 ಸಿಂವ

ನಿಮಂಕಿಂತ ನಾಂವು ಸಂಣವರಾ ॥
ಉರ ಬೈಲಹೊಂಗಲ ದೊಡ್ಡ ಶಾರ
ಇರುಂದ ಜಾಹಿರಾ ।
ಪ್ರಸನ್ನ ಬಸವಂಣ ದೇವರಾ ॥
ನಮ್ಮ ವಸ್ತಾದ ಮೋದಿನ ಸಾಹಬ
ಬಲ್ಲ ಶಾಸ್ತ್ರರಾ ।
ದೇವಂಣ್ಣ ಹೇಳಿದ ಉತ್ತರಾ ॥
ಕವಿ ಅಮೋಜಿ ಲಾವಣಿ ಮಾಡಿದಾನ ತಯಾರಾ ।
ನೀಂವು ಸೋಸಿ ತಗಿರಿ ಅಕ್ಷತಾ ॥
ಅವರ ಡಬ್ಬಿನ ವ್ಯಾಗ
ತಂರಾಯಿಂ ಮುಂತ್ತಿ ಸಾರಾ ।
ನೀಸಾನಿ ಹಚ್ಯಾರ ಜರತಾರಾ ॥ಯೇರ॥

ಸಂತಂ ಬಸಣ್ಣ ಇಬ್ಬರುಂ ಜೋಡಿ ।
[1]ಹೇ[1]ಳ್ಯಾರ ನಿಮಂ ತೋಡಿ ।
ವೈರಿ ಹಿಮ್ಮಾಡಿ । ಕೇಳಿ ಓಡವರಾ ॥೬॥

---

1 ಹೆ

೫. ಇಂಗ್ರೇಜಿ ಸಂಸ್ಥಾನದ ಮೇಲಿನ ಪದ

ಇಂಗ್ರೇಜಿ ದಣಿ ಖಾವಂದ ದೊರಿ
ಯಾರು ಇಲ್ಲರಿ ಇವರ ಸರಿ ।
ಮೂಡು ಮುಣಗಾವಲಿಯೇಕ ಛೆತ್ರಪತಿ
ಅಂತ ಹೊಗಳತತಿ ಶ್ರುತಿ ಸಾರಿ ॥ಪಲ್ಲ॥

ಪ್ರಥಮ ಬಂದ್ರು ಹಿಂದು ದೇಶಕ್ಕ ।
ವೃದ್ಧಿ ವೆವಹಾರಾ ಮಾಡುಂದಕ ।
ಯೆಲಿಸ್ಬಿತ ಮಾಹಾರಾಣಿಯುವರು ।
ಅಧಿಕಾರ ಆದ್ರಾ ಗಾದಿಯು ಸ್ಥಲಕ ।
ಲಂಡನವೆಂಬ ಪಟ್ಟಣಕ ।
ಸಿಕೆಹಾಕಿ ಬಿಟ್ಟಾರದಕ ।
ರತ್ನ ಜಡಿದು ದೇವೆಂದ್ರ ಸಭಿಗೆ
ಸರಿ ಆಗಿ ಕಾಣತತಿ ಈ ಜನಕ ।
ಸಿಂಹಾಸನ ಭಂಗಕ ಚೊಕ್ಕ ।
ಮುಂತ್ತ ಬಿಗಿದ ಮನ ಪೂರ್ಣಕ್ಕ
ರಾಣಿಯುವರು ಸದಕೇರಿ ಕುಂತ್ರು
ಸುತ ಜಗಜೆಗಿಸುತ ಬೀಳುದ ಬೆಳಕ ॥ಚ್ಯಾಲ॥

ಹವೆಲ್ಬ್ಬಸ ಸಾಹೇಬ ಖಾವಂದ್ರು ಬಂದರಾಗ
ಹಿಂದು ದೇಶ ಹೊಕ್ಕರು ನಾಡಾಗ ।
ಪಾಭನ ಹುಕುಮು ಇದ್ದಿತು ಆವಾಗ ।
ಬಂದ ನಡಿಸ್ಯಾರ ವ್ಯಾಪಾರ ವುದ್ಯೊಗ।
ಆ ಪಾಭನ ಮಂಗಳಿಗೆ ವ್ಯೆಯಾಗ ।
ಸ್ವಸ್ತ ಇದ್ದಿಲ್ಲ ಆಕಿಯು ಜೀವದಾಗ ॥ಯೇರ॥

ಬಂದು ಇವರು ಈ ದೇಶದೊಳಗ ಆಕಿ ।
ಗೊಂದು ಔಷಧವ ಕೊಟ್ಟಕ್ಷಸ್ತಕೆ ।
ಚಂದವಾಗಿ ಲೇಸ ಬಂದಿತಿವರಿಗೆ ।
ಮುಂದ ಪಾಭಮನದೊಳಗ ವಿಚ್ಯಾರಕ ।
ತಂದು ಧ್ಯಾನಕ ತಾ ತಿಳದ ಸರ್ದರಗ ।
ಅಂದ ಯೇನ ಬೇಡತಿ ಬೇಡು ನೀ ।

ಮುಂಂದ ಸರ್ದಾರಾ ಆಗ ಪಾಛೆಗ ।
ಅಂದ ನಿಂಮ ನಾಡೊಳಗ ನಂಮಂ ಜನ ।
ಬಂದ್ರ ನಂಮ ಹೆಸರ್ರ್ಯಾರಂ ತಗಿಯಂದ್ಹಾಂಗೊಂದಂ
ಮಾಡಿಕೊಡ್ರಿ ನಂಮಂ ಕಯ್ಯಾಲಿ ।
ಚಂದದಿಂದ ಪಾಛ ತಿಳದ ನೋಡಿದ ಮಂನಕ ।
ತಂದಂ ತಿಳದ ಆವಾಗ ಕೈಯೆಂತ್ರಿ ॥ಯೇಂರ॥

ಸಿಕೆ ಹೊಡದ ಕೊಟ್ಟನಂ ಪಾಛಾ ಆ ಕ್ಷಣಕ ।
ಅಲ್ಲಿಂದಾತಿ ಅಂಜದ್ಹಾಂಗ್ಯಾತ್ಯಾತಕ ।
ತಂಮಂ ಕೈಲಿ ತೊಗೊಂಡ್ರ ಯಂಲ್ಲಾ ಮಾಡಿರಿಕ್ಕ ।
ಮೋಕಳೀಕ । ಆತಿ ಟೀಕ ।
ಯಂಂಕ್ತಿ ಮಾಡೆರ್ರ್ಯಾತ್ಯಾತರದಂ ಇಲ್ಲೊ ಟಕ್ಕ ॥ಇಳವ॥

ಅಲ್ಲಿಂದ ಕೂಡಶಕ ಧಂಡ ।
ಯಂಂಕ್ತಿ ಮಾಡಿಕೊಂಡ ।
ಯಂಲ್ಲ ಯಂಳಕೊಂಡ್ರ ತಂಮಂ ಕಯ್ಯಾಗ ।
ತಿಳಿಬಲ್ಲ್ರ ಕಲ್ಪನದ ವಳಗ ।
ವಳಗಿಂದೊಳಗ ಮಾಡೆರ ತಯ್ಯಾರ ।
ಯಂದ್ರ ಪಂದ ಬಾರಾ । ಮಾಡಿ ಹಂಂನರ ।
ಹೊಂಟರ ಆವಾಗ ಯೇಂಕದ್ರುಮಂಕ
ಪಾಛೆನಮ್ಮ್ಂಗ ॥ಯೇಂರ॥

ರಾಜಿಲಿಂದ ದೇಶ ಕೊಟ್ಟನರಿ ।
ಇವರ ಯಂಂಕ್ತಿಗ್ಯಾರಿಲ್ಲ ಸರಿ ।
ಮಂೂಡಂ ಮುಂಣಗುವಲಿ
ಯೇಂಕ ಛತ್ರಪತಿ ಅಂತ
ಹೊಗಳತತಿ ಸಂತಿಸಾರಿ ॥೧॥

ಹೀಂಗ ದೇಶದಾಸಾದುಂಗಿರೊ ।
ಮಾಡಿಕೊಂತ ನಡದರ ಹಂಚಿಕಿ ।
ದೇಶ ಸಾದುಂಣೆರೆ ಮಾಡಿ ತೊಗೊಂತರ
ತಂಮಂ ಬಂದ್ಥಿ ಕಲ್ಪನ ಹಾಕಿ ।
ಮುಚಲಿ ಬಂಗಾಲ ದೇಶ ತಗದ್ರ ಹಾಡಿಕಿ ।

ನಿಜಾಮಂದಿಲ್ಲಿಯೆಂಶಗ್ದುಚ್ಚಿದಕ್ಕಿ
ಸಾಷ್ಠಿಗಡ್ಡಿ ಕನಡ ಕರ್ನಾಟ
ಬಂಂದೆಲ ಖಂಡ ದೇಶ
ತೊಗೊಂಡ್ರು ಪೇಶ್ವನ ದಂಡಕಿ ।
ಕಟಕ ದಿಲ್ಲಿ ಕಾನದೇಶ ಸಂಖಿ ।
ತೊಗೊಂಡ್ರು ಹೋಳಕರನ ಕಡದ ಹಾಕಿ ।
ಅಜಮಿರ ಮಾರಾಷ್ಟ ಪುಣೆ
ಅಸ್ಮ ಅರಕಾನನ ಬ್ರಂಮ್ಹ ದೇಶ
ಗೆದ್ರು ಟಾಣೆಹಾಕಿ ॥ಚ್ಯಾಲ॥

ಸಿಂಧಂ ದೇಶ ಗೆದ್ದರೊ ಅಲ್ಲಿಂದ ।
ಅಮಿರನು ಅರಸನ ಕಡಶಿಂದ ।
ಪಂಜೆ ದೇಶಕ ಟಾಣೆವ ಹಾಕಿದಾ ।
ಸಿಕ್ಕರೆಂಬಂ ಅರಶಿನ ಕಿತ್ತ ವಗದಾ ।
ಪೈಗಂ ದೇಶಕ ಹೋದರು ಮಾಡಿ ಜಲ್ದ ।
ನಾಗಪೂರ ತೊಗೊಂಡ್ರು ನಿಜಾಮಂದ ॥ಯೇರ॥

ಮಂತಂ ಅಯೊದ್ಯಾನಗರಕ ಬಂದರು ।
ವತ್ರ ಮಾಡಿ ಧಮಂಕಾಸ್ತ ಪೂರಿಗೆ ।
ನಿತ್ರ ಟಾಣೆ ಹಾಕಿ ಡೇರೆ ಹೊಡದ ಬಲಂ ।
ಶತ್ರು ಕೈದಂ ಸಂಹರಿಸಿ ಅಯೊದ್ಧೆನ ।
ನೆತ್ರ ಧರಣಿಗೆ ಕೆಡವಿಬಿಟ್ಟರ ಜಗ ।
ಕರ್ತರಂತ ಅನಸಂವರಂ ಭಂವನಕ ।
ನಿತ್ತೆ ಪುಂಣೆದ ಸದಾಚ್ಯಾರವನು ।
ಅರ್ತಿಲಿಂದ ನಡಸಂವರು ಕರಂಣವಿಟ್ಟ ।
ಪಾರ್ಥಗಾಗಿಲ್ಲ ಇವರ್ಧಂತ ಸಮಂರ್ಥ !
ನಿರ್ತದಲ್ಲಿ ಮಹ ನಿಷ್ಟವುಳ್ಳವರಂ।
ಅರ್ತ ಸಂವರಿಸಿ ಬಿಚ್ಚಿಕೇರ ॥ಯೇರ॥

ಹೀಂಗ ಹೇಳಿಕೊಂತ ಹೋದರ ತೀರಕಿಲ್ಲಾ।
ಬಲ ವೀರರ ಮಾಡಿದ ಬಲ್ಮಿನೆಲ್ಲಾ।
ಸಾಕ್ಷಾತ ದೇವರಿವರಂ ಮಂತ್ಯಾರಲ್ಲಾ॥
ಧರಿಮೇಲಾ। ಬಂದರಲ್ಲಾ।
ಯೇಕ ಛತ್ರಪತಿ ಅನಸಿಕೊಂಡ್ರು ಮೇಲ ॥ಇಳವ॥

ಪುಂಣೆ ಕಂವಂ ಅರಸರ ಸಂಚಿತಾ।
ಕಳಕೊಂಡ್ರ ದವಲತ।
ಆದ್ರ ಅನರ್ತ ಮಂಂಟ್ಟಲಿಲ್ಲ ದಡಕ।
ಹರಿಬೀಳಲಿಲ್ಲ ಲೌಕಿಕಕ ।
ಮಾಹಾರಾಣಿ ಖಾವಂದರ ಸರಿ।
ಯಂರೆರ ಇಲ್ಲರಿ।
ಪುಂಣೆದ ಜೆರಿ ಇವರ ಹಂತೇಕ।
ಹಾಂಗಂತ ಆಳತರ ಲೋಕ ॥ಯೇರ॥

ಭೂಮಿಂಗೆ ಅಧಿಪತಿ ಆದ್ರ ಧೊರಿ ।
ಬಂದ್ರ ಭಂವನದೊಳು ರತವೇರಿ ॥೨॥

ಪುಂಣೆವಾನ ಇಂಗ್ರೆಜಿ ಸರಕಾರಾ।
ಹೀಂಗ ನಡಸತರ ಕಾರ್ಬಾರಾ।
ದಿಲ್ಲಿ ಕಾಸಿ ಪರ್ವತ ಮಂಂಮಂಯಂದಾಗ
ದಂಡ ಇಟ್ಟುದರ ತರತರ ।
ಹತ್ತ್ರಲಕ್ಷ ದಂಡ ಬರಪೂರಾ।
ಮಂಂದಿ ಇದ್ದಿತೊದಲ್ಲ ಬಾರಾ।
ತಂರಪ ಘನತುಂರಪ ಕಾಲ
ಫೌಜ ಕರಿ ಮಂಂದಿ ಬ್ಯಾರಿ
ಕೆಂಪ ಸೋಜರ।
ದಂಡಿನೊಳಗ ವೊಬ್ಬ ಸರದಾರಾ।
ಯಂಡಬಲ ಕುದರಿಯಂ ರಾಹುತರ।
ತೋಪು ತಂಬಾಕಿ ಕರಂಲಿ ಪಿಸ್ತೂಲ
ಮಂಸ್ತ ಮಂಂದಿ ಹಿಡುಂ ಹತಿಯಂರ ॥ಚ್ಯಾಲ॥

ಹುಂಕಮು ಸರಕಾರಕಾ ಇದೆ ಬಂದುಂ ಬಸ್ತಾ।
ಯಂರ್ಡರ್ಗ ಹೊತ್ತು ನಡಸುಂರುಂ ಕಾವಾತಾ ।
ಗುಂಂಡುಂ ಮಂದ್ದು ಹಿಂಬಲ ಸಾಹಿತ ।
ರಣ ಪೈರಾಗಿ ಯೇಳುಂದುಂ ತಂಬುಂ ನುಡತಾ ।
ತಡಪಡ ಅವಾಜ ಗುಂಂಡಿಂದ ಇಲ್ಲ ಗಣತಾ ।
ಬರರರ ಮಂಳಿಯಂ ಬಡದ್ಹಾಂಗ ವಿಪರೀತ ॥ಯೇರ॥

ಇಷ್ಟು ಸಾಹಿತ ಮಾಡಿ ತಯಾರಾಗಿ ।
ಹೊಂಟರ ಗಡಗೊಳ ಜೈಸಿಕೊಳ್ಳಲಾಕ ।
ಬಂಟ ಹೌದ ಇಂಗ್ರೇಜಿ ಧೊರಿಯಂ ಕೊಪ ।
ತೊಟ್ಟ ಸವರಿಸಿ ಬಿಟ್ಟ ಸಾಮನಗಡ ।
ಶ್ರಿಷ್ಟಿಲಿ ಹಲಗಲಿ ನರಗುಂದ ಪರ್ಸಗಡ ।
ಅಷ್ಟು ತೊಗೊಂಡರ ವಂದ ಬಿಡದಲೆ ।
ದ್ರುಷ್ಟಿಗಡಾ ರಂದ್ರ ಭದ್ರ ಮಂನೋಹರ ।
ಇಷ್ಟು ತೊಗೊಂಡರ ನಂದಗಡ ಚಂದಗಡ ।
ನಿಷ್ಟಾವಂತರ್ಯಾರಿಲ್ಲ ಇವರ ಸರಿ ।
ಅಷ್ಟು ರಾಜರ ವಳಗ ಇವರ ಮಾಹ ।
ಶ್ರೇಷ್ಟರೆನಿಸಿಕೊಂಡರು ಧರ್ಮದಿಂದ ।
ಯೆಷ್ಟು ಬಲಾವುಳ್ಳ ದಂಡ ಇವರ ವಾಕ್ಕೆ ||ಯೇರ||

ಮುಂಟ್ಟಿ ನಡಂದು ಇವರ್ಧೆಳಿದಂತೆ ।
ಬೆಂಕಿ ಹಾಯೆಂದ್ರು ಅಗ್ನಿಯೊಳ್ಬೀಳಂರಂತೆ ॥
ಬಾಳ ಬರಸ ಯಾರ್ಯಾರಿಗೆ ಲ ಣಿಯಂದಂತೆ ॥
ಹಿಕಮಂತ್ತೆ । ನಡಸಂರಂತೆ ।
ಸಾರಿ ಪೇಳಂವೆ ಸಭಿಯೊಳಂ ನಿಂತಂ ಮಾತ್ತೆ ||ಇಳವ||

ಜಿದ್ದ ತೊಟ್ಟ ವೈರಿಗಳ ಯಂಲ್ಲಾ ।
ವಬ್ಬರ ವುಳಿಲಿಲ್ಲಾ ।
ಪುಂಣೆದ ಬಲ । ಕಂಮಂ ಅವರಲ್ಲೆ ।
ಹಾಂಗಂತ ಇರಲಿಲ್ಲ ಲೋಕದಲೆ ।
ಇವರೇಕ ಛೆತ್ರಪತಿಯಾಗಿ ।
ನಿಂತರ ಧರಣಿಗಿ ।
ಅಳವ ಯೆಂದೆಂದಿಗಿ । ಇಲ್ಲ ಯೆಂಲ್ಲೆಲ್ಲಿ ।
ಇವರೊಚನ ಆಗಲಿ ಕಿಲಕಾಲಿ ||ಯೇರ||

ಸತ್ತೆಕರನ ಬೇಕ ಇವರ ಸರಿ ।
ಇವರ ಹೊರ್ತ ಮಂತ್ತ್ಯಾರಿಲ್ಲರಿ ||೩||

ಧರ್ಮ ಸಂಚೆರದ ಧನಿ ಇವರಂ ।
ಲೋಕ ಜನದ ಮೇಲೆ ಬಲ ಪೇರಂ ।

ಗಲ್ಲ ಟಾಪು ಚಳಂವಗ ಯಂಕ್ಟಿಯಂ ಹೇಳಿ
ವುಳವಿಕೋ ಯೆಂಬುವರಂ ।
ಲೋಕದ ತುಂಬ ಸಾಲಿ ಹಾಕಿದರಂ ।
ವಿದ್ದೆ ದಾನಕ ನಿಂತಾರಂ ।
ಸಣದುಂ ದೊಡ್ಡದಂ ಗಂಡ ಹೆಂಣಿಗೆ
ಜ್ಞಾನಬೊಧ ಬಲ ಮಾಡಿದರಂ ।
ಇವರ ಬಂದುಂ ತರ್ವ್ಹ ಕಡದಾರಂ ।
ಮನಿ ಪಾಳೆ ಕೊಡತಿದ್ದ ಬಿಡಸಿದರಂ ।
ಬಹಳ ಆನಂದದಿಂದ ಇಟ್ರ
ತಂಮ ನಾಡನೆನಸಿಕೊಂತರ ಲೋಕದ ಜನರಂ ॥ಚ್ಯಾಲ॥

ಲೈನ ದಾರಿ ಮಾಡ್ಯಾರೊ ಸುತ್ತ್ಮ ಕಡಸಿ ।
ಗಿಡಗಳ ಹಚ್ಯಾರ ಯಂಡಬಲ ತರತರಶಿ ।
ನೆರಳ ನೋಡಿ ಜನಕ ಬಂತ ಕೂಸಿ ।
ನಿತ್ತೆ ವುಣತರ ಇವರಂನ ನೆನನೆನಸಿ ।
ವೂರಂರಿಗೆಲ್ಲಾ ಕೆರಿ ಭಾಂವಿಗಳ ಕಡಸಿ ।
ಅಲ್ಲೆ ಮಂಟ ಮಾನೆ ಗಂಡಿಯೇಂಗಳ ಕಟಸಿ ।
ವ್ಮೈಲಿ ತಗಸಾಕ್ಚಚ್ಚೆರ ತಿಳದ ಸೋಸಿ ।
ಸಂಣ ಸಂಣ ಹಂಡಗರಿಗೆ ಮಾಡದೆ ಸ್ವಲ್ಪ ಘಾಸಿ ॥ಯೇರ॥

ಪುಂಣೆ ಬಾಳ ಜೋರತ್ತ ಇವರದಂ ।
ಅಂನೆ ಅಂಬುದಂ ಸ್ವಲ್ಪ ಮಾಡಂದಿಲ್ಲ ।
ಸಣದುಂ ದೊಡದಂ ಸಂವನಾಗಿ ನೋಡತರ ।
ಧನಿಕರ ಅಂತನ ಬೇಕ ಇವರಿಗೆ ।
ಮಂಂನ್ನ ಮಂತ್ತ ಯಾರ್ಯಾರು ಆಳಕಿಲ್ಲವರ ।
ಸಂನಿಧಾನದೋಳಿರವು ಜನರಂ ।
ಕುಲಕರ್ಣಿ ಗೌಡ ಕಾರ್ಕುನರು ವಕೀಲರು ।
ಪುಂಣೆ ವುಂಣತೇಮಂತರಿವರದಂ ।
ಇಂನಂ ಸಾರುಂವದಂ ಅಳತಿ ಇಲ್ಲ ಬಲಂ ।
ಹೊನ್ನ ದ್ರುವ್ಯ ಹಾಕಿದರಂ ಲೋಕದಲಿ ।
ಧಂನೆವಂತ್ರ ಅನಬೇಕ ಇವರಿಗೆ ॥ಯೇರ॥

ಈಂನ್ಯಾತ್ಯಾತ್ರ ವಳಗಾದ್ರು ತಗುಹಾಂಗಿಲಾ ।
ಹೀಂಗ ಲೋಕವು ಯಾರ್ಯಾರಂ ಆಳಿದ್ದಿಲ್ಲಾ ।

ಸರ್ವ ಮಾತಿಗಾದ್ರು ಯೇನು ಕಡಿಮಿ ಇಲ್ಲ ।
ಜನರೆಲ್ಲಾ । ಅಂತರಲ್ಲಾ ।
ಸುಖಿಯಾಗಿ ಅದೆವು ಇವರ ಬಲದ ಮೇಲಾ ॥ಇಳವ॥

ಈ ದರ್ಬಾರಿರಲಿ ಬಹುದಿನಾ ।
ಇದರ ಹೊರತೆನ । ಬ್ಯಾಡೊ ಭಗವಾನಾ ।
ನಡಸಿ ಕೊಡಸೀನ ।
ಲಾಲಿಸೊ ಗುರುವೆ ವಚನವನ ।
ಪುಣ್ಣೆ ಬಾಳ ಇವರ ಹಂತೆಕ ।
ಆಳಲಿ ಲೋಕ । ಇರಲಿ ಕಡಿತನಕಾ ।
ಹಾಕಿ ಸಲವನ್ನ । ರಕ್ಷಣೆ ಮಾಡುವಂವ ನೀನಾ ॥ ಯೇರ ॥

ಸೂರ್ಯ ಚಂದ್ರ ಇರಂತನಕನರಿ ।
ಇವರ ಮ್ಯಾಗ ಬರಬರದ್ಯೊರಿ ॥೪॥

ಇಂಗ್ರೇಜಿ ಶಾಣೆ ತಾನೆ ಬಲಾ ।
ಇವರ ಯುಕ್ತಿಗೆನ ಕಡಿಮಿಲ್ಲಾ ।
ಬಹಳ ಪ್ರಕಟವಾಗಿ ತಂವು
ಶಹಣೆತನ ತೋರ್ಸಿಬಿಟ್ಟರೊ ಜನಕೆಲ್ಲಾ ।
ತರತರದರಿಬಿ ಸಕಲತಿ ಸೇಲಾ ।
ಅಚ್ಚಿನರಿಬಿ ಮೇಲೆ ತೊಡು ಜ್ಯಾಲಾ ।
ದಿವ್ಯಜ್ಞಾನದ ದೀಪದ ಕಡ್ಡಿ
ಮಾಡಿಬಿಟ್ಟರ ಹೆಚ್ಚಿನ ಅಕಲಾ
ಅಗಿನಗಾಡಿಗೆ ಮೊಹಲಿಲ್ಲಾ ।
ಯೆತ್ತು ಕುದರಿ ಅದಕ ಬೇಕಿಲ್ಲಾ ।
ಕ್ಷಣದೊಳು ಹನೆರ್ಡ ಗಾವದ್ಹೊಗತತಿ
ಗಾಳಿಕಿಂತ ಹೆಚ್ಚಾತೆಲ್ಲಾ ॥ಜ್ಯಾಲ॥

ಜೋಡ ತಂತಿ ನಡಶಾರು ಬಹುದೂರ ।
ಕ್ಷಣದೊಳು ಹೋಗಿ ಬರವುದು ವುತ್ತರ ।
ಕಡಿಮಿ ಇಲ್ಲೊ ಇವರ ಹುನಾರಾ ।
ಹಿಂದಕು ಮುಂದಕು ಮಾಡಿದ್ದಿಲ್ಲೊ ಯಾರಾ ।
ನೂಲ ಹುಟ್ಟಿಶರು ವೊಂದೊಂದು ತರತರ ।
ಹಸರುಕೆಂಪ್ಹಳದಿಬಿಳದು ಹುಟಸವರ ॥ಯೇರ॥

ವಂತ್ತ ಮಾಡಿದರ ಕಬ್ಬಿಣ ಸಾಹಿತ ।
ಗೊತ್ತ ಇಲ್ಲದ ಹುಂನಾರ ತರತರ ।
ಹತ್ತುವ ಚೆಕಡಿ ಬಂಡಿಯು ಗಾಲಿಗೆ ।
ಸಂತ್ತು ಕಬ್ಬಿಣದ ಪಟ್ಟಿ ಇಂಗ್ರಜಿವು ।
ವುತ್ತು ಸಳ್ಳಜಿನ ಗಂಟ್ಟು ಪರಿಪರಿ ।
ಗೊತ್ತ ಇಲ್ಲದ ಕೀಲಿ ಹುಟಸುಂವರ ।
ಸಿತ್ತೆ ರುಪಾಇ ರೊಕ್ಕಾ ಭಂಗಾರ ಹುಂಟ್ಟಸದು ।
ಹತ್ತು ಲಕ್ಷ ವಂದ ಕ್ಷಣದೊಳಗಾಗುಂದು ।
ಬಿತ್ತಿ ಬಿಟ್ಟರೊ ತಂಮು ದೇಶದ ವೇಲೆ ।
ಹೊತ್ತ ನೋಡುವ ತಾಸು ಗಡ್ಯಾಲ ಗಣತ ।
ಗೊತ್ತ ಮಾಡಿ ಹರವಿದರುಂ ಲೋಕದ ವೇಲೆ ।
ಚಿತ್ತ ಇಟ್ಟ ನೀವ ಕೇಳರೀಗ ॥ಯೇರ॥

ವಂತ್ತು ಹೆಳತೆವು ಯೇನೆನ ವುಳಿಯುದ್ಹಾಂಗ ।
ಮಾಡಿ ಇಟ್ಟರೊ ಹೇಳಿದರ ತೀರದ್ಹಾಂಗ ।
ಬಾಳ ಶ್ರೆಷ್ಟವಂತರು ಅಪ್ಟು ರಾಜರೊಳಗ ।
ಯಾಂವ್ಯಾಂವಗ । ತಿಳಿಯುದ್ಹಾಂಗ ।
ಮಾಡಿ ಇಟ್ಟರು ಯೆಂದೆಂದಿಗೆ ಬಾರದ್ಹಾಂಗ ॥ಇಳವ॥

ಬ್ಯಾರೆಬ್ಯಾರೆ ಇವರ ಹುಂನರ ।
ಮಾಡೆರ ತರತರ । ದಾಂವತಿಲ್ಲ ಜರ ।
ಇವರ ಕೆಲಸಕ್ಕ । ಬುದ್ಧಿಂತ ಹಿರುತರ ರೊಕ್ಕಾ ।
ತಿಳಿಗೊಡುಂದಿಲ ಈ ಜನರಿಗೆ ।
ಹೀಂಗ ಯಾರಿಗೆ । ಬಾರ್ದ ಯೆಂದಿಗೆ ।
ಹಿಂತ ಕವತೂಕಾ । ಹೆಚ್ಚಿಂದ ಆತಿ ಇವರ ಬೆಳಕ ॥ಯೇರ॥

ಆಕಲತ ಗುಂರುಂ ಹೊಂಟ್ಹಾಂಗ ಜರಿ ।
ಖರೆ ಮಾತ ಇದ ಸುಳ್ಳಲ್ಲರಿ ॥೫॥

ನರಮುಂನುಂಷರ ಇವರಿಗನಬಾರದುಂ ।
ಸಾಕ್ಷಾತ ದೇವಲೋಕದ ವರ್ಧವದುಂ ।
ಹಾಂಗ ಅಂತ ಅಗಾದ ಹುನುರಾ
ಮಾಡತಾರ ಯಾರಿಗೆ ಬಾರದುಂ ।

ರಾಟ ಮಾಡೆರ ಹತ್ತಿ ಅರವುವದುಃ ।
ನೋಡರಿ ನೀಗಿ ತಯಾರಿಂದುಃ ।
ರಥಾ ಯೇರಿ ಕಂದರಿಲ್ಲದ ನಡಸತಾರ
ಯಾರ ಮಾಡಿದ್ರು ಹಿಂದ ಹಿಂತಾದ್ದುಃ
ಮಂತ್ತು ಭೂಮಿಃ ಸಾಗ ಆಗುವದುಃ ।
ನೇಗಲ ಮಾಡೆರ ಹೆಚ್ಚಿಂದುಃ ।
ಯೆಂತ್ತ ಇಲ್ಲದ ಯಂಳಕೊಂಡ ಹೋಗಿ ನೆಲ ।
ಕಿತ್ತ ಬೀಳತತಿ ಗೊತ್ತಿಲ್ಲದುಃ ॥ಚ್ಯಾಲ॥

ತೊಲಿಕೊರವುದುಃ ಮಾಡೆರುಃ ತಯಾರ
ವಂದ ನಿಮುಂಷಕ ಆಗುಂವ ಐಸೂರ ।
ಹಿಂತಾ ಜಿನ್ನ ಮಾಡಿದ್ದಿಲ್ಲೊ ಯಾರಾ ।
ಹಿಂದಿನವರಿಗೆ ಅನಬಾರ್ದು ಸತ್ತೆಕರ ।
ದೊಷಾರದಲ್ಲೆ ಅರ್ಜುನ ರಣಸೂರಾ ।
ಅಂತ ಹೆಳತಾವು ಪುರಾಣ ಶಾಸ್ತ್ರ ॥ಯೇರ॥

ಮುಂದ ಸಮೂದ್ರುಕ ಸೇತುಃ ಕಟ್ಟಿದ ಬಾಣ ।
ದಿಂದ ಅವನ ಸಾಮರ್ತ ಹೆಚ್ಚಲಿಲ್ಲ ।
ಹಿಂದುಃ ರಾಮುಃ ಕಟ್ಟಿದನುಃ ಗುಂಡ್ಡಕ ಗುಂಡ್ಡ
ಹೊಂದಿಸಿ ಸೇತುಃ ಕಟ್ಟಿ ಅಚಿಕ ದಾಟಿದನುಃ ।
ಚಂದದಿಂದ ನೀವ ನೋಡರಿವರುಃ ಹೆ ।
ಚ್ಚಿಂದುಃ ಆಗ ಬೊಟಾ ಮಾಡಿ ಸಮುಂದ್ರುದಲಿ
ಇಂದುಃ ಪರಿಯುಂತ್ರ ನಡಸುಂವರುಃ ನೀರಮೇಲೆ ।
ಹಿಂದಿನವರಕಿಂತ ಹೆಚ್ಚ ಇವರ ಬಲ ।
ಯೆಂದೆಂದಿಗೆ, ಇವರ ಸರಿಯುಃ ಅವರ ಅಲ್ಲ
ಮುಂದ ಮಂತ್ತ ಇಂನ್ಯಾರುಃ ಹುಟ್ಟಾಕಿಲ್ಲಿವರುಃ ।
ಬಂದ್ರು ಅಚಿಕ ರಾಮುಂದ ಶೈನ ಆಗಿ ।
ಚಂದದಿಂದ ಇವರಿದ್ರು ಪೂರ್ವದಲಿ ।
ಮುಂದ ರಾಮಾವತಾರ ಸಮಾಪ್ತವಾಗ್ವಗಿವ ॥ಯೇರ॥

ರಂದ್ರು ನಮುಂಗ ಯೇನ ಕೊಡತಿರಂತ ।
ವರವ ಬೇಡೆರುಃ ರಾಮುನ ಇದರ ನಿಂತ ।
ಯುಂನ ಸಂತರೆಂದುಃ ತಿಳಿದಳಾವಾಗ ಸೀತಾ ॥

ಕರುಣ ಪೂರ್ತಾ । ಇಟ್ಟ ಚಿತ್ತಾ ।
ಬಾಳ ಆನಂದದಿಂದ ಯೆಂತ್ರಿ ಇಟ್ಟರ್ರ್ಸತ್ತಾ ॥ಇಳವ॥

ವಾಕ್ಕೆ ಕೊಟ್ಟ ರಾವಂ ಭೂಪತಿ ।
ಯೇಕ ಛತ್ರಪತಿ । ಆಗರೆಂತ ಪೂರ್ತಿ ।
ಹೊಂಟಿತೊ ವಚನಾ ।
ರಾಮುವಾಖ್ಯ ಸಂಳ್ಯಾಗಂವದೇನ ।
ಹಾಂಗಂತ ಆಳತರ ಲೋಕ ।
ಸ್ವಲ್ಪ ಯಾತೆತಕ । ಹಚಿಕೊಳದಸೇಕ ।
ಆಳತರ ಭುವನ ।
ಯೆಂಪ್ಪ ಹೇಳಿದ್ರ ತೀರದಿವರ ವರ್ಣ ॥ಯೇರ॥

ಯೆಂದೆಂದಿಗೆ ಇವರಿಗೆ ಆಳವಿಲ್ಲರಿ ।
ಬಾಳ ಇವರ ಪುಂಣೆದ ಜೋರಿ ॥೬॥

ಇಂಥದರ ಬರ ಇರಲೇಕಪತಿ ।
ಲೋಕ ಜನರ ಹಿಂಗ ಅಂತತಿ ।
ಈಗ ವಿಕ್ತೊರಿಯೆಂಬಂ
ಮಾಹರಾಣಿಯಂವರ ಗಾದಿ ಹೆಚ್ಚಿಂದತಿ ।
ಅವರಿಗೆ ಇರಲಿ ಬಹುಶಾಂತಿ ।
ನಡಸಿಕೊಡೊ ಗುರುನಾಥ ಪತಿ ।
ಹರುಷದಿಂದ ಆವರಿದ್ರ
ಲೋಕಕ ಬಾಳ ಶಾಂತವಾಗಿರತತಿ ।
ಗಂರುವೆ ಕೊಡೊ ಇವರಿಗೆ ಶಾಂತಿ ।
ದಯಾ ಇರಲಿ ನಿಂದ ಬಾಳೆ ಪ್ರೀತಿ ।
ಇವರ ವೇಲೆ ಬಂದ ವೈರಿಗಳ
ಹಂವಂ ಮುಂರುಹಾಂಗ ಕೊಡ ಸಾಮರ್ಥಿ ॥ಚ್ಯಾಲ॥

ನಿಂನ ಕರುಣವಿರಲೊ ಗಂರುರಾಯಾ ।
ಬೇಡಿದ ನಡಶಿಕೊಡೊ ಮಾಹಾರಾಯಾ ।
ರಾಣಿಯಂವರ ಮೇಗಿರಲೊ ನಿಂನ ದಯಾ ।
ಹೀಂಗ ನಡಸೊ ಇದರಂತ ಇಟ್ಟ ಮಾಯಾ ।
ಗುರುನಾಥಾ ಜೊಡಸುವೆನು ಕಯ್ಯಾ ।
ಯಂನ ವಚನವು ಲಾಲಿಸಿ ಮಾಡೊ ಸೋಯಾ ॥ಯೇರ॥

ಕಂತಂಹರನೆ ಹೀಂಗ ನಡಿಲಿ ಇವರ ಶಕ ।
ನಿತ್ತೆ ಕಾಲದಲಿ ನೆನಸಂ ಹಾಂಗ ಜನ ।
ಆರ್ತಿಲಿಂದ ದಿಗ್ಗದೇಶನಾಳಲಿ ।
ಮತ್ತು ಯಾರ ಇಂನಿವರ ಮೇಲೆ ।
ವೈರೆಂತು ಬಾರದ್ಹಾಂಗ ಕರುಣವಿರಲಿ ನಿಂದ
ಚಿಂತಿಯಂಲ್ಲ ಮಂನದಂದ ಬಿಟ್ಟ ಬಹು ।
ಶಾಂತದಿಂದ ಈ ಲೋಕನಾಳಲಿ ಆ ।
ನಂತ ಕೋಟಿ ಕೋಟ್ಯಾಂತ್ರ ವರಷ ದಿನ ।
ಅಂತಂ ಪಾರವಿಲ್ಲದಲೆ ಗುರಂವೆ
ನೀನಿಂತಂ ಯಾ ಹೊತ್ತು
ನೀ ಇವರ ಬೆಂನಮೇಲೆ ।
ಹೆಂತೆಂತಾದ ಬಂದದ್ದ ಮಾರಿಯಂಲ್ಲ ।
ಗೊಂತಂ ಇಲ್ಲದ ಕೇಡಾಗಿ ಹೋಗಲಿ ।
ಇವರ ನಿಂತ್ರ ರಣಾಗ್ರಕ ಬಲ್ಮಿ ಕೊಡೊ ।
ಹೀಂಗಂತ ಬೇಡಿಕೊಂಬುವೆನಂ ನಿನಗ ನಾ ।
ಯೆಂತಂ ಪೇಳಲಿ ಗಂರುಂವೆ ಇವರ್ಗೆ ॥ಯೇರ॥

ನೀನಿಂತಂ ಆಸರವಾಗಿ ಬೆಂನಮೇಲೆ ।
ಕೊಡೊ ಜೈಸಂ ಹಾಂಗ ಯೆಂಲ್ಲಿ ಬೇಕಾದಲ್ಲಿ ।
ಯಲ್ಲಾ ಸ್ವಾದಿನ ಇರಲಿ ಈವರ ಕೈಲಿ ।
ಆಗಲಿ । ಜಗದ ಕೀಲಿ ।
ಸರ್ವಲೋಕ ಇರಲಿ ಇವರ ಆಜ್ಞದಲಿ ॥ಇಳವ॥

ವಿಕ್ಟೋರಿಯಂ ಯಂಬ ರಾಣಿ ವಚನ ।
ನಡಶಿಕೊಡ ನೀನ । ಸರ್ವ ಲೋಕವನ ।
ರಕ್ಷಣೆ ಮಾಡಂವರಂ ।
ಲೋಕ ಜನರ ಮೇಲೆ ಬಲಪೇರಂ ।
ವೂರ ಬೈಲಹೊಂಗಲ ಟೀಕಣ ।
ಅಪ್ಪ ದ್ಯಾಮಂಣ । ಕವಿತದಲಿ ಪೂರ್ಣ ।
ಸೂರಿ ಮಾಡುಂವರಂ ।
ಬಾಳ ಸ್ವಭ ಜ್ಞಾನ ತಿಳದವರಂ ॥ಯೇರ॥
ಪರ್ಸ ರಾಮಂನರಶಿಂಗ ಹೆಳತಾರರಿ ।
ಧನಿ ಇಂಗ್ರಜಿ ಕರ್ತಂಕ ಸಾರಿ ॥೭॥

೬. ಸೋಮಾನಗಡದ ಪದ

ಸೋಮಾನಗಡದ ಪದಾ ಬರಿಯುಂವುದಕ್ಕೆ ಪ್ರಾರಂಬ ॥

ಪ್ರತವಂ ಜಗಳದಾಕಾರಾ । ಕೇಳ ಚಾತೂರಾ ।
ಆಗಿ ಗಡಕರ್‍ಯಾರಾ । ಮಾಡ್ಯಾರ ಹೆಸರಾ ।
ಹೋಗುಂತನಕಾ ಪ್ರಾಣಾ ।
ಗಂಡವೆಂಟ್ಟ ಜಾಗೆ ಬಾದೂರ ಗಡಾ ಸೋಮಾನಾ ॥ಪಲ್ಲ॥

ಸೋಮಂನಗಡಾ ಜಾಗ ಬಿಕ್ಕಟ್ಟ । ವಂಂದಿ ಬಹಂ ತೇಟ ।
ತೆಲಿಲೆ ಯೊಳೆಂಟ । ವತನದರಿಕಲ್ಲೆ ।
ಸೌರಾಜ ಮಾರಾಜಾ ಯಿಂಟ್ಟಾನ ಬಹಂ ಪ್ರೀತಿಲೆ ।
ಸೌರಾಜಾ ಕಂಣಿಲೆ ಕಂಡನಲ್ಲಾ । ಬಂತ ಮೊಗಲಾ ।
ಮಂೂರ ಲಕ್ಷ ಬಲಾ । ಸೋಮಾನ ಗಡಕ ಹಲ್ಲಾ ॥
ಯೇರ್‍ಯಾರ ದುಂಮಂಕಿಲೆ । ಐನೂರ ಟೋಪ ವಂದ ಭಾರ।
ರಂಜಕವರದಾರ । ವಳೀ ಶಿಟ್ಟಿಲೆ ॥
ವುಚ ಮುಂಸಲ ಮೊಗಲ ಪಾಟಿಣಾ ।
ಮಾಡ್ಲಿಲ್ಲೊ ಆನಮುನಾ ಅಂಬಂತ ದಿನದಿನಾ ।
ಟೋಪ ಗರ್ದಿ ಬಾಣಾ । ಬಿಟ್ಟಾರ ಹೊಂದಿಕಿಲೆ ।
ಅರವತ್ತ ಸಾವಿರ ಅರಬಿಕಿ । ಯೇರಿತ ಚಿಕಿಚಿಕಿ ।
ಹಿಡದಾರೊ ಕಿಲ್ಲೆ ।
ಚೋಳೊಬನಸಂಬಗಚ್ಯಾರಕವಲಾ ।
ಭೀಮಂರಾವ ಕೊಟ್ಟ ಬಲ್ಲಾ । ಗಡಕರ್‍ಯಾರೆಲ್ಲಾ ।
ಟವಳಿ ಅಂಗ್ಯಾರಲ್ಲೆ ।
ಗೋಲಂದಾಸ ಟೋಪ ಹಚ್ಯಾನ ಬದಿಲೆ
ಕಂಮಾರ ನಿಂತಾರ ಜೋಡಿಲೆ ॥ಚಾಲ॥

ಭೀಮೋಜಿನಾಯಂಕಗಾತಿ ಅನಕಂಲಾ ।
ತೊಗೊಂಡ ಕತ್ತಿ ಡಾಲಾ ।
ಯೋಳನೂರ ಕಾಲ ಬಲಾ
ಹಿಂದಕ ತಿರಗವರಲ್ಲಾ ॥
ಭೀಮೋಜಿ ಮಂಗೇರ್‍ಯಾರಚಲಾ ।
ಕೈಯಾಗ ತ್ರಿಸೂಲಾ ।
ಹಿಂದ ಮುಂಂದ ನೋಡಲೀಲ್ಲಾ ।

ವುಪ್ಪಿಗ್ಗ ಲಾಲಾ ||
ರಾಣೋಜಿ ತೊಂಡ್ಯಾ ತಿಂದಾರ ಹಲ್ಲಾ।
ತಡಾಪ ಮಾಡಲಿಲ್ಲಾ।
ಅಗಶಿಬಾಗಲಾ । ತೆರದಬಿಟ್ಟಾರಲ್ಲಾ||
ಅರಬರ ಮಾತ ಕಿಲಬಿಲಾ ।
ಕಯಾಗ ಪಿಸ್ತೂಲಾ ।
ಗಡಕರ್‍ಯಾರ ಮ್ಯಾಲಾ ।
ಬಾದ್ರಿವತ್ತ್ಯಾರಲಾ ।
ಗಡಕರ್‍ಯಾರ ಬಿದ್ದಾರ ಬಾರಲಾ ।
ತೆಲಿಗಿ ಹಚ್ಚಿ ಡಾಲಾ ।
ಲಾಗೂ ಆಗಲಿಲ್ಲಾ।
ಗುಂಡ ಹೋದುವ ಮ್ಯಾಲಾ
ತಾಶೀಮು ಹೊಡುತಾರಲ್ಲಾ ।
ಗಡಕರ್‍ಯಾರ್‍ಯಾಲ್ಲಾ ।
ಕಮುರಿ ಬಿದ್ದಾರಲ್ಲಾ ।
ಸುತ್ತ ಹಾಕ್ಯಾರ ಜಾಲಾ ||ಯೇರ||

ದುಡಿನೊಳಗ ಹೊಕ್ಕಾಂಗ ಹೆಬ್ಬುಲಿ ।
ಹೆಣಾ ಮುದರ ಮ್ಯಾಲಿ ।
ಬಿದ್ದಾವ ಜೆಕಿಮುಲಿ ।
ನೆತ್ತರ ಕಾವಲಿ । ಹರಿತೋ ಜಾಣಾ ।
ಹಿಂಗ ದುಂಡ ಕಡದಾರ ಸುತ್ತಾಡಿ ।
ಆದಿತ ಹಿಂಮೊಡಿ ।
ಸಾವಿರ ಬಿದ್ದುವ ಹೆಣಾ ||೧||

ರಣಮುಂಡಲಾತಿ ಜಗಳಾ ।
ಕುರ್‍ಯಾಗ ಹೊಕ್ಕ್ಯಾಂಗ ತೊಳಾ ।
ಮಾಡ್ಯಾರ ಹಿಂಗ ಗೋಳಾ ।
ಬಿದ್ದಾವ ಹೆಣಗೊಳಾ । ಇಲ್ಲದ ಗಣತಿ ।
ಅರಬರ ಅಂತ್ರಾರ ಅರೆ ಅಲ್ಲಾ ।
ಕಚ್ಚಿದಾರ ಹುಲ್ಲಾ। ಚೆಲ್ಲಿದರ ಕತ್ತಿ।
ಮೋರ್ಚೆದ ಆತಿ ಹಿಂಮೊಡಿ ।

ಹೋಗತಾರ ವ್ಹೋಡಿ । ಡೆರೆದಾ ಕಡಿ ।
ವೊಗಲ ಹಿಂಗ ನೋಡಿ ।
ಕರಗ ಮಾಡಿದ ವೋತಿ ।
ಲುಟಿ ತೊಕ್ಕೊಂಡ ಗಡಕರ್‍ಯಾರೆಲಾ
ಆಗಶಿ ಹೊಕ್ಕಾರಲ್ಲಾ। ಹೊತ್ತ ಮುಣಿಗೆತಿ ॥
ವೊಗಲ ಕಡಕೋಲಾನ ತಂನ ತೂಟಿ ।
ಇರೆಶಾಬಲಿಕೊಟ್ಟಿ।
ಮಂದಿ ಹಿಡದದ ಬಿಟ್ಟಿ।
ಮಂಣಿನ ಹಂಡೆ ಕಟ್ಟಿ।
ಇಟ್ಟಗಡದಳತಿ ।
ಹಿಂಗ ಮಾಡಿದಾನ ಸಂಜೊಕಾ ।
ಬೆಳಗ ಆಗಂ ತನಕಾ ।
ಹಚ್ಚಿಕ್ಯಾರಯಾತಿ ॥
ವೊಗಲ ತಾ ಆದ ತಯಾರಾ ।
ಟೋಪ ಹದನಾರಾ ।
ಕಂಂಪಿ ಮ್ಯಾಗ ಪೂರಾ ।
ಮಾಡಿದ ಮಂದ ಭಾರಾ ।
ಕೊಟ್ಟ ಪರಬತ್ತಿ ।
ಗುಂಡ ಹಾರತ್ತಾವ ದಡಧಡಾ ।
ಆವಾಜ ತಡಪಡಾ ।
ಅಳ್ಳ ಹುರದ್ಹಾಂಗಾತಿ ॥
ಗನಚಕ್ರಟೋಪಿನವಾಜ ।
ಮಂದ್ದಗುಂಡಿನ ವೋಜ ।
ಹೋಗಿ ಹಿಡಶಾರ ಮುಂಜ ।
ಯಾರದಿಲ್ಲ ಅಜ್ಜಿ । ಅಲ್ಲಿ ನಡದತಿ ।
ಗಡಕಂವಶಾರ ಕಾಳಗತ್ತಲಾ ।
ಸುರದ್ಹಾಂಗ ಗರಗಲ್ಲಾ ।
ಗುಂಡಿಂದಿಲ್ಲ ಅಳತಿ ॥
ಗಡಕರ್‍ಯಾರ ಆಗ್ಯಾರ ವುಲ್ಲಾಸಾ ।
ಶನಿವಾರ ದಿವಸಾ ।
ಕಂಮಾರ ಗೊಲಂದಾಸ ।
ಹುಕುಂ ತಂದ ಕಾಸಾ ।

ಬಂದ ಟೋಪಿ ನಂತಿ ।
ಹಚ್ಚಿ ನೋಡಿದ ಕೊಳಿವಿದುರದಂಬಿ ।
ಟೋಪಿಂದ ಗರದಿ । ಹೊರಗ ನಡದತಿ ॥ಚಾಲ॥

ಗೋಲಂದಾಸ ಯಿದ್ದ ಬಹಳ ಸೂರ ।
ಹಿಡದನ್ಯಾವರ ।
ಟೋಪಯಿಟ್ಟಗೂರಿ ।
ಹೊಡದ ವಂದ ಬಾರಿ ॥
ಟೋಪಿನ ಬಾಯಾಗ ಬಡಿತೊ ಗುಂಡಾ ।
ಮುಂರದ ಆತ ತುಂಡಾ ।
ಮೊಗಲ ನೋಡಿಕ್ಯಾರಿ ।
ಆದಾನ ಗಾಬರಿ ।
ಗೋಲಂದಾಸಗ ಬಂದಿತೊ ಶಿಟ್ಟ ।
ವಗದ ಮತ್ತೊಂದಿಟ್ಟ ।
ಹರಿತೊ ಡೇರಿ । ಮಾಡಿದ ಹೀಂಗ ಸೂರಿ ॥
ಜಗಳಾ ಆತಿ ಬಹಳ ದಿವಸಾ ।
ಹನ್ನೆರಡೊರಂಷಾ । ಕುಂತಾರ ತುಂಬಿಕ್ಯಾರಿ ।
ನೋಡತ್ತಾರ ಹವ್ವಹಾರಿ ॥
ತಾಂವ ಬಂದಾಗ ಹಟ್ಟಿದರ ಮಾವಿನ ಗಿಡಾ।
ಹಣ ತಿಂದ್ರು ಪಾಡಾ ।
ಹೋದಾರ ತಿರಿಗಿಕ್ಯಾರಿ । ರಾತರಾತುರಿ ॥ಯೆರ॥

ಗಡಾ ಆಗಲಿಲ್ಲಾ ಕೈವಾಸಾ ।
ಕುಂತ್ತಾರ ಹಂನೆರಡ ವರುಂಷಾ ।
ಮೊಗಲವುದ್ದಾಸಾ । ಆಗಿದುರದೇಶಾ ।
ಬಹಳ ಹೈರಾಣಾ ।
ಹೀಂಗ ವಡಿ ಹೋದಾರ ಬೆಳತನಕ ।
ತಪ್ಪಿಕ್ಯಾರದಿಕ್ಕ । ಹಾರಿತ ಹಲ್ಲಣಾ ॥೨॥

ಬಾಹು ಸಾಹೇಬ ಬಂದ ಶ್ರೀಮಂತ ।
ಗಡಾ ತೊಗೊ ಬೇಕಂತ।
ಮಂದಿ ಕರವಿಂಸ್ತ ।
ಪೋಣಾ ಲಕ್ಷ ಯಿತ್ತ ಹೋದ ಅಬ್ಬರಲಿ ।

ಗಡಕರ್‍ರ್ಯಾರ ವಗದಾರೋ ಗುಂಡಾ ।
ಮುಂರದ ಹೋತ ದಂಡಾ । ಬಂದ ಹಾದೀಲಿ ॥
ಕರಣಿಸ್ತಂವನಿರಾಣಿಕಾರಾ ।
ದಂಡ ತಯ್ಯಾರಾ ।
ಸಂಗಾಟ ಕೋಮುಟಿಗೆರಾ ।
ಸೋಮಾನಗಡಕ್ಯಾರಾ ।
ಹಚ್ಚಿದಾನ ಗುಂದಲಿ ।
ಗೋಲಂದಾಸ ಗುಂಡ ವಗದಾ ಮುಂರಾ ।
ವೋಡಿದ ನಿಪಾಣಿಕಾರಾ ।
ನಿಂದರಲಿಲ್ಲ ಅಲ್ಲಿ ॥
ಹಂತ ಹಿಂತಾವದಾದಿತ ಈ ಗತಿ ।
ಜಗದ ಕರಮುತಿ । ಮುಂನಸೂಬನಸತಿ ।
ಚೋಳೋಬ ಸಾರತಿ ।
ಭೀಮುರಾವವೋ ಅಲ್ಲಿ ।
ಹಿಂಗ ಪಿರಂಗ್ಯಾ ಹಚ್ಚಿದ ಸಂಜಾನಾ ।
ಆರತಿಂಗಳ ದಿನಾ । ಕೊಲ್ಲಾಪೂರದಲ್ಲಿ ॥
ಅರಸ ಮಾರಾಜನ ಮುಕ್ಕಳಿಬ್ಬರಾ ।
ಸಂಣಾವ ಹರ್‍ರ್ಯಾವಿಂಕೊರಾ ।
ಅಂವಗ ಪಿರಂಗ್ಯಾರಾ ।
ಮಾತಿನ ಮಂಜಕೂರಾ ।
ಕೇಳ್ಯಾನ ಯಿಂ ಗತಿಲಿ ।
ನಾವ ಬಿಡತ್ತೇವ ನಿಂಮಾ ನಾಡಾ ।
ಕೊಡರಿ ಸೋಮಾನಗಡಾ ।
ಮಾಡಿಕ್ಯಾರ ಖಾಲಿ ॥
ಸಂಣ ಅರಸ ಸಾಹೇಬ ಹೇಳತಾನಲ್ಲಾ ।
ಮಾತಿನ ಅನಕೂಲಾ ।
ಗಡಕರ್‍ರ್ಯಾರೆಲ್ಲಾ ।
ನಮ್ಮ ಕಯಾಗಿಲ್ಲಾ ।
ಹ್ಯಾಂಗ ಮಾಡುಂನ ಖಾಲಿ ।
ನೀವ ಮಾಡರಿ ನಿಂಮಂ ತಿಳದಾಂಗ ।
ನಿಂಮಂ ಕಯಾಗ । ರಾಜೆದಾ ಕೀಲಿ ॥ಚಾಲ॥

ಅರಸನ ಮಾತ ಸಾಹೇಬ ಕೇಳಿದ ಸಾಪ ।
ಹೊಂಟ ಗಪಚೂಪ ।
ನೋಡಿಕೊಂಡ ಖರಾನಾ ।
ಮಂಗಳವಾರ ದಿನಾ ॥
ಅಂವ ಬಿಟ್ಟಾನ ಬೆಳಗಾಂವಿ ಸ್ತಳಾ ।
ವಾರ ಮಂಗಳಾ ।
ಮಂದ ಯಿಂತ್ನ ಹೋಣಾ । ದಣಿಶಿತೋ ಅವನಾ ॥
ಬಾದ್ರಿಪದಾ ಶುದ್ದ ಅಷ್ಟಮಿಂ ।
ಯಿಂತ್ತ ಕುಮಿಂಕಂಮಿಂ ।
ಮಾಡಿದ ಹೊರಪ್ಯಾಣಾ । ಬಂದ ಗಂಂಮಾನಾ ॥
ಯಿಂಟ್ಟಣಿಗಿ ಪೂರ ಬದಿಯಂಲಿ ।
ಹೊಳಿ ದಾಟಿದಲ್ಲಿ ।
ಆತ ಅಸ್ತಮಾನಾ , ಯಿಂಳಿತೋ ಶೈನಾ ॥
ಸಾಹೆಬ ತಗದ ನೋಡಿದ ಚವಕಾಶಿ ।
ಗಡದಾಗ ಪಡನೇಶಿ ।
ತರಶಿಕೊಂಡವಂನಾ । ಪಿತಊರ ಸಂಜಾನಾ ॥
ಪಡನೇಶಿಗೆ ಹೇಳತಾನ ಸಾಹೇಬ ಕಾಸ ।
ರೂಪಾಯಿ ನೋಡ ಲಕ್ಷ ।
ಕೊಟ್ಟರಾಕ್ಷಣಾ । ಪಿತಊರ ಕಾಗದನಾ ॥ಯೆಂರ॥

ಪಡನೇಶಿ ಹಿಡದ ಪಿತಂರದೇಲಿ ।
ಸಾಹೇಬನ ಹಂತೆಲಿ ।
ಬಂದವಾರ ವುದಿಯಾಲಿ ।
ಬರಿ ಅಂತ ಮ್ಯಾಲಿ । ಹಿಂಗ ಆತಿ ವಚಿನಾ ।
ರೊಕ್ಕ ಕಾಶ ಮಾಡಿದ ಹಾರವ್ವ
ತೊಳದ ರಾಜ್ಯವ್ವಾ । ಆಳದ ಸಂಸ್ತಾನಾ ॥ ೩ ॥

ಕಿವಡ ಸಾಹೇಬ ಮಾಡಿದ ಮಸಲೊತ್ತಾ ।
ಡೆರೆದಾಗ ಕಂಂತ್ತಾ ।
ದಂಡಿಗಿ ತಾಕಿತ್ತಾ । ಬದ್ದರಗಡಕಂತ್ತಾ ।
ಅವಾಯಿಹಾಕಿದಾ ।
ಹಿಂಗ ಹೋದಾನ ರಾತಂರಾತರಿ ।
ಕಂಚಿಮಾಡಿಕ್ಯಾರಿ । ಹಲಕರಣಿಗೆ ಯಿಂಳದಾ ॥

ಸಾಹೇಬಾ ನೋಡತ್ತಾನ ಗಡಾ ಹಣಿಹಣಿಕಿ ।
ಬಂತ ಅಂಜಿಕಿ ।
ಪೂರಾಣಾ ತಿರಿತಿರಿವಿಹಾಕಿ ।
ನೋಡಿ ಆದ ದಂಕಿ ।
ಹನಾರ ಬಂತ ಮಂಂದಾ ।
ಯಿಂಪ್ಪಾದರೇನ ಚಾತೂರಾ ।
ಇಂಗ್ರೇಜಿ ಬಹಾದೂರಾ ।
ತಿರಗಲಿಲ್ಲ ಹಿಂದಾ ॥
ಸಾಹೆಬ ದುರದುಂಬಿ ಹಚ್ಚಿ ನೋಡಿದಾ ।
ಆಕಾರ ತಳಗಿಂದಾ । ಸುಳವ ಮಂದಿದಾ ।
ಯಾರ ಯಿಂಲ್ಲದಾ । ತಂಸ ಯಿಂತ್ತ ಮಂದ್ದಾ ।
ಮೂರ ಮಂದಿ ಕಂಡ ಕಂಣಿಲಿ ।
ನಕ್ಕ ಕಿಲಿಕಿಲಿ । ಬಂತ ವುಂಮೆಂದಾ ॥
ಗವರ್ನಲ್ ಸಾಹೇಬ ಆದ ತಯ್ಯಾರಾ ।
ಆಗಿ ಮಂಸಲೊತ್ತಕೊರಾ ।
ರಾತ್ರಿ ಬಂದಂವಾರಾ ।
ಐದ ಮಂಂದಿ ಸೋದರಾ ।
ತೊಕ್ಕೊಂಡ ಮಂಂದ ಹೋದಾ ।
ಇಂನ ಹರದಿದ್ದಿಲ್ಲ ಮಂಡಲಾ ।
ಅಗಶಿ ಬಾಗಲಾ । ದಾಟಿ ವಳಗ್ಹೋದಾ॥
ಸೋಮಾನಗಡದವರ ಯಿಂದ್ದಾರ ಬೇಪೊಮಂ ।
ಕಾದ ಶ್ರೀರಾಮಂ ।
ಪಿರಂಗ್ಯಾಗ ಬಂತ ಹಂಮು ।
ಇಟ್ಟ ಅಂವ ದಂಮಂ ।
ಚವಿಕಿ ವಳಗ್ಹೊದಾ ।
ಚವಿಕೆವರ ಅಂತ್ತಾರ ನೀವ್ಯಾರ ।
ಲಗಾಮು ಹಿಡದಾರ ।
ಬಿಡಲಿಲ್ಲೊ ಮಂಂದಾ ॥ಚಾಲ॥

ಸಾಹೇಬನ ಕಯೊಗ ಇತ್ತ ನೋಡ ಸಾಂಗ ।
ವಗದ ಅಂವ ಹಾಂಗ ।
ಸತ್ತ ವದ್ದಾಡಿ । ಕಾಲ ಹೊಸದಾಡಿ ॥

ಮಂತ್ರೊಬ್ಬ ಚವಿಕ್ಯಾಂವ ಯಿದ್ದ ಕಾರ ।
ತುಂಬಿದಾನ ಬಾರ ।
ಸಾಹೇಬನ ಯಂದಿ ನೋಡಿ ।
ಹೊಡದ ಲಗು ಮಾಡಿ ॥
ಐದ ಮಂದಿ ಸೋದರನ ಕೊಂದ ।
ಶಿಟ್ಟಿಗೆಂವ ಬಂದ ।
ರಂಗ ಚಾವಡಿ । ಹೆಣಾ ಬಿದ್ದುಂವ ಕೂಡಿ ॥
ಚವಿಕ್ಯಾಗ ಆತಿ ಗಲಬಿಲಾ ।
ಗಡದಾನ ನಾಯಿಕರೆಲ್ಲಾ ।
ಬಂದಾರೋ ವೋಡಿ । ನಿಂತ್ತಾರ ಹೆಣಾ ನೋಡಿ ॥
ಕಿವಡ ಸಾಹೆಬ ಕಂಣಿಲಿಂದ ಕಂಡ ।
ಯಂಬ್ಬಶಾನ ಸೋದರ ದಂಡ ।
ಬೆಂಕಿ ಹಂತ್ತಾ ಕೀಡಿ । ಬಂತ ತಾರ್ತಡಿ ॥
ಗಡಕರ್‍ಯಾರ ಕಂಡ ತಿಂತಾರ ಹಲ್ಲಾ ।
ತೆಳಗ ಇಳದಾರಾಲ್ಲಾ ।
ನವಕೊಳ್ಳದ ಮಡ್ಡಿ । ಬಿತ್ತ ಅಲ್ಲಿ ರಗಡಿ ॥ಯೆಂರ॥

ಜಗಳಾ ಆತಿ ಯಿಂದರಬದರಾ ।
ಕಾದ ಈಶ್ವರಾ । ಕಡದಾರ ಗಡಕರ್‍ಯಾರಾ ।
ಐನೂರ ಸೋದರನ । ಕಾಣಿಶಾರ ಮಂಣಾ ।
ಆವರಿಗೆ ಲೇಸ ಕೊಟ್ಟಿತೊ ಕತ್ತಿ ।
ತಿರಿವ್ಯಾರ ಬೆಂನ್ನತ್ತಿ । ಇಳಶಾರ ಗುಡ್ಡನಾ ॥೪॥

ಪಡನೇಶಿಗೆ ಸಾಧಿಸಿತ ಆಗ ।
ನೀರ ಕೊಡದಾಗ । ತೊಕ್ಕೊಡವ ಬ್ಯಾಗ ।
ಹೊಕ್ಕಾನ ಗಡದಾಗ । ವಂದ್ದ ಯಿಂಟ್ಟ ತೋಶಿ ।
ಇಕಡೆ ಕೊಟ್ಟಾನ ಪಿರಂಗ್ಯಾಗ ಕೂಲಾ ।
ಬರಿ ಅಂತ ಮ್ಯಾಲಾ । ಕರದ ಶಿಲ್ಲೆ ಬೀಶಿ ॥
ಮೋರ್ಚೆ ಯೇರಿದಾನ ಇಂಗ್ರೇಜಾ ।
ಐನೂರ ಸೋದರ ಫೋಜಾ ।
ಮಂಂದ ಆನಿ ಜಾಜಾ ।
ಬೆಂನಿಲೆ ನಡಿಶಿ ।
ವಂದ್ದ ಗುಂಡಿಂದ ಮಾಡಂತ ಗೋಳಾ ।

ಹಾರಂತ ಕೆಂದುಂಳಾ । ಸನೇವುಳಿತಗಶಿ ॥
ಗಡಕರ್‍ಯಾರದ ನಡಿವಲ್ಲದ ಆಟ ।
ಯಂಳ್ಳಕಾಳಷ್ಟ ।
ಗೋಲಂದಾಸ ಬಂಟ । ತಿದ್ದಿದಾನ ವಿೂಶಿ
ತಗದ ನೋಡಿದ ಜೆಕೆರಿ ಬಾಗಲಾ ।
ಮಂದ್ದ ತೋಶಿಟ್ಟ ವಡಿದ ಪಡನೇಶಿ ॥
ಗೋಲಂದಾಸ ಮಂಗಾ ಅಂವ ಜಾತ ।
ಕಂವಾರ ಮಾಡಿದಾ ಕಸ್ತ ।
ಟೋಪ ಇಟ್ಟ ಸರತ । ಅಂವಾ ಬಹಂ ಬೇಶಿ ।
ಮಂದ್ದ ಹಂರದ ಮಾಡಿದಾನ ಜಲ್ದ ।
ಟೋಪ ಇಟ್ಟ ತೆಗ್ಗಶಿ ॥
ಮಂಂಜಾವ ನಾಯಿಂಕಗ ಹೇಳ್ಯಾನ ಗೋಲಂದಾಸಾ ।
ನೋಡರಿ ನಿವೊಂದ ತಂಸಾ ।
ಟೋಪ ಹಾರಿಶಾನ ಕಾಸಾ ।
ಐನೂರ ಸೋದರ ಸರಸಾ ।
ಬಿದ್ದಾವ ಹೆಣಾ ಹಾಶಿ ।
ಆನಿ ಅಂಬಾರಿದ್ಹಾರಿತೊ ತೆಲಿ ।
ಸತ್ತಾವ ವಿೂನಲಿ । ತಡದ ಬಂತ ಆಶಿ ॥ಚಾಲ॥

ಅಲ್ಲಿ ಆಡ ಹತ್ತ್ಯಾವ ರಣಾ ।
ಬಿದ್ದಾವ ಅಲ್ಲಿ ಹೆಣಾ ।
ಬೋರಪಿರಂಗಿ । ಟೆಪಿಗಿ ಸೂರ್‍ಯಾಗಿ ॥
ಕಿವಡ ಸಾಹೆಬ ಆಂಜಿ ಆದ ಗಾಬ ।
ಇತ್ತ ಅವಗ ಜರ್ಬ ।
ಬಿಟ್ಟಾನೊ ಜಾಗಿ । ಇಳದ ಬೈಲಿಗಿ ।
ಮಂರದಿನಾ ಮಂೂರಂ ಸಂಜಿ ವೇಳೆ ।
ಗಡಕರ್‍ಯಾರಾಗ್ಯಾರ ಗೋಳೆ ।
ಬಿದ್ದಾರ ಸ....ಹೋಗಿ । ಸಾಹೇಬನ ಡೇರೆಗಿ ॥
ಮಾರಾರ ಇಪ್ಪತ್ತ ಕಡದ ಹಾಕಿ ।
ಬಂದಾರೊ ಶಿಗದ । ಅವರ ಕೈಯಿಂಗಿ ।
ಹೊಕ್ಕಾರ ಗಡ ಹೋಗಿ ॥
ಕಿವಡ ಸಾಹೆಬ ಮಾಡಿದಾನ ಜಲ ।

ಕಾಗದ ಅವ ಬರದ ।
ಪಟವರ ದಂಡಿಗಿ । ಬರ್ಯೋಕುಮಿಃಕಿಗಿ ॥ ಯಂರ ॥

ಫಿರಂಗ್ಯಾನ ಕಂಮಂಕ ಆದಾರಲ್ಲಾ ।
ಪಡವರಧನೆರ್ಯಾಲ್ಲಾ ।
ದೇಶಾಯಿ ದೇಶಪಾಂಡೆ ಖಲ್ಲಾ ।

೭. ಗಲಗಲಿ ದೇಸಾಯಿಯ ಪದ

ಗಲಗಲಿ ದೇಸಾಯಿ ನವರತ್ನ ಬಿಟ್ಟ ಹೋದ
ತನ್ನ ಸಂಸ್ಥಾನ
ಚಂದ್ರಮನಂತ ಚಲುವನ ಮೋಗ
ಶಿವಾ ಮುನಿದನಾಯಂತವಾರದಿನ ॥ಪಲ್ಲ॥

ಏನು ಹೇಳಲಿ ದುಃಖ ಬರತೈತಿ
ದೊರೆಗಳ ಮನದನ ಅಕ್ಕರತಿ
ಲೋಡ ಲೇಜಮಿ ತಾಲಿಮುಖಾನೆ
ಶಿವಪೂಜಿಯು ಮೇಲೆ ಬಲ ಪ್ರೀತಿ
ಚಲ್ವಿಕೆ ಚಿತ್ರ ಬರದೈತಿ
ಕೈಕಾಲ ಬಾಳಿ ದಿಂಡ ಗತಿ
ಕಾಮನಂತೆ ಸುಣ ನಾಮು ಹಚ್ಚುವ
ಸದರಿಗೊಪ್ಪುವ ಸೂರಪತಿ
ಶಿಪಾಯಿ ಶಿಲೇದಾರ ಬಲಭರ್ತಿ
ಚಾಬುಕ ಸ್ವಾರ ಕುದರಿಯು ಹತ್ತಿ
ಅವನ ಮುಂದ ಮುಂದ ಹೊಗಳು
ಚೋಪದಾರ ಅಂತಾನ ದೊರೆಗಳ ಕೀರತಿ
ಸಂತ್ತ ನಾಡಾಗಿನ ದೇಸಗತಿ
ಎಲ್ಲರ ವಳಗೆ ಅವಚಡತಿ
ಯಾರೊಬ್ಬರಂತರ ಏನ ಧೊರಿ ಇವನ
ಪೂರ್ವದ ಪುಣ್ಯ ಹೆಚ್ಚೈತಿ ॥ಚಾಲ॥

ಸರ್ವ ಮಾತಿಗೆಲ್ಲ ಸಂಪನ್ನ
ಆವಗ ನಡಸತಿದ್ದ ಭಗವಾನಾ
ಜೈನಾಪುರಕೆ ಹೋದಾರ ಒಂದಿನಾ
ಧೊರಿಗಳಿಗೆ ತಟ್ಟಿತೋ ವಿಘ್ನ
ಉರಿ ಬಡದ ಬಿಗೀತೊ ಬೆನ್ನ
ಬಾಯಿ ಇಸಾ ಕಯಿ ಆಯಿತೊ ಅನ್ನಾ
ಸದಾಶಿವಪ್ಪ ಕೇಳೋ ನೀನಾ
ನಂನ ಜೀವಕ್ಕೆ ಇಲ್ಲೊ ಚಯುನ ॥ತೋಡ॥

ತಿರಿಗಿ ಬಂದರೊ ಮರದಿನ
ದೊರೆಗಳಿಗಿಲ್ಲೊ ಸಮಾದಾನಾ

ಚಂದ್ರಮಂನಂತೆ ಚಲವನ ಮೇಲೆ
ಶಿವಾ ಮಂನಿದನ ಆಯಿಂತವಾರದಿನ ॥೧॥

ಒಂದಿನ ಗಲಗಲಿ ಊರಾಗ
ಕಂಂತಿದ್ದ ಹೊಸಮನಿ ಸದರಾಗ
ಮೋಸ ಮಾಡಿಕಾರ ವಿಷಾ ಹಾಕಿದಾರ
ದೂದಪೇಡೆ ಸಕ್ಕರಿಯೊಳಗ
ಫಳಾರ ಮಾಡ್ಯಾರ ರಾತ್ರ್ಯಾಗ
ಧೊರಿ ಮಂಲಗಿದ ಮಂಚದ ಮೇಗ
ಕನಸ ಬಿದ್ದಿತೊಂದುಂ ಮನಸಿಗೆ
ಟಾವಿಕೆ ಧೊರಿ ಕಂಂತನ ಚಿಂತಿಯಂ ಒಳಗ
ಮಂರದಿನ ಮುಂಜನಿ ಹರಿಯಾಗ
ಶಿಪಾಯಿ ಬಸಪ್ಪಾ ಬಾ ಈಗ
ಹೊಟ್ಟಿ ಉಬ್ಬೈತಿದೇನಕಾರಣ
ಬೇನಿ ಇಕ್ಕೆವ ಗಂಟಲದಾಗ
ಶಿಪಾಯಿಂ ಬಸಪ್ಪಂದ ಧೊರಿ ನಿಮಂಗೆ
ಕಸಾರಕಿ ಬಂದೈತಿ ಮೈಯಾಗ
ಇತ್ತವರಾಗ್ಯಾಟ ಗಂಟಲದಾಗ
ಉಗಳಿದ್ದಿರಿ ಏ ಹೇಸಕಿ ಮೇಗ ॥ಚಾಲ॥

ಆ ದಿನಾ ಹೊದರ ಕೋಲಂರಿಗೆ
ಗಂಂಡಪ್ಪ ಸ್ವಾಮಿಂ ದೇವರಿಗೆ
ಅಲ್ಲಿ ಜಡಾ ಆಯಿಂತ ಧೊರಿಗಳಿಗೆ
ಎಂಟಾನ ಎಂಟ ದಿನ ಮಲಗಿ
ತಿರಿಗಿ ಬಂದಾರ ಎಡಳ್ಳಿ ಊರಿಗೆ
ತಾ ಇರಂವ ಸದರ ಅರಮನಿಗೆ
ಬೇಡಿಕೊಂಡ ಮಂನಿಯಂ ದೇವರಿಗೆ
ಉಣಿಸೇನಂತ ಐಗೊಳಿಗೆ ॥ತೋಡ॥

ರಾಮಪ್ಪ ಅಂತಾನ ಕಾರಕೂನಾ
ಮಾರಿ ಕಪ್ಪ ಹಿಡದೈತಿ ಚಿನ್ನಾ
ಚಂದ್ರಮಂನಂತ ಚಲವನ ಮೇಲೆ
ಶಿವಾ ಮಂನಿದನಾಯಂತವಾರದಿನಾ ॥೨॥

ದೇಸಾಯಿ ಅಂತಾನ ಸಮರ್ತಾ
ಯಾಕ ಮುನಿದ ನೀ ಭಗವಂತಾ
ಎಂತಾ ಬೇಸಿದು ಯಾರಿಗೆ ಟಾವಿಕೆ
ವೈಯಲ್ಲ ಇಟ್ಟತಿ ಇರತಾ
ಬಾಯಿ ಸಾಬಳು ಹೇಳ್ಯಾಳು ಅಳತ
ಗೋವಿಂದಪ್ಪ ಕೇಳೊ ಮಾತಾ
ಎಲ್ಲಿದ್ದಲ್ಲಿ ವೈದ್ಯಗಾರನ
ಈ ವೇಳ್ಯಕೆ ತರಸರಿ ತಂತ್ರಾ
ಗೋವಿಂದಪ್ಪಾ ತಾ ಗುಣವಂತಾ
ವೈದ್ಯಗಾರರ ಕರಿಸೆನು ಮಸ್ತಾ
ವೈದ್ಯಗಾರರು ತಿಂದ ಹೋದರೊ
ರುಪಾಯಿ ಮುನ್ನೂರ ಅರವತ್ತಾ
ಅಗಸುದ್ದೆ ಮಾಡಸ್ತ ಮಾಡಸ್ತಾ
ಪರಸದಿನಾ ದೊರಿ ಬೇಸತ್ತಾ
ದಿನಕ ದಿನಕ ಚಡತಾದಿತ ಬೇನಿ
ತಿಳಿಯುವಲ್ಲದಿದರ ಅಂತಾ ॥ಚಾಲ॥

ಅಬಿಷಾಕ ನಡಿಸ್ಯಾನ ದೇವರಿಗೆ
ಸಾಹಿತ್ತ ಕೊಟ್ಟ ಬ್ರಾಮರಿಗೆ
ಜಾಗಾ ಬದಲು ಮಾಡಬೇಕು ಧೊರಿಗಳಿಗೆ
ಅಂತ ಓದರ ಹಂಚಿನಾಳ ಊರಿಗೆ ಧೊರಿಗೆ
ಹೇಳ್ಯಾನ ತಂನ ಮಂದಿಗೆ
ವೈಯಬೇಡರಿ ನಂನ ಬೇಲುರಿಗೆ
ತಾ ನೋಡಿ ತಂನ ಮಂಡದೀಗೆ
ನೀರ ತಂದಾನ ಕಂಣೀಗೆ ॥ತೋಡ॥

ಬಾಯಿಸಾಬಳು ನೆನಸ್ಯಾಳು ಶಿವನ
ನೀ ಕಾಯೊ ನಂನ ಮುತ್ತೇದಿತನ
ಚಂದ್ರಮನಂತ ಚಲುವನ ಮುಂದ
ಶಿವಾ ಮುನಿದನಾಯಂತವಾರದಿನಾ ॥೩॥

ಹಂಚಿನಾಳ ಊರಾಗ ದೊರಿಯಿದ್ದ
ಜೈನಾಪುರ ದೇಸಾಯಿ ಬಂದ

ಸೊನ್ನದ ದೇಸಾಯಿ ಗುರಸಿದ್ದಪ್ಪಾ
ಧೊರಿ ಮೋರಿ ನೋಡಿ ಅಳತಿದ್ದ
ದೊರಿಗೊಳ ತಂಗೆರ ದುಃಖ ಬಂದ
ಏನು ಹೇಳಲಿ ನಿಂಮ ಮುಂದ
ಅಕ್ಕತಂಗೆರ ಮಹಾದುಃಖ ಮಾಡತಾರ
ಅಳತಾರ ಧೊರಿ ಕೊರಳಿಗೆ ಬಿದ್ದ
ಸದಾಶಿವಪ್ಪನ ಧೊರಿ ಕರದ
ಲಗುಮಾಡಿ ಮೇಣೆವು ಬರಲಂದ
ಎಡಳ್ಳಿ ಊರಿಗೆ ತೊಗೊಂಡ ನಡೀರಿ
ಬೇನಿ ಹಗರ ಆದಿತ ನಂದಾ
ಸದಾಶಿವಪ್ಪ ಹೀಂಗ ತಿಳಿದ
ಲಗುಮಾಡಿ ಮೇಣೆವು ತರಸಿದ
ಮೇಣೆದ ವಳಗೆ ಮನಗ್ಯಾನ ದೊರಿಯು
ಎಡಳ್ಳಿ ಊರಿಗೆ ತಾ ಬಂದ ||ಚಾಲ||

ಅರಮನಿ ಮನಗುವ ಕೋಲಿ
ಧೊರಿ ನೋಡುತಾನ ಸುತ್ತಲಿ
ಬಾಯಿಸಾಬಳ ಕುಂತಹಂತೀಲಿ
ನೀರ ಚಲ್ಲತಾಳ ಕಣೀಲಿ
ಬಹು ಚಿಂತಿ ಆಗಿ ಮನದಲ್ಲಿ
ಯಾಕೆ ಶಿವಾ ಮುನದಿ ನನಮೇಲಿ
ಸವಸವದು ಸಿಂಪಿಯಾದಲ್ಲಿ
ದುಃಖ ಬರತತಿ ಏನು ಹೇಳಲಿ ||ತೋಡ||

ಹೀಗ ಮಾಡಿದಿ ಭಗವಾನಾ
ಎದ್ದ ಮಾಡಲಿಲ್ಲ ಧನಿತನ
ಚಂದ್ರಮನಂತ ಚಲುವನ ಮೇಲೆ
ಶಿವಾ ಮುನಿದನಾಯಂತವಾರ ದಿನ ||೪||

ಹೊರಕಡಿಗ ಹತ್ತಿತು ಧೊರಿಗೊಳಿಗೆ
ಶಕ್ಕಿಯಾದಿತೊ ವೈವಣಗಿ
ಕಿತ್ತ ಬೀಳುವ ನೆತ್ತರ ಬಾಯಿಲೆ
ಧೊರಿ ತಿಳದನ ತುನ ಮನಸೀಗೆ

ಸುಕ್ರಾರ ದಿನ ತಂವು ಗುರಗೊಳಿಗೆ
ಕರಸಿಕೊಂಡ ತಂನರಮನಿಗೆ
ಎರಡ ಆಕಳಾ ಅಚ್ಚೆರ ಬಂಗಾರ
ದಾನಕೊಟ್ಟ ತಂವ್ಮೈಗೊಳಿಗೆ
ಉಪ್ಪೆಂಣಿ ಕೊಟ್ಟರ ವುಠದವರಿಗೆ
ಒಂದೊಂದು ಬಿಳಿ ಹೊಳ ಎಲ್ಲರಿಗೆ
ಆದೇ ದಿನಾ ಒಂದು ಕಂದರಿ ಕೊಟ್ಟನೊ
ಪುಣೇದ ಐಗುರ ಸ್ವಾಮಿಂಗೆ
ಶನಿವಾರ ಮೂರು ತಾಸ ರಾತ್ರಿಗೆ
ಕರಸಿಕೊಂಡ ತಂನ ಮುಡದೀಗೆ
ಜವಂದರ ಖಾನಿ ಕೀಲಿಕೈ
ಹಿಡಿ ನೀ ಕೊಡಬೇಡ ಯಾರೀಗೆ ॥ಚಾಲ॥

ಹೀಂಗಂತ ಹಾಕಿದಾನ ಉಸರಾ
ಮಾತಾಡತ ಹಾರಿತೊ ಖಬರಾ
ಧೊರಿ ಮಾಡತಾನು ಎತ್ತಾರಾ
ಮೇಲುಸರ ಇಕ್ಕಿತೋ ಫೇರಾ
ಬಾಯಿಸಾಬಳ ಎದಿ ವಡದ ನೀರಾ
ದುಃಖ ತುಂಬಿ ಬಂತೊ ಸವುಂದರಾ
ಆಳತಾರೊ ಅಕ್ಕ ತಂಗೇರ
ಬಿಟ್ಟ ಹೊಂಟೊ ನಂವು ಸರದಾರಾ ॥ತೋಡ॥

ಬೆಳಗು ತಾಸ ಉಳಿದೀತ ಇನ್ನಾ
ಜೀವ ಬಿಟ್ಟ ಮನಮೋಹನ್ನಾ
ಚಂದ್ರೆವುನಂತ ಚಲುವನ ಮೇಲೆ
ಶಿವಾ ಮುನಿದನಾಯುತವಾರದಿನಾ ॥೫॥

ಆಯುತವಾರದಿನ ಹರಿಯೂಗ
ಸುದ್ದಿ ಹರಿತ ಸುತ್ತ ನಾಡೀಗ
ಸುದ್ದಿ ಕೇಳಿ ಎದಿಬಾಯಿ ಬಡಕೊಂಡು
ಬಿದ್ದಳತಾರ ಧರಣಿಯು ಮೇಗ
ಅಗಾಧ ಹದಿನಾರ ಹಳ್ಳ್ಯಾಗ
ಘೊಳಿಟ್ಟತಿ ಅರಮನಿಯಾಗ

ಕೊಂಣೂರ ಮಂಟೂರ ಚಿಪಲಕಟ್ಟಿ
ಅಕ್ಕತಂಗೆರ ಬಂದರಾವಾಗ
ಜೈನಾಪೂರ ಧೊರಿಯರ್ಾಗ ಸುದ್ದಿಕೇಳಿ
ಮಂದವಳದಾಗ
ಬತ್ತಲಿಗಂದರಿ ವತ್ತುರಮಾಡಿ ಹತ್ತಿ ಬಂದ
ಮಂಹೂರ ಘಳಿಗ್ಯಾಗ
ಏನಂ ಹೇಳಲಿ ನಾ ನಿಮಂಗೆ
ಸರ್ವ ಸಾಹಿತ್ತ ಮಾಡ್ಯಾರಾಗ
ಡಂಕೆ ನಿಶಾನಿ ನಗಾರಿ ನೌಬತ್ತ
ಬಂದ ನಿಂತವೊ ಅಂಗಳದಾಗ ॥ಚಾಲ॥

ಸರ್ವ ಶಿಂಗರ ಕಂದರಿಗೆ ಮಾಡಿ
ಚಾಬಕ ಸ್ವಾರ ಬೋರ್ರ್ಯಾಡಿ
ಇಮಾಮಂ ಗೈಬ ದಂಃಖ ಮಾಡಿ
ಅಳತಾರೊ ಮಂಣಾಗ ಹೊರಳಾಡಿ
ಮಂಂದ ಹಿಡದವೊ ಕಂದರಿಯಂ ಜೋಡಿ
ಕಂದರಿ ಅಳತಾವೊ ಮೊಕ ಬಾಡಿ
ಕಂದಂರಿಯಂ ಕಂಣನ ನೀರ ನೋಡಿ
ಅಳತೈತಿ ಜನಾ ಬೋರ್ರ್ಯಾಡಿ ॥ತೋಡ॥

ಹೊರಗ ಹೊಂಟಿತೊ ಇಮಾನ
ಸಂತ್ತಗಟ್ಟಿ ಅಳತತಿ ಜನ
ಚಂದ್ರಮಂನಂತ ಚಲಂವನ ಮೇಲೆ
ಶಿವಾ ಮಂನಿದನಾಯಂತವಾರದಿನಾ ॥೬॥

ಸ್ವಾರಿ ಹೊಂಟಿತೊ ಊರ ಹೊರಗ
ಧೊರಿ ಕಂಂತ ಇಮಾನ ಸದರಾಗ
ರತ್ನ ತಂಂಬಿದ ಹಡಗ
ಮಂಣಗಿತೊ ದಂಃಖ ಎಂಬ ಸಮಂದರದಾಗ
ಬಾಯಿಂಸಾಬಳ ಹೇಳ್ಯಾಳಾಗ
ಕೊಟ್ಟ ನಡದಿ ಯಾರ ಕೈಯಾಗ
ದಿಕ್ಕ ಇಲ್ಲದೆ ಪರದೇಶಿ ಮಾಡಿ
ಬಿಟ್ಟ ಹೊಂಟೆ ನಡ ನೀರಾಗ

ಧೊರೆಗಳ ತಂಗೇರಾವಾಗ
ಏನು ಹೇಳಲಿ ನಾ ನಿಮಂಗೆ
ತವರಮನಿ ಶರಿಸೂರಿ ಆದಿತಂತ
ಬಿದ್ದಳತರ ಭೂಮೀ ವೇಗ
ಇಳಿವ್ಯಾರ ತಂಮನ ತಡಿಯಾಗ
ಬಾಯಿಂಸಾಬಳ ಹೊಕ್ಕಳ ವಳಗ
ತೆಕ್ಕಿಹಾದ ಮಾ ದುಃಖ ಮಾಡತಾಳ
ಮಂಣಗ್ಯಾಳ ಚಿಂತೀ ಮಂಡದಾಗ ॥ಚಾಲ॥

ನಂಮ ಧೊರೀನ ಕಂಣ ತುಂಬ ನೋಡಿ
ಹ್ಯಾಂಗ ಹೋಗುನ ಮಂಣ ಮರಿಮಾಡಿ
ಭಾಳ ಮಂದಿ ಜನ ಅಲ್ಲಿ ಕೂಡಿ
ಬಾಯಿಂಸಾಬಳ ಸಮಾಧಾನ ಮಾಡಿ
ರೊಕ್ಕ ರುಪಾಯಿ ದಾನಾ ಮಾಡಿ
ತಿರಿಗಿ ಬಂದರ ಊರ ಕಡಿ
ವಿರಗೈಬು ಪಾದಾ ನೋಡಿ
ಹಂಶೆನ ಸಾಹೆಬ ವಸ್ತಾದ ಕವಿ ಮಾಡಿ ॥ತೋಡ॥

ಬಾಳಾರಾಮ ಅಂತಾನ ರಹಿಮಾನ
ಸೂರಿ ಆದಿತ ದೊಡ್ಡ ಸಂಸ್ಥಾನಾ
ಚಂದ್ರಮಂನಂತ ಚಲುವನ ಮೇಲೆ
ಶಿವಾ ಮಂನಿದನಾಯಂತವಾರದಿನಾ ॥೭॥*

---

* /songstress/ ಬಾಳಿ ಇಂಟಿ
ಗುಳೇದಗುಡ್ಡ ೩೦ನೇ ಜಾನೆವಾರಿ ೧೮೭೪
(ಒಂದು ಸಂಕ್ಷಿಪ್ತ ಸಹಿ ಇದೆ).

೮. ಹಲಗಲಿಯ ಪದ

ಮುಂಧೊಳ ನಾಡ ಹಲಗಲಿ ಬಾರ ಭರತಿಲಿ
ಗದ್ದುಂರಿಸಧಾಂಗ ಹುಂಲಿ ಆಯಿಂತೊ ಗಂಡ್ಡದಾಗ
ಎಷ್ಟುಂತ ಕೇಡ ಹೇಳಲಿ
ಆತ ಮುದಕೊಲಿ ಕತ್ತಿ ಕಾಲಾಗ ॥ಪಲ್ಲ॥

ಬಡ್ಡಿಂದ ಕೇಳರಿ ಮಂಜಕಂರಾ
ಲಢಾಯಿಂದಾಕಾರಾ
ಕಂಂಪಣಿ ಸರಕಾರಾ ಇದರ ಯಾರ ಇಲ್ಲ
ಶ್ರೀಮಂತ ಆದ ಹಿಮ್ಯೆಡಿ ಹೋದರೊ
ಓಡಿ ಹತ್ಯಾರ ಹಿಂಬಾಲ ಕಂಂಪಣಿ
ಇರಂವ ಇಲಾಖೆ ವಿಲಾತಿ
ಕವಲ ಕಟ್ಟೇತಿ ನಾಡಾಗಿನ ಕತ್ತಿ
ತೊಗೊಂಡಾ ಎಲ್ಲಾ
ಮುಂದವಳಕೆ ಬಂದಿತೋ ವರದಿ
ಮುಂಂದಿನ ಗರ್ದಿ ವದಗಿತೋ ಮುಂಳಾ
ಬಾಬಾಸಾಹೆಬ ಲಕುಂಟಿ ವಡದನಂ ಓದಿಕೊಂಡನು
ಉಸರ ಹಾಕ್ಯಾನ ಹೋದವ ಕೈಕಾಲಾ
ಕುಂತಿತ್ತ ಭರಕಚೇರಿ
ಶಿಪಾಯಿ ಮಾನ ಕರಿ ನೋಡ್ಯಾರ ಸಂತ್ತೆಲ್ಲಾ ॥ಚಾಲ॥

ಬಕ್ಷೀನ ಕರದ ಕೇಳ್ಯಾನಂ
ಹ್ಯಾಂಗ ಮಾಡಂನಂ ಹೇಳರಿ ಹಂಚೀಕಿ
ಹೆಳರಿ ಹಂಚೀಕಿ
ಶಿಟ್ಟಿನ ಕಾರಸಾಹೆಬ
ಒಳೇ ಜರಬ ಬರದನ ಬದಾಕಿ
ನಿಂಮಂ ನಾಡಾಗಿನ ಹತಾರ ಕತ್ತಿ ಕಟಾರ
ಕಳಸಂದ ತಂಬಾಕಿ ತಂಬಾಕಿ
ಬಕ್ಷೀ ಹೇಳಿದ ಉತ್ತರ
ಸ್ವಾಮಿಂ ಈಶ್ವರ ಮಾಡಂವವ ಜೋಕಿ
ಮಾಡಂವವ ಜೋಕಿ
ಕಾರಬಾರಿ ಹೊಡಿಸಿದ ಡಂಗಂರ

ಬಡವರ ಹತ್ಯಾರ ಎಲ್ಲ ಕೂಡಾಕಿ
ಎಲ್ಲ ಕೂಡಾಕಿ ॥ತೋಡ॥

ಶಿಪಾಯಿ ಮಂದಿ ಅಂತಾರ ಸಾಪ ಉತ್ತರ
ಕೈಯಾಗಿನ ಹತ್ಯಾರ ಕಂಡೋದಿಲ್ಲೀಗ
ಎಷ್ಟಂತ ಕೇಡ ಹೇಳಲಿ
ಆತ ಮಂತಕೊಲಿ ಕತ್ತಿ ಕಾಲಾಗ ॥೧॥

ಶಿಲೆದಾರ ಮಂಡಲಿ ಬಣ
ಹೊಂಟರಾಕ್ಷಣ ಮಾಡ್ಯಾರ ಹೊರಪ್ಯಾಣ
ಬಂದ ಊರ ಹೊರಗ ಹೊಂಟಾರ
ಬಿಟ್ಟು ಮನಿಮಾರಾ
ಹೋಗಿ ಕುಂತಾರಾ ಮಡ್ಡಿಯ ಮೇಗ
ಮಾರಾಜ ಅವರನ್ನು ಕರಸಿ ಕೇಳ್ಯಾನ ರುಂಬಿಸಿ
ಹತಾರ ತರಸಿ ಇಟ್ಟನ ಊರಾಗ
ಇನ್ನ ಮುಂದ ಐತಿ ಬಲ ಗೋರ
ಹೆಂಡರ ಮಕ್ಕಳ ಜೋಕಿ ಮನಿಯಾಗ
ಏನು ಆಗೋದು ಆಗಲಿ
ಸಾಕಿದ ಹುಲಿ ಐತಿ ಹಲಗಲಿ
ನಮ್ಮ ನಾಡಾಗ ಹಳಬರ ಮಂದಿ
ತರತುರಿ ಕತ್ತಿ ಕಟಾರಿ ಇದ ಕ್ಷಣಾದಾಗ ॥ಚಾಲ॥

ಬಕ್ಷೀ ಹುಕುಮ ಮಾಡಿದ
ಕಾರಕೂನ ಹೋದ ಹಲಗಲೂರೀಗ
ಹಲಗಲೂರಿಗ
ಹಳಬರನೆಲ್ಲ ಕರಸಿ
ಕೇಳ್ಯಾನ ರುಂಬಸಿ ಉರಾನ ಮಂದೀಗೆ
ಊರಾನ ಮಂದೀಗೆ
ನಿಮ್ಮ ಕೈಯಾಗಿನ ಹತಾರ
ಕೊಡಬೇಕು ಎಲ್ಲರ ಇಂಗ್ರಾಜರೀಗೆ
ಇಂಗ್ರಾಜರೀಗೆ
ಇನ್ಯಾಕ ಮಾಡತೀರಿ ಚಿಂತಿ
ಕೈಯಾಗಿನ ಕತ್ತಿ ಕೊಡೊದು ಅವರೀಗೆ

ಕೊಡೊದು ಅವರೀಗೆ
ಕರಾಕರಾ ತಿಂದರೊ ಹಲ್ಲಾ ಹಳಬರೆಲ್ಲರಾ
ಬಂದಾರ ಚಾವಡೀಗೆ
ಚಾವಡೀಗೆ ॥ತೋಡ॥

ಜಮಾದಾರ ಶಿಟ್ಟಿಗೆ ಬಂದ
ಬಾಯಿಮೇಲೆ ಬಡದ ಕಾರಕೂನನ ಹೊಡದ
ಹೋಂಟ ಊರ ಹೊರಗ
ಎಷ್ಟಂತ ಕೇಡ ಹೇಳಲಿ
ಆತ ಮದಕೊಲಿ ಕತ್ತಿ ಕಾಲಾಗ ॥೨॥

ಕಾರಕೂನ ತಿರಗಿ ಹೋದನು
ಹಲಗಲೊರ್ತಮಾನ ಹಾರು ಹೇಳ್ಯಾನು
ಟೀಕ ಕಾಣುಂದಿಲ್ಲ-ಬೈಶಾಕ
ಬಾಯಿಗೆ ಬಡದ
ಎನ್ನ ಚಂಡ ಹಿಡದ ನೂಕಶಾರೆಲ್ಲಾ
ಮಾಚಕನೂರ ಬೀಮಂಣ
ಮಾತಿಲೆ ಜಾಣ ಮಾಡಿ ಕರಶರಣ
ಇಳಿಯುವ ಹಿಡಿದಲ್ಲಾ
ಬಾಬಾಜೀ ನಿಂಬಳಕಾರ ಬರದ ಪತ್ತರ
ಯಾರೀಗ ತಿಳಿಲಿಲ್ಲಾ
ಬೀಮಪ್ಪ ಹೊಂಟನಾವಾಗ ಮೂರು ಸಂಜಿನಾಗ
ಹಲಗಲೂರಿಗೆ ಹೋಗಿ ನಿಂತಲ್ಲಾ
ಜಡಗಪ್ಪ ಕಂಡ ಕಂಣಿಲೆ
ಬಂದ ಶಿಟ್ಟಿಲೆ ಹೊಡದ ಕುದರಿ ಮೇಲ ॥ಚಾಲ॥

ಹಳಬರು ಅಂತಾರ ಕಡಿ ಬಡಿ ಕಂದರಿಯು
ತಡಿ ಹೊರಶಾರ ತಲಿ ಮೇಲ
ಬೀಮಪ್ಪ ಹೋದನೊ ಓಡಿ
ಬಂಗಾರದ ತಡಿ ಅವಗೆ ದೊರಿಲಿಲ್ಲಾ
ಅವಗೆ ದೊರಿಲಿಲ್ಲಾ
ಮುಂದವಳಕ ಹೋದ ಬೀಮಪ್ಪ
ಆದ ತಾರೀಪ ಹೇಳತಾನೆಲ್ಲಾ

ಹೇಳತಾನೆಲ್ಲಾ
ಮಾರಾಜಘತ್ರಿತೊ ಚಿಂತಿ
ಬಡೀತೋ ಭ್ರಾಂತಿ ಅನ್ನ ಉಣವಲ್ಲಾ
ಅನ್ನ ಉಣವಲ್ಲಾ ॥ತೋಡ॥

ಕಾರ ಸಾಹೆಬಗ ಮುಂಟ್ಟಿತೋ ವರದಿ
ಹೇಳಿದಾಗ ಸುದ್ದಿ
ಮುಲಕನ ಸಾಹೆಬ ಹೋಗಬೇಕೀಗ
ಎಷ್ಟಂತ ಕೇಡ ಹೇಳಲಿ
ಆತ ಮುದಕೊಲಿ...ಕತ್ತಿ ಕಾಲಾಗ ॥೩॥

ಮುಲಕನ ಸಾಹೇಬ ಬಾದೂರಾ
ಬಂದ್ದಿ ಸಮುಂದಾರ
ಮಾಡಿ ತಯ್ಯಾರ ಕಂದರಿಯು ಮುಂದಿ
ಅವರ ಸರಲಿ ಹೋದ ಕಾದು ಕಾದು
ಹರಕೇರಿ ಮೊಕಾಮು ಕೂಡಿತೋ ಗರದಿಕ್ಯಾದಾರಿ
ಬಾಡಪೆದಾರ ಬಂದ ಅವಸರ
ಹಲಗಲಿ ವಿಚಾರ ಹೇಳತಾನ ಸುದ್ದಿ
ಊರ ಸುತ್ತಲಿ ಬಂದೋ ಬಸ್ತಿ
ತಿರಗತತಿ ಗಸ್ತಿ ಏಳನೂರ ಮುಂದಿ
ಸಾವಿರ ಮುಂದಿ ಬೇಡಿಕಿ ನಿಂತ ಚೇವಕಿ ಮಾಡಿ
ಹಂಚಿಕಿ ಲಡಾಯಂದ ವರದಿ
ಮುದ್ದುಂ ಗುಂಡುಂ ಮಾಡ್ಯಾರುಂ ತಯ್ಯಾರಾ
ಮುಕ್ಕಳುಂ ಹೆಂಡರಾ ಹಿಡಿಸಿದರ ಹಾದಿ ॥ಚಾಲ॥

ಊರಾನ ರೈತರ ರಾಣೆರ
ಬೆಳ್ಳಿ ಬಂಗಾರಾ ಅವರ ಕೈಯಾಗ
ಅವರ ಕೈಯಾಗ
ಹಳಬರುಂ ಉಣತರೊ ಕುಂತು
ಬಂಗಾರದ ತುತ್ತು ಲಡಾಯಿಂದ ಕಾಲಾಗ
ಲಡಾಯಿಂದ ಕಾಲಾಗ
ಹತ್ತೆಂಟ ಕಡೂತಾರ ಬೇಟಿ
ಶರೇದ ಬಟ್ಟಿ ಇಟ್ಟತಿ ಊರಾಗ

ಇಟ್ಟತಿ ಊರಾಗ
ಮೈಯಲ್ಲ ಹಳದಿಯ ಮಣ್ಣ
ಕೆಂಪಿಯ ಚೊಣ್ಣ ತೊಸ್ತ ತಾನಿ ನಡಿನಾಗ
ತೊಸ್ತ ತಾನಿ ನಡಿನಾಗ
ಹಣಿ ಮೇಗ ಕೇಸರೀ ಗಂಧಾ
ಹೂವು ಮಕರಂದ ತಂರಾಯಿ ತಲಿಮ್ಯಾಗ
ತಂರಾಯಿ ತಲಿಮ್ಯಾಗ ॥ತೋಡ॥

ಜಾವಿಗಿ ಹಚ್ಚಿ ಲಾಲಬಂದ
ತಯಾರ ಗಂಡ ಮದ್ದ ರಂಜಕ
ಹರದೀತ ಬೆಂಕಿ ಕೈಯಾಗ
ಎಷ್ಟಂತ ಕೇಡ ಹೇಳಲಿ
ಆತ ಮದಕೊಲಿ ಕತ್ತಿ ಕಾಲಾಗ ॥೪॥

ಮಲಕನ ಸಾಹೆಬ ಕೇಳಿದ
ಬರದ ಕಾಗದ
ವಿಜಾಪುರಕೋದ ಕಂದರಿಯ ಸ್ವಾರಾ
ಕಾರ ಸಾಹೇಬ ಓದಿಕೊಂಡ ಚೀಟಿ
ಹೋದ ನಡಕಟ್ಟಿ ಆಗಿ ತಯ್ಯಾರಾ
ಹೊಂಟೀತ ಕಂದರಿ ಇನ್ನೂರಾ
ಕಾನಿ ಶಿಲೆದಾರಾ ಬಿಟ್ಟ ವಿಜಾಪುರಾ
ಶಿಪಾಯಿ ರಣಸೂರಾ
ಸಂಗಾಟ ತೊಗೊಂಡ ದಲ್ಬಲಾ
ಹೊಂಟನವಸರಾದಿನ ಆಯತವಾರ
ಬೆಳತನಕ ಬಂದಿತೊ ದಂಡ
ತಯ್ಯಾರ ಮದ್ದಗಂಡ
ಹಲಗಲಿ ಪುಂಡ ಕೇಳತಿವಿ ಹೆಸರಾ
ಅಂತಾನ ಕಾರಸಾಹೆಬ ಹೊಡೆತಿ
ರಣಗಂಬ ಕಾಯೊ ಈಶ್ವರಾ ॥ಚಾಲ॥

ಹದಿನೈದ ಮಂದಿ ಬೇಡಿಕಿ
ಇತ್ತ ಚವಕಿ ಕಲಾದಗಿ ಹಾದ್ಯಾಗ
ಕಲಾದಗಿ ಹಾದ್ಯಾಗ

ಅಲ್ಲೆ ಹೋಗಿ ಹತ್ತಿತೊ ಆಣಿ
ಒಳ್ಳೆ ಕಣಪಿಣಿ ಆಯಿಂತೊ ಆಡವ್ಯಾಗ
ಚಿಕ್ಕಂಣವರ ಬೀಮಂಣ ಮಾಡಿ ಕರಶರಣ
ಕತ್ತಿ ಹಿರದಾಗ
ಇನ್ನೂರ ಕಂದುಂರಿಗೆ ಒಬ್ಬ ಮಾಡಿದಾನ
ಗಾಬ ಒಂದ ಕ್ಷಣದಾಗ
ಒಂದಂ ಕ್ಷಣದಾಗ
ಇನ್ನೂರ ಲಳಿಗೆ ಆವಾಗ
ಅರಳ ಹುಂರಿಧಾಂಗ ಸಂತ್ರ ಅವನ ವೇಗ
ಸಂತ್ರ ಅವನ ವೇಗ ||ತೋಡ||

ಬೇಟ್ಯಾಗ ಬಿದ್ದಿತೋ ಹಂಲಿ
ತೊಕೊಂಡರ ತಲಿ
ಪುಂಡ ಹಲಗಲಿ ಹೆಸರ ನಾಡಾಗ
ಎಷ್ಟಂತ ಕೇಡ ಹೇಳಲಿ
ಆತ ಮಂದ ಕೊಲಿ ಕತ್ತಿ ಕಾಲಾಗ ||೫||

ಸರದಾರ ಹೇಳತಾನಲ್ಲಾ ಲಡಾಯಿಂ ಮಾಡುಂದಿಲ್ಲಾ
ಕಾಳ ಕತ್ತಲಾ ಆಗಲೀ ಬೆಳಕ
ಹಿರಿತಾನ ಮಂದಿ ಕರಶ್ಯಾನು
ಬಂದ್ದಿ ಹೇಳ್ಯಾನಂ ಮಾಡಬೇಡ ಸೊಕ್ಕ
ಬೇಡಿಕಿ ಜನಾ ಮಂಳ್ಳ ಕಂಲಾ
ಆಗಿ ಕಂಶಿಯಾಲಾ ಕತ್ತಿ ಕೊಡಲಿಲ್ಲಾ
ಆಗಿನ್ಯಾಳೀಕ
ಮ್ಯಿಮಂರತಂ ಮಂಲಗಿತೊ ಮಂದಿ
ಹತ್ತಿತೊ ನಿದ್ದಿ ಹೊತ್ತ್ಂ ಏರಂ ತನಕ
ಮಂಲಕನ ಸಾಹೆಬ ಬಾದೂರಾ
ಕಂದಂರಿ ಮುಂನ್ನೂರ ತೊಗೊಂಡ
ಅವಸರ ಬಂದ ಬೆಳತನಕ
ದಂಡಾಯಿಂತೊ ಊರ ಸಂತ್ರಲಿ
ಹಚ್ಚಿಧಾಂಗ ಬೇಲಿ ಮಾಡಿದಾನಂ ಗಿರಕ ||ಚಾಲ||

ಬೆಳಗಾಗಿ ಬಂತೊ ಹೊತ್ತೇರಿ
ಬಂದವೋ ಕಂದುಂರಿ ಕೆರಿಯಂ ದಂಡ್ಯಾಗ

ಕೆರಿಯಂ ದಂಡ್ಯಾಗ
ಐವತ್ತ ಮಂದಿ ಹಳಬಿಕಿ ಇತ್ತ ಚವಕಿ
ಕರೆಂಣನ ಹಂಡೆದಾಗ ತಯ್ಯಾರ ಆದಾರ
ನಡಕಟ್ಟಿ ನಿಂತರ ಸಂತ್ರಗಟ್ಟಿ ವಗದರಾವಾಗ
ವಗದರಾವಾಗ
ಕಂದುರೆವರಂ ವಗದರೊ ಗಂಂಡಂ
ಹಳಬರ ಬಂಡು ಏನ ಹೇಳಲೀಗ
ಏನ ಹೇಳಲೀಗ ॥ತೋಡ॥

ವಂಳಿ ಸುರಿಧಾಂಗ ಆದಿತೋ ಗಂಂಡ
ಕೈಕಾಲ ರಂಂಡ ಹಾರಿಧಾಂಗ ಚಂಡ
ಚಿಣಿ ಪುಟಧಾಂಗ
ಎಷ್ಟಂತ ಕೇಡ ಹೇಳಲಿ
ಆತ ವಂದ ಕೊಲಿ ಕತ್ತಿ ಕಾಲಾಗ ॥೬॥

ಗಂಂಡಿನ ಸಪ್ಪಳ ಕೇಳಿ ಹಿಡಿತಂ ಹಂಲಿಗಾಳಿ
ಹೆಂಡರ ಗಂಳದಾಳಿ ಹರದರಾವಾಗ
ಕಾಲಂಂಗರೊಡರೊ ಬಳಿ ಉಬ್ಬಿಯಂ
ಹೋಳಿ ಹತ್ತಿತೊ ಊರಾಗ ಊರೆಲ್ಲ
ಓಣಿ ಹೂಡಕಿ ಶಿಕ್ಕ ಬೇಡಿಕಿ
ಇಟ್ಟ ತಂಬಾಕಿ ಅಡ್ಡಬಿದ್ದರಲ್ಲಾ
ಬಾಬಾಜಿ ನಿಂಬಳಕರ ಕಂಡಲಿಲ್ಲ ಹತಾರ
ಒಗದರಾವಾಗ ಅಂತಾನ
ಜಡಗ ಬಾಲಂಣ ಮಾಡಿ ಕರಶರಣ
ತೆರಿಬೇಕೊ ಕಂಣ ಹಳಬರಾ ವೇಗ
ಏನಂ ಮಾಡುದೆಲ್ಲ ಮಾಡರಿ
ಕೊಲ್ಲಬೇಡರಿ ವೈದಂ ಅಡಿವ್ಯಾಗ ॥ ಚಾಲ ॥

ಊರಸಂತ್ರ ಹಚ್ಚಿದಾರ ಬೆಂಕಿ
ಸಂಟ್ಟಂಗ ಲಂಕಿ
ಹೋಗಿ ಹಣಿವಂತ
ಊರಾಗ ಆಯಿಂತೊ ಗಡಬಿಡಿ
ದಂಡನಾ ತಂಕಡಿ ಮಾಡಿದ ಶವಂರಂತ

ಮಾಡಿದ ಶಮರಂತ
ಜಗಳಾದೀತೊ ಶರಸೂರಿ
ಕಡಧಾಂಗ ಕಂರಿ ಹರೀತ್ಹೊ ರಗತ
ಹರೀತೊ ರಗತ
ಬೇಡಿಕೆ ಮಂದಿ ಮಂರದಿತಂ
ಮನಿಯಂ ಹೊಕ್ಕಿತಂ ಮಂನಿದ ಭಗವಂತ
ಮಂನಿದ ಭಗವಂತ
ಕಾರ ಸಾಹೆಬ ಬೆನ್ನ ಹತ್ಯಾನು
ಬೆಂಕಿ ಹಚ್ಚ್ಯಾನಂ ಸತ್ತರಾವಾಗ
ಸತ್ತರಾವಾಗ ॥ ತೋಡ ॥

ಊರ ಸಂಟ್ಟ ಹಾರಿತೊ ಹೊಗಿ
ರಯಂತರ ಜಿವ ಹೋಗಿ
ಆಯಿಂತೊ ಸೂಲಗಿ ಮಊರ ಘಳಿಗ್ಯಾಗ
ಎಷ್ಟಂತ ಕೇಡ ಹೇಳಲಿ
ಆತ ಮಂದ ಕೊಲಿ ಕತ್ತಿ ಕಾಲಾಗ ॥ ೭ ॥

ಊರೆಲ್ಲ ಬಿದ್ದವೋ ಹೆಣ
ಆದತತಿ ರಣ ಲಂಕೆ ಪಟ್ಟಣ ಹಾಳಬಿಧಾಂಗ
ಸರಕಾರ ಜರಬ ಕಂಂಪಣಿ
ನೋಡತರ ಮನಿಹೊಕ್ಕ ಆವಾಗ
ಆರವತ್ತ ಮಂಂದಿ ಹಳಬಿಕಿ
ಹೊತ್ತ ತಂಬಾಕಿ ನಿಂತ
ಬೇಡಿಕಿ ಎರಡಂ ಆಗಶ್ಯಾಗ
ಓಡ್ಯಾಡಿ ಕಡಂವ ಹಂಡಂಗರಂ
ಓಡಿ ಹೋದರಂ ಗಂಡ್ಡದ ವಳಗೆ
ಕಾರ ಸಾಹೇಬ ಆಗಿ ವಳಿ ಶಿಟ್ಟ
ಅಂತಾನೊ ಬಂಟ ಹಳಬರಾ
ಚೆಟ್ಟ ಹಾರಿಶ್ಯಾನಾಗ
ಆಗ ತಯ್ಯಾರಾದರ ಸಂಗಟ
ಬಿದ್ದಿತೊ ಗಂಟ ಹಲಿಗಲಿಗೆ ನಮಂಗ ॥ ಚಾಲ ॥

ಶಿಕ್ಕಪ್ಪ ಹಳಬರೆಲ್ಲರು
ಹಿಡದ ವೈದರಂ ಶಾರ ಮಂದವಳಕ

ಶಾರ ಮಂದವಳಕ
ನಿಂತಾನ ಬಾದನಿ ಬೀಮಂಣ
ಚುರಚಿ ರಾಮಂಣ ಸಾಹೆಬನಂಥ್ಯಾಕ
ಸಾಹೆಬನಂಥ್ಯಾಕ
ಅವರಿಬ್ಬರನ ಕೂಡಿಸಿ
ಕೊಟ್ಟರೋ ಪಾಶಿ ಆಗಿನಾಕ್ಷಣಕೆ
ಆಗಿನಾಕ್ಷಣಕ
ಬಾಲ ಬಸರಂಣಾ ಇಬ್ಬರಿಗೆ
ಕಟ್ಯಾ್ಯರ ತೋಪಿಗೆ ಬಿದ್ದವೊ ತಂಣಕ
ಬಿದ್ದವೊ ತಂಣಕ ॥ ತೋಡ ॥

ಒಂಬತ್ತ ಮಂದಿ ಹಳಬರಾ
ಕಂಬಕಂಬಕ ಕಟ್ಯಾ್ಯರ
ಗಂಂಡಿಲೊಗಶಾರ ಮಂದೊಳದೂರಾಗ
ಎಷ್ಟಂತ ಕೇಡ ಹೇಳಲಿ
ಆತ ಮಂದ ಕೊಲಿ ಕತ್ತಿ ಕಾಲಾಗ ॥ ೮ ॥

ಕಂಬಕ ನಿಂತ ಜಡಗಂಣ
ಲಕ್ಷಮಿಂ ಭರಮಂಣ
ಆಮಾತ್ಯಾ ಗೋವಿಂದಂಣ
ಹುಚ್ಚ ಬಾಯೀಲೆ ಅಂತಾನ
ಹೊಲ್ಯಾರ ದ್ಯಾಮಂಣ ಎಲ್ಲಪ ಬಾಗಂಣ
ನೋಡಿರಿ ಮೇಗ ಆರ ಮಂದಿನ
ಹಲಗಲಿಗೆ ತಂದಂ ಹಚ್ಚಿರ ಜೇರ ಬಂದಂ
ಕಂಬಕ ಬಿಗಿದಂ ವಗದಾರ ಗಂಂಡೀಲೆ
ಆಳತಾನ ಸರವಿ ಸಾಬಂಣನರಿ
ರಾಮಂಣ ನೋಡಿ ಹಲಗಲಿಗೆ ಬಂದ
ಭಂಡಿಗಂಣೆನ ನಿಂಗಪ್ಪ
ಹಂಡೇದ ಕರಿಯಂಪ್ಪ ಗಿಡ್ಡ ಎಲ್ಲಪ್ಪ
ನೋಡಿರಿ ಸುತ್ತಾಲಿ ಅಂತಾನ
ಶಿರಗುಂಪ್ಪಿ ಹನುಮಪ್ಪ
ಒಗಿ ನಂಮಪ್ಪ ಜೀವ ಹೋಗಲಿ ॥ ಚಾಲ ॥

ಉಳಕಿ ಮಂದಿಯೆಲ್ಲ ಬಿಟ್ಟರು
ಹುಕುಮು ಕೊಟ್ಟರು ಊರಾಗ ಇರಲಾಕ
ಊರಾಗ ಇರಲಾಕ
ಇಂಗ್ರಾಜ ಭಾದುರಾ ಧನಿ ಹುಕುಮು
ಕುಂಪನಿ ಸುತ್ತ ರಾಜೇಕ
ಸುತ್ತ ರಾಜೇಕ
ಅನ್ಯಾಯು ಮಾಡಲಾಕಿಲ್ಲ ಶಾಸ್ತ್ರ ಇಂಜಾಲ
ಓದಿ ಪುಸ್ತಕ ಕೃಷ್ಣ ದುಂಡಿಲಿ
ಗಲಗಲಿ ಊರಾಗೈಬು
ದೇವರ ನಿತ್ಯ ಸೇವಾಕ
ನಿತ್ಯ ಸೇವಾಕ
ಹಶೆನ ಸಾಹೆಬ ನುಮು ವಸ್ತಾದ
ಕವೇಶ್ವರ ಮರ್ದ ಇದ್ದ ಅಬದಾಕ
ಇದ್ದ ಅಬದಾಕ ॥ ತೋಡ ॥

ಬಾಳರಾಮು ಹೇಳಿದ ರಹಿಮಾನ
ಹಲಿಗಲೊರ್ತಮಾನ
ಕೇಳತತಿ ಜನ ಕುಂತ ಸಭೆದಾಗ
ಎಷ್ಟುಂತ ಕೇಡ ಹೇಳಲಿ
ಆದ ಮಂದ ಕೊಲಿ ಕತ್ತಿ ಕಾಲಾಗ ॥ ೯ ॥*

---

* /song stress/ ಬಾಳಿ ಇಂಟಿ
ಗುಳೇದಗುಡ್ಡ ೩೦ನೇ ಜಾನೆವಾರಿ ೧೮೭೪ ಇ ॥

(ಒಂದು ಸಂಕ್ಷಿಪ್ತ ಸಹಿ ಇದೆ.)

೯. ಕಿತ್ತೂರ ಚನ್ನವನ ಪದ

ಧೊರೀ ಚನ್ನವನ ಸೊಸೀ ಹೋದಳು ಶೆರೀ
ಕಿತ್ತೂರ ರಾಜ್ಯಕ ಇಲ್ಲ ದೊರಿಯೇ ॥ ಪಲ್ಲ ॥

ಸುಬೇದಾರ ಬಂದಾನು ಹೊಂಗಾಲತಳಕೆ ನಿಂತಾ ದಂಡ
ಕಂಡಿಶ್ಯಾನೊಂದ್ವಿಪರೀತ ದಂಡಿಘೇಳತಾನ
ಬಾಳೆಚ್ಚರ ಇರಂತಾ
ರಾಯಣ್ಣಾ ರಾತ್ರಿ ಬರತಾನಂತಾ ಡಂಗರ ಹೊಡಿಶ್ಯಾನ
ಅವನೂರ ನೋಡಿರೆಂತ
ನಾಳಿ ಹೋಗೂನು ಸೋಮಾರದೊತ್ತ
ಚವಕಿ ನಿಂತತಿ ಸವಾನೂರ ಕುಂದರಿ
ಕಿತೂರ ರಾಜ್ಯಕೆ ಇಲ್ಲ ದೊರಿಯೆ ॥ ೧ ॥

ಸೋಮಾರದುಂದಿಯಂಕೆ ಮಂಸಲತ ಮಾಡ್ಯಾರಲ್ಲ
ಪಾಲಕೀ ಮಾಲಿಗೋದರಲ್ಲ
ದುಂಖಾ ಮಾಡ್ಯಾಳ ಶಿವ ಸಾವ ಕೊಡಲಿಲ್ಲಾ
ಎಡಾ ಬಲ ಮನಿ ಮಕ್ಕಳಿಲ್ಲ
ಹನ್ನೆರಡ ಸಾವಿರದರ್ಬಲಾ ಮಂಣಗಿತಲ್ಲ
ಶಿಲೇದಾರ ಸರದಾರ ಒಬ್ಬಲ್ಲ
ಮನಿಯು ದೇವರ ವೀರಭದ್ರ ಪರಬುನಲ್ಲ
ಆಕಿ ವೆಳ್ಳಕ ಯಾರ್‍ಯಾಕ ದಿಕ್ಕಿಲ್ಲ
ದುಃಖಾ ಮಾಡ್ಯಾಳ ಅತ್ತಿ ಮಾವ ನೆನೆಸಿ ಭಾರಿ
ಕಿತ್ತೂರ ರಾಜ್ಯಕೆ ಇಲ್ಲ ದೊರಿಯೆ ॥ ೨ ॥

ಪಾಲಕಿ ಸುತ್ತಮುತ್ತ ನೋಡು ಕೆಂಪ ಕಂಡತಿ ಭಾರಿ
ಸಿಲೇದಾರ ಸರದಾರ ರಾವುತರು
ರಾವಜೀಟ್ಯೆತಿ ಮುಂದ ಮುಂದ ಸುಬೇದಾರಗ
ಟೇಪೋಲ ಸಂಗಾಟದಲ ಬಾಲಾ
ಹೊಂಗಲನು ಬಿಟ್ಟು ಅವನುರನ ಹೊಂಡಿಶ್ಯಾರು
ಸಂಗೊಳ್ಳಿ ಹಾದಿ ಹಿಡಸಿದರು
ಅತ್ತಿ ರುದ್ರವ್ವಗೆ ನಿಂತ ಕಾಯಿ ಮಡಸಿದರು
ಕೊಡಾಪುರ ಮುಕ್ಕಾಮು ಮಾಡಿದರು

ಗರಗಧಳ್ಳ್ಯಕ ಅಲ್ಲಿ ಢೇರೆ ಹೊಡಿಸಿದರು
ರಾಯುಂಣಾನ ಹಾದಿ ನೋಡಿದರು
ರಾಯುಂಣ ಬರಲಿಲ್ಲ ಸುಭೇದಾರ ಶಿಟ್ಟು ಭಾರಿ
ಕಿತ್ತೂರ ರಾಜ್ಯಕೆ ಇಲ್ಲ ದೊರಿಯು ॥ ೩ ॥

ಸುಬೇದಾರ ಹೇಳತಾನ ಯಾಕ ದುಃಖಾ ಮಾಡಿ ಅಳತಿ
ಅಲ್ಲಿ ಹೋದಲ್ಲಿ ಖುಶಾಲ ಇರುವಂತೆ
ಮಾಲ ಇಳದಾಳ ಇಂದೀಗೆ ಎರವಾಯಿತು
ಪಾಲಕಿ ತಯ್ಯಾರನಾಗೇತಿ
ದುಃಖ ಮಾಡಿಕೊಂತ ಪಾಲಕಿ ತಾನು ಹತ್ತಿ
ಆಕಿ ಹಿಂದ ಮುಂದ ಬಟುಂಗಿ ಆಗುಂತೈತಿ
ಚೌರಿ ಚಾಂಬೂರಿ ಹಾರ್‍ಯಾವು ಎಡಬಲಕೆ
ಆಕಿ ಇಡ ತೇಜಿ ಮುಂದ ನಡೂತತಿ
ಹಗಲಿ ದೀವಟಿಗೆ ಹಿಡಿಶ್ಯಾರ ಅಪತಗೀರಿ
ಕಿತ್ತೂರ ರಾಜ್ಯಕೆ ಇಲ್ಲ ದೊರಿಯು. ॥ ೪ ॥

ಬುಧವಾರದುಧಿಯಾಕ ಧಾರವಾಡಕೆ ಓದರಲ್ಲಾ
ಆಕಿ ಮುಜಕೂರ ಟೀಕ ಕಾಣಲಿಲ್ಲಾ
ಕುಸುಂಗಲ್ಲ ಶಹರಾ ಅಲ್ಲಿ ಮುನಿ ಮಾಡ್ಯಾರಲ್ಲಾ
ಆಕಿ ದುಃಖ ಸಮುಸವರ್‍ಯಾರಿಲ್ಲ
ಮುಲರ ಫಕೀರ ಕಂಡಷ್ಟು ಹೇಳಿನಲ್ಲಾ
ಆಕಿ ಮೋಜಿನ ಸಿದ್ಧಕ್ಯಾಲ_ಬಾಳಾಡಮುಂಗಿ
ಬಸುಂಣ ಡಪ ತುರಾಯಿ ಹಚ್ಯಾನ ಬಾರಿ
ಕಿತ್ತೂರ ರಾಜ್ಯಕೆ ಇಲ್ಲ ಧೊರಿಯೆ ॥ ೫ ॥*

---

* /song stress/ ಬಾಳಿ ಇಂಟಿ
ಗುಳೇದಗುಡ್ಡ ೩೦ನೇ ಜಾನೆವಾರ ೧೮೭೪ ಇ॥

(ಒಂದು ಸಂಕ್ಷಿಪ್ತ ಸಹಿ ಇದೆ)

೧೦. ನರಗುಂದ ಮೇಲಿನ ಹಾಡು

ದೊಡ್ಡ ಶಾರಾ ಪಗಡಿ ಬಾಜಾರಾ ।
ಐತಿ ಬಾಳ ದೂರಾ । ಕಾಣಸ್ತೈತಿ ಚಂದಾ ॥
ಬೆಳವಲಾ ದೇಶ ಬಲಂ ಸೂರಿ ಆತೊ ನರಗುಂದ ॥ಪಲ್ಲ॥

ನಾಡವಳಗ ಇಲ್ಲ ಇದರ ತಾಡಿ ।
ಕಲ್ಲ ಪಡಿಪಡಿ ।
ವೆಂಕೋಬಾನ ಗುಂಡಿ । ಗುಂಡ್ಡದೋರ್ಯಾಗ ।
ಆ ಗುಂಡೀ ವಿಸ್ತರಾ ವರ್ಣಿಸಿ ಪೇಳ್ವೆನಂ ನಿಮಂಗ ।
ಏನಂದರದರ ವಿಸ್ತಾರಾ ।
ಗಚ್ಚ ಮೌನಾಗಿರಾ ಗಡ್ಡಿಯಾ ತೇರ
ಚಾವಣಿವೇಂಗ । ಹಂಚಿನಾ ಲ್ಯಾವಿ ನೋಡಂ
ಇಳವಿದ ವಿಸ್ತಾರ ಹ್ಯಾಂಗ ।
ಏನ ಗರಡಗಂಬದ ವೇಂಗ [1]ಗ[1]ಡಗಿ ।
ಖಂಡೇದ ವಂಡಿಗಿ ಹೊಂದಿಶಾನ ಬಡಗಿ
ಶಹಣೆ ಬಲ್ಹಾಂಗ ।
ಯೇನ ಪದರಗಂಬ ನೋಡೊ
ಚದುಂರ ವಿಚಿತ್ರದರೊಳಗ ।
ಯಂಡಬಲಕ ನೋಡಿದರ ಹಂಡಿಕಿ ।
ಬಣ್ಣದಾ ಕಿಡಿಕಿ ॥
ಒಂದಂ ಬೆಟ್ಟಡಿಕಿಯಂಷ್ಟು ಕೊರದೀಗ ।
ಏನ ತಂಳಸಿಕಟ್ಟಿ ಶೃಂಗಾರವು
ನಡುಗುಂಡಿಯಾಗ ।
ಕೆತ್ತಿ ಪಡಕ ಹೊಂದಿಸ್ಯಾನ ವೇಂಲೆ ।
ಕಬ್ಬಿಣದ ಕೀಲ ।
ಉಕ್ಕಿನಾ ತಾಲ ಕೊಂಡಿ ಆದರಾಗ ।
ಏನ ಗಂಟಿ ಜಾಗಂಟಿ
ಪಾತಾಳಂಕಣದಾಗ ॥ಇಳವು॥

ಬಹಳ ಚಾತೂರ್ಯದ ಗಂಡಿಯೊ ।
ಸಂತ್ತಿನಾ ಪೌಳಿ ಕಲ್ಪಡಿಯೊ ।
ಜರದ್ಧಣಿಯಂದವ್ಮಾಸಬರ್ಧಿಡಿಯೊ ।

---

1 ಗು ? ಗೂ ?

ಆವೇಲೆ ತೋರಸ್ತೀನ ನಡಿಯೊ ।
ನೆಲಕ್ಕಿ ಗಚ್ಚು ತಿಳಿಮಂಡಿಯೊ ।
ಅಲ್ಲಿ ಸಣ್ಣ ಬಿದರಿನಾ ಚಡಿಯೊ ॥ಏರಂ॥

ಬಹಳ್ಹೊತ್ತು ನಿಂತಂ ನೋಡಿದೆ ।
ಅಕಲದ್ಹಾಂಗದೆ ।
ಹೀಂಗ ಪದೆಪದೇ ನೋಡೊ
ಸಂತ್ರು ಬಂದಾ । ಬೆಳವಲಾ ॥೧॥

ಉದಿಯಂಕ್ಕ ವೆಂಕೋಬಾನ ಪೂಜಿ ।
ಆಗೋದಂ ಬಲ ಸಾಜಿ ।
ಬಾಗಿಲದೊಳಂ ಬಾಜಿ ಆಗತಾವ ನಾಲ್ಕು ।
ಕಂಚಿನಾ ಕಾಳಿ ನೋಡಂ
ಹಿಡುಂವತಾವು ಕ್ಷಣಕ್ಷಣಕೆ ।
ವಾದ್ಯವಾಗೂದಂ ಅವನ ಬದೀಲೆ ।
ಶಂಖು ಜಾಗುಂಟಿಲಿ । ತಾಳ ಮಂದ್ದಲಿ ।
ಬಾರ್ಸಿ ಹಾಡಾಕ ।
ಏನ ವೀಣ ತಾಂಬೂರಿ ಸಾರಂಗಿಯಂ
ಸ್ವರ ಟೀಕ ।
ಸ್ನಾನಾ ಮಾಡಿ ಬಂದರೊ ಬ್ರಾಹ್ಮರಾ।
ಹಿಂಡಂ ಥರಥರಾ ।
ವೋದಿ ಮಂಂತರ ಮಾಡಿ ಅಭಿಷೇಕ ।
ಏನ ತಾಲಿ ತಂಬಿಗಿಯಿಂಟ್ಟಕೊಂಡರಂ
ಯಂಡಬಲಕ ।
ಅಕ್ಷತೀ ಹಚ್ಚಿದರಂ ಗಂಧ ।
ಪುಷ್ಪ ಒಂದೊಂದ ಕಿರೀಟವ ತಂದ
ಮಂಸ್ತಕದ ವೇಂಲೆ ।
ಏನ ಹಸರ ಪಚ್ಚ ಶಿರಪೇಚ
ಹೊಳೂತಾವ ಜಂಳಕ ।
ಆಗ ಬಂದಿತೊ ಉಪಾಧ್ಯರಗಂವಿಷಾ ।
ಗುಡಿಯಂಂ ದಿಮಿಂದಿಮಿ ಕಂಚಿನಾ ಸವೇಂ
ಉರುತ ಲಕಲಕ ।
ಆ ದೀವಿಗಿ ಬೆಳಕಂ ಬಿದ್ದಿತೊ ಸಿಂಹಾಸನಕ ।

ಅವರಂ ಮಲಗಂ ಮಂಚ ಬಲು ಇಂಬು ।
ತೀಪ ಅದರ ತಂಬು ।
ಕುತನಿ ತಲಿಗಿಂಬು । ಅವಗ ಮಲಗಾಕ ।
ಬಹಳ ಸ್ನೇಹದಿಂದ
ಸ್ವಪ್ನ ನಿದ್ರಿ ಮಾಡ್ಯಾರೊ ಬೆಳತನಕ ॥ಇಳವು॥

ದೃಢ ಭಕ್ತಿವಂತ ಪೂಜಾರಿ ।
ಅವ ನೈವೇದ್ಯ ತಂದನೊ ಬ್ಯಾರಿ ।
ಹಸೆ ಹಾಲಂ ಚಿನ್ನಿ ಸಕ್ಕರಿ ।
ತಂಪ್ಪದಾ ಆಣ ಬುರಬೂರಿ ।
ಕಾರೀಕಾ ಖಜೂರ ವಣಖೊಬ್ರಿ ।
ಮೇಲೆ ಫಳಾರ ತಂದ ಚೂರಮರಿ ॥ಏರಂ॥

ಇಷ್ಟೆಲ್ಲ ತಂದ ತನ್ನ ಸ್ವತಾ ।
ದೇಹಕ ಹಿತಾ । ಕಂತ ಅರ್ಪಿತಾ ।
ಸ್ವಾಮಿಂ ಸಲಿಸಂದಾ ॥೨॥

ಆ ಊರಿಗೆ ಬಾಬಾಸಾಬ ಧೊರಿ ।
ಪಾಗಾದ ಪನ್ನಾಗ ಕುದರಿ ।
ಚಿಪಾನಿಯಂ ಮರಿ ಬಂತೊ ಶೃಂಗರಿಸಿ ।
ಅವರಳಿವಿನ ಬಂಣದ ಚೌಡಾಲಂ ಅಂಬಾರಿ ಬಿಗಸಿ ।
ತನ್ನ ರಂಗಮಾಲಿನಾಗ ಧಣಿ ಕೊಟ್ಟ ಅರಮನಿ
ಪಾತ್ರದ ಚಂದ್ರಾಸಾನಿ ಅವರ ಸ್ತ್ರೀಯಂರಸಿ ।
ಏಕಾಂತ ಕೋಣೆಯೊಳಂ ಹೋಗಿ ಕಂತರೊ ಪುರಮಾಸಿ ॥
ಏಕಾಂತ ಕೋಣಿ ತಾರೀಪ ।
ರಂಗಮಂಟಪ । ಮಂಚದ ಮೇಲೆ ತೀಪ ।
ಕುತನಿಯಂ ಗಾಸಿ ।
ಏನ ಬಂಣದ ರಾಜಿಯಂ
ಗಂಜಿಯಂ ಹಚ್ಚಡ ಹಾಸಿ ।
ಅಲ್ಲೆ ಹೋಗಿ ಕಂತರಿಬ್ಬರುಃ ।
ತಬಕದಾಗ [1]ಮಾ[1]ರಂ ।
ತಂದ ಅಭೀರಂ ಕೊರಳಿಗೆ ಧರಿಸಿ ।

---

1 ಪೂ

ತನ್ನ ಮಾನಿನಿ ಕಂಡಂ
ಹಂರಿಯಂ ಮಾಡತಾನ ವಿಲಾಸಿ ।
ಬಹಳ ಮೌಜಿಲಿ ಮಾಡಂವರೋ ಹ್ಯಾಂಗ ।
ಮಂಚದ ವೇಗ ।
ಆಡಿ ಚದರಂಗ ಅವನ ಸೋಲೀಸಿ ।
ಬಹಳ ಕುಶಾಲದಿಂದ ಮಾಡತಾರೊ ನಗಿಹಾಸ್ಯ ॥ಇಳವು॥

ಅವ ಬಂದ ಹರಿಯಾಗಿನ ಹೊತ್ತು ।
ಮಹರ್ಬಲಾ ಅವನ ಮಂದಿ ಸಂತ್ತು ।
ಇರಬೇಕಂ ಇಂಥಾ ದೌಲತ್ತು ।
ಏನಬರದ ಬ್ರಮ್ಹ ಲಿಖಿತಂ ॥ಏರು॥

ಧನಿ ತಾನಂಬೂದಂ ಹಬಿಹಬಿ ।
ಹೊನ್ನಿನಾ ಹಬಿ ।
ದೇವೇಂದ್ರನ ಸಭೆ ಇಳದ ಬೇಗಬಂದ ॥ಬೆಳವಲ॥ ॥೩॥

ದೊಡ್ಡ ಮಂಹರಾಯಂಂದಂ ಧನಿಕಿಲ್ಲೆ ।
ಗಂಡ್ಡದ ಮೇಲೆ ಐತಿ ಬಹಳ ಶಲೆ ।
ನೀರಿನಾ ಜವಳಾ ।
ಆ ಗಡದ ಒಳಗ ನೀರಿನ ವಿಶಾಲ್ಯವು ಬಹಳ ।
ಮತ್ತೊಂದು ಮಾಡ್ಯಾನು ಮಸಲತ್ತು ।
ಜಕೇರಿಯು ಗೊತ್ತು ।
ಸಕಲ ಸಾಹಿತ್ಯ ಹೊಟ್ಟಿಯಾ ಕೂಳಾ ।
ಏನ ಹಗೇವ ಅಂಬರೀ ಕಡಿಸಿ
ತುಂಬಿದರ ಜೋಳಾ ।
ಆಗ ಬಿಟ್ಟಿತು ಪಡವಲ ಗಾಳಿ ।
ಬಂತೊ ಜಡಿ ಮಳಿ ।
ಹತ್ತಿರೇ ಖಾಳಿಗೊಂಡು ರ್ಝುಳರ್ಝುಳಾ ।
ಆಕಾಶಕ ಟೋಪ ಹೊಡುವತಾರೊ ಕೆಂಧೂಳಾ ।
ಕಾದಾಡಿ ಕಲಕಿದವೊ ಕಣ್ಣ ।
ಬಾರೊ ಕಾಳಣ್ಣ ಮಾರಿ ಸಣ್ಣಣ್ಣ ।
ಮಾಡಿದಾನೊ ಕಾಳಾ ।

ದಂ[1]ಖ[1]ದಲಿ ಕಣ್ಣತುಂಬ
ನೀರ ಬಂದವೊ ಬಳಬಳ ॥ಇಳವು॥

ಅಸ್ಕರೀ ಆತೊ ಲಢಾಯಿಂ ।
ಆಗ ತಪ್ಪಿತೊ ಕಾಳಣ್ಣನ ಕೈಯಿಂ ।
ಶಿಷ್ಟಿಲೆ ರಾಮಂದುರ್ಗ ಬಾಯಿಂ ।
ಇನ್ನೇನೊ ಇದಕ ಉಪಾಯಿಂ ॥ಏರಂ॥

ಬಪ್ಪರೇ ಪುಂಡ ಬಹದೂರಾ ।
ದೊಡ್ಡ ಸರದಾರಾ ।
ರಾಜ್ಯಕ ಜಾಹೀರ ಮಾಡಿದೊಂದೊಂದಾ ॥ಬೆಳವಲ॥ ॥೪॥

ಹಿಂದಿನಾ ಕರ್ಪದನತಗಿ ।
ಆರೇವು ಅದರ ಬಗಿ
ಹಿಂದಕ್ಕ ಹೀಂಗಾಗಿ ಹೋಗಿತ್ತೊ ಹಳೆಮಾತಂ ।
ಇಂಗ್ರೇಜಿ ಅವರಿಗೆ
ಮತ್ತೊಂದ್ಮಾಡ್ಯಾರೊ ಮಸಲತ್ತು ।
ಬಾಜಿರಾಯಂ ಇದ್ದಾಗಿನ ಗಂಟ್ಟಾ
ರಾಜನ ಬೊಬ್ಬಾಟ । ಮಾಡಿದಾರ ಹಟಾ ।
ಕತ್ತಿ ಕೊಡರೆಂತ ।
ಬಹಳ ಬಹಳ ಥಾಂದಲೆ ಪಾಳ್ಯಗಾರರ ಸುತ್ತ ।
ಈ ಸುದ್ದಿ ಕೇಳುಂವದು ತಡಾ ।
ಜಲದ ಭಡಭಡಾ ಹೋಗಿ
ತನ್ನ ಗಡದ ಮೇಲೆ ಹೋಗಿ ಕುಂತಾ ।
ತನ್ನ ಮಂದಿಗ್ಹುಶಾರಿ ಹೇಳತಾನೊ ತಾ ಸ್ವಸ್ಥಾ ।
ಇಂಗ್ರೇಜಿ ಶೋಧಿಸೀ ನೋಡಿ ।
ಆದಿತೊ ಗಡಿಬಿಡಿ ।
ಬಂದರೋಡೋಡಿ ಊರ ಸುತ್ತಮುತ್ತ ।
ನಮ್ಮ ಭೆಟ್ಟಿಗೆ ಬಾರೊಂದದಾವು ಮೂರ ಮಾತಾ ।
ನಾ ಬರುಂವದಿಲ್ಲೊ ನಿಮ್ಮ ಭೆಟ್ಟಿ ।
ಮಾಡಬ್ಯಾಡ್ರೊ ಹಟಿ ।
ಬರದ ಲಕೋಟಿ ಕಳುಹಿ ತಾ ಕುಂತ ।

---

1 ಖ

ನೀವು ಹೇಳಿದ ಚಾಕರಿಗ್ಹಾಜರ ಇರತೇನಂತ ।
ಇಷ್ಟ್ಯಾಕೊ ಬಿಡೊ ನಿನ್ನ ಕೋಪಾ ।
ಚಲ್ಲಿಶಾವೊ ಟೋಪ ।
ಗಂಧಕ ಮದ್ದಿನಂಪ್ಪ ಹೇರಿ ಕಳಸಂತ ।
ರಖವಾಲಿ ಕಂದರಿ
ಧಾರವಾಡಕ ಕಟ್ಟಿದವು ಸೇತ ॥ಇಳವು॥

ಆವರಿಬ್ಬರದಂ ಸುರಳೀತಾ ।
ಮಾತಾಡತಾರೊ ಏಕಾಂತ ।
ನೀ ಬಿಡೊ ಮನಸಿನನ್ನ ಚಿಂತಾ ।
ಬಂದ್ಧಿ ಹೇಳತಾರೊ ಹೀಂಗಂತಾ
ಸವಿ ಅಡಿಗಿ ಊಟ ಮಾಡೊ ಕುಂತಾ ।
ನಿನ್ನ ಮಾಲಿನೊಳಗ ನೀ ಸ್ವಸ್ಥಾ ॥ಏರಂ॥

ಇಂಗ್ರೇಜಿ ಆದರೊ ಏಂತ್ರ ।
ನನಗ ಬಾಯಿಂ ಸತ್ವ । ಆಗುಂವ ಕರ್ತುಂತ್ವ ।
ಪೇಳುವೆ ನಿನ್ನ ಮುಂದ ॥ಬೆಳವಲ॥ ॥೫॥

ಧನಿ ಕಡೇ ಇಲ್ಲ ಜರ ಕುಂದ ।
ಅನ್ನೇವು ಯಾವದಾ ।
ಹೇಳಿ ಕಳುಂವಿದಾನೆಲ್ಲ ನುಣ್ಣಗ ।
ಮುಸಲತ್ತ ಹುಂಟ್ಟಿತೊ
ಮುಹಾ ಚದುರ ಹೊಟ್ಟ್ಯಾಗ ।
ಈ ಊರ ಪೈಕಿ ಹಳಬರಾ ।
ಸವ್ವಾನೂರ ಬಾರಾ।
ಹಿರದ ಕತ್ತಿ ಪಾರಾ ಬಂತೊ ಅಗಸ್ಯಾಗ ।
ನಾವು ಲಢಾಯಿಂ ಮಾಡತೇವು
ಟೋಪ ಕೊಡಂವದಿಲ್ಲ ನಿವಂಗ ।
ಧನಿ ತೆರದ ಹೇಳತಾನ ಬಾಯಿಂ ।
ವಂಗದನೊ ಕೈಯಿಂ ।
ನನಗ ಅಪಾಯಿಂ ತಂದಿರೋ ಈಗ ।
ಬಹಳ ದೈನಾಸ ಬಿ[1]ಟ್ಟು[1] ಹೇಳತಾನೊ ಮುಂದ್ಯಾಗ ।

---

1 ಟು

ಆಗುಂವಂತ ಸತ್ತಕೀತ್ರ್ಯಾಗಲಿ ।
ಹೋಗಲೀ ನಮ್ಮ ತಲಿ ।
ಆದಾವೇನ ಮೊಲಿ ನಮ್ಮ ಯಂದಿವೇಗ ।
ಸಂಕದಾಳ ನಾಯಿಕಾ ಶಿಟ್ಟಾದನೊ ಧನಿವೇಗ ।
ಏನು ಮುನಿದೊ ಮೋಕಿನ ಮೇಗಿನ ದಂಡಾ ।
ವೆಣಸಿನ ಸಾಹೇಬನ ಚಂಡಾ ।
ತಂದಾರು ಕೋಕೊಂಡ ಕಟ್ಟಿದರು ಹೊರಗ ।
ಬಹಳ ಬೆಂಕಿ ಬಿದ್ದಿತೊ ಇಂಗ್ರೇಜರ ಹೊಟ್ಟ್ಯಾಗ ।
ಟೋಪ ಹೂಡಂದ ನರಗುಂದ ಮೇಲಾ ।
ಸಣ ಜಂಜಾಲಾ ।
ಟುಬಾಕಿ ಪಿಸ್ತೋಲ ಕರೂಲಿ ಕೈಯಾಗ ।
ಏನ ಗದ್ದಿಕಡಾಟಾ ಮುಂಗಳಾರ ಮಧ್ಯಾನದಾಗ ॥ಇಳವು॥

ಮಳ್ಳರಸು ಕಿಲ್ಲೇದ ಮೇಗಿಂದಾ ।
ತಿಳಿಯಂದಲೆ ಇಳಿದು ತಾ ಬಂದಾ ।
ಮನದೊಳಗ ಹುಟ್ಟಿತೊ ಜಿದ್ದಾ ।
ಹರುಷದಲೆ ಇಳದ ಹೊರಬಿದ್ದಾ ।
ಅವರ ಕೂಡ ಮಾಡಿದನೊ ಯುಂದ್ಧಾ ।
ಇಂಗ್ರೇಜಿ ಸೋಲಿಸಿ ಗೆದ್ದಾ ॥ಏರು॥

ಸೊಜರಾ ದಂಡ ಬಿತ್ತು ತೂರೆ ।
ಕಡದ ಶರೆಸೂರೆ ।
ಹುಡಕತಾರ ಧೊರಿ ।
ಕೈಶರೀ ಆದಾ ॥ಬಳವಲಾ॥ ॥೬॥

ಆ ಲಢಾಯಿ ಸುದ್ದಿ ಕೇಳಣ್ಣಾ ।
ಕತ್ತಿ ಛಣಫಣಾ ।
ದಾರಿಗುಂಟ್ಹೆಣಾ ಬಿದ್ದಿದವೊ ಎಷ್ಟಾ ।
ಇಂತಾ ನಷ್ಟಾ ।
ಪ್ರಾಯದವರ ಮಾರಿ ಮೇಗ ದೆಸಿ ।
ಕಾಣಂತೈತಿ ಬೇಸಿ ।
ಮತ್ತಿ ಮುಕ ಮೀಸಿ ।
ಬಂದದಾವೀಟೀಟಾ ।

ಏನ ಬಗರಿ ಗಡ್ಡ
ರಣಗೂದಲ ಜಾಡಿಸಿ ಬಿಚ್ಚಿ ।
ಅವರು ತೊಟ್ಟಾರೊ ಚಬಕಿನ ಚಂಣಾ ।
ಎದ್ದಿ ಸ್ಯಾರೊ ಮಣ್ಣ ।
ಸುತ್ತಿದರೊ ಸುಣ ಕಾಸಿ ನಡಕಟ್ಟಿ ।
ಮೈ ವಳಗ ಚಂದ
ಚಿಲಕೋತಿನ ಅಂಗಿಯು ತೊಟ್ಟ ।
ತಮ್ಮ ಧಣಿಯರಿಗೆ ಮುಜರಿಯಾ ಹೊಡದು ।
ಕತ್ತಿಡಾಲ್ಹಿಡಿದು ।
ಕರೂಲಿ ಗುಂಡ ಬಡಿದು
ಕಾಯು ಘಟ ಬಿದ್ದು ।
ರಣದೊಳಗೆ ಮಡಿದ ಮಲಿಗ್ಯಾರೊ
ದಾರಿಗೆ ತಲಿಗೊಟ್ಟು ।
ಕೋದ ಕುರೀ ಹಾಕಿದ್ಹಾಂಗ ಪಾಲಾ ।
ರಕ್ತ ಝುಲರಝುಲಾ ।
ಭೂಮಿ ಉಳಿಯಲಿಲ್ಲ ಒಂದು ಯಳ್ಳಷ್ಟು ।
ಏನ ಕರಳ ಪುಚ್ಚ ಹೊರಬಿದ್ದವೊ
ಹೊಟ್ಯಾಗ ನಟ್ಟು ॥ಇಳವು॥
ಅವರ್ಹೆಂಡರದು ಬಹು ಸೂರಿ ।
ಬಳಿ ವಡದು ಕರಿಮಣೀ ಹರಿದು[1]
ಅವರಕ್ಕತಂಗೇರು ಗೋಳ್ಯಾಡಿ ।
ಬಡಕೊಂಡ ಬಾತದಾವೊ ಮಾರಿ ।
ಅವರವ್ವನ ಹೊಟ್ಯಾಗ ಕುಮರಿ ।
ಗೂಡಿಸೀ ಹಾಕತಾಳ ಭೋರಿ ॥ಏರು॥
ಏನ ಲಢಾಯಿ ಮಾಡಿದರೊ ಗುರ್ತಾ ।
ಸತ್ತುಹೋದರು ವ್ಯರ್ಥಾ ।
ಅವರದೇನ ಸ್ವಾರ್ಥಾ ।
ಆಗಲಿಲ್ಲೊ ಮುಂದಾ ॥ಬೆಳವಲಾ॥ ॥೭॥
ಏನ ಫಿತುರ ಮಾಡಿದೊ ಬೇಮಾನ ।
ದೊಡ್ಡ ಕಾರಕೂನ । ಉಂಡ್ಯೊ ನನ್ನ ಬೋನ ।

1...

ತಿರಿಗಿದ್ವಾ ಕೂವಾ ।
ಮುಂದ ಹ್ಯಾಂಗ ಗುಣಕ ಮೆಚ್ಚುವನೋ ದೇವರಾ ।
ನನ್ನ ಗಂಡನ ಪಂಚ್ಯಾಲೆ ಉಂಡಿ ।
ಐಶ್ವರ್ಯವು ಕಂಡಿ ।
ಶೇಲ ಹೊತ್ತುಕೊಂಡಿ । ಶರಗ ಜರತಾರ ।
ಅಂತಾದು ಏನ ಮಾಡಿದ್ದರಯ್ಯ ನಮ್ಮವರ ।
ನನಗ ಏನು ತಂದ್ಯೊ ವನವಾಸ ।
ಹತ್ತಲಿ ನನ್ನ ದೋಷಾ ।
ನನ್ನ ಸರಿಯಿಲ್ಲ ನಿನಗ ಯಾರ್‍ಯಾರ ।
ಏನ ಅತ್ತಿಯು ಸೊಸಿಯು
ತಗದ ದುಃ[2]ಖ[2] ಮಾಡುವರಾ ।
ಎಷ್ಟಿತ್ತೊ ಮನಸಿನಾಗ ಜಿದ್ದಾ ।
ತೋಸಿದೆಲ್ಲೊ ಮುದ್ದಾ ।
ಟೋಪ ಹಾರಿಹೋಗಲಿಲ್ಲೊ ದೂರದೂರಾ ।
ನಿಮ್ಮವ್ವನ ನೆಂಟ
ಬಹಳ ಮಾಡಿದೆಲ್ಲೊ ಘೇರಾ ॥೩೪ವು॥

ಕಾರಕೂನ ಬಹಳ ಶಿಟ್ಟಿಲೆ ।
ಗುರುಕಾಸಿಹೋದ ಮ್ಯೆಮೇಲೆ ।
ನಿನಗ್ಯಾಕ ಹೆಂಗಸೂ ಬಾಲೆ ।
ಕಳಿಶಾನ ಉಟ್ಟಿರುವ ಶಾಲೆ ।
ಈ ಕ್ಷಣಾ ಸೋಜರು ದಂಡ ಬರಲೆ ।
ನಿನ್ನ ಹಿಡಕೊಡತೇನ ಕೈಯಲ್ಲಿ ॥೩೫॥

ಅತ್ತಿ ಮನಸಿನಾಗ ಕಸವಿಸಿ ।
ಕುಂದರಿ ಮೇಗ ಸೊಸಿ ।
ಹೋಗಿ ಧುಮುಕಾಸ್ಗಿ
ಹೊಳಿಯೊಳು ಬಿದ್ದು ॥ಬೆಳವಲಾ॥ ॥೮॥

ಅರಮನೀ ಆದಿತೋ ಲೂಟಿ ।
ಮಹಾರಾಯ ದೊಡ್ಡ ಪ್ಯಾಟಿ ।

---

2 ಖ

ಜಿಂದಗಾವಿ ಕಟ್ಟಿ ಹೇರಂವದಂ ಕಂಡೆ ।
ಪಾಂಡವರ ಮಂನಿಯು ಕೌರಂವರಃ
ಸಂಲಿಗಿಯಾ ಮಾಡೆ ।
ಧನಿ ಹೊರಂವ ಶೇಲ ಶಕಲಾತಿ ।
ಮಂಂಡಾಸವು ಬತ್ತಿ ।
ಹಾಕಿದವೊ ಸಂತ್ತಿ ಗೂಟಕ ಮೋಡಿ ।
ಏನ ಚಂದ ಚಂದದಡಗಲಿಟ್ಟಿವೊ
ಮಂಂರಿಗಿಯಂ ಮಾಡಿ ।
ರಾವುತರ ಕಂದರಿ ಸಾಮಾನ ।
ಹೇಳಲಿನ್ನೇನ ।
ಹಾಕಂವ ಜೀನ ರೇಸಿಮಿಾತಡಿ ।
ಏನ ಮಾರಿ ಮಾರಿ
ಕಬ್ಬಿಣದ ಸರಾಸರಿ ಗೊಂಡೆ ।
ಪಟ್ಟಣಕ ದೊಡ್ಡ ಸಾವಕಾರ ।
ಬೆಳ್ಳಿ ಭಂಗಾರಂ ಮಾಣಿಕಕ ಚೂರ ।
ಮಂಂತ್ತಿನಾ ದಂಡಿ ।
ಏನ ಬೆಳ್ಳಿ ತಳಿಗಿ ಹರಿವಾಣದ ಚಿನ್ನದ ಗಿಂಡಿ ।
ಒಕ್ಕಲಿಗೇರ ಮಂಂರವತ್ತು ।
ಕಂಡಮಿಂಣಿ ಸಂತ್ತು ।
ಹೂಡಂವ ಎಂಟೆತ್ತು ದೊಡ್ಡಹಳಿ ಬಂಡಿ ।
ಏನ ಜತ್ತಿಗಿ ನಾಗೋಸ
ಬಿತ್ತುವ ಕೂರಿಗಿ ಶಡ್ಡಿ ।
ರೇಸಿಮಿಾ ಬದಕ ಬಲ ಹಸಾ ।
ಕಾಣಸ್ತಾವ ಕಾಸಾ ।
ಶೀರಿ ಕಂಪ್ಪಸಾ ಬ್ರಾಹ್ಮರಂಡಂ ಮಂಡಿ ।
ಏನ ಜವಳಿ ಅಂಗಡಿ ಹೊಕ್ಕ
ಸಂಲಿಗಿಯಾ ಮಾಡಿ ।
ರೇವಡಿಗಾರಾ ಅಂಗಡಿಯಂ ಮೇಲಾ ।
ಮಾಜೂಮಂದ ಹಾಲಾ ।
ಗರ್ದಿ ಹಂರಕಡ್ಲಿ ಚೂರ್ಮಂರಿ ಉಂಡಿ ।
ಏನ ಸಕ್ಕರಿ ಬದಕಂ ಮಂಂಕ್ಕ್ಯಾರ ಪಾವನ ಮಾಡಿ ॥ಇಳವು॥

ನರಗುಂದಕ ಬಂದಿತೋ ಕಾಲಾ ।
ಯಾರ‍್ಯಾರಂ ಇಳವಿಕೊಳಲಿಲ್ಲ ।
ಗೋಣತದ ರೊಕ್ಕದಾ ಚೀಲಾ ।
ಕಳಕೊಂಡ ಕಂಂತಾನೊ ಚಿನಿವಾಲಾ ।
ಊರ ಬಿಟ್ಟು ಹೋದರೋ ಎಲ್ಲಾ ।
ಮನಿಮಾರಿನೊಳಗ ಯಾರಿಲ್ಲಾ ॥ಏರಂ॥

ಧರಿಯೊಳು ಕಬ್ಬೂರ ಶಾರ ।
ಕಲ್ಲಮೇಶ್ವರಾ ।
ಮಾಡಿದ ಚಮಂತ್ಕಾರಾ ।
ಲಾವಣೀ ತಂದಾ ॥ ಬೆಳವಲಾ ॥ ॥೯॥

ಸಮಾಪ್ತಿಯಂ ॥

೧೧. ನರಗುಂದ ಮೋಲಿನ ಪದ

ಬಾಬಾಸಾಬ ಮಹಾರಾಯನ ದೌಲತ
ಬಹಳ ದಿನದ ರಾಜೂಕಿ ।
ಬ್ರಾಮ್ಹರ ಧರ್ಮಾ ಸರಿತೊ ಇಲ್ಲಿಗೆ
ಮುಣಗಿತುಣ ಆರಸೂಕಿ ॥
ಜನರೆಲ್ಲ ಮಾಡತಾರೊ ದುಖೀ ॥ಪಲ್ಲ॥

ಪುಣೇದ ಪ್ರಾಂತ ಹಿಡದ ಚನ್ನಪಟ್ಟಣಕೆ
ಮೆಣಸಿನ ಸಾಹೇಬ ಒಬ್ಬ ಧೊರಿ ।
ವಿಲಾಯತಿಲೆ ಹುಕುಂ ತರಿಸಿದಾ
ರಾಜರಿಗ್ಹಾಕೂದು ಶರಿ ।
ಕತ್ತಿ ಕಸ್ತ ಕಟ್ಟಿಸಿದ ಹೊರೀ ।
ಮೊದಲ ಬಂದ ಜಮುಖಂಡಿ ಅರಸಗ
ಹಿಡಿದನಲ್ಲೊ ಕೈಶರಿ ।
ಮೇಣೇವು ಪಿಂಜರದಾಗ್ಹಾಕಿ ಕಳಿಸಿದಾ
ಜಮುಖಂಡ್ಯಾತೊ ಶರೆ ಸೂರಿ ।
ವಾಡೇದಾಗ ಕೊಶಾನ ದನ ಕುರೀ ।
ಮುನಸಿಗ್ಹೇಳತಾನ ಬಹಳ ಶಿಟ್ಟಿಲೆ
ಬಾಬಾ ಸಾಹೇಬಗ ಬರಿ ।
ಪತ್ರ ಒಂದು ಬಾಬಾ ಸಾಹೇಬಗ ಬರೀ ।
ಜಲ್ದಿ ಪತ್ರ ರವಾನಿ ಆಗಬೇಕು
ಪಾನ ತುರುಂಪಿನ ಕೂದರಿ ।
ಕುದರಿ ಕರ್‍ಯಾಕ ಬಂದವು ತರತೂರೀ ।
ಪತ್ರ ಓದಿ ನೋಡುವಾಗ
ಬಾಬಾಸಾಬರು ಸುಣದ ಮಾಡ್ಯಾರೊ ಮಾರೀ ।
ವೆಂಕೋಬಾನ ಹೆಸರು ತಕೊಂಡು
ರಾತ್ರಿಲೆ ಹಿಡದಾರು ಜಮುಖಂಡಿ ದಾರಿ ।
ಸಾಹೇಬನ ಹುಜೂರಿಗೆ ಹೋತ ಇವರ ಸ್ವಾರಿ ।
ಖುರ್ಸೇ ಮೇಲೆ ಕುಂತಾನ
ಸಾಹೇಬ ಹಲ್ಲ ತಿಂದ ಕರಕರಿ ।
ಇಂಥಾ ಭಂಡಾಯಿಖ ಏನ ಮಾಡೇವು ನಾವೂ
ಯಾಕ ಹಲ್ಲ ತಿಂತಿರೀ ।

ನಿಮ್ಮ ಕೈಯನ ಗುಬ್ಬಿ ಮರೀ ।
ಆಪಣಿ ಕೊಟ್ಟ ನಡಿಯಧ ನರಗುಂದಕ
ಕಿಲ್ಲೇವು ತೆರವು ಮಾಡರೀ ।
ಹೊಂಡ ಒಡಸಿ ತಟ್ಟ ಬಂದಿ ಕೆಡವಿಕ್ಯಾನ
ಸುತ್ತಲ್ಯಾಗ ಬೇಕೊ ದಾರಿ ।
ಇದರ ಹೊರ್ತ ಊರಾಗಿನ ಕೆರಿ ।
ತಿರಿಗಿ ಬಂದ್ರು ನರಗುಂದಕ ಬಾಬಾಸಾಬ
ತೆಪ್ಪಿತಂಣ ಹಂಚಿಕಿ ॥ ೧ ॥

ತನ ಮಂದಿ ಕರಸಿ ವೀಳ್ಯವ ಕೊಟ್ಟರೊ
ತಮ್ಮಾ ಶುಕ್ರವಾರ ದಿನಾ ।
ವೆಂಕೋಬಾನ ಪಲ್ಲಕ್ಕಿ ತಗಸಿ ಕಾಸ
ತೋಪ ಹಾರ್ಸೀರು ಧಂಧನಾ ।
ಸುತ್ತ ರಾಜ್ಯದ ಕೇಳಿತ ಜನಾ ।
ನವಲಗುಂದ ಸುಭೇದಾರ
ಮೆಣಸಿನ ಸಾಹೇಬಗ
ಪತ್ರ ಬರದ ಮರದಿನಾ ।
ನರಗುಂದರಸ ಭಂಡಾಯಿ ಮಾಡೂದು
ತಯಾರ ಮಾಡಿಸ್ಯಾನ ಸಾಮಾನ ।
ಹೀಂಗ ಬರದಿದ್ದ ವರತಮಾನ।
ಮೆಣಸಿನ ಸಾಬ ರಾಮದುರ್ಗಕ ಬಂದನೊ
ನೇಮಸಿ ಆಯಿತ್ಯಾರ ದಿನಾ ।
ತೋಟದಾಗ ಇಳದ ಕರೇಕಳಿಸಿದಾ
ಶಿಟ್ಟಿಲೆ ರಾವ ಸಾಬನಾ ।
ಬಾಯಿ ಬಿಡತಿತ್ತೊ ಶಿಪಾಯಿ ಜನಾ ।
ಅಡ್ಡಬಿದ್ದ ರಾವಸಾಬ ಸಾಹೇಬಗ
ಕರಗಲಿಲ್ಲೊ ಅವನ ಮನಾ ।
ಅಣ್ಣನ ಮಾತಿನಾಗ ತಸ್ಮಾತ್ರಿಲ್ಲಾ
ಕ್ರಿಯವ ಕೊಟ್ಟರಾದಿನಾ ।
ಕುಮಕಿಗೆ ತಕೋ ನಮ್ಮ ಕುದರಿನಾ ।
ಧೀರೆ ಆಗಲಿಲ್ಲೊ ಹೊಂಟ ಸಾಹೇಬ
ಇಳದಾನ ಸೂರೇಬಾನ ।

ಬಸವಣ್ಣನ ಗಂಡಿಯಾಗ
ವದಗಿ ಬಂತಲ್ಲೊ ಅವನ ಮರಣ ।
ಬಾಬಾಸಾಬ ಅಂದ ಅರ್ಜುನ ।
ಬಾಬಾಸಾಬ ಜೀವದಿಂದ ಹಿಡೀ ಅಂದ್ರು
ಕೇಳಲಿಲ್ಲೊ ಕೂಡಿದ ಜನಾ ।
ಹಿರೇಕೊಪ್ಪದ ಶಾನಭೋಗ ಬಂದಕ್ಯಾಸ
ಕೊಯಿಂದ ಸಾಹೇಬನ ಕಂತ್ರಿಗಿನಾ ।
ರಣಕತ್ಲ ಆತೊ ಆ ದಿನಾ ಜಿ ।
ರಂಡ ಬಿತ್ತ ಚಂಡಂ ತಕ್ಕೊಂಡ
ರಾತ್ರಿಲೆ ಬಂದರಲ್ಲೊ ತಿರಿಗ್ಹಾಕಿ ।
ಬ್ರಾಮ್ಹರ ಧರ್ಮಾ ॥ ೨ ॥

ಸೋಮಾರ್ಹೋತಂ ಮಂಗಳಾರಂದೇಕ
ಕೂಡಿತಣ್ಣ ದರ್ಭಾರಾ ।
ಅಮರಗೊಳ್ಳದ ವೇಗ ತಂದ ಇಳಸಿಕ್ಯಾಸ
ಹೊಡಸಿದಾನ ತಂಬೂರಾ ।
ವಂಲಕನ್ ಸಾಹೇಬ ದಂಡಿನ ಸರದಾರಾ ।
ಕಾಲ ಕೆದರಿ ಕೆಂಗಳಿಸಿ ಲಢಾಯಂಕೆ
ಹೊಂಟನಂಣ ರಣಧೀರಾ ।
ಬಾಬಾಸಾಬ ಹೊಂಟನಂಣ ರಣಧೀರಾ ।
ತಲಿ ಮೇಲೆ ಮಂತ್ರಿನ ಅಪ್ಪಾಗಿರಿ
ಕೈಯಾಗ ಹಿಡಿದ ಹತಿಯಾರ ।
ಮಂಂದ ಹುಂಶಾರಕಿ ಕೊಡುವ ಮಾಲದಾರ ।
ದಿಬ್ಬಕ್ಹೋಗಿ ಫರೆಗಟ್ಟಿ ನಿಂತರೊ
ಬಿಗಲ್ಮಾಡಿದ ಸರದಾರ ।
ಏಕದಮ್ಮ ಧುಂಮಕಿಶಾನ ಕಂದರಿ
ಮೈಸೂರ ಶೀಮಿ ರಿಸಾಲದಾರ ।
ಬಾಳ ದಂಡ ಆತಂ ಚಕಚೂರಾ ।
ಅಮರಗೊಳ್ಳಕ್ಹರದಾರಿ ನರಗುಂದ ।
ಹರಿದಾಡಿ ಹೋತೊ ನೆತ್ತರ ।
ಹಾಲಭಾವಿಗೆ ತಂದ
ಟೋಪ ಹಚ್ಚಿದಾ ದಂಡ

ದುರಬಿನ ಸರದಾರಾ ।
ಮಂದಿ ಬಿಟ್ಟ ನಡೀತೊ ಮನಿಮಾರಾ ।
ಬಾಬಾಸಾಬ ಬಂದ ಸದರಿಗೆ ನಿಂತರೋ
ಸಂತ್ರಲಿಲ್ಲ ಯಾರ್ಯಾರ ।
ದಗೇ ಆತಿ ಕೈವಾಸ ಆಗತೀನಿ
ಪಾರಮಾಡೊ । ಈಶ್ವರ ।
ಕಂದರಿ ಹಿಡದಿದ್ದ ಮೋತದಾರ ।
ಯರಡು ತಾಸ ಹೊತ್ತಿತ್ತು
ಕಂದರಿಮೇಗ್ಗತ್ತಿ ಮಾಡ್ಯಾರೊ ನಮಸ್ಕಾರ
ಸಂಣ್ಣ ಅಗಸಿ ತೆರಿಸಿಬಿಟ್ಟರೊ ಕಂದರಿ
ದಿವಸ ಇತ್ತ ಮಂಗಳವಾರ ।
ಬಿಟ್ಟ ಹೋದರೊ ನರಗುಂದ ಶಾರಾ ।
ಅರಣ್ಯವಾಸ ಜಗದೀಶ ಮಾಡಲಿಕೆ
ಕೊಟ್ಟಿದ್ದಾ ಅರಸುಕೀ ॥
ಬ್ರಾಮ್ಹರ ಧರ್ಮಾ ॥ ॥೩॥

ಬಾಬಾಸಾಬರಾ ಮಡದಿ ಪತಿವ್ರತಾ
ಸರಿಯಿಲ್ಲಿವರ ಪುಣ್ಯಕ ।
ವಿಷಾ ಉಂಬುದು ಪರಾಭವ
ಮಾಡು ತಾಯಿಗಿಂತ ವೇಳೆ ಬರಬೇಕ ।
ಹೀಂಗ ಮರಗತೈತಿ ಜನಲೋಕ ।
ಅತ್ತಿ ಸೊಸಿಗೆ ಹೇಳತಾಳ
ಪ್ರಾಣ ಇನ್ನೇನಂತ ಇಡಬೇಕ ।
ಕಿಲೇದಾಗಿಲ್ಲ್ಯಾತಕ ಇರಬೇಕ ।
ದಂಡಿನ ಜಪಾಟ್ಯಾಗ ಶಿಗಬಾರದಪ್ಪಾ
ಮಣುಗೂನು ನಡಿ ಹೊಳಿಯಾಗ ।
ಮಗ ಬಿಟ್ಟ ಹೋದ ನಮ್ಮಾಗ ।
ಮೇಣೇವ ಪಾಲಕ್ಯಾಗ ಕಂಡರವರು ನಾವು
ನಡದ ಹ್ಯಾಂಗ ಹೋಗಬೇಕ ।
ಇಂಥಾ ಅನ್ನೇವು ಏನು ಮಾಡಿದ್ದೇವ
ಠಾವಿಕಿ ವೆಂಕೋಬಾಗ ।
ದುರಮಣ ತಂದ ನಮ್ಮಾಗ ।

ಕಲ್ಲ ತುಳದ ಮುಳ್ಳ ನಟ್ಟಿ
ನೆತ್ತರಾ ಹರೂತಾವು ಇಬ್ಬರ ಕಾಲ ।
ಹೊಳಿದಾರಿ ಹಿಡದ್ಹೋಗುವಾಗ
ಬಾಯಿಂ ತೆರವರು ಆಕಾಶಕೆ ॥
ಹೊಳಿದಂಡಿಗ್ಹೋದರಾವಾಗ ।
ನಡಕ ನಡಾ ಸುತ್ತಿ ಅಂಗವಸ್ತ್ರದಲೆ
ಬಿಗದಾರ ಗಂಗಾದಾಗ ।
ಹರಹರ ಜಿಗದರು ಗಂಗಾದಾಗ
[1]ತು[1]ಳಸಿದಳಾ ಬಾಯಾಗ್ಹಿಡದಿರ್ದಂತ
ಹೋದರು ಕೈಲಾಸಕ ।
ನೆನವಿಟ್ಟರೊ ಮರ್ತ್ಯದೊಳಗ ।
ಕೆರೂರ ಮುಲಕರಿ ಹುಕುಂ ತರಿಸಿದಾ
ಟಪಾಲ್ಕುದರಿವೇಗ್ಹಾಕಿ ।
ಅತ್ತಿಸೊಸಿಗೆ ನಿಂತ ದಹನ ಮಾಡಿದಾ
ದೇವರಿಡಲಿ ಅವಗ ಸುಖೀ ॥೪॥

ಇಷ್ಟ ಸಂಸ್ಥಾನದ ವಳಗ
ಶ್ರೇಷ್ಠ ನಮ್ಮ ಬಾಬಾಸಾಬರ ಹುಚಿಕೀ ।
ಎಷ್ಟ ತೆಪಸಿದರ ತೆಪ್ಪಲಿಲ್ಲ
ಬರದಿದ್ದ ಬ್ರಮ್ಹ ಲಿಖಿ ।
ಬಿಟ್ಟ ಹೋದರೊ ಚುದರ ಮುಖಿ ।
ಕಾಲಕುಪಾಯಿ ಯಿಲ್ಲಂತ
ಕೈಯು ಮುಗದ ಹೊಂಟ ತುಳಸಿ ಮುದ್ರಿಕಿ ।
ವೈದಿಕಿ ಬ್ರಾಮ್ಹರು ಅಡ್ಡಬಿದ್ದು ಅಳುವಾಗ
ತೆಲಿವ್ಯಾಗಿಟ್ಟರ್ಪಸ್ತಿಕಿ ।
ಮಾರಿ ನೋಡಲಿಲ್ಲ ತಿರಿಗ್ಹಾಕಿ ।
ಒಳ್ಳೆ ಲೋಡಿಗಾಂತ ಕುಂಡ್ರು
ದೀಕ್ಷಿತರಿಗೆ ಕುಂಡ್ರಾಕಿಲ್ಹೊ ಹಾಸಿಕಿ ।
ಜಾಡಿ ಹಾಸಿಕಾಸ ಮುಲಗುವಾಗ
ಅಳುವರೊ ಕಣ್ಣೀರ್ಹಾಕಿ ।
ಮುಗಲ್ಹರದ ಬಿತ್ಹೊ ತಾರಕಿ ।

---
1 ತ

ಅರಸಪಿಂಡ ಮುಂಕಣ್ಕಂಡ
ಖರೇ ನಿನಗ ಸಲ್ಲದೊ ಶಿಕೇದ ಮುಂದ್ರಿಕಿ ॥
ಬ್ರಾಮ್ಹರ ॥ ॥೫॥

ಅಪಾಸಾಬ ಬಾಬಾಸಾಹೇಬರು
ದೇವರ ಮೇಗ ಭಗತಿ ।
ಯಾವ ದೇವರ ಅಡ್ಡಾಗಲಿಲ್ಲ ಅವರಿಗೆ
ಶೆಟಿವಿ ಹಾಕಿದ ಮಿಂತಿ
ಏನ ಸರಿತೊ ದೌಲತಿನರತಿ ।
ಗಂಡಿ ಮೇಲೆ ಅನಛತ್ರ ಭೋಜನಾ
ಸದಾ ಅದಲ್ಲೆ ನಡಂತೈತಿ ।
ದೇವರ ಮುಂದ ಸಂಗಂಧ ಪುಷ್ಪಗಳು
ಹಚ್ಯಾ್ಯವು ಅಮರ ಬತ್ತಿ ।
ಮುಂದ ಹರಿದಾಸ ಬಾವಾರ ಕಥಿ ।
ಪಾತ್ರ ಕುಣಿಯೂದು
ಸಾರಂಗಿ ವೀಣಿ ಮೃದಂಗ ತಾಲ ನಡಂತೈತಿ ।
ಸರ್ವ ವಾದ್ಯ ತಯ್ಯಾರ
ದೇವರ ಮುಂದ ಆನಿ ಜಲಾಸತೈತಿ ।
ಮುಂದ ಸಂಕ ಸನಾದಿ ಸಂತೀ
ತಳಲುಂಬೊತಾಟಿಮಾಯಮುರತಾಬ
ನಿಶಾನಿ ಮುಂದ ನಡಂತೈತಿ ।
ಯುರಡು ಬಾಜಿತಿ ಚೋಪದಾರ
ಭಟ್ಟಂಗಿ ಸಾರತೈತಿ ।
ಪಾಯಾಸುದ್ದ ದೌಲತ ನಡೀತಿ ।
ಅರಸರೊಳಗ ಬಲ್‌ಸರಸಿತ್ತೋದ
ಮುಂದಿದ್ದವರಿಗಿಲ್ಲೊ ಸುಖಿ ।
ಬ್ರಾಮ್ಹರ ॥ ॥೬॥

ಬಾಬಾಸಾಹೇಬ ರಾಮನೀ ಪುರೋಹಿತ
ಸವಾಲ್ ಮಾಡಿದ ಸದರೀಗೆ ।
ಸದರಿನ ಕಂಬಾ ಪೇಟಿಗ್ಹಾಕಿಸಿ
ಮಾರಿದ ಸಾವಕಾರಿಗೆ ।
ಬ್ರಾಮ್ಹಣನ ಬೇಕೆನೊ ಅವನೀಗೆ ।

ಧಣೇರ ಉಪ್ಪ ಉಂಡಂ
ನಿಂದೆ ಮಾಡತಾರ ತಿಳಿವಲ್ದೀ ಜನರಿಗೆ ।
ಠಳಕಠಕ ನಂಡಿಕಟ್ಟಿ ಹೇಳಿದೆನು
ಸಂಪಾಸಿನಂ ಇಲ್ಲಿಗೆ ।
ನೆನಸ್ತೇನಂ ನಮ್ಮ ವಸ್ತಾದಿಗೆ ।
ಸೈದ ಹಂಶೇನಿ ಸೋನಾಜಿ
ಹೇಳತಾರ ತಾಲ ಹಿಡಿರಿ ಗತ್ತೀಗೆ ।
ರಾಜಂವಂಲ್ಲ ಉವ್ಮಾಜಿಯಂ
ದನಿಯಂ ಕೇಳಿರಿ ಬೇಗಿನ ಹೊತ್ತಿಗೆ ।
ಬೆಲಿ ಇಲ್ಲ ಜಾತ ಮಂತ್ರೀಗೆ ।
ಹಳೇಹಾಡ ಹಳವಂಡ ತಗೂತಿ
ತಂಸಾ ಯಿಂಲ್ಹೊ ನಾಚಿಕಿ ।
ಹರದಾಸಿ ನಿನಗ ತಂಸಾ ಯಿಂಲ್ಹೊ ನಾಚಿಕಿ ।
ಸಭೆ ರವ್ಮ್ಯ ಆಗಂವಂತಾದ್ಹೇಳೊ
ಬಂದಿತ ಶಹಬಾಸಿಕಿ ॥
ಜನರೆಲ್ಲ ಮಾಡತಾರೊ ದಂಖೀ ॥ ॥ ೭ ॥

ಸಮಾಪ್ತಿಯಂ ॥

೧೨. ನರಗುಂದ ಪದ

ಶಖ ಇಂಗ್ರೆಜಿ ಬಹದಂರ [1]ಕಾಂ[1]ಪಣಿ ಸರಕರ
ಆತಿ ಜಾಹಿರ ಆವರ ಕಾರ್ಬಾರ ಸಂತ್ತಿನ ರಾಜೇಕ ।
ತಂಮನಾಡಿಗಿಟ್ಟುದರ ಸಂಖ
ಮಾಡಂದಿಲ್ಲ ದುಃಖ್ಖ ಈಗಿನ ವ್ಯಾಳೆಕ ॥ ಪಲ್ಲ ॥

ಪಾಣಿ ಹಾಕೆರ ಸುತ್ತಿನ ವಾಡ ಹತ್ತಲಿಲ ತಡ
ಬೆಳಗಾಂವಿ ಧಾರವಾಡ ಇರಂವ ಆವರ ಜ್ಯಾಗ
ತಂಮ ದಂಡಿಗಿಟ್ಟರ ಬಂದಂಬಸ್ತ
ದಿನ ಕವಾತ ಯರಡಂ ವ್ಯಾಳೆದಾಗ
ಮಂಮಯಂದೊಳಗ ಹಂಕಂಮ ಆತಿ ಜೋರ
ಬರದರ ಪುತ್ತರ ಮೊದಿಕೊಂಡ ಸರದಾರ
ನಾಡನ ಹತಿಯರ ಕಳಸಬೇಕ ಬ್ಯಾಗ
ಇಷ್ಟ ಮೋದಿಕೊಂಡರ ಫಿರಂಗೆರ
ಹೊಡಶರ ಡಂಗೂರ ತಾಲೂಕದ ತೆಳಗ ।
ಬಾಲೆ ಬಾಕ ಕತ್ತಿ ಕಠಾರಿ ಕಂಜರ ಕೈಚೂರಿ
ಟೋಪ ಪಿಸ್ತೂಲ ಬ್ಯಾರಿ
ಬಂಡಿ ಮೇಲೆ ಹೇರಿ ಕಳವಿದರ ಆಗ ।
ಹಲಗಲಿ ಪೂರ ರೈತರ ಕೊಡಲಿಲ್ಲ ಹತಿಯರ
ಸಂಟ್ಟರ ಗಳಿಗ್ಯಾಗ ।
ಸಂರಪುರ ಧೊರಿ ಮಾಡೆನ ಹಿಕಮತಿ
ಕೊಡಬಾರದಂಣ ಕತ್ತಿ ದಂಡ ಬಹಳತಿ
ಲಡಾಯಂ ಮಾಡಂ [2]ಪ್ರೀ[2]ತಿ ಆವನ ಮಂನದಾಗ ।
ಸಂದ್ದಿಕೇಳಿ ಫಿರಂಗ್ಯಾ ಬಂದ
ಸಂರಪುರ ಹೊಡದ ಮಂದ ಕ್ಷಣದಾಗ ॥ ಚ್ಯಾಲ ॥

ಮೇನಶಿನ ಸಾಹೆಬ ಇದ್ದನೊ ಧಿಟ್ಟಾ
ಜಿಮಂಖಿಂಡಿಗೆ ಹೊಂಟ ಆಂವ ಸರದೀಂದ
ಡೇರೆ ಹೊಡದಿಳದಾ ।
ರಾವಸಾಬನ ಕರಿಯಂ ಕಳಸಿ
ಮಾಡೆರ ಚವಕಶಿ ತಿಳದ [3]ನೋ[3]ಡೀದಾ ।

---

1 ಕು 2 ಪ್ರಿ 3 ನೊ

ಕಲ್ಬಣದಿಂದಾ ।
ರಾವಸಾಬಗ ಮಾಡೆರ ಬಹಂ[1]ಪ್ರೀ[1]ತಿ
ಮುದಗುಂಡ ಯೆಲ್ಲೆತಿ ಕೊಡರಿ ನಮಂ[2]ಗಿಂ[2]ದಾ ।
ಲಗುಂಬಗಿದಿಂದಾ ।
ಸಾಹೆಬನ ಮಾತ ಕೇಳಿಕೊಂಡ
ಕೊಟ್ಬರ ಮುದ್ದಗುಂಡ
ಸುರವಿದರ ಮುಂದ ।
ಬೆಳಗಾಂವಿಗೆ ಕಳವೀದಾ ॥ ಯೇರ ॥

ವಳಗಿಂದೊಳಗ ಬರದ ಟಪಾಲ ।
ಕಲಾದ್ಗಿ ದಂಡೆಲ್ಲಾ ಬಂದಿತೊ ಹಲ್ಲಾ
ಜಿಮುಖಂಡಿ ವೂರ ಮೇಲಾ ।
ಹೋತಿ ಟಾಕೊಟಾಕ ।
ಅಲ್ಲಿ ತಂಮಂ ಪಾಣೆವು ಹಾಕ್ಯಾರ
ರಾವಸಾಬನೋದರಂ ಬೆಳಗಾಂವಿಯಂ[3]ಸ್ಥ[3]ಳಕ ॥ ೧ ॥

ಜಿಮುಖಂಡೆ ವಂದ ಆತಿ
ಈ ಹಾಡ ದೊಡ್ಡದೊಡ್ಡಗಡಾ
ಇದ್ದವು ಬಹುಂಚಡಾ
ಜ್ಯಾಗ ಅವಗಡ ಮುಂಂನುರ ಅರವತ್ತ ।
ಹಿಂತಾವ ತೊಗೊಂಡ್ರು ಫಿರಂಗೆರ
ಇಲ್ಲ ದರಕರ ಮಾಡಿ ಕಸರತ್ತ ।
ಮೇನಶಿನ ಸಾಹೆಬ ಅಕಲ ತಗದ
ವುಳಿತ ನರಗುಂದ ಹೋಗಬೇಕಂದ
ಮುನಶಿಗೆ ತಂದ ಹೊಂಟ ನಗನಗತಾ ॥
ಬಾಬಾ ಸಾಬಗ ಹಚ್ಚರ ಸಂದಾನ
ಹತಾರ ಕೊಡರಿನ್ನ ಯಲ್ಲ ದರಂಬಸ್ತಾ ॥
ಮುದ್ದಗುಂಡ ಟೋಪ ಬಂದುಕ ।
ಕೊಡರಿ ಗಂದಕ ವುಳಿಯಂಬಾರದ ಸಿಲ್ಕ
ನಿಂ[4]ಮಂ[4] ಹಂತೆಕ ಯಾಕ ಸಾಹಿತ ।
ಈಗ ನಂಮಂ ಜಿವಕ

---

1 ಪ್ರಿ 2 ಗೀಂ 3 ಸ್ತ 4 ವ

ಬಂದಾಗ ಕೊಡಬೇಕ ನೀವ ಈಗ ।
ಯೆಂನಂತೆ [1]ಹೇ[1]ಳ ತಂರತ ।
ಬಾಬಾ ಸಾಹೆಬ [2]ಕೇ[2]ಳಿನ ಇಷ್ಟಮಾತ
ಇಲ್ಲ ನಿಂಮ ಹೊರ್ತ
ಮಾಡ್ತೆನ ತಾಕಿತ
ಕೆಲಸ ಹರಕತ ಮಾಡಂದಿಲ್ಲಂತ ।
ಇಷ್ಟ ಹೇಳಿ ಬರದಕೊಟ್ಟರು
ಸಾಹೆಬನ ಕಳಸಿರಂ ಮಾಡಿಕೆರ ಬೇತ ॥ ಚ್ಯಾಲ ॥

ಬಾಬಾಸಾಬನ ಸತಿಗೆ ಹತ್ತಿ ಸಂದ್ದಿ
[3]ನೀ[3]ವೆಲ್ಲಿ ಇಟ್ರಿ ಬಂದ್ಧಿ
ಇಲ್ಲಿನ ಕಾರ್ಬಾರ ತಿಳದ [4]ನೋ[4]ಡ್ರಿ ಪೂರಾ ।
ನಂದ್ದಗಂಂಡ ಯಂಲ್ಲ ಸಾಹಿತ ಕೊಟ್ಟ
ಇಲ್ಲೆನತಿ ಗಂಟ ಮಾಡರಿ ವಿಚಿಯಾರ ।
[5]ಹೋ[5]ದಂಗ ಸತಿಯಂರ ।
ಹಿಂದ ಮುಂಂದ ಇಲ್ಲ ಮಂಕ್ಕಳ
ಮಾಡುಂನ ಜೆಗಳ
ಆದಿತ ಹೆ[6]ಸ[6]ರ ರಾಜೆದ [7]ಮೋ[7]ಗ ದೂರಾ ।
ಗಡದಲ್ಲಿ ಹೋಃಗಲಿ ನಂಮ ತೆಲಿ
ಸಿಗಬಾರ್ದ ಕೈ[8]ಯಂ[8]ಲಿ
ಹಿಡಿರಿ ನೀವದೀರ ಬಹಳ ಹುಷಿಯಾರಾ ॥ ಯೇರ ॥

ನಂಮುನ ಕಾಯಂಂವ ಯಂಂಕಟರಮಂಣ
ಆವನ ದಯಂ ಕರಣ [9]ಅ[9]ತಿ ಸಂಪೂರ್ಣ
ಮಾಡಿಕೆರ ಶರಣ ಬಿದ್ದರ ಪಾದಕ್ಕ ।
ದೇವರನ ಕೇಳೆರ
ಕವಲ ಕೊಟ್ಟನು ಬಲ ಹೊಡಸತರ ಡಂಕ ॥ ೨ ॥

ಬಾಬಾ ಸಾಹೆಬ ಆದನು ಖಂಷಿ
ನೋಡಿದನು ಸೋಸಿ
ಕಾರ್ಕೂನರ ಕರಶಿ [10]ಹೇ[10]ಳಿನ [11]ತ್ರಿ[11]ಳಸಿ

---

1 ಹೆ 2 ಕೆ 3 ನಿ 4 ನೊ 5 ಹೊ 6 ಸೇ 7 ಮೆ 8 ಯ್ಯಾ 9 ಅೀ
10 ಹೆ 11 ತೀ

ಆದ ಕಂಸಿಯಾಲಾ ।
ನಂಮ ದಂಡ ಮಾಡರಿ ತಯಾರಾ
ಹೊಡಸರಿ ಡಂಗರ ಸಭೇದ ಹಳ್ಳಿಗೆಲ್ಲಾ ।
ದಂಡ ಕೂಡಿತ ಮೂರ ಸಾವಿರ ।
ಆನಿ ಕುದರಿ ಸ್ವಾರಾ
ತೊಗೊಂಡ್ರು ಹತಿಯಾರ
ಬಂದಂಗ ಹೊಳಿಪೂರಾ ಆತಿ ಗದ್ದಲಾ ।
ಫಿರಂಗ್ಯಾನ ದಂಡ
ನದರಾಗ ಇಲ್ಲ ಯಾಂವೆಂವಗ ।
ಜೀವದ ಪರಿವಿಲ್ಲಾ ॥
ಯಲ್ಲ ಅಗಸಿಗಿಟ್ಟರ ಚವಕಿ
ಮುಂನೂರ ಹಳಿಬಿ
ಇಲ್ಲ ಅಂಜಿಕಿ ಜೀವದಲಿ
ಬೆಂಕಿ ಇಟ್ಟರ ಕಾವಲಾ ।
ವಳಗಿನ ಮಂದಿಯು ವಳಗ
ಬಿಡಂದಿಲ್ಲ ಹೊರಗ
ಹಾಕೆರ ಬಾಗಿಲಾ ।
ವಳಗಿತ್ತ ಅನ್ನ ನೀರ ಜೋರ
ಕೊಟ್ಟರ ರೈತರ ವುಣಸಿ ಹಾರಂರ
ಮಾಡೆರ ನಮಸ್ಕಾರಾ ಬಿದ್ದರೊ ಕಾಲಾ
ಇಲ್ಲಿಗೆ ಹರಿತರಣನ ಬಂದ ವುಳದರ
ಮುಂದ ಕೊಟ್ಟೆನ ಕವಲಾ ॥ ಚ್ಯಾಲ ॥

ಗಡ ಟೋಪ ಪೂಜಿ ಮಾಡಶಿ
ಕುರಿಯು ಕಡಶಿ
ಮಾಡಿದರ [1]ಶಾಂ[1]ತ
ಬೇಡಿಕೊಂಡ್ರು ನಿಂತ ।
ಯಲ್ಲ ಅಗಶಿಗೆ ಕೋಣ ಕಡದ
ಮಾಡಿ ದರದುಂದ ಚೆಲ್ಲಸೆರ ರಕ್ತಾ
ಗಡದ ಸುತಮುತ್ತ ।
ಟೋಪ [2]ಏ[2]ರಶಾರ ಮೇಲಕ

1 ಶಾಂ 2 ಏ

ನೋಡಿಕೆರ ದಿಕ್ಕ ಇದ್ದಂವ ವಂಭತ್ತ ।
ಇಟ್ಟುದರ ಸರ್ತ ।
ಸುದ್ದಿ ಕೇಳಿ ಬಂದ ಗೊಲಂದಾಸ
ಶುಕ್ಕರವಾರ ದಿವ್ಸ ಹಾರಸ್ಯಾನ ಟೋಪ ವಂಸ್ತ
ಲಡಾಯಂಕ ಬರೆಂತ ॥ ಯೇರ ॥

ಪಿರಂಗ್ಯಾಗ ಸುದ್ದಿ [1]ಹೋ[1]ತಿ
ಮತ್ತ ಬಂದರ ವೋಡಂತ
ಮಂಂಗಯ್ಯ ಕಡಕೊಂತ ಹಲ್ಲ ತಿನ್ನುತ ।
[2]ಹೋ[2]ದರ ರಾಮದುರ್ಗ್ಗಕ
ನರಗುಂದ ಸುದ್ದಿ ಕೇಳಿ
ಗಟ್ಟಿ ಬರದ ಲಕಂಟಿ
ದಂಡ ಕಂಡಸಂದಕ ॥ ೩ ॥

ಅಪ್ಪ ಸಾಹೆಬಗ ತಾಕಿತ ಮಾಡಿದ ।
ರಾಮದುರ್ಗ್ಗ ಬಿಟ್ಟು ಬಂದ
ಸೂರೆಬಾನಕಿಳದಾ ।
ಡೇರೆ ಹೊಡಶಿದಾ ದೀವ್ಸ ಶನಿವಾರಾ ।
ವೆಂನಶಿನ ಸಾಬಗ ಬಂತ ವೂಮೆದ
ಮಂನಶಿನ ಕರದ । [3]ಹೇ[3]ಳಿನ ಯಂಚ್ಚರಾ ॥
ನಾಳಿ ಹೋಗಬೇಕ ನರಗುಂದಕ ।
ಬಾಬಾ ಸಾಹೆಬನ ಹಂತೆಕ ।
ಹೇಳಂನಂ ಟೀಕ
ದಂಡ ಯಾತಕ ಮಾಡ್ತನ ತಯಾರಾ ।
ನಂಮ ಪದರಿ ನನ್ನ ದೇಸ್ಗತಿ
ಸೊಕ್ಕ ಬಂದತಿ ಇಳಸುನಂ ನೀರಾ ॥
ಇದ್ದ ಸುದ್ದಿ ಹತ್ತಿತಂ ಬಾಬಾ ಸಾಬಗ ।
ಮಾತಾಡತಿದ್ರ ಹೀಂಗ ಸೂರೆ ಬನದಾಗ ।
ಕಂತ [4]ಡೇ[4]ರೆದಾಗ ಅಂದ ಸರದಾರಾ
ಇಷ್ಟ ಕೇಳಿ ಆದನೊ ಸಿಟ್ಟಾ
ಹಾರಸುನಂ ಚೆಟ್ಟಾ ನಡಿರಿ ಯಂಲ್ಲಾರ ॥

---

1 ಹೊ 2 ಹೊ 3 ಹೆ 4 ಡೆ

ಅಂವ ಹೊಂಟ ರಾತೊರಾತರಿ ।
[1]ಐ[1]ವತ್ತ ಕೂದರಿ ಶಿಪಾಇ ಮಂದಿ
ಬ್ಯಾರಿ ಹಾಕೆರ ಸರವಾರಿ ।
ಕತ್ತಿ ತಿವಳಿ ಜೋರಾ ।
ಅಲ್ಲಿ[2]ಗ್ಯೋ[2]ಗಿ ಮಾಡೆರ ಗಡಬಡಿ
ಯೆಲ್ಲೈದನ ಹಿಡಿರಿ ಅಂತಾರ ವಾಲಿಕರ ॥ಚ್ಯಾಲ॥

ಮೆಂನಶಿನ ಸಾಹೆಬ ನೋಡಿದ ಗದ್ದಲ ।
ವೋಡಿ[3]ಹೋ[3]ದನಲ್ಲಾ ಗಂಡಿಯಂ ಮರೀಗೆ
ಅಂಜಿ ಗಾಬರ್ಯಾಗಿ ।
ಸಾಹೆಬನ ಮಂದಿಯಂ ಕಡದ
ಕಂದರಿಯಂ ಬಡದ
ಹಾಕ್ಯಾರ ಮುತ್ತೀಗಿ ಅನಮನ ಇಲ್ಲವರ್ಗಿ ।
ಮೆಂನಶಿನ ಸಾಹೆಬನ ಹಿಡದರೊ ಬಂದ ।
ಹೆಡಮುಂರಗಿಯಂ ಬಿಗದ
ಧನೆನ ಇದರೀಗೆ । ನಿಂದರಸೆರ ಹೋಗಿ ।
ಮೆಂನಶಿನ ಸಾಹೆಬ ಅಂತನ
ಕೊಲ್ಲಬೇಡ್ರಿ ಬಿಡರಿ ಕೈಶರಿ
ಬಿದ್ದೆನ ಕಾಲೀಗೆ ಇರತೆನ ಮಗನಾಗಿ ।
ಬಾಬಾ ಸಾಹೆಬ ಮಾಡಲಿಲ್ಲ ದರಕರ
ಕೋದರೊ ಸಿರಾ ।
ಇದ ಮೊದಲೀಗಿ ರಗತ ಬಟ್ಟ ಹಣಿಗೆ ॥ಯೇರ॥

ಮೇನಶಿನ ಸಾಹೆಬನ ಮಾಡೆರ ಮೂರ ತುಂಡ ।
ತೊಕೊಂಡರ ರುಂಡ । ತಿರಗಿತೊ ದಂಡ ।
ನರಗುಂದ ವೂರ ಕಂಡ ಹೊಕ್ಕರ ವಳಿಯೇಕ ।
ಫಿರಂಗ್ಯಾಗ ಸುದ್ದಿ [4]ಹೋ[4]ತಿ ಜಲ್ದ ।
ಟೊಪ್ಪಿಗಿ ನೆಲಕ ವಗದಾ ಮಾಡತರ ದುಃಖ ॥೪॥

ದುಂಡ ತೊಗೊಂಡ ಬಂದರ ಫಿರಂಗೆರ ।
ಮುಂಂನೂರ ಸೋಜರ । ಸಾವಿರ ಕರಿಬಾರಾ ।

---

1 ಅೈ 2 ಗ್ಯೊ 3 ಹೊ 4 ಹೊ

ಬಂತ ವತ್ತರ ವಳೆ ಸಿಟ್ಟೀಲಿ ।
ಸಂತಮುಂತ್ರ ಹಾಕಿದರ ಜ್ಯಾಲಾ
ಗಡದವರ್ಗೆ ಹಾದಿಲ್ಲ ಹೋಗತರ ವೇಲೆ ॥
ಗಡದವರು ವಗದರೊ ಗುಂಡ ।
ಫಿರಂಗೆರನ ಕಂಡ ।
ಸತ್ತಿತೊ ದಂಡ ಆದರೊ ಬಂಡಾ ।
ಬಿದ್ದರೊ ಜಕಿವಿಂಲಿ ।
ಹೀಂಗ ಲಡಾಇ ಹತ್ತಿತೊ ಕಡಕ ।
ಗುಂಡ ಯೇಕ ದುಂವಂಕಬಿಟ್ಟರ ವತ್ತರಲಿ ॥
ದಂಡ ಸತ್ತಿತಣ್ಣ ವಂದ ನೂರಾ ।
ಅಂತರ ನಿರನೀರ ಇಲ್ಲ ಖಬರ ।
ಕಯ್ಯಾನ ಹತಿಯುರವುಳಿಡತರ ಚೆಲ್ಲಿ ।
ಹೀಂಗಾತಿ ಫಿರಂಗೆನ ಗತಿ ।
ಹೌವ್ವಹಾರೆತಿ । ಬಿದ್ದರ ಭೂವಿಂ ವೇಲೆ
ವುಸಲತ ಮಾಡಿದ ಸರ್ದಾರಾ ।
ವುಂಂನೂರ ಸೋಜರ । ಜಾಗಕೊಂನರ ।
ತುಂಬಿಕೆರಬಾರ ಇಟ್ಟನ ಕದ್ದಿಲಿ ।
ವಳಗಿಂದೊಳಗ ಪಿತುರ ಸಂದಾನಾ
ಮಾಡಿದ ಕಾರ್ಕೂನ ಗಡಾದವೇಲಿ ॥ಜ್ಯಾಲ॥

ಫಿರಂಗೆರ ಹೋದ್ರ ಮೇಲಕ
ಗಡದ ಸನಿಯಂಕ ಹೋದರೊ [1]ಏ[1]ರಿ ।
[2]ಐ[2]ವತ್ತ ಕೂದರಿ ।
ಗೊಲಂದಾಸ ನೋಡಿಕೆರತಾನ
ಮಾಡ್ಲಿಲ್ಲ ಅನವಾನ
ಹಿಡದ ವುಂಂಜ್ಯಾರಿ । ಹೊಡದ ತರತೂರಿ ।
ಗಡವವರು ಇಳದರೊ ತೆಳಗ
ಸಿಟ್ಟ ವುನದಾಗ ಬೆಂಕಿಯಾ ಚೂರಿ
ಹಾರಿತೊ ಖಬರಿ ।
ಗಡದವರ ತಿರಿವಿದರ ಬಂದ ।

---

1 ಏ 2 ಅೈ

ಹತ್ತೆರ [1]ಬೆ[1]ನ್ನಿಂದ
ಬಾಬಾ ಸಾಬ ದೊರಿ ಮಾಡೆನ ಶರಿಸೂರಿ ॥ಯೇರ॥

ಗಪ್ಪಾದ ದಂಡ ಯೆದ್ದಿತಲ್ಲಾ
ಆದಿತ ಗಲಬಲ
ಗಡದವರ ಕೈಕಾಲ ಬಿಟ್ಟರೊ ಯಂಲ್ಲ
ಆಗಿನಾ ಕ್ಷಣಕ ।
ಗಡದವರಂ ಹೋದರಂ ಮಂರದ ।
ಹಿಂದಕ ಸರದ ಆಗಸಿ ಬಾಗಿಲಕ ॥ ೫ ॥

ದಂಡ್ಡಿಗಾಸಿ ಮಾಡಿದ ಕಾರ್ಕಂನ
ವುಂಡ ಅವರನ್ನ ತಿರಿಗಿಬಿದ್ದ ತಾನ
ಬರಲಿಲ್ಲ ಅಂತಃಕರಂಣ ಅವನ ಮಂನದಾಗ ।
ಅಗಶಿ ಹಾಕ್ಸಿದಾನ ತಾನಿಂದ ।
ದಂಡ ಬಾಳ ಬಂತ ತಗಿಯಂಬ್ಯಾಡ್ರೆಂವಗ
ಇಷ್ಟ ಹೇಳಿ ಹೋದ ಗಡದ ವೇಗ
ಮದ್ದ ತೊಶನಾಗ ಗೊಲಂದಾಸಗ
ಚೆಲ್ಲೆನ ಗಡದ ತೆಳಗ
ಮೋಸ ಮಾಡೆನಾಗ ।
ಸಂಸ್ಥಾನಕ ಹಿಡರೊ ನೀರ ।
ಹಿಂತ ಹಾರೂರ । ದಂಡ್ಡಿನ ಕಾಲಾಗ ।
ಪಿರಂಗ್ಯಾ ಮಾಡಿದನ ತಡಕ
ಅಗಶಿ ಬಾಗಿಲಕ ।
ಟೋಪ ಹಚಿ ನಾಕ
ವರದ ರಂಜಕ ಶಿಟ್ಟಿ ಮಂನದಾಗ ।
ಅಗಶ್ಯಾಗ ಆತಿ ಗದ್ದಲ
ಹೊಗಿ ಕತ್ತಲ ಕಾಳಗಂವದಾಂಗ ।
ಯಂಡ್ರಂ ದಂಡ ಬಿದ್ದವು ತಳಕ
ಕಡುಂತರ ಹೊಕ್ಕ ತೆಪ್ಪಸೆರ ದಿಕ್ಕ
ಇಲ್ಲದಲೆ ಲೆಬ್ಬ ಬಿದ್ದವ ಅಗಶ್ಯಾಗ ।
ವೊಬ್ಬನ ಮಾರಿ ವೊಬ್ಬಗ ಕಾಣಂದಿಲ್ಲಾ
ಕೆಂದಂಳ ಹಾರಿತಲ್ಲಾ ತೆಕ್ಕಿ ಮಂಕ್ಕಿ ವಳಗ ॥ಚ್ಯಾಲ॥

---

1 ಬೆಂ

ದರಜಿಲ್ಲದ ಕಡುಂತರ ದಂಡ
ಹಾಕಿಡತವರುಂಡ ಮುಂರುತರಗೋಗಿ
ಹೋಗತವ ಪ್ರಾಣ ।
ವದ್ದಾಡತಾವ ಅವರ ದಡಾ
ಮುಂರದ್ದವ ನಡ ಹೊರಬಿದ್ದವ ಕಂಣ ।
ಬಾಇ ತುಂಬ ಮಂಣ ।
ಕಂದರೀವ ಕಡುಂತರ ಕಾಲಾ
ಬಿದ್ದವೊ ಬಾರಲ ಚುಂಚಿ ಬಾಲೇನ
ಅಂತಾರ ಧಿನಧೀನ ।
ಹೆಣ ಆಗಿದಾವ ಚಿಪ್ಪಡಿ
ರಗತ ಸೂರೆಡಿ
ಮುಂಕ್ರಿದವ ನೊಣ ಸಾಂಬ ಭಗವಾನಾ ।
ಸಪ್ಪಳಾಗತಾವ ತಡಪಡ ತೋಪ
ಧಡಬಡ ಬಿಟ್ಟರ ವಂದಸ[1]ವ್ವ[1]ನ ।
ಮುಂಣಸೆರ [2]ಸ್ಯೆ[2]ನ ॥ಯೇರ॥

ಅಗಸ್ಯಾಗ ದಿಕ್ಕಿಲ್ಲ ಯಾರೆರ ।
ಹೆಕ್ಕರ ಸೋಜರ ಹಿಂಬಲ ಸರದರ
ಹಲ್ಲ ಕರಕರ ತಿಂನಂತ ವಳಗ್ಹೊಕ್ಕಾ ।
ಬಾಬ ಸಾಹೆಬ ಗಡದ ಆಸೆ ಬಿಟ್ಟಾ
ಕಯ್ಯ ಮುಂಗದ ಹೊಂಟ ಅಡಿವಿ ಆರೆಣಕ ॥೬॥

ಬಾಬಾ ಸಾಹೆಬ ಹೋದನು ವೋಡಿ
ಪೊಲೊಸಿ ಸಾಹೆಬನ ನೋಡಿ
ಸಂತಮುಂತ ಹಂಡಿಕ್ಯಾಡಿ
ಹೋದನ ತೊರಗಲ ಕಡಿ
ಗಂಡ್ನ ನೋಡಿ ಸೋಸಿ ।
ಕಂದರಿ ಹೆಜ್ಜಿ ಹಿಡದರೊ ಕುನಾ
ಹೋದರು ಬೆಂನಬೆಂನ
ಹಿಡದರ ಅಡರಾಸಿ ।
ಬಾಬಾ ಸಾಹೆಬ ಕಂಣಿಗೆ ತಂದ ನೀರ ।

---

1 ವ 2 ಶ್ಯೆ, ಸ್ಯೆ

ಮುಂನದ ಈಶ್ವರ
ಸ್ವಾಮಿಂ ಚಿದಂಬರ ವೆಂಕಟಪತಿ
ಪೂರ ಬಿಟ್ಟ ಮುಂಣಗಸಿ
[1]ಏ[1]ನಿಲ್ಲ ದೇವರ ಹಂತೆಕ
ಈಗಿನ ವ್ಯಾಳೆಕ ಆದ್ನಿ ಪರದೇಸಿ ।
ಸಂತಮುಂತ್ರ ಬಿಚಗತ್ತಿ ಸೋಜರ ಪಾರಾ ।
ಮೋದರ ಚಮತ್ಕಾರಾ
ಯೊಳ ಮುಂದಿ ಸರದಾರಾ
ಮಾಡುನು ಅಂತಾರ ಚೂರ ।
ಇವನ ಕಡಿಕಡಿಸಿ ।
ಬಾಬಾ ಸಾಬನ ಹಾಕಿದರ ಗಲ್ಲ
ತಡಾ ಮಾಡಲಿಲ್ಲ ತೀರಿತವನಾಸಿ ॥
ನರಗುಂದುರಾಗ ಇಲ್ಲ ಮಂದ ಪ್ರಾಣಿ
ಹೋದನೊ ಧಣಿ ಬಿಟ್ಟರೊ ಮನಿ
ಬಡಕೊಂಡರ್ಬಣಿಹಣಿ
ತಾಯಿಂ ಅತ್ತಿ [2]ಸೊ[2]ಸಿ ।
ಮಂಗನ ನೆನಸಿ ತಾಇ ಗಳಗಳ
ಆದಳ ತಳಮಳ
ಸತ್ತರಂ ನೆನ ನೆನಸಿ ॥ ಚ್ಯಾಲ ॥

[3]ಜೇ[3]ಷ್ಟ ಅಧಿಕ ಶಂದ್ಧ ಪೂರ್ಣಮಾ
ಕಾಳಾಯಂಕ್ತ್ಯಾಕ್ಷಿ ನಾಮಂ ಇತ್ತ ಸಂವ[4]ತ್ಸ[4]ರ ।
ವಾರ ಮಂಗಳಾರ ।
ಶ[5]ಕ[5] ಸತ್ರಾಸೆ [6]ಐಂ[6]ಸಿ ವರಷ
ಆತಿ ಕೈವಸ
ಜೆಂಡೆ ಜರತರ ಹಚೆರ ಫಿರಂಗೇರ ।
ಬಾಳ ದಿನ ಕುಂತ ಕಡದಾಡಿ
ಬಹದುರ ಹೋದ ಮೋಡಿ
ಬಂತ ಹುಂನಾರ ತೊಗೊಂಡರ ಇವರ ।
ನರಗುಂದ ಮಾಡಿದರ ಲೂಟಿ

---

1 ಎ 2 ಸೋ 3 ಜೆ 4 ತ್ಸೇ 5 ಖ 6 ಆ್ಯಂ

ಬಡದರೊ ಪ್ಯಾಟಿ
ಹೊಕ್ಕರ ಸೋ[1]ಜ[1]ರ ಕೆಡಸಿ ಹೆಂಗಸರ ।
ವಂಂರಗೋಡ ವೂರ ಬಾಳ ಚಂದ
ಗಂವಿಶಿದ್ದಂದ ದಯಾ ಬರಪೂರ ।
ವಂಂಗಿತ ಆಇತವಾರಾ ॥ಯೇರ॥

ಧೊಂಡಂ ಪರಸ ಹೇಳಿದರ ಪದ ।
ಡಬ್ಬಿನ ವೇಂಗಿಂದಾ ನಿಶಾನಿ ಕಲ್ಲಿದಾ
ಬಾಬಾಜಿ ಅಂದ ಟೀಕ ।
ರಾಣಂಕು ಬಂಣ ವಾಡೆರ ಪಾವಡ
ಹಾಡತರ ಜೋಡ ವೈರಿಗೆ ಬಿತ್ತ್ರದಾಕ ॥ ೭ ॥

1 ಜ

ಪುಸ್ತಕ ಎರಡು : ಭಾಗ ಎರಡು

ಜೋಗುಳದ ಪದಗಳು

೧ ಜೋಜೋ ಶಂಭುಲಿಂಗಾ

ಜೋಜೋ ಶಂಭುಲಿಂಗಾ ಕೃಪಾಂಗಾ
ಜೋಜೋ ಶಂಭುಲಿಂಗಾ ಶಿವಸಂಗಾ ॥
ಜೋಜೋ ಇಷ್ಟಲಿಂಗ ಜೋಜೋ ಗುರು-ಲಿಂಗ
ಮಂತ್ರ ಅಂಗಾ ಜೋಜೋ ॥ ಪಲ್ಲ ॥

ಮೃತ್ಯ ಲೋಕದೊಳು ಶಿಂದು ಬಲ್ಲಳನು
ಸತ್ಯದಿಂದಲೆ ಸೀಮಿ ಭೂಮಿ[ಯ] ಆಳುವನು ।
ಅರ್ಥ ಸಂಪದು ಅಷ್ಟಭೋಗದೊಳ ಇಹನು
ತಾನು ಭಕ್ತಿ ಉಳ್ಳವನು ಎಂದು ಬಿರದ ಸಾರಿಸಿದನು ಜೋಜೋ ॥ ೧ ॥

ಕಾಳಿಯು ಧ್ವನಿ ಕೇಳಿ ಬಂದನು ಶಿವನು
ಕೇಳಿದ ಸಿಂದುಬಲ್ಲಳನ ವಾಕ್ಯವನು ॥
ತಾಳಿದ ಹದಿನಾರು ವರುಷ ತಾಳಿದನು
ಚಲ್ವ ಸೂಳಿಗೇರಿಗೆ ಬಂದು ಹೊಕ್ಕನೊ ಶಿವನು ಜೋ ॥ ೨ ॥

ವರಗ ಮುಂಡಸ ಗೀರಿ ಬೆರಳ [1]ಚಳ್ಳುಗರು[1]
ತುರಾಯಿ ಮುತ್ತಿನ ಶರಗು ಜರತಾರಾ ॥
ಕರ್ನಿಯು ಉಟ್ಟು ಕಾಸಿಯು ಕರದಿ ಕಠಾರಾ
ಹತ್ತು ಬೆರಳಿಗೆ ಇಟ್ಟನೊ [2]ರವಿರತ್ನದ[2] ಉಂಗರ ॥ ೩ ॥

ಕಂಟಿ ನಾಗರಸುತ್ತು ಟೊಂಕಕೆ ಉಡದಾರ
ವಂಟಿ ನೀಲದ ಮುತ್ತಿನ ಹಾರಾ ।
ಕಂಟಸ್ತ ಪಾವಡ ಕುಸುಮದ ಹಾರಾ
ಬಂದು ಮಂಟಪ ಹೊಕ್ಕನೊ ಮದನ ಸಂಹಾರಾ ಜೋಜೋ ॥ ೪ ॥

ಹತ್ತಿ ಗಡ್ಡಾ ಮೀಸಿ ಮುತ್ತಿನ ಪಾವಡಾ
ವಸ್ತ್ರ ಸಿವದಾರ ಸಜ್ಜಿ ಕಾಂವಿ ಪಾವಡಾ ॥
ಹೊದ್ದು ಗೊಂಗಡಿ ಬಿಳಿಯ ಹುವ್ವಿನ ಹಚ್ಚಡಾ
ಶಿವನು ಭಕ್ತರ ಮನೆಯೊಳು ಭಿಕ್ಷಕ್ಕೆ ಬಂದನು ನೋಡ ಜೋ ॥ ೫ ॥

ನಸಲೊಳು ವಿಭೂತಿ ಹಸಮಂಗನು ಜೋಗಿ
ಎಸವ ರುದ್ರಾಕ್ಷಿ ಪದ್ಮದ ಹಾವಿಗಿ ॥

---

1 (ಚಳ್ಳ + ಉಗರು) 2 (ರವಿ + ರತ್ನದ)

ಕುಸಂಮು ಕಸ್ತುರಿ ಗಂಧ ಪರಿಮಳದ ಭೋಗಿ
ಎಳೆಯು ಬಿಸಲೊಳಂ ಭಿಕ್ಷಕ್ಕೆ ಬಂದ ಶಿವಯೋಗಿ ॥ ೬ ॥

ಸಿಂದುಂ ಬಲ್ಲಳರಾಯಾ ಶಿವ ಬಂದನಂ ಎಂದುಂ
ಇಂದುಂಶೇಕರನಿಗೆ ಬಂದುಂ ಶರಣೆಂದುಂ ॥
ಒಂದನೆಯಂ ಮಾಡಿ ತಮ್ಮ ಮಂದರ
ಮಂಚದ ಮೇಲೆ ಮೋರ್ತ ಮಾಡಂ ಎಂದುಂ ॥ ೭ ॥

ಬೇಡಿದ ಬಯಂಕಿಯು ನೀಡಂವರಂ ಎಂದುಂ
ನಾಡಂ ಎಲ್ಲಾ ಹೇಳಿತೊ ಹಂಗೆ, ನಮಂಗೆ ಎಂದುಂ ॥
ನೋಡಂತ ಬಂದೆವೊ ಭಕ್ತಿ [1]ಒಂದೊಂದಂ[1]
ಮಂದವಿ ಮಾಡಿಕೊಡುಂ ನಿಮ್ಮ ಹೆಂಡರೊಳ ಎಂದುಂ ॥ ೮ ॥

ಏಳನೂರಂ ಹೆಣ್ಣಂಗಳ ಬಾಲೆರ್ನ ಕರಸಿ
ಬಾಲೆರಿಗೆ ವುಡಗರಿಗೆ ವಸ್ತ್ರವ ತರಿಸಿ ॥
ನಾರೆರಿಗೆಲ್ಲಾ ಪ್ರಸಂಗಿಸಿ ಹೇಳಿ ಕಳಿವಿರಿ
ಗಂಧ ವೀಳ್ಯವ ಕಳಂಹಿಸಿ ॥ ೯

ಪನ್ನಿರಂ ಎರಕೊಂಡಂ ಹೆಂಣಂಗಳಂ ಎಲ್ಲಾ
ಚನ್ನಾಗಿ ವಸ್ತ್ರವ ದರಸಿ ತಾವು ಎಲ್ಲಾ ॥
ಬಂದು ಪನ್ನಾಂಗಹರ ಸ್ತುತಿಗೆ ನಿಂತಿದ್ದರಂ ಎಲ್ಲಾ ಜೋ ॥ ೧೦ ॥

ಗೊಂಬಿ ಪುತ್ತಳಿ ನಿಂಬಿ ಹಂಣೆನಂಥ ಅವರು
ಕಂಂಭ ಕಂಚದ ಮೇಲೆ ಶರಗನ ಹಾಕಿ ಇಹರು ॥
ಚೆಂಬ ನೀರಲ ಬಳಿ ಜೋಡಿಸಿ ಇಟ್ಟಿಹರು
ದಾಳಿಂಬ್ರ ಬೀಜದಂಥ ದಂತುಗಳಂ ಜೋ ॥ ೧೧ ॥

ಜೋಡ ಮುಂತ್ತಿನ ವಾಲಿ ಚಂಡೆ ಇಟ್ಟಿಹರಂ
ಸಿಡಿದಂರ್ಗ ಸಣ್ಣ ಶಾಲಿಯಂನಂ [2]ಉಟ್ಟಿಹರಂ[2] ॥
ಉಡಂಪತಿ ಸೋಮಂನ ಮಂಖದ ಕಾಂತಿಯರಂ
ಬಂದುಂ ಹರಸ್ತುತಿಯಿಂದಲೆ ನಿಂತಂ ಕೊಂಡಂ ಇಹರು ॥ ೧೨ ॥

---

1 (ಒಂದು + ಒಂದು) 2 (ಉಟ್ಟು + ಇಹರು)

೨. ತೊಟ್ಟಿಲ ತೂಗುವ ಜೋಗಳ ಪದಗಳು

ತೂಗು ತೂಗು ನನ್ನ ನಾರಿಯು ಕಂದಾನ
ನಾಗಭೂಷಣ ತಿರಭುವನ ನನ ಮನೆಯು
ತೂಗು ಪಂಜರದ ಅರಗಿಳಿಯೆ ॥ ೧ ॥

ಶರಗ ಬಿಡೊ ನನ್ನ ಶೇರ ಭಂಗರ ಧೀರ
ನೀರಿಗೆ ಬಿಡೊ ನನ್ನ ಗಿಣಿರಾಮು । ನಿನ ಕಂಡು
ಬಾಲೇರು ಬಸುರು ಬಗದಾರು ॥ ೨ ॥

ಮಕಮಾಲ ಟೊಪ್ಪಿಗೆ ಮುತ್ತು ಹಚ್ಚಿದ ಅರಳೆಲೆ
ಮುಚ್ಚಿಕೊಂಡಾರು ನನ ಬಾಳ । ನಾ ನಿನಗ
ಸೆಡಗರದ ದೃಷ್ಟಿ ತೆಗದೇನು ॥ ೩ ॥

ಇಂದು ಬರತೇನಂತ ಗಂಧದ ಆಣೆಯು ಕೊಟ್ಟ
ತಿಂಗಳದ ಮೇಲೆ ಸರಿದೀನ । ನನ ಮನೆಯು
ನಂಬಿಗೀ ಬಾಳ ಬರಲಿಲ್ಲ ॥ ೪ ॥

ಯಾಲಕ್ಕಿ ಮಾಟಾದ ಎರಡಂಗಿ ತೊಟ್ಟಾನೆ
ಯೆಲೆಯು ಬಳ್ಳ್ಯಾಗ ಸುಳದಾನೆ । ನನ ಕಂದವ್ವ
ಯೆಲೆಗೊಂದು ಮಾತು ಕಲಿತಾನ ॥ ೫ ॥

ಹುಬ್ಬಳ್ಳಿ ಹಾದೀಲಿ ಇಬ್ಬಾರು ಬರುತಾರ
ಕಬ್ಬಿನ ಗರಿಯಂತ ಕಶಿ ಅಂಗಿ । ನನ ಕಂದವ್ವಗಳು
ಒಬ್ಬರಕಿಂತ ಒಬ್ಬರು ಚಲುವರು ॥ ೬ ॥

ಎಲ್ಲವನ ಗುಡಿಯಾಗ ಯೆಂಳದ ಮಾತು ಹೇಳವರ್ಯಾರು
ಬೆಳಗಾಂವಿ ಧೊರೆಯು ನನ ಬಾಳ । ನಿನ ಮುಂಡಾಸ
ಎಳೆ ನಾಗರ ಹಾಂಗೆ ಹೊಳದಾವು ॥ ೭ ॥

ಹಾಲ ಕುಡಿ ಬಾರೊ ಹನ್ನೈರಡು ಬಟ್ಟಾಲ
ಕೀಲದಡ್ಡಣಿಗಿ ಕಿರಿ ಸಿಂಪಿ । ನನ ಬಾಳಯ್ಯ
ಹಾಲ ಕುಡಿಯೋದು ವಿಸ್ತಾರ ॥ ೮ ॥

ಹಾಲ ಕುಡದ ಚಿಕ್ಕ್ಯ ಬೂದ್ಯಾಗ ಮಲಗೈತಿ
ಬೇಳೆಂತ ಕಂಣಿ ತೆರದೈತಿ । ನನ ಬಾಳೈನ
ಸಿಂಗರದ ನಿದ್ದೆ ಕೆಡಸ್ಯೇತಿ ॥ ೯ ॥

ಬಾಳೆಲ್ಲಿ ಆಡ್ಯಾನ ಬ್ಯಾಳಿಲ್ಲಾ ಚೆಲ್ಯಾವು
ಬಾವು ಮುತ್ತು ವುದರ‍್ಯಾವು । ಕೇರನ್ನ ಅವ್ವಗಳಿರ‍್ಯಾ
ಬಾವುಲಿ ಕಂಡವರುಂ ಕೊಡರೆವ್ವ ॥ ೧೦ ॥

ಮುಂದ್ದು ಮುಲಗೈತಿ ನನ ಸದ್ದುಂ ಮಾಡಲಿ ಬೇಡ
ರಂದ್ರಮಣಿ ಯೆಂಬ ಹಲಗಿ । ತೊಟ್ಟಲದಾಗ
ಮುಂದ್ದುಂ ಕಂದವ್ವ ಮುಲಗ್ಯಾನ ॥ ೧೧ ॥

ಬಿಂದೂಲಿ ಯಿಟ್ಟುಕೊಂಡು ಬಾಗಿಲದಾಗ ಆಡುವಳುಂ
ಬಿಂದುಂಲಿ ಮುರತಾಳ ಕೇರ‍್ಯಾಗ । ನನ ಕಂದವ್ವನ
ಬಿಂದುಂಲಿ ಕಂಡವರುಂ ಕೊಡರೆವ್ವ ॥ ೧೨ ॥

ಬನ್ನಿಯುಂ ಗಿಡಕ ಬಣ್ಣದ ತೊಟ್ಟಲ ಕಟ್ಟಿ
ಬಂದಾರ ನನ್ನ ಬಳಗೆಲ್ಲ । ನನ ಕಂದವ್ವಾಗ
ಚೆಂನಾದ ಹೆಸರ ಇಡತೇವ ॥ ೧೩ ॥

ಅಪ್ಪ ಬ್ರಹ್ಮದೇವ ಮುಜ್ಜಣದ ಬಾವ್ಯಾಗ
ಸಜ್ಜಾಗಿ ಹೋಗಿ ಮೊಕ ತೊಳದುಂ । ಬೇಡ್ಯಾರ
ಗೆಜ್ಜಿಯುಂ ಕಾಲ ಕುಂವರಾನ ॥ ೧೪ ॥

ಆಡಿಗೀಯು ಮನೆ ತನಕ ನಡದ ಬಾ ದೀವಿಗಿ
ಸಡಗರದ ಕೆಲಸ ನನಗಾಗಿ । ನನ ಕಂದವ್ವ
ನಿನ ಮುಡದಿ ಮಾಣಿಕ ಹಡದಾಳುಂ ॥ ೧೫ ॥

ಕಟ್ಟಾಣಿ ಸರದೊಳಗ ಕಲಪೆಲ್ಲ ಭಂಗಾರ
ಶಿಟ್ಟು ಮಾಡಿದರ ನಗಿಸೂನ । ನನ ಕಂದವನ
ಬಿಟ್ಟೊಂದುಂ ಜಾವ ಇರಲಾರೆ ॥ ೧೬ ॥

ಸರಗಿ ನನ ಫಲವಣ್ಣ ಸರಮುಂತ್ತು ಭಾವುರಾಯಾ
ಚಂದೂರ ಹಾರ ಧರಮುಂಣ । ಬದಿಯುಂಲ್ಲಿರುವ
ಕುಂಂದುಂಣದ ಹಳ್ಳ ನನ ಶಾಂತ ॥ ೧೭ ॥

ನೆನಿಯುಕ್ಕಿ ನೆನಗಡಲಿ ಗೊನೆಯುಂ ಬಾಳೀಹಣ್ಣು
ಓದುಂ ಸಾಲ್ಯಾಗ ಪನಿವಾರ ಪನಿವಾರ । ಸರಸತಿ ತಾಯಿಂ
ನನ ಓದುಂ ಕಂದವ್ವಗ ಮತಿ ಕೊಡುಂ ॥ ೧೮ ॥

ಹೋಗುಂಬ್ಯಾಡ ಕಂದವ್ವಾ ಹೋಳಿಗೆ ಹುಂಚಿಟ್ಟೇನೆ
ಬೇಗ ಸ್ಯಾವಿಗಿ ಹೆಸರಿಟ್ಟು । ನನ ಬಾಳ್ಯಿನ
ಹೋಗುಂ ಪಲ್ಲಕ್ಕಿ ತರಬೇನ ॥ ೧೯ ॥

೩. ಅಕ್ಕನಾಗಮ್ಮನ ಜೋಗಳ ಪದವು*

ಜೋ ಯಂನಿರಿ ಶರಣ ಸತಿಯರು ಕೂಡಿ ।
ಜೋ ಯಂದು ಪಾಡಿರಿ ನಲಿನಲಿದಾಡಿ ।
ತಾಯಿ ನಾಗವ್ವನ ಮಗನ ಮುದ್ದಾಡಿ ।
ಜೋ ಯಂದು ಚೆಂನಬಸವನ ಕೊಂಡಾಡಿ ಜೋಜೋ ॥ಪ॥

ಶರಣ ಕಕ್ಕಯ್ಯನವರ ವರಪ್ರಸಾದವನಂ ।
ಯರಡಾರು ವರುಷವ ಕಾಯ್ದುಕೊಂಡಿಹನಂ ॥
ದೊರಕಲು ಮನದೊಳು ಹರುಷ ತಾಳಿಹನಂ ।
ಭರದಿಂದ ಕೈಕೊಂಡು ಬಂದ ಬಸವನಂ ॥೧॥

ಮಿಕ್ಕ ಪ್ರಸಾದವ ಬಸವಂಣ ತಂದು ।
ಅಕ್ಕ ನಾಗವ್ವಗೆ ಕೊಟ್ಟರು ಬಂದು ।
ಮುಕ್ಕ್ಯತ ನಾಗಾಯಿ ಶಿವಶಿವ ಯಂದು ॥
ಮುಕ್ಕಂಣ ಗತಿ ಯಂದು ಸಲಿಸಿದಳೆಂದು । ಜೋಜೋ ॥೨॥

ಪ್ರಸಾದ ಸಲಿಸಲು ಅಕ್ಕನಾಗಂವಿಗೆ ।
ಸೂಸಲ ವಡಲೊಳು ನಿಂತಿತು ಬ್ಯಾಗ ।
ಆಸರಿಕಿ ಬ್ಯಾಸರಿಕಿ ಮನದೊಳಗೀಗ ॥
ಮಾಸ ಮಾಸಕೆ ದೇಹ ಪಲ್ಲಟವಾಗೆ ಜೋಜೋ ॥೩॥

ವಂದು ಮಾಸಕೆ ಬಾಯಿ ಹೇಸಿಕಿದೋರಿ ।
ವಂದಂಬು ಯರಡಕೆ ಮೋರಿ ಬಿಳ್ಪೇರಿ ।

---

* ಈ ಹಾಡಿನ ಒಟ್ಟು ನಾಲ್ಕು ಪ್ರತಿಗಳಿವೆ. ಶುದ್ಧಾಂಗವಾಗಿ ಅವೆಲ್ಲ ಪ್ರತಿಗಳೇ ಹೊರತು ಪಾಠಾಂತರಗಳಲ್ಲ. ಅವುಗಳಲ್ಲಿ ಮೂರು ಪೂರ್ಣರೂಪದಲ್ಲಿಯೂ ಇನ್ನೊಂದು ಅಪೂರ್ಣ ರೂಪದಲ್ಲಿಯೂ ಇವೆ. ಅಪೂರ್ಣ ರೂಪದ ಒಂದು ಪ್ರತಿ ಅತ್ಯಂತ ಸುಂದರವಾದ ಕೈಬರಹದಲ್ಲಿ ಪ್ರತಿ ಮಾಡಲ್ಪಟ್ಟಿದೆ ಮತ್ತು ಭಾಷೆಯನ್ನು ಶಿಷ್ಟಕ್ಕೆ ಹತ್ತಿರವಾಗುವಂತೆ ತಿದ್ದಲಾಗಿದೆ. ಈ ನಾಲ್ಕೂ ಪ್ರತಿಗಳನ್ನು ಪರಿಶೀಲಿಸಿ ಮೂಲ ಭಾಷೆಯನ್ನುಳ್ಳದ್ದೆನಿಸಿದ ಪೂರ್ಣರೂಪದ ಪ್ರತಿಯನ್ನು ಇಲ್ಲಿ ಆಯ್ಕೆ ಮಾಡಿಕೊಳ್ಳಲಾಗಿದೆ. ಒಂದು ಪ್ರತಿಯ ಪ್ರಾರಂಭದ ಪುಟದ ಮಾರ್ಜಿನ್‌ನಲ್ಲಿ ಇಂಗ್ಲಿಷ್‌ನಲ್ಲಿ ಪೆನ್ಸಿಲ್ ಬರಹದ ಒಂದು ವಿವರಣೆ ಇದೆ ಅದರ ಪೂರ್ಣಪಾಠ ಹೀಗಿದೆ: This is not sung every day in the house—But when a child is put in a cradle for the first time on the 13th day after birth, may people assembled it is a festival and this song is sung...says like it–

ಮಂದಂಬಂ ಮಂೂರಕೆ ಯಂದಿ ಹಸರೇರಿ ॥
ಮಂದಂಬಂ ನಾಲ್ಕಕೆ ಕಂಣೊಳ ಸೇರಿ ಜೋಜೊ ॥೪॥

ಬಿಡದೈದಂ ಆರೇಳಂ ಮಾಸವೆಂಟಾಗೆ ।
ತೊಡಿತೋಳ ತಂಬಂತ ಕಂಚಕರ್ದಗಾಗೆ ।
ವಡದೆದ್ದಂ ನಾಭೆಂದಂ ನಡೆ ಮಂದವಾಗೆ ॥
ಮಂಡದಿ ನಾಗವ್ವನ ನಡ ದೊಡ್ಡದಾಗೆ ಜೋ ॥೫॥

ಶರಣೆ ನಾಗವ್ವನ ರೂಪವ ನೋಡಿ ।
ಭರದಿಂದ ಮಂಚಂಣ ಬಂದನಂ ವೊ[ೇ]ಡಿ ।
ಅರಸನಿದ್ದಲ್ಲಿಗೆ ನಿಂತಂ ಮಾತಾಡಿ
ನೆರದಂಥ ಸಭೆಯೊಳಂ ಹೆ[ೇ]ಳ್ಯಾನಂ ಚಾಡಿ ಜೋಜೊ ॥೬॥

ಕಂಡಂ ಕೊಂಡಿಮಂಚದೇವನಂ ಬಂದಂ ।
ಮಂಡಲಪತಿಯಂಲ್ಲಿ ವುಸರಬೇಕೆಂದಂ ।
ದಂಡನಾಯಂಕನ ಖ್ಯಾತಿಯಾಗಲಿ ಇಂದಂ ॥
ಪಂಡಿತರ ಸಭೆಯಂಲ್ಲಿ ಕರಸಬೇಕೆಂದಂ ॥೭॥

ಬಸವಂಣ ದೊಡ್ಡಾತ ಯಂಲ್ಲಾ ಲೋಕದಲಿ ।
ಬಸಂರಾದಳವರಕ್ಕ ಗಂಡನಿಲ್ಲದಲೆ ।
ಯಂಸವ ಬೂದಿ ತಂತ್ರಾದಿ ಶಾಸ್ತ್ರಗಳು ॥
ವಸಂಧೀಶ ಕೇಳಯ್ಯ ಕರಸಿ ಬ್ಯಾಗದಲಿ ಜೋಜೊ ॥೮॥

ಗಂಡನಿಲ್ಲದ ಬಾಲಿ ಬಸಂರಾದಳಲ್ಲ ।
ಪಿಂಡ ಶಿಸವು ತಾನಂ ಮಾತಾಡಂದಲ್ಲ ।
ಮಿಂಡ ಜಂಗಮಂರಂ ಮಂತದೊಳಂ ಸೊಲ್ಲ ।
ಭಂಡಾಟ ಆಗಂದಂ ಶಿವ ತಾನೆ ಬಲ್ಲ ಜೋಜೊ ॥೯॥

ಗುಡಿಗಂಡಿಸುತ ರಾಯಂ ಬಲಂ ಕೋಪದಿಂದ ।
ಕಡಂಬ್ಯಾಗ ಬಸವಂಣ ಹೇಳು ಹೇಳೆಂದ ॥
ನಂಡಿದನು ಮಾತಿನೊಳರಸಿನೋಳಂದಂ ॥
ಪೊಡವಿಯೊಳೀ ಮಾತಂ ಶಿವಬಲ್ಲನೆಂದ ಜೋಜೊ ॥೧೦॥

ನವಮಾಸ ತಂಬಂತ ಬಿಜ್ಜಳರಾಯಂ ।
ತವಕದಿ ಕರಂಸಿದಕ್ಕನಾಗಾಯಂ ।

ಹವಣಿಸಿ ನುಡಿದನು ಇದೇಕೇನುಪಾಯು ॥
ಸವರಿಸು ಕಿವಿಮೂಗು ಹೊಡಿಸು ಬಾಯಿ ಬಾಯು ಜೋಜೋ ॥ ೧೧ ॥

ಮಾನ್ಯ ಬಿಜ್ಜಳರಾಯು ಬಿಡ ನಿನ್ನ ಸಿಟ್ಟ ।
ಕನ್ನ್ಯಯು ಬೈಲಿಗೆ ತರಿಸಿದ ದುಷ್ಟ ।
ಮನ್ನಿಸಿ ಕಳುಪಯ್ಯ ಕೆಟ್ಟಿತು ನಿನ್ನ ಪಟ್ಟ ॥
ಬೆನ್ನಿಲೆ ಹುಟ್ಟುದು ನೋಡಿನ ದೃಷ್ಟಾ ಜೋಜೋ ॥ ೧೨ ॥

ಆಗ ಕೈಮುಗಿದನು ನಾಗಲಾಂಬಿಕೆಗೆ ।
ಬ್ಯಾಗನೆ ವುಡುಗರಿ ಕೊಳ್ಳವ್ವ ಶರಣಿ ।
ಬ್ಯಾಗನೆ ನಡೆಯುವ್ವ ಮೊದಲಿದ್ದ ಬಳಿಗೆ ॥
ಸಾಗಿ ಬಂದಳಾಗ ತುನರಮನಿಗೆ ಜೋಜೋ ॥ ೧೩ ॥

ದಿನ ತುಂಬಿ ಹೊತ್ತುಹೊತ್ತಿಗೆ ಬ್ಯಾನಿ ಬರುತ ।
ಮನಿಯು ಹೆಂಗಳೆರೆಲ್ಲ ನಡಕೆ ಕೈಯಿಡ್ವುತ ।
ಘನವಾದ ತುರಬನು ಬಾಯೊಳಗಿಡುತ ॥
ಮನಿಯುನವನು ತೆರು ಚಿಂತಿಸಿ ಬಾಯ್ಬಿಡುತಾ ಜೋಜೋ ॥ ೧೪ ॥

ಆಲಸ್ಯವ್ಯಾಕೆಂದು ಬಾಲೆರು ನುಡಿಯೆ ।
ಬಾಲಶ್ರೀ ಚುನನ ಬೆನ್ನಿಲೆ ಪಡಿಯೆ ।
ಬಾಲೆಯು ಕಣಿಗೆ ತುಣೀರ ಬಡಿಯೆ ।
ಸೂಲಗಿತ್ತಿ ನೀನು ಹೊರೆಯುಕ ನಡಿಯೆ ಜೋಜೋ ॥ ೧೫ ॥

ಅಕ್ಕಯ್ಯ ಹಿಡಿ ಮುರ ಕುಡುಗೋಲು ತುನೆ ।
ಹೊಂಕಳ ಹುರಿಯುನು ಕೊಯ್ಯುವನು ಬುನೆ ।
ಬಕ್ಕನೆ ಬೇವಿನ ಸೊಪ್ಪವ ತುನೆ ॥
ಚಿಕ್ಕ ಕಂದನ ಮೈಯ್ಯ ತೊಳೆವುನು ಬುನೆ ಜೋಜೋ ॥ ೧೬ ॥

ನಾರಿಗೆ ಸುಪಿಗಿ ಯುಣಿಯು ಪೂಸಿ ।
ನೀರನೆರೆದು ಪಟ್ಟೆ ಮುಚವ ಹಾಸಿ ।
ವಾರಿಗಿ ಗೆಳತೆರು ಬೆಂಕಿಯು ಕಾಸಿ ।
ಧೀರ ಕಂದಯ್ಯನ ಮುಗ್ಗಲಗೊಳಿಸಿ ಜೋಜೋ ॥ ೧೭ ॥

ಹಿಪ್ಪಲಿ ಕೊಬ್ಬರಿ ಲವಂಗ ಮೋಡಿ ।
ಮಪ್ಪುವ ಭಜಿ ಕಾಳ ಹುವ್ವ ಕಾಯು ಕೂಡಿ ।

ತಪ್ಪದೆ ಪತ್ರಿಯ ಕಾಯಿ ಹದಮಾಡಿ ।
ತಂಪ್ಪದೊಳಗೆ ಕಾರಕಳ್ಳಿಂದು ನೀಡಿ ಜೋಜೊ । ॥ ೧೮ ॥

ಚಿಕ್ಕ ಚಂನಬಸವ ಹುಟ್ಟಿದನೆಂದು ।
ಲೆಕ್ಕವಿಲ್ಲದ ಕಾಳಿ ಸಾರಿದವಂದು ।
ಅಕ್ಕರ ದಿನದಲ್ಲೆ ಶರಣೆರು ಬಂದು ॥
ಹೊಕ್ಕರು ಬಸವಂಣನರಮನಿಗಂದು ಜೋಜೊ ॥ ೧೯ ॥

ಸತ್ಯಕ್ಕ ಚೋಳಕ್ಕ ಕದಿರಿರೆಬ್ಬವ್ವ ।
ಸತ್ತ ಗಂಡನ ಪ್ರಾಣ ಪಡಿದ ಚಂನವ್ವಾ ॥
ವುತ್ತುಮ ಶಿವದೇವಿ ವೀರ ಸಂಗವ್ವಾ ॥
ಮುಂತ್ತ್ಯದೆ ಶರಣೆರು ಬಂದರು ಬಾಗಿನಕೆ ಜೋಜೊ ॥ ೨೦ ॥

ಕೊಳೂರು ಕೊಡಗೂಸು ದೋಸಿ ಪಿಟ್ಟವ್ವಾ ।
ಸೂಳೆ ಬೊಂತಲ ದೇವಿ ಬಾಲೆ ನಿಂಬೆವ್ವಾ ।
ಬೋಳಕ್ಕ ಮುಲಹಣಿ ಮಾಯಿದೇವೆವ್ವಾ ॥
ಮೇಲಾದ ಶರಣೆರು ಬಂದರು ಬಾಗಿನಕೆ ಜೋಜೊ ॥ ೨೧ ॥

ಕಂಣಿಗೆ ಕಾಡಿಗಿ ಹಚ್ಚಿ ಬಹು ಚಂದವಾಗಿ ।
ಬಂಣದ ತೊಟ್ಟಿಲ ಕಟ್ಟ್ಯಾರು ಬ್ಯಾಗ ।
ಚಿಂಣನ ಮಲಗಿಸಿ ಜೋಯೆಂದು ತೂಗಿ
ಚಂನ ಬಸವನೆಂದು ಹೆಸರಿಟ್ಟು ಕೂಗಿ ಜೋ ಜೊ ॥ ೨೨ ॥

ಹೆಸರಿಟ್ಟ ಶರಣೆರು ತೆರಳಿದರಂದು ।
ಬಸವ ನೀಲವ್ವನ ಮಠದೊಳಗಂದು ।
ಬಸವನ ಸಲಹುದು ನಾಗವ್ವಗಂದು ।
ಶಿಸುವೆ ಗತಿ ಯುಂದು ಇರುತಿರ್ದಳಂದು ಜೋಜೊ ॥ ೨೩ ॥

ಗುರು ಚಂನಬಸವನ ಜೋಗಳ ಪದವ ।
ಹರುಷದಿ ಕೇಳಿದವರಿಗೆ ವರವ ।
ಕರುಣದಿ ಕೊಡುವನು ಮಕ್ಕಳ ಫಲವ
ತರುಬಿಯ ಗುಂಡ್ಡದ ಶಿವಲಿಂಗ ವರವ ಜೋಜೊ ॥ ೨೪ ॥

ಅಕ್ಕನಾಗವ್ವನ ಜೋಗಳ ಪದ ಸಮಾಪ್ತವಾದುದು ॥ ಶ್ರೀ ॥ ಶ್ರೀ

೪. ॥ ಜೋಗಳ ಪದ ॥

ಹಸ್ಸೆಪ್ಪ ಅಂದರೆ ಹಾಲ್ಯಾಕ ಕಾಯಾವ
ಬೆಳ್ಳಿ ಬಟ್ಟಾಲ ಬೆಳಗ್ಯಾವ । ನನ್ನ ಶಾಂತಣ್ಣನ
ತೆಳ್ಳಾನ ಹೊಟ್ಟಿ ಹಸಿದಾಗ ॥ ೧ ॥

ತೊಟ್ಟಿಲದ ಕಂದವ್ವಾಗ ದಿಷ್ಟಿ ಮುಡ್ಯಾವೆಂದು
ಕಟ್ಟೇನಿ ನವಲ ಗರಿಗಳ । ಕಂದವ್ವಾಗ
ದಿಷ್ಟಿ ಪೇರುಣಿಗಿ ಇಳಿವೇನ ॥ ೨ ॥

ತೊಟ್ಟಿಲದೊಳಗ ತೊಳದ ಮುತ್ತನು ಕಂಡೆ
ಹೊಟ್ಟಿಯು ಕುಣಿಸಿ ನಗುವ । ನನ್ನ ಕಂದವ್ವಾಗ
ಜಡೆಗೆ ಮಾಣಿಕವ ಬಿಗಸೇನ ॥ ೩ ॥

ಕೂಸು ಕುಂಬಳ ಕಾಯಿ ರಾಸಿ ಬೋರಿ ಹಣ್ಣ
ಶಾವಂತಿಗಿ ಮೊಗ್ಗಿ ನನ ಬಾಳಾ । ನಿನ ಬೇಡಿ
ಈಶ್ವರಗ ಕೈಯು ಮುಗಿದೇನು ॥ ೪ ॥

ಕೂಸು ನೀ ಅಳಬ್ಯಾಡ ಕುಸುಮ ನೀ ಅಳಬ್ಯಾಡ
ರಾಸಿಯು ಮುತ್ತ ಅಳಬ್ಯಾಡ । ನನ ಮನೆಯು
ದೇಸಾಯರ ಮೊಮ್ಮಗನೆ ಅಳಬ್ಯಾಡ ॥ ೫ ॥

ಕೂಸಿನ ಕೊಂಚಿಗೆ ರೇಸಿಮಿ ಗೊಂಡೇವ
ದೇಸಕ ಹಡದವ್ವ ಕಳಿವ್ಯಾಳ । ಆ ವೂರ
ದೇಸಾಯಿ ನೋಡಿ ಬೆರಗಾದ ॥ ೬ ॥

ಆಗಸ್ಯಾಗ ಇರುವವರು ನನ ಕಂದವನ ಕರಿರೆವ್ವಾ
ದಾಳಿಂಬರ ಮುತ್ತು ಕಿವಿಯಾಗ । ನನ್ನ ಸಾಂತಣ್ಣ
ಸರಕಾರ ಸಾಕು ನಡಿ ಮನೆಗೆ ॥ ೭ ॥

ಅಳುವ ಕಂದನ ಬಿಟ್ಟು ಹೊಳಿಯು ನೀರಿಗೆ ಹೋದೆ
ಅಳಬ್ಯಾಡೊ ರಾಮ ರಗುರಾಮು । ನಿಮ್ಮವ್ವ
ಹೊಳಿ ನೀರಿಗೆ ಹೋಗಿ ತಡದೊಳೊ ॥ ೮ ॥

ಕಂದವ್ವ ಕಾಡಿದರೆ ಹೊರಿಯಾಕ ತಂದೇನ
ಚಂದ್ರಾಮನ ನೋಡ ಕಳಿವೇನ । ನನ ಕಂದವ್ವಾ
ಕಂಡಗದ ದಗದ ತರಬ್ಯಾನ ॥ ೯ ॥

ಸುಲಿದ ಬಾಳೀ ಹುಣ್ಣು ಶೀಳಿ ಸಕ್ಕರಿ ತುಂಬಿ
